ಶುಕ್ರವಾರ, ಮೇ 8, 2026| ₹ 7.00

prajavani.net prajavani

www.prajavani.net

ಮಾರ್ಷ್ ಶತಕ

ಲಖನೌದಲ್ಲಿ ಗುರುವಾರ ಆರ್‌ಸಿಬಿ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಶತಕ ಪೂರೈಸಿದ ಮಿಚೆಲ್ ಮಾರ್ಷ್ ಸಂಭ್ರಮಿಸಿದ್ದು ಹೀಗೆ...

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

PRM/KA/RERA/1251/310/PR/040524/006862
WWW.RERA.KARNATAKA.GOV.IN

LAUNCHING **CASAGRAND CASABLANCA** PHASE 2

OFF KANAKAPURA ROAD | 5 MINS FROM FORUM MALL

LUXURIOUS 2, 3 & 4 BHK APTS. & 5 BHK FLOOR VILLAS FROM ₹1.2CR - ₹3.37CR*

27	674	24	2.5	130+
ACRES ROMAN-THEMED COMMUNITY	LUXURY HOMES IN PHASE 2	ACRES OF OPEN SPACE	ACRES OF MONUMENTAL CLUBHOUSES	WORLD-CLASS AMENITIES

PHASE I SOLD OUT 785 HAPPY FAMILIES

PRICE BENEFITS

MARKET PRICE, OFF KANAKAPURA RD. ~~₹9000/SFT.~~

CASAGRAND LAUNCH PRICE ~~₹8399/SFT.~~

CASAGRAND EARLY-BIRD PRICE ₹7999/SFT.
(FOR FIRST 25 BOOKINGS)

BLOCKBUSTER PRICE ADVANTAGE

TYPE	SIZE	LAUNCH PRICE	EARLY BIRD PRICE
2 BHK	1410-1661 SFT.	~~₹1.25CR-₹1.5CR*~~	₹1.2CR-₹1.44CR*
3 BHK	1923-2171 SFT.	~~₹1.71CR-₹1.98CR*~~	₹1.64CR-₹1.9CR*
4 BHK	2742 SFT.	~~₹2.46CR*~~	₹2.37CR*
5 BHK FLOOR VILLA	3939 SFT.	~~₹3.51CR*~~	₹3.37CR*

PHASE 2 UNITS - 674 | UNITS SOLD - 183 | AVAILABLE UNITS - 491 | **HANDOVER IN 36 MONTHS**

*T&C APPLY

CREDAI
EXCLUSIVE SITE VISIT AVAILABLE.
VISIT MODEL HOUSE AT SITE.
93840 54982

SCAN TO WATCH THE PREMIERE OF BLOCKBUSTER LIFE

CASAGRAND
building aspirations

PRM/KA/RERA/1251/310/PR/040524/006862
WWW.RERA.KARNATAKA.GOV.IN

LAUNCHING
CASAGRAND CASABLANCA
PHASE 2

LUXURIOUS 2, 3 & 4 BHK APTS. & 5 BHK FLOOR VILLAS
OFF KANAKAPURA ROAD | 5 MINS FROM FORUM MALL

₹1.2CR* ONWARDS

*T&C APPLY

A TRUE BLOCKBUSTER LIFE YOU WON'T FIND ANYWHERE ELSE

★ COMMUNITY ★
- An iconic Roman-themed community of 1400+ homes
- 19 acres of lush landscapes with a tropical forest
- Vehicle-free community with basement parking for safer living
- 7-star styled double-height entrance & lift lobbies
- Resort like ambience for luxury living

★ AMENITIES ★
- Grand 28000 sft. temperature-controlled swimming pools
- 25+ sports courts like badminton, squash, table tennis, basketball & pickleball
- Leisure zones with 5 amphitheatres, forest walkways, koi & lily ponds, themed gardens & more

★ CONVENIENCE ★
- 2 independent entrances for seamless accessibility
- Multi-layer safety & security system
- All-in-one hub: supermarket, cafeteria, clinic, laundry & more
- 100% hassle-free living with assured maintenance services
- Casagrand exclusive community events, festivals & social experiences

★ FLOOR PLAN AND SPECIFICATIONS ★
- Spacious homes for maximum functionality, comfort & privacy
- Huge ceiling height windows for 2x brighter & breezier living
- Vaastu-compliant homes with no space wastage
- Convertible balcony in bedrooms offer 3x more ventilation & scenic views
- High-end specifications like Italian marble flooring, digital door lock & luxury bath fittings

★ LOCATION ★
- 6 mins signal free access to NICE road
- 5 mins from Vajarahalli metro station
- 10 mins from Forum mall & Global tech park
- Close proximity to schools, colleges, business centers & IT parks

★ LOCATION BENEFITS ★
BANNERGHATTA RD. 10 MINS
RR NAGAR 15 MINS
JP NAGAR 18 MINS
BANASHANKARI 20 MINS
ELECTRONIC CITY 25 MINS
JAYANAGAR 28 MINS
BTM LAYOUT 30 MINS

130+ ACTION PACKED AMENITIES

Indoor Amenities

Entertainment
Multipurpose Hall, AV Room, Cricket Simulator, Video Games Room, Entertainment Lounge, Guest Lounge, Terrace Sky Cinema, Rooftop Café & More

Kids Play Area
Ball Pool, Kids Gym, Rock Climbing, Adventurous Play Area & More

Learning
Library, Arts & Crafts Room, Crechè, Business Centre & More

Gym
Digital Interactive Gym, Boxing Corner, Functional Training & More

Health & Fitness
Yoga/Meditation Zone, Steam Room, Indoor Jacuzzi, Salon & Spa

Indoor Sports
Squash Courts, Badminton Courts, Table Tennis, Foosball, Billiards, Pool Table, Indoor Golf Area, Air Hockey & More

Outdoor Amenities

Kids
Rock Climbing Wall, Kids Jungle Gym, Children's Play Area, Trampoline, Skating Rink & More

Sports, Fitness & Wellbeing
Yoga Deck, Pickle Ball Court, Basket Ball Court, Multipurpose Sports Court, Cricket Practice Net, Tennis Court, Kabaddi Court & More

Facilities
Car Charging Bay, Laundry Room, Convenio Store, Clinic, Pharmacy, Guest Rooms & More

Features & Entertainment
Amphitheatre, Party Lawn, Pets Park, Jogging & Walking Track, Cycling Track, Hammock Garden, Koi Pond, Fruit Orchard, Maze Garden, Mini Miyawaki Forest, Multipurpose Lawn & More

Swimming Pool Amenities
Adults Pool, Kids Pool, Pool Side Party Lawn, Water Slide, Sunken Seating, Jacuzzi & More





WHY CASAGRAND?

Top 7 Ranked in India	**Top 2** Ranked in South India	**No.1** Ranked in Chennai for last 8 years*	**22+ years** of Trust & Legacy	**7000+** Homes sold in FY '24 – 25	**6 Cities** Chennai, Bengaluru, Hyderabad, Pune, Coimbatore & Dubai
2 months Guaranteed rental	**6 months** Guaranteed resale	**7 years** Warranty	**10 years** Maintenance by us	**2000+** Quality checks	**On-time** Delivery of projects

CREDAI
EXCLUSIVE SITE VISIT AVAILABLE.
VISIT MODEL HOUSE AT SITE.
93840 54982

SCAN TO EXPERIENCE THE BLOCKBUSTER LIFE

CASAGRAND
building aspirations

*Based on CBRE report 2024

Casagrand Premier Builder Limited is proposing, subject to receipt of requisite approvals, market conditions and other considerations, to make an initial public offer of its equity shares and has filed a draft red herring prospectus ("**DRHP**") with the Securities and Exchange Board of India ("**SEBI**"). The DRHP is available on the website of our Company, at www.casagrand.co.in, the SEBI at www.sebi.gov.in as well as on the websites of the book running lead managers Motilal Oswal Investment Advisors Limited and DAM Capital Advisors Limited at www.motilaloswalgroup.com and www.damcapital.in respectively, and the websites of the stock exchange(s) at www.nseindia.com and www.bseindia.com, respectively. Any potential investor should note that investment in equity shares involves a high degree of risk and for details relating to such risk, see "Risk Factors" of the RHP, when available. Potential investors should not rely on the DRHP filed with SEBI for making any investment decision.
The Equity Shares have not been and will not be registered under the U.S. Securities Act of 1933, as amended ("U.S. Securities Act") or any other applicable law of the United States and, unless so registered, may not be offered or sold within the United States except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold outside the United States in "offshore transactions" as defined in and in compliance with Regulation S under the U.S. Securities Act and the applicable laws of the jurisdiction where those offers and sales occur.

ಶುಕ್ರವಾರ, ಮೇ 8, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 127 | ಪುಟ 20

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ವರ್ಷಾಚರಣೆ ಜಮ್ಮುವಿನಲ್ಲಿ ನಡೆದ 'ಆಪರೇಷನ್ ಸಿಂಧೂರ'ದ ವರ್ಷಾಚರಣೆಯಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿನಿ ಭಿತ್ತಿಪತ್ರವನ್ನು ಪ್ರದರ್ಶಿಸಿದರು

ಸೆನ್ಸೆಕ್ಸ್ 77,844 | ನಿಫ್ಟಿ 24,326 | $/₹ 94.22 | ಚಿನ್ನ (Std. 10g) ₹1,57,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,66,200 (ಬೆಂಗಳೂರು)

ನರೇಗಾ: 'ಸುಪ್ರೀಂ'ಗೆ ರಾಜ್ಯದ ಮೊರೆ

ಕಾಯ್ದೆ ಮುಂದುವರಿಸುವಂತೆ ಕೋರಲು ತೀರ್ಮಾನ • ಸಂಪುಟ ಸಭೆ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಕಾಯ್ದೆಯನ್ನು ಮುಂದುವರಿಸಲು ಮತ್ತು ಈ ಕುರಿತು ಕ್ರಿಯಾ ಯೋಜನೆ ಸಿದ್ಧಪಡಿಸಲು ಅವಕಾಶ ಕಲ್ಪಿಸಬೇಕು' ಎಂದು ಕೋರಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ರಾಜ್ಯ ಸರ್ಕಾರ ಮುಂದಡಿ ಇಟ್ಟಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ. ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, 'ಸಾರ್ವಜನಿಕ ಹಿತದೃಷ್ಟಿಯಿಂದ 'ನರೇಗಾ ಕಾಯ್ದೆ– 2025' ಅನ್ನು ಮುಂದುವರಿಸುವುದು ಅನಿವಾರ್ಯವಾಗಿದೆ' ಎಂದರು.

'ನರೇಗಾ ಕಾಯ್ದೆಯ ಬದಲು ಕೇಂದ್ರ ಸರ್ಕಾರ ವಿಬಿ ಜಿ ರಾಮ್ ಜಿ (ವಿಕಸಿತ ಭಾರತ್ – ಗ್ಯಾರಂಟಿ ಫಾ ರೋಜ್‌ಗಾರ್ ಆ್ಯಂಡ್ ಆಜೀವಿಕ ಮಿಷನ್ (ಗ್ರಾಮೀಣ) ಕಾಯ್ದೆಯನ್ನು ಜಾರಿಗೊಳಿಸಿದೆ. ಆದರೆ, ಈ ಕಾಯ್ದೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಇನ್ನೂ ಅಧಿಸೂಚನೆ ಹೊರಡಿಸಿಲ್ಲ. ಪರ್ಯಾಯವಾದ ಯಾವುದೇ ವ್ಯವಸ್ಥೆಯನ್ನೂ ಮಾಡಿಲ್ಲ. ಕೇಂದ್ರ ಸರ್ಕಾರದ ಈ ನಿಲುವಿನ ಮೂಲಕ ರಾಜ್ಯ ಸರ್ಕಾರಗಳ ಸಾಂವಿಧಾನಿಕ ಹಕ್ಕುಗಳನ್ನು ದಮನಿಸಿ ದಂತಾಗಿದೆ. ಹೀಗಾಗಿ, ಈ ವಿಚಾರವನ್ನೂ ಕೋರ್ಟ್‌ನಲ್ಲಿ ಪ್ರಶ್ನಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ಅವರು ತಿಳಿಸಿದರು.

'ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ ಜಿ ರಾಮ್ ಜಿ ಕಾಯ್ದೆಯ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಂಡಿಸಿದ ಪ್ರಸ್ತಾವದ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು. ವಿಬಿ ಜಿ ರಾಮ್ ಜಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯ ವ್ಯಾಪ್ತಿಯಲ್ಲಿ ಇದೆ. ಹೀಗಾಗಿ, ಈ ರೀತಿಯ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೊದಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಜೊತೆಗೆ ಸಮಾಲೋಚನೆ ನಡೆಸಬೇಕಾಗಿದೆ. ಆದರೆ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಜೊತೆ ಸಮಾಲೋಚನೆ ಮಾಡದೆ ಏಕಾಏಕಿ, ನರೇಗಾ ಕಾಯ್ದೆಯನ್ನು ರದ್ದುಪಡಿಸಿ, ಹೊಸ ಕಾಯ್ದೆ ಜಾರಿಗೆ ತಂದಿದೆ. ಈ ಎಲ್ಲ ಅಂಶಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು' ಎಂದರು.

'ನರೇಗಾ ಯೋಜನೆಯು ಗ್ರಾಮೀಣ ಭಾಗದ ಜನರಿಗೆ ಮಹತ್ವದ ಯೋಜನೆಯಾಗಿದೆ. ಆದರೆ, ಮೇ ತಿಂಗಳು ಬಂದರೂ ಕೇಂದ್ರ ಸರ್ಕಾರ ವಿಬಿ ಜಿ ರಾಮ್ ಜಿ ಯೋಜನೆಯ ಕುರಿತಂತೆ ಅಧಿಸೂಚನೆ ಹೊರಡಿಸಿಲ್ಲ. ನರೇಗಾ ಬಾಕಿ ಕೆಲಸಗಳನ್ನು ಮುಂದುವರಿಸುವ ಬಗ್ಗೆ ಸುತ್ತೋಲೆ ಹೊರಡಿಸಿದ್ದರೂ, ಅದಕ್ಕೆ ಬೇಕಾದ ಯಾವುದೇ ಅನುದಾನ ಕೊಟ್ಟಿಲ್ಲ. ಮುಂಬರುವ ದಿನಗಳಲ್ಲಿ ಮಳೆಯ ಕೊರತೆ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿರುವ ಕೇಂದ್ರ ಸರ್ಕಾರ, ಬಡವರ ಬಗ್ಗೆ ಯಾವುದೇ ಚಿಂತನೆ ಮಾಡಿಲ್ಲ. ಹೀಗಾಗಿ, ರಾಜ್ಯ ಸರ್ಕಾರ ನ್ಯಾಯಾಲಯದ ಕದ ತಟ್ಟಲು ತೀರ್ಮಾನಿಸಿದೆ' ಎಂದೂ ಅವರು ಸಮರ್ಥಿಸಿಕೊಂಡರು.

'ನರೇಗಾ ರದ್ದುಪಡಿಸಿದ ನಂತರ ಬಡ ಜನರಿಗೆ ಅನುಕೂಲ ಮಾಡಿಕೊಡಲು ಪರ್ಯಾಯ ವ್ಯವಸ್ಥೆಯನ್ನಾದರೂ ಕೇಂದ್ರ ಸರ್ಕಾರ ಮಾಡಬೇಕಿತ್ತು. ಅದನ್ನೂ ಮಾಡಿಲ್ಲ. ಆದ ಕಾರಣ, ಕಾರ್ಮಿಕರ, ಬಡವರ ಹಿತದೃಷ್ಟಿಯಿಂದ ನರೇಗಾ ಯೋಜನೆಯನ್ನೇ ಮುಂದುವರಿಸುವುದು ಅನಿವಾರ್ಯವಾಗಿದೆ. ಹೀಗಾಗಿ, ಕ್ರಿಯಾ ಯೋಜನೆ ಸಿದ್ಧಪಡಿಸಲು ಕೇಂದ್ರ ಸರ್ಕಾರವು ರಾಜ್ಯಕ್ಕೆ ಅವಕಾಶ ಕಲ್ಪಿಸಬೇಕು' ಎಂದರು.

ಸಂಪುಟ ಉಪ ಸಮಿತಿಗೆ ಎಸ್‌ಇಪಿ ವರದಿ

ಎಚ್.ಕೆ. ಪಾಟೀಲ

ರಾಜ್ಯ ಶಿಕ್ಷಣ ನೀತಿ ಆಯೋಗ ಸಲ್ಲಿಸಿರುವ ವರದಿಯ ಅನುಷ್ಠಾನಕ್ಕೆ ಸಂಪುಟ ಉಪ ಸಮಿತಿ ರಚಿಸಲು ಸರ್ಕಾರ ತೀರ್ಮಾನಿಸಿದೆ.

ಪ್ರೊ. ಸುಖದೇವ್ ಥೋರಟ್ ಅಧ್ಯಕ್ಷತೆಯ ಆಯೋಗ ಕಳೆದ ಜುಲೈನಲ್ಲಿ ಸಲ್ಲಿಸಿದ್ದ ಅಂತಿಮ ವರದಿಯ ಕುರಿತು ಸಂಪುಟ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಯಿತು. ಆಯೋಗದ ವರದಿಯನ್ನು ಅಧ್ಯಯನ ಮಾಡಿ, ಶಿಫಾರಸುಗಳ ಅನುಷ್ಠಾನಕ್ಕೆ ವರದಿ ನೀಡಲು ಉಪ ಸಮಿತಿ ರಚಿಸಲು ನಿರ್ಧರಿಸಲಾಯಿತು. ಸಮಿತಿಯ ರಚನೆ ಅಧಿಕಾರವನ್ನು ಮುಖ್ಯಮಂತ್ರಿಗೆ ಸಭೆ ನೀಡಿತು ಎಂದು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಗುರುವಾರ ನಡೆದ ಸಭೆಯಲ್ಲಿ ಹಾಜರಿದ್ದ ಥೋರಟ್ ಅವರು ತಮ್ಮ ವರದಿಯ ಕುರಿತು ಸಚಿವರಿಗೆ ವಿವರಣೆ ನೀಡಿದರು. ಈ ವೇಳೆ, ಆರೋಗ್ಯ ಸಮಸ್ಯೆಯಿಂದ ಅವರು ಕೆಲಹೊತ್ತು ನಿತ್ರಾಣಗೊಂಡರು. ವೈದ್ಯರನ್ನು ಕರೆಯಿಸಿ ಉಪಚರಿಸಲಾಯಿತು ಎಂದು ಗೊತ್ತಾಗಿದೆ.

ವರದಿಯಲ್ಲಿ ಏನಿದೆ?: ಬಿಜೆಪಿ ಆಡಳಿತದ ಅವಧಿಯಲ್ಲಿ ತರಾತುರಿಯಲ್ಲಿ ಸಿದ್ಧಪಡಿಸಿದ್ದ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ರದ್ದು ಮಾಡುವುದಾಗಿ ಕಾಂಗ್ರೆಸ್ ಚುನಾವಣಾ ಸಮಯದಲ್ಲಿ ನೀಡಿದ್ದ ಭರವಸೆಯಂತೆ ರಾಷ್ಟ್ರೀಯ ಶಿಕ್ಷಣ ನೀತಿ ಬದಲು ರಾಜ್ಯ ಶಿಕ್ಷಣ ನೀತಿ ರೂಪಿಸಲು ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಗಿತ್ತು. 2,197 ಪುಟಗಳಿರುವ ಮೂರು ಸಂಪುಟ ಒಳಗೊಂಡ ತನ್ನ ಅಂತಿಮ ವರದಿಯನ್ನು ಜುಲೈ 8ರಂದು ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಿತ್ತು.

ಮೂರು ಸಂಪುಟಗಳನ್ನು ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಎಂದು ವರ್ಗೀಕರಿಸಲಾಗಿದ್ದು, ಶಾಲಾ ಶಿಕ್ಷಣದಲ್ಲಿ ದ್ವಿಭಾಷಾ ನೀತಿ ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು. ಕನ್ನಡ ಸೇರಿದಂತೆ ಇತರೆ ಮಾತೃ ಭಾಷೆಗಳನ್ನು ಪ್ರಥಮ ಭಾಷೆಯಾಗಿ, ಇಂಗ್ಲಿಷ್ ಅನ್ನು ದ್ವಿತೀಯ ಭಾಷೆಯಾಗಿ ನಿಗದಿ ಮಾಡಬೇಕು ಈ ಐದನೇ ತರಗತಿಯವರೆಗೆ ಮಾತೃಭಾಷಾ ಮಾಧ್ಯಮದಲ್ಲೇ ಬೋಧನೆಗೆ ಅವಕಾಶ ನೀಡಬೇಕು. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಎಲ್ಲ ಸರ್ಕಾರಿ ಶಾಲೆಗಳಲ್ಲೂ ಆರಂಭಿಸಬೇಕು ಎಂದು ಆಯೋಗ ತನ್ನ ವರದಿಯಲ್ಲಿ ಹೇಳಿದೆ.

ಪ್ರಮುಖ ನಿರ್ಣಯಗಳೇನು?

- ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ರಾಜ್ಯ ಸಿವಿಲ್ ಹುದ್ದೆಗಳ ಸೇವೆಗಳಲ್ಲಿನ ನೇಮಕಾತಿಯಲ್ಲಿ ಶೇ 2ರಷ್ಟು ಮೀಸಲಾತಿ ನೀಡಲು 'ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ) ನೇಮಕಾತಿ) (ತಿದ್ದುಪಡಿ) ನಿಯಮಗಳು-2026'ಕ್ಕೆ ಅನುಮೋದನೆ
- ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ಮಾಸ್ಟರ್ ಪ್ಲಾನ್ ಯೋಜನೆಯ ಮೂರನೇ ಹಂತದ ಕಾಮಗಾರಿಗಳನ್ನು ₹604.65 ಕೋಟಿ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ಅನುಮೋದನೆ
- ದೊಡ್ಡಬಳ್ಳಾಪುರ ಶ್ರೀ ಘಾಟಿ ಸುಬ್ರಹ್ಮಣ್ಯ ದೇವಾಲಯದ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ₹23.76 ಕೋಟಿ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ಒಪ್ಪಿಗೆ

ಕೆರೆ ಬೇಟೆ

ಪಿಟಿಐ ಚಿತ್ರ:

ಶಿವಮೊಗ್ಗದ ಸೊರಬ ತಾಲೂಕಿನ ಚಿತ್ತೂರಿನಲ್ಲಿ ಗುರುವಾರ ನಡೆದ ಸಾಂಪ್ರದಾಯಿಕ 'ಕೆರೆ ಬೇಟೆ'ಯಲ್ಲಿ ಜನರು ಮೀನುಗಳನ್ನು ಹಿಡಿದರು

ಎಡಪಕ್ಷ, ವಿಸಿಕೆ ಬೆಂಬಲಕ್ಕೆ ಯತ್ನ

ಎರಡನೇ ಬಾರಿ ರಾಜ್ಯಪಾಲರನ್ನು ಭೇಟಿಯಾದ ವಿಜಯ್

ಪ್ರಜಾವಾಣಿ ವಾರ್ತೆ/ ಪಿಟಿಐ

ವಿಜಯ್

ಚೆನ್ನೈ: 'ಸರ್ಕಾರ ರಚಿಸಲು ಅಗತ್ಯವಿರುವ ಬಹುಮತ ನಿಮ್ಮ ಪಕ್ಷಕ್ಕೆ ಇಲ್ಲ' ಎಂದು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ಜೋಸೆಫ್ ವಿಜಯ್ ಅವರಿಗೆ ಗುರುವಾರ ತಿಳಿಸಿದ್ದಾರೆ.

ಇದರ ಬೆನ್ನಲ್ಲೇ ವಿಜಯ್ ಅವರು ಸಿಪಿಐ, ಸಿಪಿಎಂ, ವಿಸಿಕೆ ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಪಕ್ಷಗಳ ಮನವೊಲಿಸುವ ಪ್ರಯತ್ನವನ್ನು ತೀವ್ರಗೊಳಿಸಿದ್ದಾರೆ. ಈ ಪಕ್ಷಗಳು ಒಂದೆರಡು ದಿನಗಳಲ್ಲಿ ತಮ್ಮ ನಿಲುವು ಸ್ಪಷ್ಟಪಡಿಸುವ ಸಾಧ್ಯತೆಯಿದೆ.

234 ಸದಸ್ಯಬಲದ ತಮಿಳುನಾಡು ವಿಧಾನಸಭೆಯಲ್ಲಿ ಸರಳ ಬಹುಮತಕ್ಕೆ 118 ಶಾಸಕರ ಬೆಂಬಲ ಬೇಕು. ಅದನ್ನು ಸಾಬೀತುಪಡಿಸಿದರೆ ಮಾತ್ರ ವಿಜಯ್ ಅವರನ್ನು ಸರ್ಕಾರ ರಚಿಸಲು ಆಹ್ವಾನಿಸಲಾಗುವುದು ಎಂದು ರಾಜ್ಯಪಾಲರು ಸ್ಪಷ್ಟಪಡಿಸಿದ್ದಾರೆ

▸2A

ತಾಂತ್ರಿಕ ಲೋಪ

ಸರ್ಕಾರ ರಚನೆಗೆ ಹಕ್ಕು ಮಂಡಿಸುವಾಗ ಟಿವಿಕೆಯು 'ತಾಂತ್ರಿಕ ಲೋಪ' ಎಸಗಿದೆ ಎಂದು ಮೂಲಗಳು ತಿಳಿಸಿವೆ. ಇದೇ ಕಾರಣದಿಂದ ರಾಜ್ಯಪಾಲರು ಪ್ರಮಾಣ ವಚನಕ್ಕೂ ಮುನ್ನ ಬಹುಮತ ಇರುವುದನ್ನು ಸಾಬೀತುಪಡಿಸುವಂತೆ ವಿಜಯ್ ಅವರಿಗೆ ಸೂಚಿಸಿದ್ದಾರೆ ಎನ್ನಲಾಗಿದೆ. ವಿಜಯ್ ಅವರು ಕಾಂಗ್ರೆಸ್‌ನ ಐವರು ಸೇರಿದಂತೆ 112 ಶಾಸಕರ ಹೆಸರುಗಳ ಪಟ್ಟಿಯನ್ನು ರಾಜ್ಯಪಾಲರಿಗೆ ನೀಡಿದ್ದಾರೆ. ಆದರೆ, ಏಕೈಕ ದೊಡ್ಡ ಪಕ್ಷದಿಂದ ಸರ್ಕಾರ ರಚಿಸುವ ಹಕ್ಕು ಮಂಡಿಸುವ ಬದಲು ಸಮ್ಮಿಶ್ರ ಸರ್ಕಾರ ರಚಿಸಲು ಹಕ್ಕು ಮಂಡಿಸಿದ್ದರು. ಇದು ಗೊಂದಲಕ್ಕೆ ಕಾರಣವಾಗಿದೆ ಎಂದು ಮೂಲವೊಂದು ತಿಳಿಸಿದೆ.

ಟಿವಿಕೆ ಶಾಸಕರ ರಾಜೀನಾಮೆ ಎಚ್ಚರಿಕೆ

ಡಿಎಂಕೆ ಹಾಗೂ ಎಐಡಿಎಂಕೆ ಒಗ್ಗೂಡಿ ಸರ್ಕಾರ ರಚಿಸುವ ಕುರಿತು ಊಹಾಪೋಹಗಳು ಎದ್ದಿವೆ. ರಾಜ್ಯಪಾಲರು ಈ ಪಕ್ಷಗಳನ್ನು ಆಹ್ವಾನಿಸಿದರೆ ಟಿವಿಕೆಯ ಎಲ್ಲ 107 ಶಾಸಕರು ಸಾಮೂಹಿಕ ರಾಜೀನಾಮೆ ನೀಡಲಿದ್ದಾರೆ ಎಂದು ನಟ ವಿಜಯ್ ನೇತೃತ್ವದ ಟಿವಿಕೆ ಎಚ್ಚರಿಸಿದೆ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಬಂಗಾಳ ವಿಧಾನಸಭೆ ವಿಸರ್ಜನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಯನ್ನು ರಾಜ್ಯಪಾಲ ಆರ್.ಎನ್. ರವಿ ಅವರು ಗುರುವಾರ ವಿಸರ್ಜಿಸಿದ್ದಾರೆ.

ಪ್ರಸ್ತುತ ವಿಧಾನಸಭೆಯ ಅವಧಿಯು ಪೂರ್ಣಗೊಂಡ ಕಾರಣ ವಿಸರ್ಜಿಸಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಜೈಲಿನಲ್ಲಿ ನಲಿಯುತಾ ಕಲಿಕೆಗೆ ಅವಕಾಶ

• ಆದಿತ್ಯ ಕೆ.ಎ.

ಬೆಂಗಳೂರು/ಆನೇಕಲ್: ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ತಾಯಂದಿರ ಜತೆಗೆ ಅನಿವಾರ್ಯ ಪರಿಸ್ಥಿತಿಯಲ್ಲಿ ಜೈಲು ಸೇರಿ ನಾಲ್ಕು ಗೋಡೆಗಳ ಮಧ್ಯೆ ಬೆಳೆಯಬೇಕಾದ ಹಾಗೂ ಶಿಕ್ಷಣದಿಂದ ವಂಚಿತರಾಗುತ್ತಿದ್ದ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸುವ ಉದ್ದೇಶದಿಂದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿಯೇ 'ಶಿಶು ಪಾಲನಾ ಕೇಂದ್ರ' ಸ್ಥಾಪಿಸಲಾಗಿದೆ.

ಕರ್ನಾಟಕ ಮಕ್ಕಳ ರಕ್ಷಣಾ ನಿರ್ದೇಶನಾಲಯ (ಡಿಸಿಪಿ) ಹಾಗೂ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ ಸಹಯೋಗದಲ್ಲಿ ಈ ಕೇಂದ್ರ ಸ್ಥಾಪಿಸಲಾಗಿದೆ. ವಿದೇಶಿ ಆರೋಪಿಗಳ ಮಕ್ಕಳೂ ಸೇರಿದಂತೆ ಒಂಬತ್ತು ಮಕ್ಕಳು ನಲಿಯುತ್ತಾ ಕಲಿಯುತ್ತಿದ್ದಾರೆ.

ಕಾರಾಗೃಹದೊಳಗೆ ಡ್ರಗ್ಸ್ ಪೂರೈಕೆ, ವಿಐಪಿ ಕೈದಿಗಳಿಗೆ ವಿಶೇಷ ಆತಿಥ್ಯ, ಮೊಬೈಲ್ ಫೋನ್‌ಗಳನ್ನು ಕದ್ದುಮುಚ್ಚಿ ಸಾಗಣೆ, ಸಜಾ ಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳು ನಡುವೆ ಗಲಾಟೆ, ಜೈಲಿನ ಒಳಗಿನಿಂದಲೇ ಬೆದರಿಕೆ, ಜೈಲಿನ ಸಿಬ್ಬಂದಿಗೆ ನಿಂದನೆಯಂತಹ ಪ್ರಕರಣಗಳಿಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸದಾ ಸುದ್ದಿ ಆಗುತ್ತಿತ್ತು. ಇದೀಗ ದೇಶದಲ್ಲಿಯೇ ಮೊದಲ ಬಾರಿಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ 'ಶಿಶು ಪಾಲನಾ ಕೇಂದ್ರ' ಆರಂಭಿಸುವ ಮೂಲಕ ಹೊಸ ಪ್ರಯತ್ನಕ್ಕೆ ಮುನ್ನುಡಿ ಬರೆಯಲಾಗಿದೆ.

▸4

ಮಕ್ಕಳ ದತ್ತು, ಶಿಕ್ಷಣಕ್ಕೆ ನೆರವು

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಿರ್ಮಿಸಲಾಗಿರುವ ಶಿಶು ಪಾಲನಾ ಕೇಂದ್ರ

ತಾಯಂದಿರು ಹೆಚ್ಚು ಅವಧಿಯ ಶಿಕ್ಷೆಗೆ ಒಳಗಾದರೆ ಅಂತಹವರ ಮಕ್ಕಳ ಕುಟುಂಬಸ್ಥರನ್ನು ಸಂಪರ್ಕಿಸಲಾಗುತ್ತದೆ. ಕುಟುಂಬದವರು ಜವಾಬ್ದಾರಿ ವಹಿಸಿಕೊಳ್ಳದಿದ್ದರೆ ಸ್ವಯಂ ಸೇವಾ ಸಂಸ್ಥೆಗಳ ನೆರವು ಪಡೆದು ಮುಂದಿನ ಶಿಕ್ಷಣವನ್ನು ಕೊಡಿಸಲಾಗುತ್ತಿದೆ. ಜತೆಗೆ, ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಆಸಕ್ತಿ ಇದ್ದವರನ್ನು ಸಂಪರ್ಕಿಸಿ ದತ್ತು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಯೋಜನೆ ಅಡಿ ಮಕ್ಕಳಿಗೆ ಆರ್ಥಿಕ ನೆರವು ಸಹ ಒದಗಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಕಾರಾಗೃಹದ ವಾತಾವರಣವು ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪ್ರಭಾವ ಬೀರಬಾರದು ಎಂಬ ಉದ್ದೇಶದಿಂದ ಈ ಕೇಂದ್ರ ಆರಂಭಿಸಲಾಗಿದೆ

ಸ್ನೇಹಾ, ನಿರ್ದೇಶಕಿ, ಕರ್ನಾಟಕ ಮಕ್ಕಳ ರಕ್ಷಣಾ ನಿರ್ದೇಶನಾಲಯ

ಕರ್ನಾಟಕಕ್ಕೆ ಕಾಲಿಟ್ಟ ಅಮೆರಿಕ 'ಚಿಪ್' ಕಂಪನಿ

ಬೆಂಗಳೂರು: ಉದ್ಯಮ ಸ್ನೇಹಿ ನೀತಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದ್ದರಿಂದಾಗಿ ಅಮೆರಿಕದ ಪ್ರಭಾವಿ 'ಚಿಪ್' ಕಂಪನಿಯೊಂದು ಕರ್ನಾಟಕಕ್ಕೆ ಕಾಲಿಡಲಿದೆ

ವಿವರ ▸4

ಚಿನಕುರುಳಿ ಪ್ರಕಾಶ್ ಶೆಟ್ಟಿ

ವೃತ್ತಿಪರ ಶೂಟರ್‌ಗಳ ಕೈವಾಡ ಶಂಕೆ

ಕೋಲ್ಕತ್ತ (ಪಿಟಿಐ): ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ ಚಂದ್ರನಾಥ್ ರಥ್ ಅವರ ಹತ್ಯೆ ಪ್ರಕರಣದಲ್ಲಿ ವೃತ್ತಿಪರ ಶೂಟರ್‌ಗಳ ಕೈವಾಡ ಇರುವ ಬಗ್ಗೆ ತನಿಖಾಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಈ ಹತ್ಯೆಯು ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಸಂಘರ್ಷವನ್ನು ಮತ್ತಷ್ಟು ಹೆಚ್ಚಿಸಿದೆ. ಬಿಜೆಪಿ ಹಾಗೂ ಟಿಎಂಸಿ ನಡುವೆ ವಾಗ್ದಾಳಿ ಮುಂದುವರಿದಿದೆ.

ಆರೋಪಿಗಳ ಪತ್ತೆಗಾಗಿ ತನಿಖಾಧಿಕಾರಿಗಳು ಘಟನಾ ಸ್ಥಳ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲಿಸಿದರು.

ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಗುರುವಾರ ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಸಿಐಡಿ ಅಧಿಕಾರಿಗಳು ಸಹ ತನಿಖೆಯಲ್ಲಿ ಭಾಗಿಯಾಗಿದ್ದಾರೆ. ಡಿಜಿಪಿ ಸಿದ್ಧನಾಥ್ ಗುಪ್ತಾ ಮತ್ತು ಸಿಆರ್‌ಪಿಎಫ್ ಮಹಾನಿರ್ದೇಶಕ ಜ್ಞಾನೇಂದ್ರ ಪ್ರತಾಪ್ ಸಿಂಗ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

▸2A

ಚುನಾವಣೋತ್ತರ ಹಿಂಸಾಚಾರದ ಭೀತಿ

ಸುವೇಂದು ಆಪ್ತನ ಕೊಲೆ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯು ಆಡಳಿತ ಬದಲಾವಣೆಗೆ ತೀರ್ಪು ನೀಡಿದ ಕೇವಲ 48 ಗಂಟೆಗಳ ನಂತರ, ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕನ ಹತ್ಯೆ ನಡೆದಿರುವುದು ರಾಜ್ಯದ ಜನರನ್ನು ಬೆಚ್ಚಿಬೀಳಿಸಿದೆ.

ಬಿಜೆಪಿಯ ಐತಿಹಾಸಿಕ ಗೆಲುವಿನ ನಂತರ ಅಲ್ಲೊಂದು ಇಲ್ಲೊಂದು ನಡೆಯುತ್ತಿದ್ದ ಸಣ್ಣಪುಟ್ಟ ಘರ್ಷಣೆಗಳು, ಈಗ ದೊಡ್ಡ ಮಟ್ಟದಲ್ಲಿ ನಡೆಯುತ್ತಿವೆ.

ರಾಜ್ಯದಲ್ಲಿ ಶೇ 22.61ರಷ್ಟು ಏರಿಕೆ: ಎನ್‌ಸಿಆರ್‌ಬಿ ವರದಿ

ಅನ್ನದಾತರ ಆತ್ಮಹತ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಅಂಕಿ ಅಂಶಗಳು

10,546	4,633	5,913	6.2%
ದೇಶದಲ್ಲಿ 2024ರಲ್ಲಿ ಕೃಷಿ ಕ್ಷೇತ್ರದಲ್ಲಿ ತೊಡಗಿದವರ ಆತ್ಮಹತ್ಯೆ	ರೈತರ ಆತ್ಮಹತ್ಯೆ	ಕೃಷಿ ಕಾರ್ಮಿಕರ ಆತ್ಮಹತ್ಯೆ	ದೇಶದ ಒಟ್ಟಾರೆ ಆತ್ಮಹತ್ಯೆಗಳ ಸಂಖ್ಯೆಯಲ್ಲಿ ಕೃಷಿ ಕ್ಷೇತ್ರದ ಪಾಲು

ನವದೆಹಲಿ: ದೇಶದಲ್ಲಿ 2024ರಲ್ಲಿ ರೈತರು ಹಾಗೂ ಕೃಷಿ ಕಾರ್ಮಿಕರ ಆತ್ಮಹತ್ಯೆಗಳು ಸ್ವಲ್ಪ ಕಡಿಮೆಯಾಗಿವೆ. ಆದರೆ, ಕರ್ನಾಟಕದಲ್ಲಿ ಆತ್ಮಹತ್ಯೆ ಪ್ರಮಾಣ ಶೇ 22.61ರಷ್ಟು ಹೆಚ್ಚಳ ಆಗಿದೆ ಎಂದು 'ಭಾರತದಲ್ಲಿ ಅಪಘಾತದ ಸಾವುಗಳು ಹಾಗೂ ಆತ್ಮಹತ್ಯೆಗಳು–2024' ವರದಿ ತಿಳಿಸಿದೆ.

ಬುಧವಾರ ಪ್ರಕಟವಾದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ (ಎನ್‌ಸಿಆರ್‌ಬಿ) ವರದಿ ಪ್ರಕಾರ, ದೇಶದಲ್ಲಿ ಕೃಷಿ ಕ್ಷೇತ್ರದಲ್ಲಿ ತೊಡಗಿರುವ 10,546 ಮಂದಿ 2024ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2023ರಲ್ಲಿ ಈ ಸಂಖ್ಯೆ 10,786 ಆಗಿತ್ತು. ದೇಶದಲ್ಲಿ ಆತ್ಮಹತ್ಯೆ ಪ್ರಮಾಣ ಶೇ 2.22ರಷ್ಟು ಕಡಿಮೆ ಆಗಿದೆ. ಆದರೆ, ಕರ್ನಾಟಕದಲ್ಲಿ ಈ ಸಂಖ್ಯೆ 2,423ರಿಂದ 2,971ಕ್ಕೆ ಏರಿಕೆ ಆಗಿದೆ.

ರೈತರ ಆತ್ಮಹತ್ಯೆಯಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಅನ್ನದಾತರ ಆತ್ಮಹತ್ಯೆಯಲ್ಲಿ ಮೊದಲ ಐದು ಸ್ಥಾನದಲ್ಲಿರುವ ರಾಜ್ಯಗಳ ಪೈಕಿ, ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ 2024ರಲ್ಲಿ ಈ ಸಂಖ್ಯೆ ಜಾಸ್ತಿ ಆಗಿದೆ. ರಾಜ್ಯದಲ್ಲಿ 2023ರಲ್ಲಿ 1,425 ಕೃಷಿಕರು ಆತ್ಮಹತ್ಯೆ ಮಾಡಿಕೊಂಡಿದ್ದರು. 2024ರಲ್ಲಿ 1,770 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. 1,201 ಕೃಷಿ ಕಾರ್ಮಿಕರು ಜೀವ ಕಳೆದುಕೊಂಡಿದ್ದಾರೆ.

ಮಹಾರಾಷ್ಟ್ರ, ಆಂಧ್ರ ಪ್ರದೇಶ ಹಾಗೂ ತಮಿಳುನಾಡಿನಲ್ಲಿ ಆತ್ಮಹತ್ಯೆ ಪ್ರಮಾಣ ಅಲ್ಪ ಇಳಿಕೆ ಆಗಿದ್ದರೆ, ಛತ್ತೀಸಗಢ, ಗುಜರಾತ್, ರಾಜಸ್ಥಾನ ಹಾಗೂ ಪುದುಚೇರಿಯಲ್ಲಿ ಸ್ವಲ್ಪ ಏರಿಕೆ ಆಗಿದೆ. ರೈತರ ಆತ್ಮಹತ್ಯೆಗೆ ಕಾರಣಗಳನ್ನು ವರದಿಯಲ್ಲಿ ಉಲ್ಲೇಖಿಸಿಲ್ಲ.

ಆತ್ಮಹತ್ಯೆ ಮಾಡಿಕೊಂಡ 4,633 ರೈತರಲ್ಲಿ 4,134 ಜನರು ತಮ್ಮ ಸ್ವಂತ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದರೆ, 499 ಜನರು ಗುತ್ತಿಗೆಗೆ ಭೂಮಿಯನ್ನು ಪಡೆದಿದ್ದಾರೆ ಎಂದು ವರದಿ ತಿಳಿಸಿದೆ.

ರೈತರು, ಕೃಷಿ ಕಾರ್ಮಿಕರ ಆತ್ಮಹತ್ಯೆ

ರಾಜ್ಯ	2023	2024
ಮಹಾರಾಷ್ಟ್ರ	4,151	3,824
ಕರ್ನಾಟಕ	2,423	2,971
ಮಧ್ಯಪ್ರದೇಶ	777	835
ಆಂಧ್ರ ಪ್ರದೇಶ	925	780
ತಮಿಳುನಾಡು	631	503
ಛತ್ತೀಸಗಢ	468	486
ರಾಜಸ್ಥಾನ	252	285
ಉತ್ತರ ಪ್ರದೇಶ	357	221
ಗುಜರಾತ್	141	143
ಕೇರಳ	132	134

SRI JAGADGURU MURUGHARAJENDRA UNIVERSITY
Est. Under Sec 2(F) UGC Act 1956 & Karnataka Act No. 21 of 2021
SJMIT Campus, No 73, P.B NH-4, Bypass, Hanumantha Nagara, Chitradurga - 577 502. Karnataka, INDIA.
P: 08194-200530 | E: contact@sjmu.edu.in | www.sjmu.edu.in

Lord Basaveshwara | Sri Jayadeva Swamiji | Sri Jayavibhava Swamiji | Sri Mallikarjuna Swamiji

Studying @ SJMU CHITRADURGA
A Truly Great Choice

SCAN FOR MORE DETAILS

ADMISSIONS OPEN

A SPECTRUM OF EXCELLENCE

Medical Programs
UG: MBBS
PG: MD: General Medicine, Emergency Medicine, Pediatrics, Dermatology, Psychiatry, Respiratory Medicine, Anesthesiology, Radio Diagnosis, Anatomy, Biochemistry, Pathology, Forensic Medicine, Community Medicine
MS: General Surgery Orthopedics. Ophthalmology, ENT, OBG

Dental Programs
UG: BDS
PG: MDS (Conservative Dentistry & Endodontics

Physiotherapy Programs
UG: BPT

Nursing Programs
UG: B.Sc Nursing
PG (M.Sc): Medical Surgical, OBG, Child Health, Community Health, Mental Health
Diploma: GNM

Pharmacy Programs
UG: B.Pharm
Diploma: D.Pharm
PG (M.Pharm): Pharmaceutics, Pharmaceutical Chemistry Pharmacology
Doctoral: Pharm.D, Pharm.D (Post Baccalaureate)

Engineering Programs (B.E)
UG: AI & ML
Computer Science
Electronics & Communication
Civil
Electrical & Electronics
Mechanical
PG: M.Tech: Structural Engineering

Allied Science Programs (B.Sc)
UG: Medical Lab Technology
Imaging Technology
Anesthesia & OT Technology
Optometry
Emergency Medicine Technology
Respiratory Care Technology

Built on Ethics. Driven by Knowledge.

09 ಮೇ 2026 ಶನಿವಾರ
ಚಿತ್ರದುರ್ಗ
ರೈತಕಣ್ಮಣಿ ಜನಪರ
ಹೋರಾಟಗಾರನ
ಅಭಿಮಾನೋತ್ಸವಕ್ಕೆ
ಬನ್ನಿ, ಭಾಗವಹಿಸಿ..
ಜನ ಸೇವೆಯಲ್ಲಿ
ಸಾರ್ಥಕ 50 ವರುಷ
BSY
ಅಭಿಮಾನೋತ್ಸವ
ಎಲ್.ಆರ್.ಮಹದೇವಸ್ವಾಮಿ ಎಂ.ಬಿ.ಎ.
ನಿಕಟಪೂರ್ವ ಅಧ್ಯಕ್ಷರು,
ಭಾರತೀಯ ಜನತಾ ಪಾರ್ಟಿ ಮೈಸೂರು ಜಿಲ್ಲೆ
ಮಾಜಿ ಅಧ್ಯಕ್ಷರು, ಕರ್ನಾಟಕ ಮೃಗಾಲಯ ಪ್ರಾಧಿಕಾರ

ಸಿ.ಎಂ ಆಯ್ಕೆ: ಹೈಕಮಾಂಡ್ ಅಂಗಳಕ್ಕೆ

ಕೇರಳಂ ಶಾಸಕಾಂಗ ಪಕ್ಷದ ಮುಖಂಡನ ಆಯ್ಕೆಗೆ ನಿರ್ಣಯ ಅಂಗೀಕಾರ

ತಿರುವನಂತಪುರ (ಪಿಟಿಐ): ಕೇರಳಂ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ನೂತನ ನಾಯಕನನ್ನು ಆಯ್ಕೆ ಮಾಡುವ ಅಧಿಕಾರವನ್ನು ಎಐಸಿಸಿ ಅಧ್ಯಕ್ಷರ ವಿವೇಚನೆಗೆ ಬಿಡುವ ನಿರ್ಣಯವನ್ನು ಇಲ್ಲಿ ನಡೆದ ಸಭೆಯಲ್ಲಿ ಕೈಗೊಳ್ಳಲಾಯಿತು.

ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್ ಮತ್ತು ಅಜಯ್ ಮಾಕನ್ ಅವರು ಗುರುವಾರ ಕಾಂಗ್ರೆಸ್ ಶಾಸಕರೊಂದಿಗೆ ಸಭೆ ನಡೆಸಿ, ಅಭಿಪ್ರಾಯ ಪಡೆದುಕೊಂಡರು.

ಸಭೆಯ ಬಳಿಕ ಮಾತನಾಡಿದ ವಾಸ್ನಿಕ್, 'ನಮ್ಮ ಸಹೋದ್ಯೋಗಿಗಳು ಮತ್ತು ಪಕ್ಷದ ಶಾಸಕರೊಂದಿಗೆ ಸಭೆ ನಡೆಸಿದ್ದೇವೆ. ಸಿಎಲ್‌ಪಿ ಮುಖಂಡನ ಆಯ್ಕೆಗೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಸಣ್ಣಿ ಜೋಸೆಫ್ ನಿರ್ಣಯ ಮಂಡಿಸಿದರು, ಇದನ್ನು ವಿ.ಡಿ ಸತೀಶನ್ ಬೆಂಬಲಿಸಿದರು. ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಲಾಗಿದೆ. ವರದಿಯನ್ನು ಹೈಕಮಾಂಡ್‌ಗೆ ಸಲ್ಲಿಸಲಾಗುವುದು. ಮುಂದಿನ ಸಿಎಲ್‌ಪಿ ಮುಖಂಡನ ಆಯ್ಕೆಯನ್ನು ಎಐಸಿಸಿ ಅಧ್ಯಕ್ಷರು ಅಂತಿಮಗೊಳಿಸಲಿದ್ದಾರೆ' ಎಂದರು.

'ಕೇರಳಂನ ಮುಂದಿನ ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ಎಐಸಿಸಿ ವೀಕ್ಷಕರು ತೆಗೆದುಕೊಂಡ ನಿರ್ಧಾರ ಸರಳ ಅಥವಾ ಕಠಿಣವಾಗಿತ್ತೇ' ಎಂಬ ಸುದ್ದಿಗಾರರ ಪ್ರಶ್ನೆಗೆ ವಾಸ್ನಿಕ್ ಸ್ಪಷ್ಟವಾದ ಉತ್ತರ ನೀಡಲಿಲ್ಲ.

ವೀಕ್ಷಕರು ಶಾಸಕರೊಂದಿಗೆ ವೈಯಕ್ತಿಕವಾಗಿ ಸಭೆ ನಡೆಸಿ, 'ನಾಯಕತ್ವ' ವಿಚಾರದಲ್ಲಿ ಅಭಿಪ್ರಾಯ ದಾಖಲಿಸಿಕೊಂಡರು. ಕಾಂಗ್ರೆಸ್ ಮುಖಂಡರಾದ ವಿ.ಎಂ ಸುಧೀರನ್, ಕೆ. ಸುಧಾಕರನ್, ರಮೇಶ್ ಚೆನ್ನಿತ್ತಲ ಮತ್ತು ವಿ.ಡಿ ಸತೀಶನ್ ಅವರೊಂದಿಗೂ ಪ್ರತ್ಯೇಕವಾಗಿ ಮಾತುಕತೆ ನಡೆಸಿದರು. ಯುಡಿಎಫ್‌ನ ಮಿತ್ರ ಪಕ್ಷಗಳ ಮುಖಂಡರೊಂದಿಗೂ ವೀಕ್ಷಕರು ಚರ್ಚೆ ನಡೆಸಿದರು.

ಕೇರಳ ವಿಧಾನಸಭಾ ಚುನಾವಣೆಯಲ್ಲಿ ಯುಡಿಎಫ್ ಒಟ್ಟು 102 ಸ್ಥಾನಗಳಲ್ಲಿ ಗೆಲುವು ಗಳಿಸಿದೆ. ವಿ.ಡಿ ಸತೀಶನ್, ರಮೇಶ್ ಚೆನ್ನಿತ್ತಲ ಮತ್ತು ಕೆ.ಸಿ ವೇಣುಗೋಪಾಲ್ ಮುಖ್ಯಮಂತ್ರಿ ಸ್ಥಾನಕ್ಕಾಗಿ ಸ್ಪರ್ಧಾ ಕಣದಲ್ಲಿ ಮುಂಚೂಣಿಯಲ್ಲಿದ್ದಾರೆ.

ತಿರುವನಂತಪುರದಲ್ಲಿ ಗುರುವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗವಹಿಸಲು ಬಂದ ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್ ಮತ್ತು ಅಜಯ್ ಮಾಕನ್ ಅವರನ್ನು ಪಕ್ಷದ ಕಾರ್ಯಕರ್ತರು ಸ್ವಾಗತಿಸಿದರು — ಪಿಟಿಐ ಚಿತ್ರ

'ಡಿಸಿಎಂ ಬೇಡಿಕೆ ಇರಿಸಿಲ್ಲ'

'ಉಪ ಮುಖ್ಯಮಂತ್ರಿ ಹುದ್ದೆಗಾಗಿ ಬೇಡಿಕೆ ಇರಿಸಿಲ್ಲ' ಎಂದು ಯುಡಿಎಫ್ ಮಿತ್ರ ಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಸ್ಪಷ್ಟಪಡಿಸಿದೆ. 'ಯುಡಿಎಫ್ ಒಳಗೆ ಉಪ ಮುಖ್ಯಮಂತ್ರಿ ಹುದ್ದೆಯ ವಿಚಾರವು ಚರ್ಚೆಗೆ ಬಂದರೆ, ಐಯುಎಂಎಲ್ ತನ್ನ ನಿಲುವನ್ನು ತಿಳಿಸಲಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪಿ.ಎಂ.ಎ ಸಲಾಂ ತಿಳಿಸಿದ್ದಾರೆ.

'ಭಾನುವಾರದೊಳಗೆ ಆಯ್ಕೆ ಅಂತಿಮ'

'ಕಾಂಗ್ರೆಸ್ ಮುಖಂಡರು ಮತ್ತು ಶಾಸಕರು ತಮ್ಮ ಅಭಿಪ್ರಾಯಗಳನ್ನು ಎಐಸಿಸಿ ವೀಕ್ಷಕರಿಗೆ ತಿಳಿಸಿದ್ದು, ಭಾನುವಾರದ ಒಳಗೆ ಕೇರಳಂನ ಮುಂದಿನ ಮುಖ್ಯಮಂತ್ರಿ ಆಯ್ಕೆ ಅಂತಿಮಗೊಳ್ಳಲಿದೆ' ಎಂದು ಕಾಂಗ್ರೆಸ್ ನಾಯಕ ಕೆ. ಮುರಳೀಧರನ್ ಸಿಎಲ್‌ಪಿ ಸಭೆಯ ಬಳಿಕ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ವೀಕ್ಷಕರನ್ನು ಭೇಟಿಯಾದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಲು ಮುಖ್ಯಮಂತ್ರಿ ಹುದ್ದೆಯ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿರುವ ವಿ.ಡಿ ಸತೀಶನ್ ಅವರು ನಿರಾಕರಿಸಿದರು.

ಕೆ.ಸಿ ವೇಣುಗೋಪಾಲ್ ಪರವಾಗಿ ಸಾಕಷ್ಟು ಶಾಸಕರು ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಅಸ್ಸಾಂ: 12ಕ್ಕೆ ನೂತನ ಸಿ.ಎಂ ಪ್ರಮಾಣವಚನ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಂ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ನೂತನ ಮುಖ್ಯಮಂತ್ರಿಯ ಪ್ರಮಾಣವಚನ ಸ್ವೀಕಾರ ಸಮಾರಂಭ ಮೇ 12ರಂದು ನಡೆಯಲಿದೆ.

ಖಾನಾಪಾರಾದ ಪಶುವೈದ್ಯಕೀಯ ಮೈದಾನದಲ್ಲಿ ಸಮಾರಂಭ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರು, ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಉದ್ಯಮಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಮುಖ್ಯ ಕಾರ್ಯದರ್ಶಿ ರವಿ ಕೋಟಾ ತಿಳಿಸಿದ್ದಾರೆ.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರಿಗೆ ಈಗಾಗಲೇ ರಾಜೀನಾಮೆ ಸಲ್ಲಿಸಿದ್ದಾರೆ.

ಬಿಜೆಪಿ ಶಾಸಕಾಂಗ ಪಕ್ಷದ ನಾಯಕರ ಆಯ್ಕೆಗಾಗಿ ಕೇಂದ್ರ ಸಚಿವ ಜೆ.ಪಿ. ನಡ್ಡಾ ಹಾಗೂ ನಯಾಬ್ ಸಿಂಗ್ ಸೈನಿ ಅವರನ್ನು ಕ್ರಮವಾಗಿ ವೀಕ್ಷಕ, ಸಹ-ವೀಕ್ಷಕರನ್ನಾಗಿ ನೇಮಿಸಲಾಗಿದೆ. ಹೊಸ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಮೇ 10 ರಂದು ನಡೆಯುವ ಸಾಧ್ಯತೆಯಿದೆ.

ಎಡಪಕ್ಷ, ವಿಸಿಕೆ ಬೆಂಬಲಕ್ಕೆ ಯತ್ನ

ಒಂದನೇ ಪುಟದಿಂದ...

108 ಸ್ಥಾನಗಳನ್ನು ಗೆದ್ದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಟಿವಿಕೆಗೆ ಕಾಂಗ್ರೆಸ್‌ನ ಐವರು ಶಾಸಕರ ಬೆಂಬಲ ದೊರೆತಿದೆ. ಬಹುಮತ ಸಾಬೀತುಪಡಿಸಲು ಇನ್ನೂ ಐವರು ಶಾಸಕರ ಬೆಂಬಲ ಬೇಕಿದೆ. ತಲಾ ಎರಡು ಸ್ಥಾನಗಳನ್ನು ಗೆದ್ದಿರುವ ಸಿಪಿಐ, ಸಿಪಿಎಂ ಮತ್ತು ವಿಸಿಕೆಯ ಬೆಂಬಲ ದೊರೆತರೆ ಟಿವಿಕೆಗೆ ಸರ್ಕಾರ ರಚಿಸಲು ಸಾಧ್ಯವಾಗಲಿದೆ.

ರಾಜ್ಯಪಾಲರ ಭೇಟಿ: ವಿಜಯ್ ಅವರು ಗುರುವಾರ ಬೆಳಿಗ್ಗೆ ಲೋಕ ಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿಯಾದರು. ಸರ್ಕಾರ ರಚನೆಗೆ ಸಂಬಂಧಿಸಿದಂತೆ ವಿಜಯ್, 24 ಗಂಟೆಗಳಲ್ಲಿ 2ನೇ ಬಾರಿ ರಾಜ್ಯಪಾಲರನ್ನು ಭೇಟಿಯಾಗಿದ್ದಾರೆ.

'ಸರ್ಕಾರ ರಚಿಸಲು ಬಹುಮತ ಇದೆ ಎಂಬುದಕ್ಕೆ ದಾಖಲೆ ಒದಗಿಸಲು ಸಾಧ್ಯವಾಗಿಲ್ಲ' ಎಂದು ಅರ್ಲೇಕರ್ ಅವರು ವಿಜಯ್‌ಗೆ ವಿವರಿಸಿದರು ಎಂದು ಲೋಕ ಭವನದ ಪ್ರಕಟಣೆ ತಿಳಿಸಿದೆ.

ಮುಂದುವರಿದ ಪ್ರಯತ್ನ: ಟಿವಿಕೆ ನಾಯಕ ಸಿ.ಟಿ.ಆರ್. ನಿರ್ಮಲ್ ಕುಮಾರ್ ಅವರು ಗುರುವಾರ ಸಿಪಿಐ ಮತ್ತು ಸಿಪಿಎಂ ನಾಯಕರನ್ನು ಭೇಟಿಯಾದರು. ಪಕ್ಷದ ಇನ್ನೊಬ್ಬ ನಾಯಕ, ಮಾಜಿ ಐಆರ್‌ಎಸ್ ಅಧಿಕಾರಿ ಕೆ.ಜಿ. ಅರುಣ್‌ರಾಜ್ ಅವರು ಐಯುಎಂಎಲ್ ಮುಖ್ಯಸ್ಥ ಖಾದರ್ ಮೊಹಿದ್ದೀನ್ ಅವರನ್ನು ಭೇಟಿಯಾಗಿ ಬೆಂಬಲ ಕೋರಿದರು.

ವಿಜಯ್ ಅವರ ಕೋರಿಕೆಯ ಬಗ್ಗೆ ಶುಕ್ರವಾರ ನಡೆಯುವ ಪಕ್ಷದ ಹಿರಿಯ ನಾಯಕರ ಸಭೆಯಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಎಡಪಕ್ಷಗಳು ತಿಳಿಸಿವೆ..

ವಿಸಿಕೆ ಪಕ್ಷದ ಮುಖ್ಯಸ್ಥ ತೊಲ್ ತಿರುಮಾವಳವನ್ ಜತೆ ವಿಜಯ್ ಅವರೇ ಮಾತನಾಡಿದ್ದಾರೆ. 'ಶೀಘ್ರದಲ್ಲೇ' ನಿರ್ಧಾರವನ್ನು ತೆಗೆದುಕೊಳ್ಳುವುದಾಗಿ ತಿರುಮಾವಳವನ್ ತಿಳಿಸಿದ್ದಾರೆ.

> **ಶೀಘ್ರದಲ್ಲಿಯೇ ಒಳ್ಳೆಯ ಸುದ್ದಿ ಹೊರಹೊಮ್ಮುತ್ತದೆ. ಆದ್ದರಿಂದ ಮುಂದಿನ ಎರಡು ದಿನ ರೆಸಾರ್ಟ್‌ನಲ್ಲಿ ಒಗ್ಗಟ್ಟು ಪ್ರದರ್ಶಿಸುತ್ತ ತಾಳ್ಮೆಯಿಂದಿರಿ**
>
> **ಎಡಪ್ಪಾಡಿ ಕೆ. ಪಳನಿಸ್ವಾಮಿ,** ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ

ವೃತ್ತಿಪರ ಶೂಟರ್‌ಗಳ ಕೈವಾಡ ಶಂಕೆ

ಒಂದನೇ ಪುಟದಿಂದ....

ರಥ್ ಅವರು ಕೋಲ್ಕತ್ತದಿಂದ ತಮ್ಮ ಫ್ಲ್ಯಾಟ್‌ಗೆ ಕಾರಿನಲ್ಲಿ ಹಿಂತಿರುಗುತ್ತಿದ್ದಾಗ ಉತ್ತರ 24 ಪರಗಣ ಜಿಲ್ಲೆಯ ಮಧ್ಯಮ್‌ಗ್ರಾಮ್ ಪ್ರದೇಶದ ಜೆಸ್ಸೋರ್ ರಸ್ತೆಯ ದೊಹರಿಯಾ ಬಳಿ ಬುಧವಾರ ರಾತ್ರಿ 10.30ರ ಸುಮಾರಿಗೆ ಸಣ್ಣ ಕಾರು ಅಡ್ಡ ಬಂದಿದೆ. ಈ ವೇಳೆ, ರಥ್ ಅವರ ಕಾರಿನ ವೇಗವನ್ನು ಕಡಿಮೆ ಮಾಡಲಾಯಿತು. ಮೋಟರ್ ಸೈಕಲ್‌ಗಳಲ್ಲಿ ಬಂದ ದುಷ್ಕರ್ಮಿಗಳು ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ದುಷ್ಕರ್ಮಿಗಳು ಬಿಟ್ಟು ಹೋಗಿದ್ದ ಕಾರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಕಾರಿಗೆ ಅಳವಡಿಸಿದ್ದ ನಂಬರ್ ಪ್ಲೇಟ್ ನಕಲಿಯಾಗಿದೆ. ಅದರ ಚಾಸಿಸ್ ಹಾಗೂ ಎಂಜಿನ್ ನಂಬರ್‌ಗಳನ್ನು ಅಳಿಸಿ ಹಾಕಲಾಗಿದೆ. ಆ ಕಾರು ಸಿಲಿಗುರಿಯ ವ್ಯಕ್ತಿಗೆ ಸೇರಿದ್ದು, ಅವರು ಟೀ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ವಿಚಾರಣೆ ನಡೆಸಲಾಗಿದೆ. ಕಾರನ್ನು ಮಾರಾಟ ಮಾಡಲು ಆನ್‌ಲೈನ್ ಪ್ಲಾಟ್‌ಫಾರ್ಮ್‌ನಲ್ಲಿ ಅದರ ಚಿತ್ರವನ್ನು ಅಪ್‌ಲೋಡ್ ಮಾಡಿರುವುದಾಗಿ ಮಾಲೀಕರು ತಿಳಿಸಿದ್ದಾರೆ.

ಬಾರಾಸತ್ ವೈದ್ಯಕೀಯ ಕಾಲೇಜಿನಿಂದ ಚಂದ್ರನಾಥ್ ರಥ್ ಅವರ ಪಾರ್ಥಿವ ಶರೀರ ಕೊಂಡೊಯ್ಯಲಾಯಿತು —ಪಿಟಿಐ ಚಿತ್ರ

'ಘಟನಾ ಸ್ಥಳದಿಂದ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ವಿಧಿವಿಜ್ಞಾನ ಪ್ರಯೋಗಾಲಯದ ಮಾಹಿತಿ ಪ್ರಕಾರ, ದಾಳಿಯಲ್ಲಿ ಅತ್ಯಾಧುನಿಕ ಪಿಸ್ತೂಲ್ ಬಳಸಲಾಗಿದೆ. ಹಂತಕರು ಗ್ಲಾಕ್ 47ಎಕ್ಸ್ ಪಿಸ್ತೂಲ್‌ಗಳನ್ನು ಬಳಸಿರುವ ಸಾಧ್ಯತೆ ಇದೆ. ಸಾಮಾನ್ಯ ಹಂತಕರು ಈ ರೀತಿಯ ಪಿಸ್ತೂಲ್ ಬಳಸುವುದಿಲ್ಲ. ಇದರಲ್ಲಿ ವೃತ್ತಿಪರ ಶೂಟರ್‌ಗಳು ಭಾಗಿಯಾಗಿದ್ದಾರೆಯೇ ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದಿದ್ದಾರೆ.

ಚಾಲಕನ ಸ್ಥಿತಿ ಗಂಭೀರ: ಈ ಘಟನೆಯಲ್ಲಿ ಗುಂಡೇಟಿನಿಂದ ಗಾಯಗೊಂಡಿದ್ದ ಚಾಲಕ ಬುದ್ಧದೇವ್ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> **ಈ ಘಟನೆಯು ಪಶ್ಚಿಮ ಬಂಗಾಳದ ರಕ್ತದಿಂದ ತೊಯ್ದ ರಾಜಕೀಯ ಸಂಸ್ಕೃತಿಯ ಪ್ರತಿಬಿಂಬ**
>
> **ಧರ್ಮೇಂದ್ರ ಪ್ರಧಾನ್,** ಕೇಂದ್ರ ಸಚಿವ

'ಆಪ್ತ ಸಹಾಯಕ ಆಗಿರದಿದ್ದರೆ ರಥ್ ಸಾಯುತ್ತಿರಲಿಲ್ಲ'

ರಥ್ ಅವರ ಪಾರ್ಥಿವ ಶರೀರವನ್ನು ಅವರ ಹುಟ್ಟೂರಾದ ಪೂರ್ವ ಮೇದಿನಿಪುರ ಜಿಲ್ಲೆಯ ಚಂಡೀಪುರಕ್ಕೆ ಕೊಂಡೊಯ್ಯುವ ಮೊದಲು ಬಿಜೆಪಿ ನಾಯಕ ಸುವೇಂದು ಅಧಿಕಾರಿ ಮಾತನಾಡಿ, 'ಭಾರತೀಯ ವಾಯುಪಡೆಯ ಮಾಜಿ ಯೋಧ ರಥ್ ನನ್ನ ಆಪ್ತ ಸಹಾಯಕನಾಗಿ (ಪಿ.ಎ) ಇರದಿದ್ದರೆ ಹಾಗೂ ನಾನು ಭವಾನಿಪುರದಲ್ಲಿ ಗೆಲ್ಲದಿದ್ದರೆ ಹತ್ಯೆಗೀಡಾಗುತ್ತಿರಲಿಲ್ಲ. ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿ ನಾನು ಜಯಗಳಿಸಿದ್ದ ಕಾರಣಕ್ಕಾಗಿ ಹತ್ಯೆ ನಡೆದಿದೆ' ಎಂದು ಆರೋಪಿಸಿದ್ದಾರೆ.

'ಪಕ್ಷದ ಪಾತ್ರವಿಲ್ಲ'

ಬಿಜೆಪಿ ನಾಯಕರ ಆರೋಪಗಳನ್ನು ತಿರಸ್ಕರಿಸಿರುವ ಟಿಎಂಸಿ, 'ಈ ಕೊಲೆ ಪ್ರಕರಣದಲ್ಲಿ ಪಕ್ಷದ ಪಾತ್ರವಿಲ್ಲ. ತನಿಖೆ ಪೂರ್ಣಗೊಳ್ಳುವ ಮೊದಲೇ ಬಿಜೆಪಿಯು ಈ ಘಟನೆಯನ್ನು ರಾಜಕೀಯಗೊಳಿಸುತ್ತಿದೆ' ಎಂದು ಆರೋಪಿಸಿದೆ.

ಬಿಹಾರ: ನಿತೀಶ್ ಪುತ್ರ ಸೇರಿ 32 ಮಂದಿ ಸಂಪುಟಕ್ಕೆ

ಪಟ್ನಾ: ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಸೇರಿದಂತೆ 32 ಮಂದಿ ಗುರುವಾರ ಬಿಹಾರದ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ನಿಶಾಂತ್ ಕುಮಾರ್

ನೂತನ ಸಚಿವರ ಪ್ರಮಾಣ ವಚನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ನಿತೀಶ್ ಕುಮಾರ್ ಹಾಜರಿದ್ದರು.

ನೂತನ ಸಂಪುಟದಲ್ಲಿ ಜೆಡಿಯುಗೆ 13 ಸ್ಥಾನ ಲಭಿಸಿವೆ. ಬಿಜೆಪಿಯ 15 ಮಂದಿ, ಲೋಕ ಜನಶಕ್ತಿ ಪಕ್ಷದಿಂದ ಇಬ್ಬರು, ಜಿತಿನ್ ರಾಮ್ ಮಾಂಝಿ ಅವರ ಎಚ್‌ಎಎಂ ಮತ್ತು ಉಪೇಂದ್ರ ಕುಶ್ವಾಹ ಅವರ ಆರ್‌ಎಲ್‌ಎಂನಿಂದ ತಲಾ ಒಬ್ಬರು ಸಂಪುಟ ಸೇರಿದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-2 ರವರ ಕಚೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.

ಸಂಖ್ಯೆ: ಉಪ್ರವ್ಯ-2/ಬಿಎಸ್‌ಡಬ್ಲ್ಯೂಎಂಎಲ್/ತಿದ್ದು-01/2026-27 ದಿನಾಂಕ: 07.05.2026

ತಿದ್ದುಪಡಿ-1

ವಿಷಯ : ಟೆಂಡರ್‌ಗಾಗಿ ಈವೆಂಟ್‌ಗಳ ಕ್ಯಾಲೆಂಡರ್‌ನ ವಿಸ್ತರಣೆ. ಉಲ್ಲೇಖ ಉಪ್ರವ್ಯ-2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡ/03/2026-27 ದಿನಾಂಕ : 02.05.2026.
ಮೇಲಿನ ವಿಷಯ ಮತ್ತು ಉಲ್ಲೇಖದ ಪ್ರಕಾರ, ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದಾಗಿ ಮೇಲಿನ ಟೆಂಡರ್ ಅಧಿಸೂಚನೆಯ ಕಾರ್ಯಕ್ರಮಗಳ ಕ್ಯಾಲೆಂಡರ್ ಅನ್ನು ವಿಸ್ತರಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್ ಅಧಿಸೂಚನೆಯ ಪ್ರಕಾರ	ಮುಂದೂಡಲಾದ ದಿನಾಂಕಗಳು
1	ಪ್ರೀ ಬಿಡ್‌ನ ದಿನಾಂಕ	12.05.2026 ಮಧ್ಯಾಹ್ನ 3.00 ಗಂಟೆ	18.05.2026 ಮಧ್ಯಾಹ್ನ 3.00 ಗಂಟೆ
2	ಅರ್ಹತಾ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	22.05.2026 ಸಂಜೆ 4.00 ಗಂಟೆಯವರೆಗೆ	29.05.2026 ಸಂಜೆ 4.00 ಗಂಟೆಯವರೆಗೆ
3	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	25.05.2026 ಸಂಜೆ 4.30 ಗಂಟೆಗೆ	30.05.2026 ಸಂಜೆ 4.30 ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ ಜಿಒಕೆ ಕೆಪಿಪಿ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಗೆ ಭೇಟಿ ನೀಡಿ.
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-2, ಬಿಎಸ್‌ಡಬ್ಲ್ಯೂಎಂಎಲ್
DIPR/CP/565/NR/2026-27

ಕರ್ನಾಟಕ ಸರ್ಕಾರ
ರಾಜ್ಯ ಅಭಿಯಾನ ನಿರ್ದೇಶಕರು,
ಸ್ವಚ್ಛ ಭಾರತ್ ಮಿಷನ್ (ನಗರ) ಬೆಂಗಳೂರು.
10ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001.
ದೂರವಾಣಿ: 080- 22867172 / 22866302, ಫ್ಯಾಕ್ಸ್: 080-22863576 /22861665
ಇ-ಮೇಲ್: swmcelldma@gmail.com

ಸಂಖ್ಯೆ: 1267569/DMA/SWM/SBM/47/2023 ದಿನಾಂಕ: 07.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ-3ನೇ ಕರೆ

ರಾಜ್ಯ ಅಭಿಯಾನ ನಿರ್ದೇಶಕರುರವರ ಕಛೇರಿ ಕೆಲಸಗಳಿಗೆ ಅವಶ್ಯವಿರುವ ಮಾನವ ಸಂಪನ್ಮೂಲವನ್ನು ಬಾಹ್ಯಮೂಲ (Out Source)ಗಳಿಂದ ಪಡೆಯಲು Indent No.DMA/2025-26/SE6051/CALL-3ನ್ನು ಕೆಪಿಪಿ ಪೋರ್ಟಲ್ ಮೂಲಕ ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000ರ ಪ್ರಕಾರ, ಕೆ/ಸಿ-8 ದಸ್ತಾವೇಜಿನಲ್ಲಿ ಟೆಂಡರನ್ನು ಕೆಪಿಪಿ ಪೋರ್ಟಲ್ ನಲ್ಲಿ ದ್ವಿ- ಲಕೋಟೆ ಪದ್ಧತಿಯಲ್ಲಿ ಪ್ರಚುರಪಡಿಸಲಾಗಿದ್ದು, ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಅರ್ಹ ಬಿಡ್ಡುದಾರರು/ಏಜೆನ್ಸಿದಾರರು ಭಾಗವಹಿಸಲು ಕೋರಲಾಗಿದೆ, ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.
ಸಹಿ/-
ಅಧೀಕ್ಷಕ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
DIPR/CP/562/Zen/2026-27

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ,
ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ,
ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080-26716046 ವೆಬ್‌ಸೈಟ್: http://kppp.karnataka.gov.in

ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/07/2026-27 ದಿನಾಂಕ:06.05.2026

ಕೆ.ಪಿ.ಪಿ.ಪಿ. ಪ್ರಕಟಣೆ ನೋಟೀಸ್(ಏಕ-ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ **MLA Grants** ಅನುಮೋದನೆಯಾಗಿರುವ ಕಾಮಗಾರಿಗೆ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ:22.05.2026 ರ ಸಂಜೆ 4.00** ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ..
ಸಹಿ/-
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.
ವಾಸಾಸಂಇ/ವಾಪ್ರ/556/ಎಸ್‌ಎಸ್‌ಸಿ/2026-27

ಕರ್ನಾಟಕ ಸರ್ಕಾರ
ಉನ್ನತ ಶಿಕ್ಷಣ ಇಲಾಖೆ
6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು- 560001

ಸಂ. ಇಡಿ/12/ಕೆವಿವಿ/2026 ದಿನಾಂಕ: 06-05-2026

ಸಾರ್ವಜನಿಕ ಪ್ರಕಟಣೆ
ಕನ್ನಡ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಯ ನೇಮಕಾತಿ

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ, ಇವರು ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕನ್ನಡ ವಿಶ್ವವಿದ್ಯಾಲಯಗಳ ಅಧಿನಿಯಮ 1991 ರ ಪ್ರಕರಣ 13(2) ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಅರ್ಹ ಪ್ರಾಧ್ಯಾಪಕರು / ಶಿಕ್ಷಣ ತಜ್ಞರುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಈ ಜಾಹೀರಾತು ಪ್ರಕಟಣೆಯಾದ 20 ದಿನಗಳ ಒಳಗಾಗಿ ಸ್ವೀಕೃತವಾಗುವಂತೆ " ಸರಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001" ಇವರಿಗೆ ಸಲ್ಲಿಸತಕ್ಕದ್ದು. ಇಮೇಲ್ : kannadaunivc2026@gmail.com. ವಿವರವಾದ ಅರ್ಜಿಗಳು ಮತ್ತು ಇತರೆ ವಿವರಗಳು ಉನ್ನತ ಶಿಕ್ಷಣ ಇಲಾಖೆಯ ವೆಬ್ ಸೈಟ್ https://hed.karnataka.gov.in. ನಲ್ಲಿ ಪಡೆಯಬಹುದು.
ಸಹಿ/-
ಸರ್ಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ
DIPR/CP/552/Zen/2026-27

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ – 2ನೇ ಕರೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಚಿತ್ರದುರ್ಗ ವಿಭಾಗದ ಹೊಸದುರ್ಗ ಮತ್ತು ಶ್ರೀರಾಂಪುರ ಉಪ ವಿಭಾಗಗಳಲ್ಲಿ (ದಾವಣಗೆರೆ ವೃತ್ತ, CTAZ ವಲಯ, ಬೆವಿಕಂ), ವ್ಯವಸ್ಥೆಯ ಸುಧಾರಣೆ ಕಾರ್ಯಗಳ ಅಡಿಯಲ್ಲಿ ಬೆವಿಕಂ ಪೂರೈಸುವ ಪ್ರಮುಖ ಸಾಮಗ್ರಿಗಳು (ಟ್ರಾನ್ಸ್‌ಫಾರ್ಮರ್‌ಗಳು ಮತ್ತು Rabbit ACSR ಕಂಡಕ್ಟರ್) ಒಳಗೊಂಡಂತೆ HT, LT ಮಾರ್ಗಗಳ ವಿಸ್ತರಣೆ ಮತ್ತು ಹೆಚ್ಚುವರಿ DTC ಗಳನ್ನು ಅಳವಡಿಸಲು ಶೇಕಡಾವಾರು ಭಾಗಶಃ ಟರ್ನ್‌ಕೀ ಆಧಾರದ ಮೇಲೆ ಮರು ಟೆಂಡರ್ ಆಹ್ವಾನಿಸಿದ್ದಾರೆ.

Enq. No's for SC Category: **SEE/BESCOM/DVG/WORK/SI/HSD/O&M-2/2026-27/02**
Enq. No's for ST Category: **SEE/BESCOM/DVG/WORK/SI/HSD/MADADAKERE/2026-27/04**
Enq. No's for Category-I: **SEE/BESCOM/DVG/WORK/SI/SRP/MATHOD/2026-27/07**
Enq. No's for Category-IIA: **SEE/BESCOM/DVG/WORK/SI/HSD/O&M-1/2026-27/01**
Enq. No's for Others: **1.SEE/BESCOM/DVG/WORK/SI/SRP/BELAGUR/2026-27/05**
2.SEE/BESCOM/DVG/WORK/SI/SRP/KANCHIPURA/2026-27/06
3.SEE/BESCOM/DVG/WORK/SI/SRP/SRIRAMPURA/2026-27/08

1) ಬಿಡ್ ದಾಖಲೆಗಳು ದೊರೆಯುವ ದಿನಾಂಕ: **11.05.2026 ರ ಸಂಜೆ 5.00 ಗಂಟೆಯಿಂದ.** 2) ಬಿಡ್ ಪೂರ್ವಭಾವಿ ಸಭೆ: **16.05.2026 ರ ಬೆಳಿಗ್ಗೆ 11:00 ಗಂಟೆಗೆ.** 3) ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **19.05.2026ರ ಸಂಜೆ 5.00 ಗಂಟೆಯವರೆಗೆ.** 4) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **26.05.2026ರ ಸಂಜೆ 5.00 ಗಂಟೆಯವರೆಗೆ.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **29.05.2026 ಬೆಳಿಗ್ಗೆ 11:00 ಗಂಟೆಗೆ.** 6) ಸ್ಥಳ: **ಅಧೀಕ್ಷಕ ಎಂಜಿನಿಯರ್(ವಿ) ರವರ ಕಛೇರಿ, ಕಾ&ಪಾ ವೃತ್ತ, ಹದಡಿ ರಸ್ತೆ, ಬೆಸ್ಕಾಂ, ದಾವಣಗೆರೆ-577002**
ಆಸಕ್ತ ಬಿಡ್ಡರ್‌ಗಳು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಬಿಡ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: +91-8046010000, +91-8022631200, ಇ-ಮೇಲ್: support@ihelpdsk.com ನಿಂದ ಹೆಚ್ಚಿನ ವಿವರಗಳನ್ನು ಪಡೆಯಬಹುದು.
ಸಹಿ/-
ಅಧೀಕ್ಷಕ ಇಂಜಿನಿಯರ್ (ವಿ),
ಕಾ&ಪಾ ವೃತ್ತ, ಹದದಿ ರಸ್ತೆ, ಬೆವಿಕಂ,
ದಾವಣಗೆರೆ- 577 002, ದೂರವಾಣಿ : 08192-263616

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ನಂ. 29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-570017
CIN:- U40109KA2004SGC035177

ಸಂಖ್ಯೆ : CESC/AHR/TRN/11/2026-TRNG/2696 ದಿನಾಂಕ : 30-04-2026

ಪ್ರಕಟಣೆ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ), ಮೈಸೂರು ರವರ ವತಿಯಿಂದ 2026-2027ನೇ ಸಾಲಿನ **ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ Engineering Graduates/Non-Engineering Graduates/Diploma** ವ್ಯಾಸಂಗ ಮಾಡಿರುವ ಅಭ್ಯರ್ಥಿಗಳಿಂದ ಈ ಕೆಳಕಂಡ ವಿವರದಂತೆ ಅರ್ಜಿಗಳನ್ನು (Onlineನಲ್ಲಿ ಮಾತ್ರ) ಆಹ್ವಾನಿಸಲಾಗಿದೆ.

ಕ್ರ. ಸಂ.	ಶಿಶಿಕ್ಷು ವೃತ್ತಿಯ ವರ್ಗ	ವಿಷಯ	ಶಿಶಿಕ್ಷು ಸಂಖ್ಯೆ	ಪ್ರತಿ ಮಾಹೆಯ ಶಿಶಿಕ್ಷು ವೇತನ (ರೂ.)	ಶಿಶಿಕ್ಷು ತರಬೇತಿ ಅವಧಿ
1	ಇಂಜನಿಯರಿಂಗ್ ಪದವೀಧರ ಅಪ್ರೆಂಟಿಶಿಪ್	ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜನಿಯರಿಂಗ್	78	12,300/-	ಒಂದು (01) ವರ್ಷ
		ಸಿವಿಲ್ ಇಂಜನಿಯರಿಂಗ್	02		
		ಒಟ್ಟು	80		
2	ಡಿಪ್ಲೊಮಾ ಅಪ್ರೆಂಟಿಶಿಪ್	ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜನಿಯರಿಂಗ್	53	10,900/-	
		ಸಿವಿಲ್ ಇಂಜನಿಯರಿಂಗ್	02		
		ಒಟ್ಟು	55		
3	ಪದವೀಧರ (Non-Engineering) ಅಪ್ರೆಂಟಿಶಿಪ್	ಬಿ.ಕಾಂ.	30	12,300/-	
		ಬಿ.ಬಿ.ಎ.	10		
		ಬಿ.ಸಿ.ಎ	10		
		ಬಿ.ಎ	07		
		ಬಿ.ಎಸ್ಸಿ.	08		
		ಒಟ್ಟು	65		
		ಒಟ್ಟು ಸಂಖ್ಯೆ	200		

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ

ಕ್ರ.ಸಂ.	ವಿವರ	ದಿನಾಂಕ
1	ಆನ್‌ಲೈನ್ ಅಪ್ಲಿಕೇಷನ್ ಸಲ್ಲಿಸಲು ಪ್ರಾರಂಭದ ದಿನಾಂಕ	08.05.2026
2	Online ಅಪ್ಲಿಕೇಷನ್ ಸಲ್ಲಿಸಲುಕೊನೆಯ ದಿನಾಂಕ	29.05.2026

ಇಂಜನಿಯರಿಂಗ್ ಪದವೀಧರ/ಪದವೀಧರ (Non-Engineering) /ಡಿಪ್ಲೊಮಾ ಇಂಜನಿಯರಿಂಗ್‌ನಲ್ಲಿ 2022, 2023, 2024, 2025 ಮತ್ತು 2026ನೇ ಸಾಲಿನಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಅಪ್ರೆಂಟಿಶಿಪ್‌ಗೆ ಚಾವಿಸನಿನಿಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.
ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಯನ್ನು ಚಾವಿಸನಿನಿಯ ಅಧಿಕೃತ ವೆಬ್‌ಸೈಟ್ https://cescmysore.karnataka.gov.in (ಪ್ರಕಟಣೆಗಳು/ಪ್ರಕಟಣೆಗಳು 2026-27/ಇಲ್ಲಿ ಕ್ಲಿಕ್ ಮಾಡಿ) ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
ವಾಸಾಸಂಇ/ಮೈಸೂರು/01/ಶಿರಡಿ ಸಾಯಿ/2026-27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080-22265383, website: www.kiadb.in

ಸಂ.KIADB/COF/ಅಂತಿಮ ಬೆಲೆ/1847/2026-27 ದಿನಾಂಕ : 07.05.2026

ಪತ್ರಿಕೆ ಪ್ರಕಟಣೆ

ವಿಷಯ: ಕರ್ನಾಟಕದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶ (ದಾಬಸ್‌ಪೇಟೆ ನಾಲ್ಕನೆ ಹಂತ)ಕ್ಕೆ ಸಂಬಂಧಿಸಿದಂತೆ ಅಂತಿಮ ಬೆಲೆಯ ನಿರ್ಣಯ.

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ (KIADB) ಕರ್ನಾಟಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶ (ದಾಬಸ್‌ಪೇಟೆ ನಾಲ್ಕನೇ ಹಂತ) ಹಂಚಿಕೆದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, KIAD ಮಂಡಳಿಯು 07.03.2026ರಂದು ನಡೆದ 398ನೇ ಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶ (ದಾಬಸ್‌ಪೇಟೆ ನಾಲ್ಕನೇ ಹಂತ)ದ ಅಂತಿಮ ಬೆಲೆಯನ್ನು ಈ ಕೆಳಗೆ ವಿವರಿಸಿದಂತೆ ನಿರ್ಧರಿಸಿದೆ;

ಕ್ರ. ಸಂ	ಪ್ರತಿ ಎಕರೆಗೆ ಹಂಚಿಕೆಯ ತಾತ್ಕಾಲಿಕ ವೆಚ್ಚ (ರೂ. ಲಕ್ಷಗಳಲ್ಲಿ)	ಪ್ರತಿ ಎಕರೆಗೆ ಅಂತಿಮ ಬೆಲೆಯನ್ನು (ಲಕ್ಷ ರೂ.ಗಳಲ್ಲಿ) ನಿರ್ಧರಿಸಲಾಗಿದೆ (ನೀರು ಸರಬರಾಜು ಯೋಜನೆಯ ಅನುಪಾತದ ವೆಚ್ಚ ಪ್ರತಿ ಎಕರೆಗೆ ರೂ.14.50 ಲಕ್ಷಗಳು ಸೇರಿದಂತೆ)	ಅಂತಿಮ ಬೆಲೆ ಪ್ರತಿ ಎಕರೆಗೆ ಪಾವತಿಸಬೇಕಾದ ಭೂಮಿಯ ಬೆಲೆಯ ವ್ಯತ್ಯಾಸದ ಮೊತ್ತ (ರೂ.(ಲಕ್ಷಗಳಲ್ಲಿ)
1	57.00 (ಅಭಿವೃದ್ಧಿ ವೆಚ್ಚದಲ್ಲಿ ಹಂಚಿಕೆ ಮಾಡಲಾಗಿದೆ)	105.35	48.35
2	75.00 (50% ರಿಯಾಯಿತಿ ದರದಲ್ಲಿ KASSIA ಗೆ ಹಂಚಿಕೆ ಮಾಡಲಾಗಿದೆ)	128.00	53.00
3	150.00	241.50	91.50

ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶದ (ದಾಬಸ್‌ಪೇಟೆ ನಾಲ್ಕನೆ ಹಂತ) ಎಲ್ಲಾ ಹಂಚಿಕೆದಾರರು KIADB RTGS/NEFT ಮೂಲಕ ಹಂಚಿಕೆ ಮಾಡಿದ ಭೂಮಿಯ ಬೆಲೆಯ ಅಂತಿಮ ಬೆಲೆ ವ್ಯತ್ಯಾಸವನ್ನು ಈ ಕೆಳಗೆ ತಿಳಿಸಲಾದ KIADB ಬ್ಯಾಂಕ್ ಖಾತೆಗೆ ಪಾವತಿಸಬೇಕು.
ಫಲಾನುಭವಿಯ ಹೆಸರು : KIADB, ಬ್ಯಾಂಕ್ ಹೆಸರು : ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶಾಖೆಯ ಹೆಸರು / ಶಾಖೆ ಕೋಡ್ : ರೇಸ್ ಕೋರ್ಸ್ ರಸ್ತೆ, ಬೆಂಗಳೂರು, ಖಾತೆ ಪ್ರಕಾರ: ಚಾಲ್ತಿ ಖಾತೆ, ಖಾತೆ ಸಂಖ್ಯೆ : 510341000075865, IFSC ಕೋಡ್: UBIN0930911.
ಪಾವತಿಸಬೇಕಾದ ಭೂಮಿಯ ಬೆಲೆಯ ಅಂತಿಮ ಬೆಲೆ ವ್ಯತ್ಯಾಸದ ಮೊತ್ತವನ್ನು ಕೆಳಗೆ ವಿವರಿಸಿದಂತೆ ಪಾವತಿಸಬೇಕು;
1) ಈ ಅಧಿಸೂಚನೆಯ ದಿನಾಂಕದಿಂದ 6 ತಿಂಗಳೊಳಗೆ ಭೂಮಿಯ ಬೆಲೆಯ ವ್ಯತ್ಯಾಸದ ಮೊತ್ತವನ್ನು ಪಾವತಿಸಿದರೆ, ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.
2) ಈ ಅಧಿಸೂಚನೆಯ ದಿನಾಂಕದಿಂದ 6 ತಿಂಗಳೊಳಗೆ ಭೂಮಿಯ ಬೆಲೆಯ ವ್ಯತ್ಯಾಸವನ್ನು ಪಾವತಿಸದಿದ್ದರೆ ಮುಂದಿನ 6 ತಿಂಗಳ ಅವಧಿಯವರೆಗೆ ವರ್ಷಕ್ಕೆ ಶೇ. 5% ಬಡ್ಡಿಯನ್ನು ವಿಧಿಸಲಾಗುತ್ತದೆ ಮತ್ತು ಒಂದು ವರ್ಷದ ನಂತರ ಪಾವತಿಸಿದ್ದಲ್ಲಿ ಪಾವತಿಸುವ ದಿನಾಂಕದ ವರೆಗೆ ವ್ಯತ್ಯಾಸದ ಮೊತ್ತದ ಮೇಲೆ ವರ್ಷಕ್ಕೆ ಶೇ. 10% ಬಡ್ಡಿಯನ್ನು ವಿಧಿಸಲಾಗುತ್ತದೆ.
ಈ ಪತ್ರಿಕಾ ಪ್ರಕಟಣೆಯ ಅಧಿಸೂಚನೆಯನ್ನು KIADBಯ ಬೇಡಿಕೆ ಪತ್ರ (Demand Notice)ಎಂದು ಪರಿಗಣಿಸತಕ್ಕದ್ದು.
ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ
ಕಾರ್ಯನಿರ್ವಾಹಕ ಸದಸ್ಯರು
DIPR/CP/563/Zen/2026-27

ಚಟಿಕೆ ಸುದ್ದಿ

ವೀರಣ್ಣ ರಾಜೂರಗೆ ಬಸವಶ್ರೀ ಪ್ರಶಸ್ತಿ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಬಸವೇಶ್ವರ ಪೀಠದ ಬಸವಶ್ರೀ ಪ್ರಶಸ್ತಿಗೆ ಎಂ.ಎಂ.ಕಲಬುರ್ಗಿ ಟ್ರಸ್ಟ್ ಅಧ್ಯಕ್ಷ ಪ್ರೊ.ವೀರಣ್ಣ ರಾಜೂರ ಆಯ್ಕೆ ಆಗಿದ್ದಾರೆ.

ವೀರಣ್ಣ ರಾಜೂರ

ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಮೇ 9ರಂದು ಕರ್ನಾಟಕ ವಿವಿಯಲ್ಲಿ ನಡೆಯುವ ಬಸವ ಜಯಂತ್ಯುತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪೀಠದ ಸಂಯೋಜಕ ಪ್ರೊ.ನಿಜಲಿಂಗಪ್ಪ ಮಟ್ಟಿಹಾಳ ತಿಳಿಸಿದ್ದಾರೆ.

ಭೂಮಾಪಕನ ಬಂಧನ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಜಮೀನನ್ನು ಹದ್ದುಬಸ್ತು ಮಾಡಲು ರೈತರೊಬ್ಬರಿಂದ ಯುಪಿಐ ಮೂಲಕ ಲಂಚ ಪಡೆದ ಆರೋಪದ ಮೇಲೆ ಭೂಮಾಪನ ಇಲಾಖೆಯ ಭೂಮಾಪಕ ಕೊಟ್ರೇಶ್ ನಾಯ್ಕ್ ಎಂಬುವರನ್ನು ಗುರುವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೊಟ್ರೇಶ್ ನಾಯ್ಕ್

‘ತಾಲ್ಲೂಕಿನ ವರದಾಪುರದ ಹುಳ್ಳಿ ದೇವೇಂದ್ರಪ್ಪ ಎಂಬುವರ ಜಮೀನಿನ ಹದ್ದುಬಸ್ತು ಮಾಡಲು ಕೊಟ್ರೇಶ್ ನಾಯ್ಕ್ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಆರಂಭದಲ್ಲಿ ₹10 ಸಾವಿರ ಪಡೆದು, ಮತ್ತೆ ₹30 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು. ಆಗ ದೇವೇಂದ್ರಪ್ಪ ಯುಪಿಐ ಮೂಲಕ ಈ ಹಣ ಪಾವತಿಸಿದ್ದರು’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ನಾಳೆಯಿಂದ ‘ಸಂಗಂ ಸಾಹಿತ್ಯ ಪುರಸ್ಕಾರ’

ಬಳ್ಳಾರಿ: ‘ಸಂಗಂ ಸಾಹಿತ್ಯ ಪುರಸ್ಕಾರ-2025’ ಪ್ರದಾನ ಸಮಾರಂಭ ಮೇ 9 ಮತ್ತು 10ರಂದು ಬಳ್ಳಾರಿಯಲ್ಲಿ ನಡೆಯಲಿದೆ. ಈ ಬಾರಿಯ ಸಮಾರಂಭವನ್ನು ಕನ್ನಡ-ತೆಲುಗು ಸಾಹಿತ್ಯದ ನುಡಿ ಸಾಂಗತ್ಯದ ಪರಿಕಲ್ಪನೆಯಲ್ಲಿ ರೂಪಿಸಲಾಗಿದೆ’ ಎಂದು ಸಂಗಂ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಶಿವಲಿಂಗಪ್ಪ ಹಂದಿಹಾಳು ತಿಳಿಸಿದರು.

‘2023ರಿಂದ 25ರ ಅವಧಿಯಲ್ಲಿ ಪ್ರಥಮ ಮುದ್ರಣದ ರೂಪದಲ್ಲಿ ಪ್ರಕಟಗೊಂಡ ಕವನ ಸಂಕಲನಕ್ಕೆ 2025ನೇ ಸಾಲಿನ ಪ್ರಶಸ್ತಿ ನೀಡಲಾಗುವುದು. ಪ್ರಶಸ್ತಿಗೆ ಹಲವು ಕವನ ಸಂಕಲನಗಳು ಬಂದಿದ್ದವು. ಅಂತಿಮವಾಗಿ ಐದು ಕೃತಿಗಳು ಪ್ರಶಸ್ತಿ ಹಂತಕ್ಕೆ ಆಯ್ಕೆಯಾಗಿವೆ’ ಎಂದರು.

ಚುನಾವಣಾ ರಾಜಕಾರಣಕ್ಕೆ ವಿಶ್ವನಾಥ್ ವಿದಾಯ

ಮೈಸೂರು: ‘₹50 ಕೋಟಿ ಖರ್ಚು ಮಾಡಿ ಚುನಾವಣೆ ಎದುರಿಸುವಷ್ಟು ಶಕ್ತಿ ನನ್ನಲ್ಲಿ ಇಲ್ಲ. ಹೀಗಾಗಿ ಮುಂದೆ ಯಾವ ಚುನಾವಣೆಗೂ ಸ್ಪರ್ಧಿಸುವುದಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.

‘ಹಲವು ಬಾರಿ ಚುನಾವಣೆ ಎದುರಿಸಿದಾಗ ಜನರೇ ಹಣ ನೀಡಿ ಆಶೀರ್ವದಿಸಿದ್ದರು. ಈಗ ಜನರಿಗೇ ಹಣ ನೀಡಿ ಚುನಾವಣೆ ಎದುರಿಸಬೇಕಾಗಿದೆ. ಹೀಗಾಗಿ ಸ್ಪರ್ಧಿಸಲಾರೆ. ಆದರೆ ಸಕ್ರಿಯ ರಾಜಕೀಯದಲ್ಲಿರುತ್ತೇನೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ರಿಯಲ್ ಎಸ್ಟೇಟ್‌ನವರು ತಮ್ಮ ನಿವೇಶನಗಳನ್ನು ಮಾರಾಟ ಮಾಡಿ ಸ್ಪರ್ಧಿಸುತ್ತಾರೆ. ನನಗೆ ಒಂದು ಮನೆ, ಒಂದು ನಿವೇಶನವಷ್ಟೇ ಇದೆ. ದೊಡ್ಡ ಮೊತ್ತ ಖರ್ಚು ಮಾಡುವ ಶಕ್ತಿ ಇಲ್ಲ. ಮಕ್ಕಳೂ ಸ್ಪರ್ಧಿಸುವುದಿಲ್ಲ. ರಾಜಕೀಯದಲ್ಲಿ ಮುಂದುವರಿಯುತ್ತಾರೆ’ ಎಂದರು.

ಆಯೋಗಕ್ಕೆ ಟಿ.ಡಿ.ರಾಜೇಗೌಡ ಮೊರೆ

‘ಅಂಚೆ ಮತಪತ್ರಗಳು ಅಮಾನ್ಯ ಆಗಿರುವುದರ ಹಿಂದೆ ದೊಡ್ಡ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆಗೆ 2023ರಲ್ಲಿ ನಡೆದಿದ್ದ ಚುನಾವಣೆ ವೇಳೆ ಮಾನ್ಯವಾಗಿದ್ದ ಅಂಚೆ ಮತಪತ್ರಗಳು ಈಗ ದಿಢೀರ್ ಅಮಾನ್ಯವಾಗಿರುವುದರ ಹಿಂದೆ ದೊಡ್ಡ ಷಡ್ಯಂತ್ರ ನಡೆದಿದೆ. 201 ಮತಗಳ ಅಂತರದಿಂದ ಗೆಲುವು ಕಂಡಿದ್ದ ನನಗೇ ಇಂತಹ ಅನ್ಯಾಯವಾದರೆ, ಒಂದು ಮತಗಳ ಅಂತರದಿಂದ ಗೆದ್ದವರ ಸ್ಥಿತಿ ಏನು? ಅಂಚೆ ಮತಪತ್ರ ತಿದ್ದಿರುವ ಪ್ರಕರಣದ ಸಮಗ್ರ ತನಿಖೆ ನಡೆಸಬೇಕು’ ಎಂದು ಶೃಂಗೇರಿ ಕ್ಷೇತ್ರದ ಮಾಜಿ ಶಾಸಕ ಟಿ.ಡಿ.ರಾಜೇಗೌಡ ಒತ್ತಾಯಿಸಿದರು.

ರಾಜ್ಯ ಮುಖ್ಯ ಚುನಾವಣಾಧಿಕಾರಿಯನ್ನು ಗುರುವಾರ ಭೇಟಿ ಮಾಡಿ ಮನವಿ ಸಲ್ಲಿಸಿದ ನಂತರ ಸುದ್ದಿಗಾರರ ಅವರು ಜತೆ ಮಾತನಾಡಿದರು.



ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಸಲ್ಲಿಸಿದ ದೂರಿನ ಪ್ರತಿಯನ್ನು ಟಿ.ಡಿ. ರಾಜೇಗೌಡ ಪ್ರದರ್ಶಿಸಿದರು

‘ಮತ ಅಮಾನ್ಯ: ವ್ಯವಸ್ಥಿತ ಸಂಚು’

‘ನನಗೆ ಬಂದಿರುವ ಸಿಂಧು ಮತಗಳಿಗೆ ಪೆನ್‌ನಿಂದ ಗುರುತು ಮಾಡಿ ಅಮಾನ್ಯಗೊಳಿಸಲಾಗಿದೆ. ಇದರ ಹಿಂದೆ ವ್ಯವಸ್ಥಿತವಾಗಿ ಸಂಚು ನಡೆದಿದೆ’ ಎಂದು ರಾಜೇಗೌಡ ದೂರಿದರು.

‘2023ರ ಚುನಾವಣೆ ಮತ ಎಣಿಕೆಯ ವೇಳೆ ಜೆಡಿಎಸ್, ಕಾಂಗ್ರೆಸ್, ಬಿಜೆಪಿ, ಪಕ್ಷೇತರ ಅಭ್ಯರ್ಥಿಗಳ ಮತ ಎಣಿಕೆ ಏಜೆಂಟ್‌ಗಳು ಇದ್ದರು. ಪಾರದರ್ಶಕವಾಗಿ ಮತ ಎಣಿಕೆ ಆಗಿತ್ತು. ಮತ ಎಣಿಕೆ ಬಳಿಕ ಫಲಿತಾಂಶ ಘೋಷಣೆ ಮಾಡಿದ್ದರು. ಮಾನ್ಯ ಯಾವುದು?, ಅಮಾನ್ಯ ಯಾವುದು? ಎಂದು ಎಲ್ಲರಿಗೂ ತೋರಿಸಿದ್ದರು. ಯಾರಿಗೆ ಎಷ್ಟು ಮತ ಬಿದ್ದಿದೆ ಎಂಬ ಲೆಕ್ಕವುಳ್ಳ ದಾಖಲೆಗೆ ಎಲ್ಲರೂ ಸಹಿ ಹಾಕಿದ್ದರು. ಆ ಮೇಲೆ ನನ್ನ ವಿರುದ್ಧ ದೂರು ಸಲ್ಲಿಸಿ, ಹಲವು ಆರೋಪ ಮಾಡಿದರು. ಈ ಕಾರಣದಿಂದ ಮರು ಎಣಿಕೆಗೆ ಹೈಕೋರ್ಟ್ ಆದೇಶ ಮಾಡಿತ್ತು’ ಎಂದರು.

‘ನನಗೆ ಬಿದ್ದಿದ್ದ ಅಂಚೆ ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಮೋಸದಿಂದ ಸೋಲಿಸುವ ಕೆಲಸ ಮಾಡಿದ್ದಾರೆ. ಹೈಕೋರ್ಟ್ ಆದೇಶದ ಮೇಲೆ ಮೇಲ್ಮನವಿ ಹೋಗಬಹುದಿತ್ತು. ಆದರೆ, ಅಂಚೆ ಮತಪತ್ರಗಳನ್ನು ತಿದ್ದಿರುವ ಸುಳಿವು, ಅನುಮಾನ ಇರಲಿಲ್ಲ. ಮರುಎಣಿಕೆ ಮೇಲೆ ನಂಬಿಕೆ ಇತ್ತು. ಅಮಾನ್ಯವಾಗಿರುವ ಎಲ್ಲ ಅಂಚೆ ಮತಪತ್ರಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಕೆಲವರು ಈ ರೀತಿಯ ಕೃತ್ಯ ಮಾಡಿದ್ದಾರೆ. ಕೆಲವು ಅಧಿಕಾರಿಗಳು, ಪಕ್ಷದವರು ಕೆಲವರು ಇರಬಹುದು ಎನ್ನುವ ಅನುಮಾನ ಇದೆ. ಇದು ಸಂವಿಧಾನ ಬಾಹಿರ. ಚುನಾವಣಾ ಆಯೋಗ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿದರೆ ಸತ್ಯ ಹೊರಬರಲಿದೆ’ ಎಂದರು.

‘ಹೈಕೋರ್ಟ್ 279 ಅಮಾನ್ಯ ಮತಗಳನ್ನು ಮರು ಎಣಿಕೆ ಮಾಡಲು ಹೇಳಿತ್ತು. ಮರು ಎಣಿಕೆ ವೇಳೆ ಇಡೀ ಅಂಚೆ ಮತದ ಕಟ್ಟು ಅಮಾನ್ಯವಾಗಿದೆ. ಈ ಕುರಿತು ನ್ಯಾಯಯುತ ತನಿಖೆ ಆಗಬೇಕು ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದೇವೆ. ಭಾರತ ಚುನಾವಣಾ ಆಯೋಗಕ್ಕೆ ಮನವಿಯನ್ನು ಕಳುಹಿಸುವುದಾಗಿ ಮುಖ್ಯ ಚುನಾವಣಾಧಿಕಾರಿ ಹೇಳಿದ್ದಾರೆ. ಯಾವ ಪಕ್ಷದವರಿಗೂ ಈ ರೀತಿಯ ಅನ್ಯಾಯ ಆಗಬಾರದು’ ಎಂದರು.

ಸುದ್ದಿ 2 ನಿಮಿಷ

ಸಂತೇಮರಹಳ್ಳಿ: ಸಲೂನ್‌ನಲ್ಲಿ ಮಂಗನಿಗೆ ಕೇಶ ವಿನ್ಯಾಸ

ಸಂತೇಮರಹಳ್ಳಿ (ಚಾಮರಾಜನಗರ ಜಿಲ್ಲೆ): ಮಂಗವೊಂದಕ್ಕೆ ಇಲ್ಲಿನ ದೇವು ಮೆನ್ಸ್ ವೇರ್- ಹೇರ್ ಕಟಿಂಗ್ ಸಲೂನ್‌ನಲ್ಲಿ ಬುಧವಾರ ಮಾಲೀಕ ದೇವರಾಜು ಕೇಶ ವಿನ್ಯಾಸ ಮಾಡುವ ವಿಶೇಷ ಸನ್ನಿವೇಶ ನಿರ್ಮಾಣವಾಗಿತ್ತು.

ಈ ಮಂಗ ಪ್ರತಿ ದಿನ ತನ್ನ ಗುಂಪಿನಿಂದ ಸಲೂನ್ ಮುಂಭಾಗ ಸಂಚರಿಸುತ್ತಿತ್ತು. ಬುಧವಾರ ಸಲೂನ್ ಒಳಗೆ ಬಂದು ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡಿ ಚೇಷ್ಟೆ ಮಾಡುತ್ತಾ, ಗದರಿಸಿದರೂ ಹೋಗಲಿಲ್ಲ. ನಂತರ, ದೇವರಾಜು ಅವರು ಬಾಚಣಿಗೆಯಿಂದ ಅದರ ತಲೆಯನ್ನು ಬಾಚಲಾರಂಭಿಸಿದರು. ಆಗಲೂ ಸುಮ್ಮನೆ ಕುಳಿತಿತ್ತು. ಬಾಚಣಿಗೆ ಮತ್ತು ಕತ್ತರಿ ಬಳಸಿ ಅವರು ತಲೆ ಹಾಗೂ ದೇಹದ ಕೂದಲನ್ನು ಕತ್ತರಿಸಲಾರಂಭಿಸಿದರು. ಅದಕ್ಕೂ ತಗಾದೆ ತೆಗೆಯದೇ ಸುಮ್ಮನಿತ್ತು. ಹೀಗಾಗಿ ಅವರು ತಮ್ಮ ಕಾಯಕ ನಿಲ್ಲಿಸದೆ ಮಂಗಕ್ಕೆ ಕೇಶ ವಿನ್ಯಾಸ ಮಾಡಿದರು. ನಂತರ ಮಂಗವು ಅಲ್ಲಿದ್ದವರ ಕೈ ಕುಲುಕಿ ನಿರ್ಗಮಿಸಿತು.

ಎಂಜಿನಿಯರಿಂಗ್: ನಾಳೆ ಕಾಮೆಡ್-ಕೆ ಪರೀಕ್ಷೆ

ಬೆಂಗಳೂರು: ಕರ್ನಾಟಕದ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) 2026-27ನೇ ಶೈಕ್ಷಣಿಕ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಮೇ 9ರಂದು ನಡೆಸುತ್ತಿರುವ ಪ್ರವೇಶ ಪರೀಕ್ಷೆಗೆ 1.30 ಲಕ್ಷ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ.

ಕಾಮೆಡ್-ಕೆ ನಡೆಸುವ ಈ ಪ್ರವೇಶ ಪರೀಕ್ಷೆ ಮೂಲಕ ಕರ್ನಾಟಕದ 150ಕ್ಕೂ ಹೆಚ್ಚು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ರಾಷ್ಟ್ರ ಮಟ್ಟದ ಕೆಲವು ಸದಸ್ಯ ವಿಶ್ವವಿದ್ಯಾಲಯಗಳ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದಾಗಿದೆ. ಕಂಪ್ಯೂಟರ್ ಆಧಾರಿತ ಈ ಪರೀಕ್ಷೆ 28 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ 171 ನಗರಗಳ 303 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಕರ್ನಾಟಕದ 43,069 ಅಭ್ಯರ್ಥಿಗಳು ಈ ಬಾರಿ ಪರೀಕ್ಷೆ ತೆಗೆದುಕೊಂಡಿದ್ದಾರೆ.

ಮೊದಲ ಅವಧಿ ಬೆಳಿಗ್ಗೆ 9ರಿಂದ ಮಧ್ಯಾಹ್ನ 12ರವರೆಗೆ ನಡೆಯಲಿದ್ದು, 2ನೇ ಅವಧಿ ಮಧ್ಯಾಹ್ನ 2ರಿಂದ ಸಂಜೆ 5ರವರೆಗೆ ನಡೆಯಲಿದೆ. ಪರೀಕ್ಷಾರ್ಥಿಗಳು ಪ್ರವೇಶಪತ್ರದಲ್ಲಿ ಉಲ್ಲೇಖಿಸಿರುವ ಸಮಯಕ್ಕೆ ಅನುಗುಣವಾಗಿ ಪರೀಕ್ಷಾ ಕೇಂದ್ರಕ್ಕೆ ತಲುಪಬೇಕು. ಪ್ರವೇಶ ಪತ್ರದ ಜತೆಗೆ ಇತ್ತೀಚಿನ 2 ಪಾಸ್‌ಪೋರ್ಟ್ ಭಾವಚಿತ್ರಗಳನ್ನು ತರಬೇಕು. ಪಾರದರ್ಶಕ ನೀರಿನ ಬಾಟಲಿ, ಪೆನ್ಸಿಲ್ ತರಲು ಅವಕಾಶ ನೀಡಲಾಗಿದೆ ಎಂದು ಕಾಮೆಡ್-ಕೆ ಅಧಿಕಾರಿಗಳು ಹೇಳಿದ್ದಾರೆ.

‘ಅಮಾನತು ವಾಪಸ್: ಸರಿ ತಪ್ಪಿನ ಪ್ರಶ್ನೆ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿಜಿಪಿ ರಾಮಚಂದ್ರ ರಾವ್ ಅವರ ಅಮಾನತು ಆದೇಶ ಹಿಂದಕ್ಕೆ ಪಡೆದುದರಲ್ಲಿ ತಪ್ಪೇನಿಲ್ಲ. ಇದು ಸರಿ-ತಪ್ಪಿನ ವಿಚಾರವೂ ಅಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಜಿ.ಪರಮೇಶ್ವರ

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ರಾಮಚಂದ್ರರಾವ್ ಈ ತಿಂಗಳ ಕೊನೆಯಲ್ಲಿ ನಿವೃತ್ತಿಯಾಗುತ್ತಿದ್ದಾರೆ. ಅವರ ಪಿಂಚಣಿ ಮತ್ತು ಇತರ ಭತ್ಯೆಗಳು ಇತ್ಯರ್ಥವಾಗಬೇಕಿದೆ ಎಂದು ತಿಳಿಸಿದರು.

‘ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿರುವ ರಾಮಚಂದ್ರರಾವ್ ಅವರು ಮನವಿಯೊಂದನ್ನು ಸಲ್ಲಿಸಿದ್ದರು. ತಮ್ಮ ವಿರುದ್ಧದ ತನಿಖೆಗೆ ಸಹಕರಿಸುವುದಾಗಿ ಅವರು ಭರವಸೆ ನೀಡಿದ್ದಾರೆ. ಆದ್ದರಿಂದ ಮುಖ್ಯಮಂತ್ರಿ ಅವರ ಅನುಮತಿಯೊಂದಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಮಾನತು ಆದೇಶ ಹಿಂದಕ್ಕೆ ಪಡೆದಿದೆ’ ಎಂದು ಹೇಳಿದರು.

ವಾಣಿಜ್ಯ ಲಾಭಕ್ಕಾಗಿ ಪಂದ್ಯ ಸ್ಥಳಾಂತರ: ‘ಐಪಿಎಲ್ ಪಂದ್ಯಾವಳಿ ಅಹಮದಾಬಾದ್‌ಗೆ ಸ್ಥಳಾಂತರಗೊಳ್ಳಲು ವಾಣಿಜ್ಯ ಲಾಭದ ಕಾರಣಗಳು ಇರಬಹುದು. ಕ್ರೀಡಾಂಗಣದ ಭದ್ರತೆ ವಿಚಾರವಾಗಿ ಯಾವುದೇ ಆಕ್ಷೇಪಣೆಗಳಿಲ್ಲ. ಈವರೆಗೂ ನಡೆದಿರುವ ಐದು ಪಂದ್ಯಗಳಿಗೂ ಭದ್ರತೆ ಸೇರಿ ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗಿದೆ’ ಎಂದು ಪರಮೇಶ್ವರ ತಿಳಿಸಿದರು.

ಬೆಂಗಳೂರಿನ ಕ್ರೀಡಾಂಗಣದಲ್ಲಿ 33,000 ಆಸನಗಳಿವೆ. ಈ ಪೈಕಿ ವಿವಿಐಪಿ, ಪ್ರಾಯೋಜಕತ್ವ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಆಟಗಾರರ ಕುಟುಂಬದವರಿಗೆ ಸೇರಿ ಸುಮಾರು 7,000ದಿಂದ 8,000 ಟಿಕೆಟ್ ಉಚಿತವಾಗಿ ಕೊಡಬೇಕಾಗುತ್ತದೆ. ಉಳಿಯುವುದು 25,000 ಟಿಕೆಟ್‌ಗಳು ಮಾತ್ರ. ಇದರಿಂದ ಲಾಭ ಆಗುವುದಿಲ್ಲ. ಅಹಮದಾಬಾದ್ ಕ್ರೀಡಾಂಗಣದಲ್ಲಿ 1 ಲಕ್ಷ ಆಸನಗಳಿವೆ. ಅಲ್ಲಿ ನಡೆದರೆ ಲಾಭದಾಯಕ ಎಂಬ ಕಾರಣಕ್ಕೆ ಸ್ಥಳಾಂತರ ಮಾಡುತ್ತಿದೆ ಎಂಬ ಮಾಹಿತಿ ಬಂದಿದೆ ಎಂದರು.

ಕಾಮುಕರಿಗೆ ರಕ್ಷಣೆ ಏಕೆ: ಆರ್. ಅಶೋಕ ಪ್ರಶ್ನೆ

‘ಹೆಣ್ಣು ಮಕ್ಕಳ ಮಾನಕ್ಕಿಂತಲೂ ಭ್ರಷ್ಟ ಅಧಿಕಾರಿಗಳ ರಕ್ಷಣೆಯೇ ಕಾಂಗ್ರೆಸ್ ಸರ್ಕಾರಕ್ಕೆ ಮುಖ್ಯವಾಯಿತೇ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಆರ್. ಅಶೋಕ

ಡಿಜಿಪಿ ರಾಮಚಂದ್ರರಾವ್ ಅವರ ಅಮಾನತು ಆದೇಶ ಹಿಂದಕ್ಕೆ ಪಡೆದ ಕುರಿತು ಪ್ರತಿಕ್ರಿಯಿಸಿದ ಅವರು, ‘ಲೈಂಗಿಕ ಹಗರಣದ ವಿಡಿಯೊ ಅಸಲಿ ಎಂದು ವರದಿ ಬಂದಿದ್ದರೂ ಕಾಮುಕ ಅಧಿಕಾರಿಯನ್ನು ರಕ್ಷಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ನ್ಯಾಯದ ಮೇಲೆ ನಂಬಿಕೆ ಇಲ್ಲವಾಗಿದೆ. ಡಿಜಿಪಿ ಶ್ರೇಣಿಯ ಅಧಿಕಾರಿ ಮೇಲೆ ಲೈಂಗಿಕ ದೌರ್ಜನ್ಯದ ಆರೋಪ ಕೇಳಿ ಬಂದಾಗ, ಅದನ್ನು ಗಂಭೀರವಾಗಿ ಪರಿಗಣಿಸಬೇಕಾದ ರಾಜ್ಯ ಸರ್ಕಾರ, ಇಂದು ಅಮಾನತು ಆದೇಶವನ್ನೇ ಹಿಂಪಡೆದು ಕೆಂಪು ಹಾಸಿನ ಸ್ವಾಗತ ನೀಡಿದೆ’ ಎಂದು ಹೇಳಿದರು.

‘ಲೈಂಗಿಕ ದೌರ್ಜನ್ಯದ ಆರೋಪ ಹೊತ್ತಿರುವ ಅಧಿಕಾರಿಗೆ ಕ್ಲೀನ್‌ಚಿಟ್ ಕೊಡುವ ಧಾವಂತವೇಕೆ? ಕಾನೂನಿಗಿಂತ ವ್ಯಕ್ತಿ ದೊಡ್ಡವರೇ? ನಿವೃತ್ತಿಯ ಹೊಸ್ತಿಲಲ್ಲಿರುವ ಅಧಿಕಾರಿಗೆ ಇಷ್ಟು ಆತುರವಾಗಿ ‘ನೆರವು’ ನೀಡುವ ಮೂಲಕ ನೀವು ಸಂತ್ರಸ್ತ ಮಹಿಳೆಯರಿಗೆ ಯಾವ ಸಂದೇಶ ನೀಡುತ್ತಿದ್ದೀರಿ’ ಎಂದು ಪ್ರಶ್ನಿಸಿದರು.

‘ಒಬ್ಬ ಅಧಿಕಾರಿಯನ್ನು ರಕ್ಷಿಸಲು ಕಾನೂನನ್ನೇ ಗಾಳಿಗೆ ತೂರುತ್ತಿರುವ ಈ ಸರ್ಕಾರಕ್ಕೆ ಜನರು ತಕ್ಕ ಪಾಠ ಕಲಿಸಲಿದ್ದಾರೆ. ಕಾಮುಕರಿಗೆ ರಕ್ಷಣೆ ನೀಡುವ ಈ ವಿಕೃತ ಮನಸ್ಥಿತಿ ಯನ್ನು ಕರ್ನಾಟಕದ ಜನತೆ ಕ್ಷಮಿಸುವುದಿಲ್ಲ’ ಎಂದರು.

‘ಅಮಾನತು ಆದೇಶ ವಾಪಸ್ ಸರಿಯಲ್ಲ’

ರಾಮಚಂದ್ರರಾವ್ ವಿರುದ್ಧ ಗಂಭೀರ ಆರೋಪ ಕೇಳಿ ಬಂದಿದ್ದರಿಂದ ಅಮಾನತುಗೊಳಿಸಲಾಗಿತ್ತು. ಈಗ ಏಕಾಏಕಿ ಆದೇಶ ಹಿಂಪಡೆದು ಕರ್ತವ್ಯಕ್ಕೆ ಮರು ನಿಯೋಜಿಸಿರುವುದು ಸರಿಯಲ್ಲ. ಗೃಹ ಇಲಾಖೆಯನ್ನು ಪರಮೇಶ್ವರ ನಡೆಸುತ್ತಿದ್ದಾರೋ ಅಥವಾ ಯತೀಂದ್ರ ನಡೆಸುತ್ತಿದ್ದಾರೋ ಎಂಬ ಅನುಮಾನವಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದ್ದಾರೆ.

‘ಹೈಕಮಾಂಡ್ ಶೀಘ್ರ ಗೊಂದಲ ಬಗೆಹರಿಸಲಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಖ್ಯಮಂತ್ರಿ ಬದಲಾವಣೆ ಅಥವಾ ಸಂಪುಟ ಪುನರ್‌ರಚನೆ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಆದಷ್ಟು ಬೇಗ ನಿರ್ಣಯ ಕೈಗೊಳ್ಳಬೇಕು. ತಡವಾದಷ್ಟೂ ಪಕ್ಷ ಹಾಗೂ ಸರ್ಕಾರದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ’ ಎಂದು ಶಾಸಕ ಕೆ.ಎನ್. ರಾಜಣ್ಣ ಪ್ರತಿಪಾದಿಸಿದರು.

ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿ, ‘ಸಂಪುಟ ಪುನರ್ ರಚನೆ ಮಾಡಲು ಮುಖ್ಯಮಂತ್ರಿಗೆ ಮುಕ್ತ ಅವಕಾಶ ನೀಡಬೇಕು. ಅಥವಾ ನಾಯಕತ್ವ ಬದಲಾವಣೆ ಮಾಡುವುದಿದ್ದರೆ ಕೂಡಲೇ ನಿರ್ಣಯಿಸಬೇಕು. ಗೊಂದಲವಿದ್ದರೆ ಎಲ್ಲ ರೀತಿಯ ಸಮಸ್ಯೆಗೆ ಕಾರಣವಾಗುತ್ತದೆ’ ಎಂದರು.

‘ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾದ್ದರಿಂದ ಮುಖ್ಯ ಮಂತ್ರಿ ಆಗಬೇಕೆಂದು ಹೆಚ್ಚು ಆಸೆ ಪಡುವುದು ತಪ್ಪೇನಿಲ್ಲ. ನಮ್ಮಲ್ಲಿ ಮುಖ್ಯ ಮಂತ್ರಿಯಾಗುವ ಅರ್ಹತೆಯುಳ್ಳವರು ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ, ಎಂ.ಬಿ. ಪಾಟೀಲ, ಎಚ್.ಕೆ. ಪಾಟೀಲ ಸೇರಿ ಒಂದು ಡಜನ್ ಮಂದಿ ಇದ್ದಾರೆ’ ಎಂದು ಹೇಳಿದರು.

‘ಸಿದ್ದರಾಮಯ್ಯ ಅವರ ಬದಲಾವಣೆಯನ್ನು ತಡೆದುಕೊಳ್ಳುವ ಶಕ್ತಿ ಕಾಂಗ್ರೆಸ್‌ಗೆ ಇದೆಯೇ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ ‘ನಮ್ಮದು ರಾಷ್ಟ್ರೀಯ ಪಕ್ಷ. ಹೈಕಮಾಂಡ್ ಇದೆಲ್ಲವನ್ನೂ ನೋಡಿಯೇ ಜಾಗ್ರತೆಯಿಂದ ನಿರ್ಣಯಿಸಬೇಕು’ ಎಂದರು.

ಕುತೂಹಲ ಮೂಡಿಸಿದ ಭೇಟಿ

ಮಧುಗಿರಿ ಶಾಸಕ ಕೆ.ಎನ್. ರಾಜಣ್ಣ ಗುರುವಾರ ಇಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಭೇಟಿ ನೀಡಿ ಚರ್ಚಿಸಿದರು. ನಾಯಕತ್ವ ಬದಲಾವಣೆಯ ಚರ್ಚೆಯ ಹೊತ್ತಿನಲ್ಲಿ ಈ ಭೇಟಿ ಕುತೂಹಲ ಮೂಡಿಸಿದೆ.

ಕೆ.ಎನ್.ರಾಜಣ್ಣ

ಬೆಳಿಗ್ಗೆ 9.30ರ ಸುಮಾರಿಗೆ ಭೇಟಿ ನೀಡಿದ ಅವರು ಅರ್ಧ ಗಂಟೆಗೂ ಹೆಚ್ಚು ಕಾಲ ಅವರೊಂದಿಗೆ ಗುಪ್ತವಾಗಿ ಚರ್ಚಿಸಿದರು. ಬಳಿಕ ಅಲ್ಲಿಂದ ನಿರ್ಗಮಿಸಿದರು. ಖಾಸಗಿ ಕಾರ್ಯಕ್ರಮದ ನಿಮಿತ್ತ ಮೈಸೂರಿಗೆ ಬಂದಿದ್ದಾಗಿ ರಾಜಣ್ಣ ತಿಳಿಸಿದರು.

ನಂತರ ಸಿದ್ದರಾಮಯ್ಯ ಅವರು ರಾಜಣ್ಣ ಹಾಗೂ ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್ ಜೊತೆಗೂಡಿ ಮೈಲಾರಿ ಹೋಟೆಲ್‌ನಲ್ಲಿ ಉಪಾಹಾರ ಸವಿದರು.

ಕುಡುಪು ಪ್ರಕರಣ: ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನ ಕುಡುಪು ಪ್ರದೇಶದಲ್ಲಿ ಕ್ರಿಕೆಟ್ ಪಂದ್ಯದ ವೇಳೆ ‘ಪಾಕಿಸ್ತಾನ್’ ಎಂದು ಕೂಗುತ್ತಾ ಆಟದ ಮೈದಾನದೊಳಗೆ ನುಗ್ಗಿದ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದರಿಂದಾಗಿ ಅವರು ಮೃತಪಟ್ಟಿದ್ದರು. ಈ ಪ್ರಕರಣದಡಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಪ್ರಕರಣದ ಮೂರನೇ ಆರೋಪಿಯಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ವಾಮಂಜೂರು-ತಿರುವೈಲ್‌ನ ಮಂಜ ಅಲಿಯಾಸ್ ಮಂಜುನಾಥ್ (32) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ಪುರಸ್ಕರಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದರು. ಅದನ್ನು ಆಲಿಸಿದ ನ್ಯಾಯಪೀಠ, ‘ಸಾವನ್ನಪ್ಪಿದ ಅಶ್ರಫ್ ಮತ್ತು ಆರೋಪಿಗಳ ನಡುವೆ ಯಾವುದೇ ಶತ್ರುತ್ವ ಇರಲಿಲ್ಲ. ಮೈದಾನದ ಬಳಿಗೆ ಬಂದು ಘೋಷಣೆ ಹಾಕಿ, ಶಾಂತವಾಗಿ ನಡೆಯುತ್ತಿದ್ದ ಕ್ರಿಕೆಟ್ ಆಟಕ್ಕೆ ಆತ ಅಡ್ಡಿಪಡಿಸಿದ್ದ ಎಂಬುದು ದಾಖಲೆಗಳಿಂದ ವಿದಿತವಾಗುತ್ತದೆ. ಅಂದು ಆತ ಮೈದಾನದ ಬಳಿಗೆ ಬರದೇ ಮನೆಯಲ್ಲಿದ್ದಿದ್ದರೆ ಬದುಕುಳಿಯುತ್ತಿದ್ದ. ಆತನನ್ನು ದ್ವೇಷದಿಂದ ಕೊಲೆ ಮಾಡಲಾಗಿಲ್ಲ’ ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತು.



‘ಕೃತ್ಯದಲ್ಲಿ ಮಾರಕಾಸ್ತ್ರ ಬಳಕೆಯಾಗಿಲ್ಲ. ಪೂರ್ವನಿಯೋಜಿತ ಕೃತ್ಯವೂ ಅಲ್ಲ. ಆ ಕ್ಷಣಕ್ಕೆ ಸಂಭವಿಸಿದ ಘಟನೆಯಾಗಿದೆ. ಅಶ್ರಫ್ ಅವರ ಮರ್ಮಾಂಗ ಮತ್ತು ಗುದದ್ವಾರಕ್ಕೆ ಖಾರದ ಪುಡಿ ಹಾಕಲಾಗಿದೆ ಎಂಬುದಕ್ಕೆ ಮರಣೋತ್ತರ ಪರೀಕ್ಷಾ ವರದಿ ಅಥವಾ ತನಿಖೆಯ ಮಹಜರು ವೇಳೆ ಸ್ಥಳದಲ್ಲಿ ಸಾಕ್ಷ್ಯ ಪತ್ತೆಯಾಗಿಲ್ಲ’ ಎಂದು ಆದೇಶದಲ್ಲಿ ಉಲ್ಲೇಖಿಸಿ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು.

ಷರತ್ತು: ‘ಅರ್ಜಿದಾರರು ₹1 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್, ಇಬ್ಬರ ಭದ್ರತೆ ಒದಗಿಸಬೇಕು. ವಿಚಾರಣೆಯ ಎಲ್ಲಾ ದಿನಗಳಲ್ಲೂ ಸಕ್ಷಮ ನ್ಯಾಯಾಲಯಕ್ಕೆ ಹಾಜರಾಗಬೇಕು. ಸಾಕ್ಷ್ಯ ತಿರುಚುವಂತಿಲ್ಲ. ಅನುಮತಿಯಲ್ಲದೇ ದಕ್ಷಿಣ ಕನ್ನಡ ತೊರೆಯುವಂತಿಲ್ಲ’ ಎಂಬ ಷರತ್ತುಗಳನ್ನು ವಿಧಿಸಿದೆ. ಆರೋಪಿ 2025ರ ಏಪ್ರಿಲ್ 29ರಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ. ಮಂಜುನಾಥ್ ಪರ ಹೈಕೋರ್ಟ್ ವಕೀಲ ಸುಯೋಗ ಹೇರಳೆ ವಕಾಲತ್ತು ವಹಿಸಿದ್ದರು. ದೂರುದಾರರ ಪರ ಹೈಕೋರ್ಟ್ ವಕೀಲೆ ಮೃದುಲಾ ವಾದ ಮಂಡಿಸಿದರು.

ಪ್ರಕರಣ: ‘ಮಂಗಳೂರಿನ ಹೊರ ಹೊಲಯದ ಕುಡುಪು ಕ್ರಿಕೆಟ್ ಮೈದಾನದಲ್ಲಿ 2025ರ ಏಪ್ರಿಲ್ 27ರಂದು ಕ್ರಿಕೆಟ್ ಪಂದ್ಯ ನಡೆಯುತ್ತಿದ್ದ ವೇಳೆ ಕೇರಳದ ವಯನಾಡ್ ನಿವಾಸಿಯಾದ 35 ವರ್ಷದ ಮೊಹಮ್ಮದ್ ಅಶ್ರಫ್ ರೈಲು ಹಳಿಗಳ ಕಡೆಯಿಂದ ಪಾಕಿಸ್ತಾನ್ ಎಂದು ಘೋಷಣೆ ಹಾಕುತ್ತಾ ನುಗ್ಗಿದ್ದರು. ಇದರಿಂದ ಪ್ರಚೋದನೆಗೆ ಒಳಗಾದ ಆಟಗಾರರು ಮತ್ತು ಪಂದ್ಯ ನೋಡುತ್ತಿದ್ದವರು ಆತನ ಮೇಲೆ ಗುಂಪು ಹಲ್ಲೆ ನಡೆಸಿದ್ದರು. ಈ ಹಲ್ಲೆಯಿಂದ ಅಶ್ರಫ್ ಸಾವನ್ನಪ್ಪಿದ್ದಾರೆ’ ಎಂಬ ಆರೋಪದಡಿ ಮಂಗಳೂರು ಗ್ರಾಮೀಣ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿತ್ತು. ತನಿಖೆ ನಡೆಸಿದ್ದ ಪೊಲೀಸರು ಒಟ್ಟು 21 ಆರೋಪಿಗಳ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

‘ಕಾಂಗ್ರೆಸ್ ಸ್ಥಿತಿ ಭಿಕ್ಷುಕರ ರೀತಿ ಆಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮಿಳುನಾಡಿನಲ್ಲಿ ಡಿಎಂಕೆ ಜೊತೆ ಇದ್ದ ಕಾಂಗ್ರೆಸ್, ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷ ಹೆಚ್ಚಿನ ಸ್ಥಾನ ಪಡೆದ ಕೂಡಲೇ ರಾತ್ರೋ ರಾತ್ರಿ ಆ ಪಕ್ಷದ ಮುಂದೆ ಹೋಗಿ ಸಚಿವ ಸ್ಥಾನಕ್ಕೆ ಭಿಕ್ಷೆ ಬೇಡುತ್ತಿದೆ’ ಎಂದು ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಡಿಎಂಕೆ ಸಖ್ಯ ಬಿಟ್ಟ ಕಾಂಗ್ರೆಸ್ ಸ್ಥಿತಿ ಭಿಕ್ಷುಕರ ರೀತಿ ಆಗಿದೆ. ರಾಷ್ಟ್ರೀಯ ಪಕ್ಷ ಕಾಂಗ್ರೆಸ್‌ಗೆ ಇಂತಹ ಹೀನಾಯ ಸ್ಥಿತಿ ಬರಬಾರದಿತ್ತು’ ಎಂದರು.

ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವ ಜಯ ಸಿಕ್ಕಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ದೊಡ್ಡ ಮಟ್ಟದಲ್ಲಿ ಆಶೀರ್ವಾದ ಮಾಡಿದ್ದಾರೆ. ಆ ರಾಜ್ಯದಲ್ಲಿ ಟಿಎಂಸಿ ಆಡಳಿತದಲ್ಲಿ ಜನರು ನರಕ ಯಾತನೆ ಅನುಭವಿಸುತ್ತಿದ್ದರು. ಆ ನರಕದಿಂದ ಮೋದಿ ಅವರು ಜನರನ್ನು ಹೊರತಂದಿದ್ದಾರೆ. ಈ ಬಾರಿಯೂ ಬಿಜೆಪಿ ಗೆಲ್ಲದೇ ಇದ್ದಿದ್ದರೆ ಅಲ್ಲಿನ ಜನರ ಸ್ಥಿತಿ ಏನಾಗುತ್ತಿತ್ತು ಎಂಬುದನ್ನು ಊಹಿಸುವುದೂ ಕಷ್ಟ ಎಂದರು.

ಪಂಚ ರಾಜ್ಯಗಳ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನ ಹೆಚ್ಚಿನ ಪ್ರಮಾಣದಲ್ಲಿ ಬಿಜೆಪಿಗೆ ಬೆಂಬಲ ನೀಡಿದ್ದಾರೆ. ಅಸ್ಸಾಂನಲ್ಲಿ 19 ಜನ ಕಾಂಗ್ರೆಸ್‌ನಿಂದ ಗೆದ್ದಿದ್ದಾರೆ. ಇದರಲ್ಲಿ ಒಬ್ಬರು ಮಾತ್ರ ಪರಿಶಿಷ್ಟ ಜಾತಿಗೆ ಸೇರಿದವರು. ಉಳಿದವರೆಲ್ಲ ಮುಸ್ಲಿಮರು. ಮುಸ್ಲಿಮರು ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷವೇ ಇಲ್ಲ ಎಂಬ ಸ್ಥಿತಿಗೆ ತಲುಪಿದೆ ಎಂದು ಅವರು ಹೇಳಿದರು.

ಹೊಯ್ಸಳ ಶೈಲಿಯ ಪ್ರಾಚ್ಯ ಅವಶೇಷ ಪತ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದಲ್ಲಿ ನಡೆದಿರುವ ಪ್ರಾಚ್ಯ ಅವಶೇಷ ಅನ್ವೇಷಣೆ ಸಪ್ತಾಹದಲ್ಲಿ ಗುರುವಾರ ಇಲ್ಲಿನ ದುರ್ಗಾದೇವಿ ಕೆರೆಯಲ್ಲಿ ಹೊಯ್ಸಳ ಶೈಲಿಯ ಎರಡು ಪ್ರಾಚ್ಯ ಅವಶೇಷಗಳು ಸಿಕ್ಕಿವೆ.

ಕಲಾತ್ಮಕತೆಯಿಂದ ಕೂಡಿದ ಈ ಪ್ರಾಚ್ಯ ಅವಶೇಷದಲ್ಲಿ ವಾದ್ಯ ನುಡಿಸುತ್ತಿರುವ ಪುರುಷ ಮತ್ತು ನೃತ್ಯನಿರತ ಭಂಗಿಯಲ್ಲಿರುವ ಸ್ತ್ರೀ ಶಿಲ್ಪಗಳಿವೆ. ಒಂದು ಶಿಲ್ಪದಲ್ಲಿ ಪುರುಷ ಮದ್ದಳೆಯನ್ನು ಬಾರಿಸುತ್ತಿದ್ದು, ಅದಕ್ಕೆ ಸ್ತ್ರೀ ನೃತ್ಯ ಮಾಡುತ್ತಿದ್ದಾಳೆ. ಮತ್ತೊಂದರಲ್ಲಿ ಪುರುಷ ವೇಣುವಾದನದಲ್ಲಿ ತಲ್ಲೀನನಾಗಿದ್ದರೆ, ಮಹಿಳೆಯು ನೃತ್ಯ ಮಾಡುತ್ತಿದ್ದಾಳೆ.

‘ಈ ಪ್ರಾಚ್ಯ ಅವಶೇಷಗಳ ಕೆತ್ತನೆ ಗಮನಿಸಿದರೆ, ಹೊಯ್ಸಳರ ಶೈಲಿಯ ಪ್ರಭಾವ ಇರುವುದನ್ನು ಕಾಣಬಹುದು’ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಮಿತಿ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಹೊಯ್ಸಳ ಶೈಲಿ ಕೆತ್ತನೆಯ ಪ್ರಾಚ್ಯ ಅವಶೇಷ ಪತ್ತೆಯಾಗಿದೆ

ಉಡುಪಿ, ಚಿಂಚೋಳಿ ಬಿರುಸಿನ ಮಳೆ

ಉಡುಪಿ: ಉಡುಪಿ ಹಾಗೂ ಕಾಪು ತಾಲ್ಲೂಕು ವ್ಯಾಪ್ತಿಯಲ್ಲಿ ಗುರುವಾರ ಬೆಳಿಗ್ಗೆ ಒಂದು ಗಂಟೆಗೂ ಹೆಚ್ಚು ಕಾಲ ಬಿರುಸಿನ ಮಳೆ ಸುರಿದು, ಬಿಸಿಲಿನ ಬೇಗೆಯ ನಡುವೆ ತಂಪೆರೆಯಿತು.

ಕಲಬುರಗಿ ವರದಿ: ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಗುರುವಾರ ಸಂಜೆ ಬಿರುಸಿನಿಂದ ಮಳೆ ಸುರಿಯಿತು.

ಜಿಲ್ಲೆಯ ಕಾಳಗಿ, ಕೋಡ್ಲಿ, ಕುಡಳ್ಳಿ ಗ್ರಾಮಗಳಲ್ಲೂ ಕೆಲ ಹೊತ್ತು ಬಿರುಸಿನಿಂದ ಮಳೆ ಸುರಿಯಿತು. ಸಂಜೆ ಕೆಲ ಹೊತ್ತು ಜಿಟಿ ಜಿಟಿ ಮಳೆಯಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ಉಪನ್ಯಾಸದಲ್ಲಿ ಮೋಹನ್ ಭಾಗವತ್ ಹೇಳಿಕೆ

‘ಜಾತಿ ಅಳಿದು ಸಮಭಾವ ಮೂಡಲಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸಹೋದರರನ್ನು ಅಸ್ಪೃಶ್ಯರಾಗಿಸಿ ಶತಮಾನಗಳ ಕಾಲ ದೂರವಿಡಲಾಗಿದೆ. ಮೇಲು-ಕೀಳು ಎಂಬ ಮನೋಭಾವ ತೊರೆದು, ಸರ್ವರೂ ಒಂದೇ ಎಂಬ ಏಕ ಭಾವ ಭಾರತೀಯರಲ್ಲಿ ಮೂಡಬೇಕು’ ಎಂದು ಆರ್‌ಎಸ್‌ಎಸ್ ಸರಸಂಘಸಂಚಾಲಕ ಮೋಹನ್ ಭಾಗವತ್ ಪ್ರತಿಪಾದಿಸಿದರು.

ನಗರದ ಸುತ್ತೂರು ಮಠದಲ್ಲಿ ಗುರುವಾರ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸುವರ್ಣ ಮಹೋತ್ಸವದ 15ನೇ ವಿಶೇಷ ಉಪನ್ಯಾಸದಲ್ಲಿ ‘ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ’ ಕುರಿತು ಮಾತನಾಡಿದರು.

‘ಅಂಬೇಡ್ಕರ್ ಅವರ ಸಂವಿಧಾನ ಸಭೆಯ ಭಾಷಣಗಳನ್ನು ಮತ್ತೊಮ್ಮೆ ಓದಿಕೊಳ್ಳಬೇಕು. ಸಾಮಾಜಿಕ ಸ್ವಾತಂತ್ರ್ಯ ನೆಲೆಗೊಳ್ಳದೆ ರಾಜಕೀಯ, ಆರ್ಥಿಕ ಸ್ವಾತಂತ್ರ್ಯ ಸಿಗುವುದಿಲ್ಲವೆಂದಿದ್ದರು ಅಂಬೇಡ್ಕರ್. ಸಂವಿಧಾನದಲ್ಲಿರುವ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಪರಿಕಲ್ಪನೆಯು ಫ್ರೆಂಚ್ ಕ್ರಾಂತಿಯಿಂದ ಬಂದದ್ದಲ್ಲ. ಇದು ಭಾರತದ್ದೇ, ತಥಾಗತ ಬುದ್ಧ ನೀಡಿದ್ದು’ ಎಂದರು.

‘ಎಲ್ಲರಲ್ಲೂ ಇರುವ ವಿಭಿನ್ನತೆಯು ನಮ್ಮ ನಡುವಿನ ದೂರಕ್ಕೆ ಕಾರಣವಾಗಬಾರದು. ಸಮಾನತೆ ನೆಲೆಸಲು ಭೇದವೆಂಬ ಕಲ್ಮಶ ಭಾವವನ್ನು ತೆಗೆಯಬೇಕು. ಸಚ್ಚಿತ್ತತೆ ಬರಬೇಕೆಂದರೆ ಇನ್ನೊಬ್ಬರಿಗೆ ತೊಂದರೆ ಕೊಡಬಾರದು. ಎಲ್ಲರೂ ನಮ್ಮವರೇ ಎಂಬ ಭಾವ ಬರಬೇಕು’ ಎಂದರು.

‘ದಯೆಯಿದ್ದಲ್ಲಿ ಧರ್ಮವಿರುತ್ತದೆ. ಆಶ್ರಯಕ್ಕಾಗಿ ಬಂದ ಹಕ್ಕಿಯನ್ನು ರಕ್ಷಿಸಲು ತನ್ನನ್ನೇ ಅರ್ಪಿಸಿಕೊಂಡ ಶಿಬಿ ಚಕ್ರವರ್ತಿಯ ತ್ಯಾಗ, ದಯೆ, ಕರುಣೆ ನಮಗೆ ಬಂದರೆ ಅದೇ ಸೌಹಾರ್ದತೆ. ಅದು ಹಿತವಾದ ಸಂಗೀತದಂತೆ. ಸಂಯಮ ಕಳೆದುಕೊಂಡರೆ ಏಕತ್ವ ಮೂಡದು’ ಎಂದರು.

‘ಹಿಂದೂ ಧರ್ಮೀಯರಾಗಿ ಹಿಂದುತ್ವ ಅನುಸರಿಸಬೇಕು. ಶೈವ, ವೈಷ್ಣವ ಸೇರಿ ವಿವಿಧ ಸಂಪ್ರದಾಯಗಳಿದ್ದರೂ ಆಚರಣೆಗಳಲ್ಲಿ ಸಾಮ್ಯತೆಯಿದೆ. ಉತ್ತಮ ನಡವಳಿಕೆಯಲ್ಲಿಯೇ ಧರ್ಮವನ್ನು ತೋರಬೇಕು. ಧರ್ಮವಿದ್ದಲ್ಲಿ ಸಂತೋಷ, ಸಮೃದ್ಧಿ ಇರುತ್ತದೆ. ದುಃಖವಿರದು’ ಎಂದರು.

‘ಪ್ರಜಾಪ್ರಭುತ್ವದಲ್ಲಿ ಸಮಾಜವೇ ಧರ್ಮವನ್ನು ನಿರ್ಮಿಸುತ್ತದೆ. ಸಮಾಜವು ದೇಶಕ್ಕೆ ನಿಷ್ಠೆಯಾಗಿದ್ದರೆ, ಅಭಿವೃದ್ಧಿ ತಂತಾನೆ ಆಗುತ್ತದೆ. ಕೆಲವರಷ್ಟೇ ಶ್ರೀಮಂತರಾದರೆ ದೇಶ ಅಭಿವೃದ್ಧಿಯಾಗಿದೆ ಎನ್ನಲಾಗದು. ಪ್ರತಿಯೊಂದು ಜೀವಕೋಶ ಚೆನ್ನಾಗಿದ್ದರೆ ದೇಹವು ಆರೋಗ್ಯವಾಗಿರುವಂತೆ ದೇಶದ ಎಲ್ಲ ನಾಗರಿಕರು ಸಂತುಷ್ಟರಾಗಬೇಕು’ ಎಂದರು.

ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಮತ್ತು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಮಧುಸೂದನ ಸಾಯಿ ಅವರ ‘ಆತ್ಮಾನೊ ಮೋಕ್ಷಂ ಜಗತ್ ಹಿತಾಯಚ’ ಕೃತಿಯನ್ನು ಬಿಡುಗಡೆ ಮಾಡಿದರು –ಪ್ರಜಾವಾಣಿ ಚಿತ್ರ

‘ಜಾತಿ ರಾಜಕಾರಣ; ನಿರ್ಲಕ್ಷ್ಯವಹಿಸಿ’

‘ಜಾತಿ ರಾಜಕಾರಣ ಹಾಸುಹೊಕ್ಕಾಗಲು ನಾವೇ ಕಾರಣ. ನಿಮ್ಮ ಜಾತಿಯನ್ನು ರಾಜಕಾರಣಿಗಳಿಗೆ ಹೇಳಿದರೆ, ಅವರು ಅದರ ಮೂಲಕವೇ ನಿಮ್ಮನ್ನು ಸ್ಮರಿಸುತ್ತಾರೆ. ಹೀಗಾಗಿ, ಅವರನ್ನು ದೂರದೇ ನಮ್ಮ ಜಾತಿಗಳನ್ನು ಮರೆಯಬೇಕು’ ಎಂದು ಮೋಹನ್ ಭಾಗವತ್ ಹೇಳಿದರು.

‘1942ರಲ್ಲೇ ಅಂತರ್ಜಾತಿ ವಿವಾಹ ನಡೆದಿತ್ತು. ಅಂಬೇಡ್ಕರ್ ಮತ್ತು ಗೋಳ್ವಲ್ಕರ್ ಅವರು ಆ ದಂಪತಿಗೆ ಹರಸಿ ಪತ್ರ ಬರೆದಿದ್ದರು. ಅಂತರ್ಜಾತಿ ವಿವಾಹ, ಜಾತಿ ರಹಿತ ಸಮಾಜ ನಿರ್ಮಾಣಕ್ಕೆ ವೇದಿಕೆಯೆಂದಿದ್ದರು. ರಾಜಕಾರಣಿಗಳ ಕೆಲಸದ ಮೇಲೆ ಅವರನ್ನು ಆಯ್ಕೆ ಮಾಡಬೇಕೇ ಹೊರತು ಜಾತಿಯಿಂದಲ್ಲ’ ಎಂದರು.

‘ಏಕರೂಪ ನಾಗರಿಕ ಸಂಹಿತೆಯು ಉತ್ತರಾಖಂಡದಲ್ಲಿ ಅನುಷ್ಠಾನಗೊಂಡಿದೆ. ನಿಧಾನವಾಗಿ ದೇಶದಲ್ಲೆಲ್ಲ ಜಾರಿಯಾಗಲಿದೆ. ಇದು ಪ್ರಜಾಪ್ರಭುತ್ವ. ಕೆಲವೇ ಜನರು ನಿರ್ಧರಿಸಲಾಗದು. 140 ಕೋಟಿ ಜನ ನಿರ್ಧರಿಸಬೇಕು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮೂರು ತಿಂಗಳ ಪರಿಶ್ರಮ ಕ್ಷಣಾರ್ಧದಲ್ಲಿ ವ್ಯರ್ಥ

ಕೈಗಾ ಬಳಿ ವಿಕಿರಣ ರಕ್ಷಾಕವಚ ಪಲ್ಟಿ

ಪ್ರಜಾವಾಣಿ ವಾರ್ತೆ

ಕಾರವಾರ: ತಾಲ್ಲೂಕಿನ ಕೈಗಾದಲ್ಲಿ ನಿರ್ಮಾಣ ಹಂತದಲ್ಲಿರುವ ಅಣು ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕಕ್ಕೆ ಅಳವಡಿಸಲು ಸಾಗಿಸಲಾಗುತ್ತಿದ್ದ ಅಣು ವಿಕಿರಣ ರಕ್ಷಾಕವಚ (ರೇಡಿಯೇಶನ್ ಎಂಡ್‌ಶೀಲ್ಡ್) ಉಪಕರಣವು ಹರ್ಟುಗಾ ಬಳಿ ಗುರುವಾರ ಪಲ್ಟಿಯಾಗಿದೆ.

ಗುಜರಾತ್‌ನ ಸೂರತ್‌ನಿಂದ ಮೂರು ತಿಂಗಳು ನಿರಂತರ ಪ್ರಯಾಣದೊಂದಿಗೆ 120 ಟನ್‌ಗೂ ಹೆಚ್ಚು ತೂಕದ ಮತ್ತು 30 ಅಡಿಗೂ ಹೆಚ್ಚು ಅಗಲವಿರುವ ಈ ಉಪಕರಣವನ್ನು ತರಲಾಗಿತ್ತು. ಕೈಗಾ ತಲುಪಲು ಕೇವಲ 4 ಕಿ.ಮೀ ದೂರದಲ್ಲಿರುವಾಗ ಉಪಕರಣವು ಬಿದ್ದಿದೆ.

‘ತಿರುವುಗಳಿಂದ ಕೂಡಿರುವ ಕೈಗಾ ರಸ್ತೆಯಲ್ಲಿ ಸಾಗುತ್ತಿದ್ದ ವೇಳೆ ಉಪಕರಣ ಹೊತ್ತಿದ್ದ ಮಲ್ಟಿಆಕ್ಸೆಲ್ ವಾಹನದ ಟೈರ್ ಸ್ಫೋಟಗೊಂಡ ಕಾರಣ ನಿಯಂತ್ರಣ ತಪ್ಪಿ ವಾಹನ ವಾಲಿತು. ಇದರಿಂದ ಭಾರಿ ಗಾತ್ರದ ಉಪಕರಣ ಮಗುಚಿದೆ’ ಎಂದು ಯಂತ್ರ ಸಾಗಣೆಯ ಜವಾಬ್ದಾರಿ ಹೊತ್ತ ಗುಜರಾತ್‌ನ ನ್ಯಾಬ್ರೊಸ್ ಟ್ರಾನ್ಸ್‌ಪೋರ್ಟ್ ಸಂಸ್ಥೆಯ ಸಿಬ್ಬಂದಿಯೊಬ್ಬರು ಹೇಳಿದರು.

ಕಾರವಾರ ತಾಲ್ಲೂಕಿನ ಹರ್ಟುಗಾ ಸಮೀಪ ಕೈಗಾಕ್ಕೆ ಸಾಗಿಸುತ್ತಿದ್ದ ಅಣು ವಿಕಿರಣ ಸುರಕ್ಷಾ ಕವಚ (ರೇಡಿಯೇಶನ್ ಎನ್‌ಶಿಲ್ಡ್) ಉಪಕರಣ ಮಗುಚಿತ್ತು

‘ಮಲ್ಲಾಪುರ ಗ್ರಾಮದಿಂದ ಕೈಗಾಕ್ಕೆ ಸಂಪರ್ಕಿಸುವ ರಸ್ತೆ ಕಿರಿದಾಗಿದೆ. ಅದೇ ರಸ್ತೆಯ ತಿರುವಿನಲ್ಲಿ ಭಾರಿ ಗಾತ್ರದ ವಾಹನದ ಜೊತೆಗೆ ಉಪಕರಣ ಮಗುಚಿದ್ದರಿಂದ ರಸ್ತೆ ಸಂಪರ್ಕ ಕಡಿತಗೊಂಡಿದೆ. ಕೈಗಾ ಅಣು ಸ್ಥಾವರದಲ್ಲಿ ಬೃಹತ್ ಗಾತ್ರದ ಕ್ರೇನ್‌ಗಳು ಲಭ್ಯ ಇವೆ. ಅವುಗಳನ್ನು ಬಳಸಿ ಉಪಕರಣವನ್ನು ಸುರಕ್ಷಿತವಾಗಿ ಎತ್ತಿ, ಸಾಗಿಸಲಾಗುವುದು. ಇದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗಬಹುದು’ ಎಂದು ಮಲ್ಲಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಣು ಸ್ಥಾವರದಲ್ಲಿ ವಿಕಿರಣ ಸೋರಿಕೆ ಆಗದಂತೆ ಸುರಕ್ಷತೆ ಒದಗಿಸಲು ಅನುಕೂಲವಾಗುವ ಈ ಉಪಕರಣವನ್ನು ಲಾರ್ಸನ್ ಆ್ಯಂಡ್ ಟೂಬ್ರೊ ಲಿಮಿಟೆಡ್ ಕಂಪನಿ (ಎಲ್ ಆ್ಯಂಡ್ ಟಿ) ತಯಾರಿಸಿದೆ. ಫೆಬ್ರುವರಿ 9ರಂದು ಸೂರತ್‌ನಿಂದ ಇದು ರವಾನೆಯಾಗಿತ್ತು. ಇದನ್ನು ಸಾಗಣೆ ಮಾಡಲೆಂದೇ ವಿಶೇಷ ಸ್ವಯಂಚಾಲಿತ ಯಂತ್ರವುಳ್ಳ ವಾಹನವನ್ನು ರೂಪಿಸಲಾಗಿದೆ.

ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಟಿ.ಎನ್.ಸೀತಾರಾಮ್ ವಿರುದ್ಧ ಎಫ್ಐಆರ್

• ತಲೆಮರೆಸಿಕೊಂಡ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಪ್ರಭಾವ ಇದೆ ಎಂಬ ಕಾರಣಕ್ಕೆ, ನ್ಯಾಯಾಲಯದ ಆದೇಶವನ್ನೂ ಲೆಕ್ಕಿಸದೆ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದಲ್ಲದೇ ದೌರ್ಜನ್ಯ ನಡೆಸಿ ಮಹಿಳೆಯರ ಗೌರವಕ್ಕೆ ಧಕ್ಕೆ ತಂದಿದ್ದಾರೆ' ಎಂದು ಕಿರುತೆರೆ ನಿರ್ದೇಶಕ ಟಿ.ಎನ್.ಸೀತಾರಾಮ್ ಮತ್ತು ಇತರರ ವಿರುದ್ಧ ದಾಖಲಿಸಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಟಿ.ಎನ್.ಸೀತಾರಾಮ್ ಮತ್ತು ಅವರ ಸಹೋದರಿ ಕೆ.ಎಸ್.ವಿಜಯಲಕ್ಷ್ಮಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸೀತಾರಾಮ್ ಪರ ಪದಾಂಕಿತ ಹಿರಿಯ ವಕೀಲ ಕೆ.ದಿವಾಕರ ಅವರ ವಾದ ಆಲಿಸಿದ ನ್ಯಾಯಪೀಠ, ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆ ಪೊಲೀಸ್ ಮತ್ತು ದೂರುದಾರ ಎಂ.ಎ. ಅರವಿಂದ ಕುಮಾರ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಯು. ಸಂತೋಷ್ ವಕಾಲತ್ತು ವಹಿಸಿದ್ದಾರೆ.

ದೂರಿಗೆ ಸಂಬಂಧಿಸಿದಂತೆ ಟಿ.ಎನ್.ಸೀತಾರಾಮ್, ಕೆ.ಎಸ್.ವಿಜಯಲಕ್ಷ್ಮಿ, ರಾಕೇಶ್, ಶಶಾಂಕ ವಿರುದ್ಧ ಎಫ್ಐಆರ್ ದಾಖಲಿಸಲಾಗಿದ್ದು, ನಾಲ್ವರೂ ಆರೋಪಿಗಳು ತಲೆ ಮರೆಸಿ ಕೊಂಡಿದ್ದಾರೆ. ರಾಕೇಶ್ ಮತ್ತು ಶಶಾಂಕ್ ದೊಡ್ಡಬಳ್ಳಾಪುರ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿಯಲ್ಲಿ ಏನಿದೆ?: 'ನಮ್ಮ ವಿರುದ್ಧ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವಿವಿಧ ಕಲಂಗಳ ಅಡಿ ಎಫ್ಐಆರ್ ದಾಖಲಿಸಲಾಗಿದೆ. ಈ ಕುರಿತಾದ ತನಿಖೆಯನ್ನು ರದ್ದುಪಡಿಸಬೇಕು' ಎಂದು ಕೋರಿ ಸೀತಾರಾಮ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಮುಖ್ಯಾಂಶಗಳು

- ಜಮೀನಿಗೆ ಅತಿಕ್ರಮ ಪ್ರವೇಶದ ದೂರು
- ದೌರ್ಜನ್ಯ ನಡೆಸಿ ಮಹಿಳೆಯರ ಗೌರವಕ್ಕೆ ಧಕ್ಕೆ ತಂದ ಆರೋಪ
- ತನಿಖೆ ರದ್ದು ಕೋರಿ ಅರ್ಜಿ ಸಲ್ಲಿಸಿದ್ದ ಸೀತಾರಾಮ್

ಪ್ರಕರಣವೇನು?: 'ದೊಡ್ಡಬಳ್ಳಾಪುರ ತಾಲ್ಲೂಕಿನ ಹಸನಘಟ್ಟ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 5 ಎಕರೆಗೂ ಹೆಚ್ಚು ವಿಸ್ತೀರ್ಣದ ಜಮೀನನ್ನು ಟಿ.ಎನ್.ಸೀತಾರಾಮ್ 1977ರಲ್ಲಿ ರಾಮಯ್ಯ ಅವರಿಗೆ ಮಾರಾಟ ಮಾಡಿದ್ದರು. ಈ ಜಮೀನನ್ನು ರಾಮಯ್ಯ, ಅಡವಿಯಪ್ಪಗೆ ಮಾರಾಟ ಮಾಡಿದ್ದರು. ಅಡವಿಯಪ್ಪ ನಿಧನಾನಂತರ ಅವರ ವಾರಸುದಾರರಾದ ಎಂ.ಎ.ಅರವಿಂದ ಕುಮಾರ್ ಮತ್ತು ಎಂ.ಎ.ಜಗದೀಶ್ ಸ್ವಾಧೀನಾನುಭವದಲ್ಲಿ ಇದ್ದಾರೆ' ಎಂದು ಎಫ್ಐಆರ್‌ನಲ್ಲಿ ವಿವರಿಸಲಾಗಿದೆ.

'ಸದರಿ ಜಮೀನಿನಲ್ಲಿ 1 ಎಕರೆ 26 ಗುಂಟೆ ಜಮೀನು ಇನ್ನೂ ನಮ್ಮ ಹೆಸರಿನಲ್ಲೇ ಇದೆ ಎಂದು ಟಿ.ಎನ್.ಸೀತಾರಾಮ್ ಅವರು ಎನ್.ರಾಕೇಶ್ ಎಂಬವರಿಗೆ ಇದರ ಜಿಪಿಎ (ಸಾಮಾನ್ಯ ಅಧಿಕಾರ ಪತ್ರ) ಮಾಡಿಸಿ ಕೊಟ್ಟು ನಂತರ ಕಾನೂನುಬಾಹಿರವಾಗಿ ಮಾರಾಟ ಮಾಡಿರುತ್ತಾರೆ. ವಾಸ್ತವದಲ್ಲಿ ಈ ಜಮೀನು ನಮಗೆ ಮಾರಾಟವಾಗಿದ್ದು ನಮ್ಮ ಸ್ವಾಧೀನಾನುಭವದಲ್ಲಿದ್ದರೂ ಸೀತಾರಾಮ್ ನಮಗೆ ಮೋಸ ಮಾಡುವ ಉದ್ದೇಶದಿಂದ ಈ ವಿವಾದಿತ ಜಮೀನಿನ ಒಳಗೆ 2026ರ ಮೇ 1ರಂದು ರಾತ್ರಿ 12ರಿಂದ 1 ಗಂಟೆ ಸಮಯದಲ್ಲಿ 100 ರಿಂದ 150 ಜನರನ್ನು ಕೂಡಿಸಿಕೊಂಡು ಅತಿಕ್ರಮ ಪ್ರವೇಶ ಮಾಡಿದ್ದಾರೆ. ಕೆಲಸಗಾರರನ್ನು ಕೊಠಡಿಯಲ್ಲಿ ಕೂಡಿ ಹಾಕಿ ಅಲ್ಲಿದ್ದ ಮಹಿಳೆಯರನ್ನು ಅವಾಚ್ಯ ಪದಗಳಿಂದ ನಿಂದಿಸಿ, ಬಟ್ಟೆ ಹರಿದು ದೌರ್ಜನ್ಯ ನಡೆದ್ದಾರೆ' ಎಂದು ದೂರುದಾರರ ಅಂಶಗಳನ್ನು ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಎಚ್ಎಎಲ್ ವಿಮಾನ ನಿಲ್ದಾಣ ಬಳಿಯೇ ಮೋದಿ ಭಾಷಣ

ಬೆಂಗಳೂರು: ಇದೇ 10ರಂದು ನಗರಕ್ಕೆ ಆಗಮಿಸುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎಚ್ಎಎಲ್ ವಿಮಾನ ನಿಲ್ದಾಣದ ಬಳಿಯೇ ಎಲ್ಲರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೆರಿ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಜಯಭೇರಿ ಬಾರಿಸಿರುವುದರಿಂದ ಮೋದಿ ಅವರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ನಾಗರಿಕರಿಗೆ ಮುಕ್ತ ಆಹ್ವಾನವಿದೆ ಎಂದು ಅವರು ಹೇಳಿದ್ದಾರೆ.

ಅಂಗವಿಕಲರಿಗಾಗಿ ಉದ್ಯೋಗ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರಿಗೆ ಉದ್ಯೋಗ ಕಲ್ಪಿಸುವುದಕ್ಕಾಗಿ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಮುಂಬರುವ ಆಗಸ್ಟ್‌ನಲ್ಲಿ 'ಉದ್ಯೋಗ ಮೇಳ' ಹಮ್ಮಿಕೊಳ್ಳಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಅಸಿಸ್ಟೆಕ್ ಫೌಂಡೇಶನ್‌ನ (ಎಟಿಎಫ್) 'ಆದಿದ್ವಾರ' ಆ್ಯಪ್‌ಗೆ ಚಾಲನೆ ನೀಡಿ ಮಾತನಾಡಿದರು.

'ಅಂಗವಿಕಲರು ಯಾರಿಗೂ ಕಡಿಮೆ ಇಲ್ಲ. ಇತರ ಎಲ್ಲರಂತೆ ಅವರು ಪ್ರತಿಭಾವಂತರು. ಆದ್ದರಿಂದ ಖಾಸಗಿ ವಲಯದ ಕಂಪನಿಗಳು ಉದ್ಯೋಗಗಳಿಗೆ ನೇಮಕ ಮಾಡಿಕೊಳ್ಳುವಾಗ ಅಂಗವಿಕಲರಿಗೆ ಸಮಾನ ಅವಕಾಶಗಳನ್ನು ನೀಡಬೇಕು ಮತ್ತು ಸಮಾನವಾಗಿ ನಡೆಸಿಕೊಳ್ಳಬೇಕು' ಎಂದು ಹೇಳಿದರು.

ಶರಣ ಪ್ರಕಾಶ್ ಪಾಟೀಲ

ಅಂಗವಿಕಲರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಕೃತಕ ಬುದ್ಧಿಮತ್ತೆ ಆಧರಿಸಿ 'ಆದಿದ್ವಾರ' ಆ್ಯಪ್ ರೂಪಿಸಲಾಗಿದೆ. ವಿಶೇಷವಾಗಿ ಉದ್ಯೋಗ ಅವಕಾಶಗಳು, ಇಂಟರ್ನ್‌ಶಿಪ್ ಮತ್ತು ಕೌಶಲ ಕಾರ್ಯಕ್ರಮಗಳ ಬಗ್ಗೆ ಆ್ಯಪ್‌ನಲ್ಲಿ ಮಾಹಿತಿ ಸಿಗಲಿದೆ. ಉದ್ಯೋಗದಾತರಿಗೂ ಕೂಡ ಪ್ರತಿಭಾನ್ವಿತ ಅಭ್ಯರ್ಥಿಗಳ ಮಾಹಿತಿ ಸಿಗಲಿದೆ.

ಇದೇ ಸಂದರ್ಭದಲ್ಲಿ ಸಚಿವ ಶರಣ ಪ್ರಕಾಶ್ ಅವರು ಆಗಸ್ಟ್ ತಿಂಗಳಲ್ಲಿ ನಡೆಯುವ ಉದ್ಯೋಗ ಮೇಳದ ಲೋಗೊ ಬಿಡುಗಡೆ ಮಾಡಿದರು. ಉದ್ಯೋಗ ಮೇಳದಲ್ಲಿ ಐಟಿ, ರಿಟೇಲ್, ಉತ್ಪಾದನಾ ವಲಯ, ಬಿಎಫ್ಎಸ್ಐ, ಆತಿಥ್ಯ ಸೇರಿ ವಿವಿಧ ಸೇವೆಗಳ ಕ್ಷೇತ್ರಗಳವರು ಭಾಗವಹಿಸಲಿದ್ದಾರೆ. 21 ಬಗೆಯ ವೈಕಲ್ಯ ಹೊಂದಿದ 3,000 ಉದ್ಯೋಗಾಂಕ್ಷಿಗಳು ಭಾಗವಹಿಸುವ ನಿರೀಕ್ಷೆ ಇದೆ.

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಆಡಳಿತ ವಿಭಾಗ
ಎಂಎಸ್ಐಎಲ್ ಹೌಸ್, ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560 052.
ದೂರವಾಣಿ : 080–22264021–25
ಸಂಖ್ಯೆ: ಎಂಎಸ್ಐಎಲ್/ಆಡಳಿತ/076/2026–27 ದಿನಾಂಕ: 08.05.2026

ಪ್ರಕಟಣೆ

ಸಹಾಯಕ ವ್ಯವಸ್ಥಾಪಕರು(ಅಕೌಂಟ್ಸ್), ಸಹಾಯಕ ವ್ಯವಸ್ಥಾಪಕರು(ಇಡಿಪಿ) ಮತ್ತು ಗುಮಾಸ್ತರ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ಮತ್ತು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು

ಬೆಂಗಳೂರು ಪಶ್ಚಿಮ ನಗರ ಪಾಲಿಕೆ–ಮಲ್ಲೇಶ್ವರಂ ವಲಯ
ಕಾರ್ಯಪಾಲಕ ಅಭಿಯಂತರವರ ಕಛೇರಿ, ವಿಜಯನಗರ ವಿಭಾಗ, 1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯ, ವಿಜಯನಗರ, ಬೆಂಗಳೂರು–560040.
ಸಂಖ್ಯೆ: ಕಾಪಾಅ(ವಿಜನ)/ಟೆಂಡರ್/ಕೆಪಿಪಿಪಿ/02/2026–27 ದಿನಾಂಕ: 06–05–2026

ಟೆಂಡರ್‌ಗೆ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಪಿಪಿ ಪೋರ್ಟಲ್ https://kppp.karnataka.gov.in

ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬೆಂಪನಪಾ, ಬೆಂಗಳೂರು ರವರು ಜಿಬಿಎ/ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1)	**ವಾರ್ಡ್ ಸಂಖ್ಯೆ 147 ರಲ್ಲಿರುವ ಆರ್‌ಪಿಸಿ ಬಡಾವಣೆಯಲ್ಲಿರುವ ಬಿಬಿಎಂಪಿ ಕಟ್ಟಡದಲ್ಲಿ ಬಾಕಿ ಉಳಿದಿರುವ ಸುಧಾರಣಾ ಕಾಮಗಾರಿಗಳು.** ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ): **155.00**. ಟೆಂಡರ್‌ಗೆ ಇಟ್ಟಿರುವ ಮೊತ್ತ (ರೂ.ಲಕ್ಷಗಳಲ್ಲಿ): **125.00**. ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ): **ರೂ.1,87,500/– (ಕೆಪಿಪಿ ಪೋರ್ಟಲ್ ಮೂಲಕ ರೂ.1.00 ಲಕ್ಷ ಮತ್ತು ಉಳಿದ ರೂ.87,500/– ಬ್ಯಾಂಕ್ ಗ್ಯಾರಂಟಿ/ಎಫ್‌ಡಿ ರೂಪದಲ್ಲಿರುತ್ತದೆ).**
2)	**ವಾರ್ಡ್ ಸಂಖ್ಯೆ 146 ರಲ್ಲಿರುವ ವಾರ್ಡ್ ವ್ಯಾಪ್ತಿ ಪ್ರದೇಶದ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣಾ ಕಾಮಗಾರಿಗಳು (2ನೇ ಕರೆ).** ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ): **30.00**. ಟೆಂಡರ್‌ಗೆ ಇಟ್ಟಿರುವ ಮೊತ್ತ (ರೂ.ಲಕ್ಷಗಳಲ್ಲಿ): **28.11**. ಇಎಂಡಿ ಮೊತ್ತ (ರೂ.ಗಳಲ್ಲಿ): **ರೂ.56,220/–.**

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಿಂದ **ದಿನಾಂಕ: 12–05–2026** ರಿಂದ ಡೌನ್‌ಲೋಡ್ ಮಾಡಬಹುದು. 2) ಪೂರ್ವ-ಬಿಡ್ ಸಭೆಯನ್ನು ಮುಖ್ಯ ಅಭಿಯಂತರರು, ಮಲ್ಲೇಶ್ವರಂ ವಲಯ ಬೆಪನಪಾ ಪಾಲಿಕೆ ಸೌಧ ಕಟ್ಟಡ 1ನೇ ಮಹಡಿ 14ನೇ ಅಡ್ಡರಸ್ತೆ ಚಂದ್ರ ಬಡಾವಣೆ ಬೆಂಗಳೂರು–72 ಇಲ್ಲಿ **ದಿನಾಂಕ: 20–05–2026ರ ಸಂಜೆ 3:00 ಗಂಟೆಗೆ ನಡೆಸಲಾಗುವುದು.** 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ **ದಿನಾಂಕ: 25–05–2026ರ ಸಂಜೆ 4:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 26–05–2026 ರಂದು ಸಂಜೆ 4:30 ಗಂಟೆಗೆ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: ತೆರೆಯುವ ದಿನಾಂಕವನ್ನು ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.**

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ವಲಯ–2, ಬೆಂಪನಪಾ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ. ದೂರವಾಣಿ: 08426–281027.
ಇ–ಮೇಲ್: dam_division@rediffmail.com
ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2026–27/178
ದಿನಾಂಕ:06.05.2026

ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ನಿಡಗುಂದಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Percentage basis tenders from the eligible contractors for the work indents of **Two Cover** –I .No. **KBJNL/2026-27/CN/WORK_INDENT2792– 332.58 Lakhs** ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ KW ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **07.05.2026 ರಿಂದ 15.05.2026** ಸಾಯಂಕಾಲ 5.00 ಘಂಟೆಯವರೆಗೆ.
2. ಪೂರ್ವಭಾವಿ ಸಭೆ :**13.05.2026 ಮುಂಜಾನೆ 11.00 ಘಂಟೆಗೆ. ಮಾನ್ಯ ಮುಖ್ಯ ಅಭಿಯಂತರರ ಕಛೇರಿ, ಕೃಭಾಜನಿನಿ, ಆಣೆಕಟ್ಟು ವಲಯ ಆಲಮಟ್ಟಿ**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18.05.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ **: 21.05.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– (ಟಿ.ವ್ಹಿ. ದೊಡ್ಡಮನಿ) ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ.
ವಾಸಾಸಂಇ/ವಿಜಯಪುರ/84/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ
ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಜೆಇ–2/ಐಎಫ್‌ಟಿ–06/2026–27
ದಿನಾಂಕ: 04.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 2& 3 ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:11–05–2026 ರಿಂದ 18–05–2026
8443–00–117–0–14–542 ಠೇವಣಿ ವಂತಿಕೆ (ರಾಜ್ಯ ಉಪಶಮನ ನಿಧಿ)
ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು
1. ಸಾಗರ ತಾಲ್ಲೂಕು 7 ಕಾಮಗಾರಿ
ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) : 08 ತಿಂಗಳುಗಳು
ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು, ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182– 274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/18/05/192

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಆಯುಕ್ತರವರ ಕಛೇರಿ, ಅರಮನೆ ರಸ್ತೆ, ಬೆಂಗಳೂರು-560001. Ph: 080-2220 0291.
NO: DTE-ADMI0EST(3)/7/2025-26 Dated: 06/05/2026

ಇ–ಟೆಂಡರ್ ಅಧಿಸೂಚನೆ

ಆಯುಕ್ತರು ಕಾಲೇಜು ಮತ್ತು ಶಿಕ್ಷಣ ಇಲಾಖೆ ಬೆಂಗಳೂರು ಇವರು ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು, ಇಲ್ಲಿನ ಕಟ್ಟಡ ಹಾಗೂ ಆವರಣದಲ್ಲಿನ ಸ್ವಚ್ಛತಾ ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಅಗತ್ಯವಾಗಿ ಕಾರ್ಯನಿರ್ವಹಿಸಲು ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಡಿ ದರ್ಜೆ ನೌಕರರನ್ನು ಪಡೆಯುವ ಸಂಬಂಧ ಈ ಆಸಕ್ತ ಬಿಡ್ ದಾರರಿಂದ ಇ - ಸಂಗ್ರಹಣೆ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಬಿಡ್ ಅನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ಇತರೆ ವಿವರಗಳಿಗಾಗಿ http://kppp.karnataka.gov.in ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ಮಾಹಿತಿಯು ಈ ಕೆಳಗಿನಂತಿದೆ

ಟೆಂಡರ್ ಮಾಹಿತಿ	ಕೆಪಿಪಿ ಪೋರ್ಟಲ್‌ನಲ್ಲಿ ದಸ್ತಾವೇಜನ್ನು ಅಪ್ ಲೋಡ್ ಮಾಡುವ ದಿನಾಂಕ	ಪ್ರೀ ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
ಟೆಂಡರ್ ಸಂಖ್ಯೆ: DTE/2025-26/ SE0004 - Call 2 House keeping service (with materials) & Maintenance	05.05.2026	08.05.2026 at 12.30 p.m.	13.05.2026 at 5.30 p.m.
ಟೆಂಡರ್ ಸಂಖ್ಯೆ: DTE/2026-27/ SE0006, Supply of Group-D personnel on an outsourcing	05.05.2026	22.05.2026 at 12.00 p.m.	05.06.2026 at 5.29 p.m.

The Department reserves the right to cancel or reject the tenders without any notification. Details in this regard may be obtained from the website **https://kppp.karnataka.gov.in.**

ಸಹಿ/– ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ
DIPR/CP/RO/548/AAPL/2026-27

ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯ ಕೇಂದ್ರ ಗ್ರಂಥಾಲಯ. ಜ್ಞಾನಸಾಗರ, ಬಳ್ಳಾರಿ–583105
ಕುಲಸಚಿವರು ದೂರವಾಣಿ : 08392–242703 ಫ್ಯಾ:08392–242097
ನಂ.ವಿ.ಶ್ರೀ.ಕೃ.ವಿ.ಬ/ಶೈಕ್ಷಣಿಕ/ಯುಜಿ/2026–27/185 ದಿನಾಂಕ:05.05.2026

ದರಪಟ್ಟಿ ಆಹ್ವಾನ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಮುಖ್ಯ ಆವರಣ "ಜ್ಞಾನಸಾಗರ" ಬಳ್ಳಾರಿ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ ಮತ್ತು ಸ್ನಾತಕೋತ್ತರ ಕೇಂದ್ರ, ಹರಪನಹಳ್ಳಿಯಲ್ಲಿ ಆರಂಭಿಸಲಾಗುತ್ತಿರುವ ಈ ಕೆಳಕಂಡಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಆವರಣ "ಜ್ಞಾನಸಾಗರ" ಬಳ್ಳಾರಿ,
I. ವಾಣಿಜ್ಯ ಅಧ್ಯಯನ ವಿಭಾಗ (Contact no.:979329099)
1. ಬಿ.ಕಾಂ (ಫಿನ್‌ಟೆಕ್)
2. ಬಿ.ಕಾಂ (ಅಕೌಂಟಿಂಗ್& ಫೈನಾನ್ಸ್)
II. ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ (Contact no.: 9611184710)
1.ಬಿ.ಬಿ.ಎ. ಸ್ಪೋರ್ಟ್ಸ್ ಮ್ಯಾನೇಜ್ಮೆಂಟ್
2.ಬಿ.ಬಿ.ಎ. ಲಾಜಿಸ್ಟಿಕ್ ಅಂಡ್ ಸಪ್ಲೈಚೈನ್ ಮ್ಯಾನೇಜ್ಮೆಂಟ್
III. ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ (Microbiology)Contact number: 9845805477)
ಬಿ.ಎಸ್ಸಿ. (ಫುಡ್‌ಟೆಕ್ನಾಲಜಿ)
IV. ಗಣಕ ವಿಜ್ಞಾನ ಅಧ್ಯಯನ ವಿಭಾಗ(Computer Science)(Contact no.: 9738338457)
1.ಬಿ.ಸಿ.ಎ. (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್)
2.ಬಿ.ಸಿ.ಎ. (ಡಾಟಾ ಸೈನ್ಸ್)
V. ಅರ್ಥಶಾಸ್ತ್ರಅಧ್ಯಯನ ವಿಭಾಗ(Contact no.:9880381116)
ಬಿ.ಎ. (ಎಕನಾಮಿಕ್ಸ್‌ಅಂಡ್‌ಡೇಟಾ ಸೈನ್ಸ್)

ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ
I. ವಾಣಿಜ್ಯ ಅಧ್ಯಯನ ವಿಭಾಗ(Contact no.:9901374785)
ಬಿ.ಕಾಂ (ಫಿನ್‌ಟೆಕ್)
II. ಅನ್ವಯಿಕ ವಿಜ್ಞಾನ ಅಧ್ಯಯನ ವಿಭಾಗ(Contact no.:9945448322, 9481032365)
ಬಿ.ಎಸ್ಸಿ. (ಅರ್ಥ್ ಸೈನ್ಸ್)
III. ಗಣಕ ವಿಜ್ಞಾನ ಅಧ್ಯಯನ ವಿಭಾಗ(Contact no.:8892022724)
ಬಿ.ಸಿ.ಎ. (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್)

ಸ್ನಾತಕೋತ್ತರ ಕೇಂದ್ರ, ಹರಪನಹಳ್ಳಿ
I. ವಾಣಿಜ್ಯ ಅಧ್ಯಯನ ವಿಭಾಗ
ಬಿ.ಕಾಂ (ಫಿನ್‌ಟೆಕ್)
II. ಗಣಕ ವಿಜ್ಞಾನ ಅಧ್ಯಯನ ವಿಭಾಗ
ಬಿ.ಸಿ.ಎ. (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್)
III. ಅರ್ಥಶಾಸ್ತ್ರ ಅಧ್ಯಯನ ವಿಭಾಗ
ಬಿ.ಎ. (ಎಕನಾಮಿಕ್ಸ್‌ಅಂಡ್‌ಡೇಟಾ ಸೈನ್ಸ್)
IV. ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ
ಬಿ.ಬಿ.ಎ. (ಲಾಜಿಸ್ಟಿಕ್ ಅಂಡ್ ಸಪ್ಲೈಚೈನ್ ಮ್ಯಾನೇಜ್ಮೆಂಟ್)

ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ Website: www.vskub.ac.in ಆನ್‌ಲೈನ್ ನೋಂದಣಿ ಮತ್ತು ಅರ್ಜಿ ಸಲ್ಲಿಕೆಗಾಗಿ ಕರ್ನಾಟಕ ಸರ್ಕಾರದ ಯು.ಯು.ಸಿ.ಎಂ.ಎಸ್ (UUCMS) ಪೋರ್ಟಲ್ https://uucms.karnataka.gov.in ಭೇಟಿ ನೀಡಲು ತಿಳಿಸಲಾಗಿದೆ. ಪ್ರವೇಶಾತಿ ಪ್ರಕ್ರಿಯೆಯು ದಿನಾಂಕ: 05.05.2026 ರಿಂದ ಪ್ರಾರಂಭವಾಗಿದ್ದು, ಪ್ರವೇಶಾತಿಗೆ 30.06.2026 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾಲಯದ ಜಾಲತಾಣ www.vskub.ac.in ದಿಂದ ಪಡೆಯಬಹುದಾಗಿದೆ.
* ಅಗತ್ಯ ಸಂಖ್ಯೆಯ ಪ್ರವೇಶ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಅಂತಹ ಕೋರ್ಸುಗಳನ್ನು ಪ್ರಸ್ತುತ ವರ್ಷ ಪ್ರಾರಂಭಿಸಲಾಗುವುದಿಲ್ಲ.

ಸಹಿ/–ಕುಲಸಚಿವರು, ವಿಜಯ ನಗರ ಶ್ರೀ ಕೃಷ್ಣ ದೇವರಾಯ ವಿಶ್ವ ವಿದ್ಯಾಲಯ, ಬಳ್ಳಾರಿ
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/120

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009
ಸಂ: ಕಾ.ಪಾ.ಅ/ಪಂರಾಇಂವಿ/ಬೆಂ.ಗ್ರಾಂ/ಟೆಂ–02/ತಾಂ.ಶಾ/2026–27 ದಿನಾಂಕ: 05.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 02/2026–27 (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ಪ್ರಕಟಣೆ ಸಂಖ್ಯೆ: 02/2026–27ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂಐಡಿಪಿ) ಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.05.2026 ಸಂಜೆ 5.00 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು
DIPR/CP/555/SMCL/2026-27

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ" ಬೆಳಗಾವಿ–590018, ಕರ್ನಾಟಕ, ಭಾರತ
Ref. VTU/BGM/SAP/CW1/T-744/2026-27/563 Dtd.06-05-2026

ಅಲ್ಪಾವಧಿ ಟೆಂಡರ್ ಪ್ರಕಟನೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ್ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. **ಕೆಲಸದ ಹೆಸರು: Tender for establishment of centre of Excellence in "Additive Manufacturing" at VTU Centre for Post Graduate Studies - VAIT, Muddenahalli.** ಟೆಂಡರ್ ಪ್ರಿ ಬಿಡ್ ಮಿಟಿಂಗ ದಿನಾಂಕ. 12–05–2026 ರಂದು 11.00 ಗಂಟೆಗೆ ಆನ್‌ಲೈನ ಮೂಲಕ. ಟೆಂಡರಿಗಿಟ್ಟ ಮೊತ್ತ: **ರೂ.4,97,16,500/–** ಮುಂಗಡ ಠೇವಣಿ: **ರೂ.7,45,800/–,** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 20–05–2026 ರ 2.30 ರ ವರೆಗೆ.** ಟೆಂಡರ್ ತೆರೆಯುವ **ದಿನಾಂಕ: 21–05–2026 ರ 4.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ಮತ್ತು **www.vtu.ac.in** ನೋಡಬಹುದು.

ಸಹಿ/– ಕುಲಸಚಿವರು
ವಾ.ಸಾ.ಸಂ.ಇ./ಬೆಳಗಾವಿ/204/ದೇಶಪಾಂಡೆಪಬ್ಲಿಸಿಟಿ/2026–27

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831–2405304,
Email : itstaff_ulb_belgaum@yahoo.com, Website : www.belgaumcity.mrc.gov.in
ಸಂಖ್ಯೆ : ಮ.ನ.ಪಾ.ಬೆ./ಲೋ.ಶಾ./ಕಾ.ಅ./ಡಿ.ಎಂ./ಟಿ.ಎನ್.ಡಿ./ಇಪ್ರೋ–02/ 2026–27 ದಿನಾಂಕ : 07–05–2026

ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿದೆಡೆ ವಿದ್ಯುತ್ತೀಕರಣ ಮಾಡುವುದು ಹಾಗೂ ಕಾಯಿಪಲ್ಲೆ ಮಾರುಕಟ್ಟೆ ನಿರ್ಮಾಣ ಮಾಡುವ ಕಾಮಗಾರಿಗಳಿಗೆ **SC Category - 02, ST Category - 01, CAT-I - 01, CAT-II(A) - 02** ಹಾಗೂ ಸಾಮಾನ್ಯ ಮಿಸಲಾತಿಗೆ 07 ಹೀಗೆ ಒಟ್ಟು 13 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ : 18–05–2026 ರ ಸಂಜೆ 5.00 ಘಂಟೆವರೆಗೆ. 2) ಟೆಂಡರಿನ ಮೊದಲನೆ ಸಭೆಯ ದಿನಾಂಕ : 19–05–2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 25–05–2026 ರ ಅಪರಾಹ್ನ 4.00 ಘಂಟೆವರೆಗೆ. 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 27–05–2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 29–05–2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ **ವೆಬ್‌ಸೈಟ್ : https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/208/ಮಣಿಪಾಲ್/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ ಮ.ಟೆಂಡರ.ಪ್ರ–35/2026–27/542 ದಿನಾಂಕ: 06–05–2026

ಮರುಟೆಂಡರ್ (Call-2) ಪ್ರಕಟಣೆ (ಇ–ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ ಮಾತ್ರ)

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–35/2025–26/5604 ದಿನಾಂಕ: 04 –03–2026
ಉಲ್ಲೇಖದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2025–26ನೇ ಸಾಲಿನ Mitigation-8443-Deposite Contribution During 2025-26 ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ Construction of retaining wall at km 1.00 at Uppinapattana Bandivala road in Kumta taluk Uttara kannada district (RESERVED FOR Schedule Tribe category) PWD/2025-26/FP/WORK_INDENT34090/CALL-2 ರೂ. 82.07 ಲಕ್ಷದ ಕಾಮಗಾರಿಗಳಿಗೆ ಮರು ಟೆಂಡರನ (Call-2) ದಿನಾಂಕದ ವಿವರ ಈ ಕೆಳಗಿನಂತಿದೆ.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 13–05–2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 14–05–2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 15–05–2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 18–05–2026 17.00 ಗಂಟೆವರೆಗೆ
ಹೆಚ್ಚಿನ ವಿವರಗಳನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ
DIPR/KWR/KSMCA/111/26-27 dt. 06.05.2026

ಸಾರ್ವಜನಿಕ ಪ್ರಕಟಣೆ
(ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಕೋಡ್, 2016ರ ಸೆಕ್ಷನ್ 102 (1) & (2)ರ ಅಡಿಯಲ್ಲಿ)

ಮೆ. ಕಣ್ವ ಫ್ಯಾಷನ್ಸ್ ಲಿಮಿಟೆಡ್‌ಗೆ (KFL) ವೈಯಕ್ತಿಕ ಜಾಮೀನುದಾರರಾದ ಶ್ರೀ. ವಿಜಯಕುಮಾರ್ ಆರ್, ಶ್ರೀ. ಶ್ರೀ ರಾಮ್ ರೆಡ್ಡಿ ಎಂ ಎನ್, ಶ್ರೀ. ಹರೀಶ್ ಎಸ್, ಶ್ರೀ. ಎನ್ ನಂಜುಂಡಯ್ಯ, ಶ್ರೀ. ದೇವೇಂದ್ರ ಎನ್ ಮತ್ತು ಶ್ರೀಮತಿ ಪ್ರವೀಣ ಎನ್ – ಇವರಿಗೆ ಸಾಲ ಕೊಟ್ಟವರ ಗಮನಕ್ಕೆ.
(U18109KA1999PLC025423)

	ಪ್ರಸ್ತುತ ವಿವರಗಳು	
1.	ಸಾಲಗಾರ/ವೈಯಕ್ತಿಕ ಜಾಮೀನುದಾರರ ಹೆಸರು ಮತ್ತು ವಿಳಾಸ	1. **ಶ್ರೀ ವಿಜಯಕುಮಾರ್ ಆರ್.** ಶ್ರೀ ಕೆ. ಸಿ. ರಾಮ ರೆಡ್ಡಿಯವರ ಮಗ, ದನೊಜಿಪಾಳ್ಯ, ಕಣ್ವನಗರ, ನೆಲಮಂಗಲ–572129 2. **ಶ್ರೀ ಶ್ರೀ ರಾಮ ರೆಡ್ಡಿ ಎಮ್. ಎನ್.** ನಾರಾಯಪ್ಪ ರವರ ಮಗ, # 53, ಕಣ್ವನಗರ, ದನೊಜಿಪಾಳ್ಯ, ನೆಲಮಂಗಲ–572129 3. **ಶ್ರೀ ಹರೀಶ್ ಎಸ್.** ಶ್ರೀ ಕೆ.ಆರ್. ಸೀತರಾಮಯ್ಯರವರ ಮಗ, 456, ಜನತಾ ಕಾಲೋನಿ, ಅಂಚೆ ಕಛೇರಿ ಹಿಂಭಾಗ, ಬನ್ನೇರಘಟ್ಟ, ಬೆಂಗಳೂರು–560083 4. **ಶ್ರೀ ಎನ್. ನಂಜುಂಡಯ್ಯ, ಎಸ್.** ನಾರಾಯಣಪ್ಪರವರ ಮಗ, # ಎ 408,ಬ್ರಿಗೇಡ್ ಗೇಟ್ ವೇ ಅಪಾರ್ಟ್‌ಮೆಂಟ್, ಡಾ. ರಾಜಕುಮಾರ್ ರಸ್ತೆ, 2ನೇ ಹಂತ, ರಾಜಾಜಿನಗರ, ಬೆಂಗಳೂರು–560055 5. **ಶ್ರೀ ದೇವೇಂದ್ರ ಎನ್.** ನಂಜುಂಡಪ್ಪರವರ ಮಗ, ನಂ. 324, ವಿ.ವಿ. ನಗರ, ಆರ್. ಟಿ, ನಗರ ಪೋಸ್ಟ್, ಹೆಚ್.ಎಮ್.ಟಿ, ಲೇಔಟ್, 10ನೇ ಕ್ರಾಸ್, 6ನೇ ಮೈನ್, ಆಂಧ್ರ ಬ್ಯಾಂಕ್ ಹತ್ತಿರ, ಬೆಂಗಳೂರು – 560032 6. **ಶ್ರೀಮತಿ ಪ್ರವೀಣ ಎನ್.** ಅಶ್ವಥ್ ರೆಡ್ಡಿಯವರ ಮಗಳು, # 53, 18ನೇ ಎ ಕ್ರಾಸ್, ರಾಘವೇಂದ್ರ ಲೇಔಟ್, ಪೀಣ್ಯ 2ನೇ ಹಂತ, ಬೆಂಗಳೂರು 560058
2.	ಸಾಲಗಾರ/ವೈಯಕ್ತಿಕ ಜಾಮೀನುದಾರರ ವಿಷಯದಲ್ಲಿ ಆದೇಶ ಮತ್ತು ದಿವಾಳಿತನ ಆರಂಭದ ದಿನಾಂಕದ ವಿವರಗಳು	1. ಶ್ರೀ. ವಿಜಯಕುಮಾರ್ ಆರ್: CP (IB) No.40/BB/2025 29ನೇ ಏಪ್ರಿಲ್ 2026 ರಂದು 2. ಶ್ರೀ. ಶ್ರೀ ರಾಮ್ ರೆಡ್ಡಿ ಎಂ ಎನ್: CP (IB) No.41/BB/2025 29ನೇ ಏಪ್ರಿಲ್ 2026 ರಂದು 3. ಶ್ರೀ. ಹರೀಶ್ ಎಸ್: CP (IB) No.42/BB/2025 29ನೇ ಏಪ್ರಿಲ್ 2026 ರಂದು 4. ಶ್ರೀ. ಎನ್. ನಂಜುಂಡಯ್ಯ: CP (IB) No.43/BB/2025 29ನೇ ಏಪ್ರಿಲ್ 2026 ರಂದು 5. ಶ್ರೀ. ದೇವೇಂದ್ರ ಎನ್: CP (IB) No.44/BB /2025 29ನೇ ಏಪ್ರಿಲ್ 2026 ರಂದು 6. ಶ್ರೀಮತಿ ಪ್ರವೀಣ ಎನ್: CP (IB) No.45/BB/2025 29ನೇ ಏಪ್ರಿಲ್ 2026 ರಂದು
3.	ಪರಿಹಾರದ ವೃತ್ತಿಪರರಾಗಿ (RP) ನಿಯೋಜಿಸಲ್ಪಟ್ಟಿರುವ ದಿವಾಳಿತನ ಪರಿಹಾರಕಾರರ ಹೆಸರು, ನೋಂದಣಿ ಸಂಖ್ಯೆ, ಈಮೇಲ್ ಐಡಿ ಹಾಗೂ ವಿಳಾಸ – ವ್ಯವಹಾರದ ಸಲುವಾಗಿ	**ರವೀಂದ್ರ ಬೆಳೆಯೂರ್** IBBI/IPA-001/IP-P00189/2017-18/10368 ನಂ. 428, 19ನೇ ಬಿ ಕ್ರಾಸ್, 3ನೇಬ್ಲಾಕ್, ಜಯನಗರ, ಬೆಂಗಳೂರು – 560 011, ದೂರವಾಣಿ: +91 80 2654 0193 ಇಮೇಲ್: ravi@beleyur.com
4.	ಕ್ಲೇಮು ಸಲ್ಲಿಕೆಗೆ ಕೊನೆಯ ದಿನಾಂಕ	29ನೇ ಮೇ, 2026
5.	ಕ್ಲೇಮುಗಳನ್ನು ಸಲ್ಲಿಸಲು ಪ್ರಸ್ತುತ ಅರ್ಜಿಗಳು ಇಲ್ಲಿ ಲಭ್ಯ:	Weblink: www.ibbi.gov.in/home/downloads

ಈ ಮೂಲಕ ನೋಟೀಸು ನೀಡಲಾಗುತ್ತಿದೆ: ಏನೆಂದರೆ ಮೆ. ಕಣ್ವ ಫ್ಯಾಷನ್ಸ್ ಲಿಮಿಟೆಡ್‌ನ ಸಾಲಗಾರ/ವೈಯಕ್ತಿಕ ಜಾಮೀನುದಾರರಾದ ಶ್ರೀ. ವಿಜಯಕುಮಾರ್ ಆರ್, ಶ್ರೀ. ಶ್ರೀ ರಾಮ್ ರೆಡ್ಡಿ ಎಂ.ಎನ್, ಶ್ರೀ. ಹರೀಶ್ ಎಸ್, ಶ್ರೀ. ಎನ್ ನಂಜುಂಡಯ್ಯ, ಶ್ರೀ. ದೇವೇಂದ್ರ ಎನ್ ಮತ್ತು ಶ್ರೀಮತಿ ಪ್ರವೀಣ ಎನ್ ಇವರ ವಿರುದ್ಧ ದಿವಾಳಿತನದ ಪರಿಹಾರದ ಪ್ರಕ್ರಿಯೆಯನ್ನು ಆರಂಭಿಸುವಂತೆ 29ನೇ ಏಪ್ರಿಲ್ 2026 ರಂದು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಧಿಕರಣ (NCLT) ಬೆಂಗಳೂರು, ಆದೇಶಿಸಿದೆ.

ಮೆ. ಕಣ್ವ ಫ್ಯಾಷನ್ಸ್ ಲಿಮಿಟೆಡ್‌ನ ವಿಷಯದಲ್ಲಿ ವೈಯಕ್ತಿಕ ಜಾಮೀನುದಾರರಾದ ಈ ಮೇಲಿನವರಿಗೆ ಸಾಲ ಕೊಟ್ಟವರು 29ನೇ ಮೇ 2026 ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಕ್ಲೇಮುಗಳನ್ನು ಆಧಾರಗಳ ಸಮೇತ ನಿಗದಿತ ನಮೂನೆಯಲ್ಲಿ, ಪರಿಹಾರ ವೃತ್ತಿಪರರಿಗೆ ಮೇಲೆ ಕಲಂ 3ರಲ್ಲಿ ತಿಳಿಸಿದ ವಿಳಾಸಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗುತ್ತಿದೆ.

ಹಣಕಾಸು ಸಾಲದಾತರು ತಮ್ಮ ಕ್ಲೇಮುಗಳನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸತಕ್ಕದ್ದು. ಉಳಿದೆಲ್ಲ ಸಾಲದಾತರೂ ತಮ್ಮ ಕ್ಲೇಮುಗಳನ್ನು ಆಧಾರಗಳ ಜೊತೆಯಲ್ಲಿ ವೈಯಕ್ತಿಕವಾಗಿ, ಅಂಚೆ ಮೂಲಕ ಇಲ್ಲವೆ ಎಲೆಕ್ಟ್ರಾನಿಕ್ ವಿಧಾನದಲ್ಲಿ ಸಲ್ಲಿಸಬಹುದು.

ಸುಳ್ಳು ಮತ್ತು ದಾರಿ ತಪ್ಪಿಸುವ ಕ್ಲೇಮ್ ಪುರಾವೆಗಳನ್ನು ಒದಗಿಸಿದಲ್ಲಿ ಅದು ಶಿಕ್ಷಾರ್ಹವಾಗುತ್ತದೆ.

ದಿನಾಂಕ: 07.05.2026
ಸ್ಥಳ: ಬೆಂಗಳೂರು

ಸಹಿ/– (ರವೀಂದ್ರ ಬೆಳೆಯೂರ್) ಪರಿಹಾರ ವೃತ್ತಿಪರರು
Reg. No. IBBI/IPA-001/IP-P00189/2017-18/10368

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

1) ಸಂ.:ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಎಪಿಸಿಸಿ&ಪ್ರೊ)/ಕಾನಿಇಂ–ಪ್ರೊ3/ಸಕಾನಿಇಂ–7/ 2026–27/696–713 ದಿನಾಂಕ: 07.05.2026

ವಿಚಾರಣಾ ಸಂಖ್ಯೆ / ಕಾಮಗಾರಿಯ ವಿವರ
ಕವಿಪ್ರನಿನಿ/2026–27/ ಟಿಎಲ್/ವರ್ಕ್_ಇಂಡೆಂಟ್3700
ಸಂಯೋಜಿತ ಪ್ಯಾಕೇಜ್: ಕಾಮಗಾರಿ–ಎ: ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ 220ಕೆವಿ ಅಂಚೆಪಾಳ್ಯ ಉಪಕೇಂದ್ರದಿಂದ 66ಕೆವಿ ಅಂಚೆಪಾಳ್ಯ-66ಕೆವಿ ಯಡಿಯೂರು ಉಪಕೇಂದ್ರದವರೆಗೆ ಹಾಲಿ ಅಸ್ತಿತ್ವದಲ್ಲಿರುವ ಜೋಡಿ ಗೋಪುರಗಳುಳ್ಳ ತಿಪ್ಪೂರು ಉಪಕೇಂದ್ರಕ್ಕೆ ಒಳ ಮತ್ತು ಹೊರಹೋಗುವ 28.564ಕಿಮೀ ಉದ್ದದ ಒಂಟಿ ವಿದ್ಯುತ್ ಮಾರ್ಗದಲ್ಲಿನ ಮಾರ್ಗದ ವಾಹಕವನ್ನು ಬದಲಾಯಿಸಿ ಹೆಚ್‌ಟಿಎಲ್ಎಸ್ (ಹೆಚ್‌ಪಿಸಿ) ವಾಹಕವನ್ನು ಅಳವಡಿಸಿ ಮಾರ್ಗ ಬಲಪಡಿಸುವುದು ಹಾಗೂ 220ಕೆವಿ ಅಂಚೆಪಾಳ್ಯ ಮತ್ತು 66ಕೆವಿ ಯಡಿಯೂರು ಉಪಕೇಂದ್ರಗಳಲ್ಲಿ ತಲಾ ಒಂದು 66ಕೆವಿ ಬೇಗಳನ್ನು ನಿರ್ಮಿಸುವ ಕಾಮಗಾರಿಯ ಬಗ್ಗೆ. **ಕಾಮಗಾರಿ–ಬಿ:** ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 220 ಕೆವಿ ಯಾಚೇನಹಳ್ಳಿ ಉಪಕೇಂದ್ರದಿಂದ 66 ಕೆವಿ ಚನ್ನರಾಯಪಟ್ಟಣ ಉಪಕೇಂದ್ರಕ್ಕೆ (ಲೈನ್-1 ಮತ್ತು ಲೈನ್-2) ಸಂಪರ್ಕಕಲ್ಪಿಸುವ 4.791 ಕಿ.ಮೀ. ಉದ್ದದ 66ಕೆವಿ ಡಿಸಿ ಮಾರ್ಗದ ಕೊಯೋಟ್ ವಾಹಕವನ್ನು HTLS ವಾಕವಾಗಿ (ಡೇರ್ಕ್ ACSR ಗೆ ಸಮಾನವಾದ ಸಾಮರ್ಥ್ಯ) ಬದಲಾಯಿಸುವ ಕಾಮಗಾರಿ. **ಕಾಮಗಾರಿ–ಸಿ:** i) ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿಯ 220KV ಯಾಚೇನಹಳ್ಳಿ ಉಪಕೇಂದ್ರದಿಂದ ಶ್ರವಣಬೆಳಗೊಳ DC ಮಾರ್ಗದ ಡೈವರ್ಶನ್ ಟವರ್‌ವರೆಗೆ, ಹಾಲಿ ಇರುವ ಕೊಯೋಟ್ ವಾಹಕವನ್ನು HPC ವಾಹಕವಾಗಿ ಬದಲಾಯಿಸುವುದು. ಡೈವರ್ಶನ್ ಟವರ್‌ನಿಂದ 66kV ಶ್ರವಣಬೆಳಗೊಳ ಉಪಕೇಂದ್ರದವರೆಗೆ ಹಾಲಿ ಇರುವ SC ಟವರ್ ಮಾರ್ಗವನ್ನು 66kV ಎಂಸಿ ಟವರ್ ಮಾರ್ಗವಾಗಿ ಪರಿವರ್ತಿಸಿ ಅದರಲ್ಲಿ ಎರಡು ಸರ್ಕ್ಯೂಟ್‌ಗಳಿಗೆ HPC ವಾಹಕವನ್ನು ಮತ್ತು ಮಟ್ಟನವಿಲೆ ಉಪ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ 3ನೇ ಸರ್ಕ್ಯೂಟ್ ಅನ್ನು 66kV ಕೊಯೋಟ್ ವಾಹಕದಿಂದ ಅಳವಡಿಸುವ ಕಾಮಗಾರಿ. ii) ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ 66/11kV ಶ್ರವಣಬೆಳಗೊಳ ಉಪಕೇಂದ್ರದಲ್ಲಿ 2x12.5MVA, 66/11kV ವಿದ್ಯುತ್ ಪರಿವರ್ತಕಗಳನ್ನು 2x20MVA, 66/11kV ವಿದ್ಯುತ್ ಪರಿವರ್ತಕಗಳಿಂದ ಬದಲಾಯಿಸುವುದು ಮತ್ತು ಎರಡು ಸಂಖ್ಯೆಯ 66kV ಲೈನ್ ಟರ್ಮಿನಲ್ ಬೇ ನಿರ್ಮಾಣ ಹಾಗೂ ಅಸ್ತಿತ್ವದಲ್ಲಿರುವ ಸ್ಟಂಗ್ ಬಸ್ ಅನ್ನು ರಿಜಿಡ್ ಬಸ್ ಮೂಲಕ ಪರಿವರ್ತಿಸುವುದು. ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ ನಿರ್ಮಾಣ ಮಾಡುವುದು, ಎಲ್ಲಾ ಉಪಕರಣಗಳ / ಸಾಮಗ್ರಿಗಳ ಸರಬರಾಜು ಮತ್ತು ಸ್ಥಾಪನೆ, (ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು ಮತ್ತು ಪ್ರಸ್ತುತ ಮಾರ್ಗದಿಂದ ಕಳಚುವ ಸಾಮಗ್ರಿಗಳನ್ನು ಬಿಡ್ಡುದಾರರು ಖರೀದಿಸುವುದು (buy back of released materials from existing line).

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

2) ಸಂ.:ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಎಪಿಸಿಸಿ&ಪ್ರೊ)/ಕಾನಿಇಂ–ಪ್ರೊ3/ಸಕಾನಿಇಂ–7/ 2026–27/714–729 ದಿನಾಂಕ: 07.05.2026

ಕವಿಪ್ರನಿನಿ/2026–27/ಟಿಎಲ್/ವರ್ಕ್_ಇಂಡೆಂಟ್3699
ಕವಿಪ್ರನಿನಿ ಬಾಗಲಕೋಟೆ ಕಾರ್ಯಾಚರಣೆ ವಿಭಾಗದ ವ್ಯಾಪ್ತಿಯಲ್ಲಿ ಅಪಾಯ ಉಂಟಾಗುವ ಸಾಧ್ಯತೆಯಿರುವ, ಇಳಕಲ್ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆಟದ ಮೈದಾನದ ಮೇಲೆ ಹಾದುಹೋಗಿರುವ 110 ಕೆವಿ ಡಿಸಿ ಇಳಕಲ್ - ಕುಷ್ಟಗಿ 1&2 ಮತ್ತು 110 ಕೆವಿ ಮಲ್ಟಿ ಸರ್ಕ್ಯೂಟ್ ಇಳಕಲ್- ಹುನಗುಂದ 1&2 ಲೈನ್‌ಗಳ ಸ್ಥಳಾಂತರ ಮತ್ತು ಮರುಮಾರ್ಗೀಕರಣದ ಕಾಮಗಾರಿ. ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ ನಿರ್ಮಾಣ ಮಾಡುವುದು, ಎಲ್ಲಾ ಉಪಕರಣಗಳ/ ಸಾಮಗ್ರಿಗಳ ಸರಬರಾಜು ಮತ್ತು ಸ್ಥಾಪನೆ, (ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು ಮತ್ತು ಪ್ರಸ್ತುತ ಮಾರ್ಗದಿಂದ ಕಳಚುವ ಸಾಮಗ್ರಿಗಳನ್ನು ಬಿಡ್ಡುದಾರರು ಖರೀದಿಸುವುದು (buy back of released materials from existing line).

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ **"ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ"** ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 11.05.2026 ರಂದು** ಅಥವಾ ನಂತರದಿಂದ ಪಡೆಯಬಹುದು. **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/–, ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಕವಿಪ್ರನಿನಿ, ನಿಗಮ ಕಛೇರಿ, 11ನೇ ಮಹಡಿ, ಇಂಧನ ಭವನ, ಆನಂದರಾವ್ ವೃತ್ತ, ಬೆಂಗಳೂರು-560009

ಬನ್ನೇರುಘಟ್ಟ: ಜಿರಾಫ್ ಸಾವು

ಶಿವಾನಿ

ಬನ್ನೇರುಘಟ್ಟ(ಆನೇಕಲ್): ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಗುರುವಾರ ಮೂರು ವರ್ಷದ ಹೆಣ್ಣು ಜಿರಾಫ್ ಶಿವಾನಿ ಅನಾರೋಗ್ಯದಿಂದ ಮೃತಪಟ್ಟಿದೆ.

ಫೆ.27ರಂದು ಮೈಸೂರಿನ ಚಾಮರಾಜೇಂದ್ರ ಮೃಗಾಲಯದಿಂದ ಈ ಜಿರಾಫ್ ಅನ್ನು ಬನ್ನೇರುಘಟ್ಟಕ್ಕೆ ಸ್ಥಳಾಂತರಿಸಲಾಗಿತ್ತು. ಮೇ 3ರಿಂದ ಆಹಾರ ಸೇವನೆ ನಿಲ್ಲಿಸಿತ್ತು. ಮೃಗಾಲಯದ ವೈದ್ಯರು ನೀಡಿದ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದೆ.

ಜಿರಾಫ್ ಸಾವಿಗೆ ಕರುಳಿನ ಒಂದು ಭಾಗ ತಿರುಚಿಕೊಂಡಿದ್ದು (ಸೀಕಲ್ ಟಾರ್ಷನ್) ಕಾರಣ ಎಂದು ಮರಣೋತ್ತರ ಪರೀಕ್ಷೆ ವರದಿ ದೃಢಪಡಿಸಿದೆ ಎಂದು ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

ಜಿರಾಫ್ ಅಂಗಾಂಗಗಳ ಮಾದರಿಯನ್ನು ಹೆಚ್ಚಿನ ಪರೀಕ್ಷೆಗಾಗಿ ಪಶುವೈದ್ಯಕೀಯ ಜೈವಿಕ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ ಎಂದು ಉದ್ಯಾನದ ಪ್ರಕಟಣೆ ತಿಳಿಸಿದೆ.

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ನೇರ ಸಂದರ್ಶನ – ಎನ್ಐಎಎನ್‌ಪಿ/ಎಡಿವಿ–05–ಸಿಡಿಎನ್/2026
ಒಂದು ವರ್ಷದ ಅವಧಿಗೆ ತಾತ್ಕಾಲಿಕ ಆಧಾರದ ಮೇರೆಗೆ ಸಿಎಲ್ಎಆರ್ (ಅನಿಮಲ್ ಹೌಸ್) ಅಡಿಯಲ್ಲಿ ಯಂಗ್ ಪ್ರೊಫೆಷನಲ್–II ಆಯ್ಕೆಗಾಗಿ (ಮಾಸಿಕ ಕ್ರೋಢಿಕೃತ ರೂ. 42,000/–) 15.05.2026 (ಶುಕ್ರವಾರ) ರಂದು ಬೆಳಗ್ಗೆ 10:30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ.

ನೇರ ಸಂದರ್ಶನ – ಎನ್ಐಎಎನ್‌ಪಿ/ಎಡಿವಿ–04–ಸಿಡಿಎನ್/2026
ಒಂದು ವರ್ಷದ ಅವಧಿಗೆ ತಾತ್ಕಾಲಿಕ ಆಧಾರದ ಮೇರೆಗೆ ಯಂಗ್ ಪ್ರೊಫೆಷನಲ್–I ಆಯ್ಕೆಗಾಗಿ (ಮಾಸಿಕ ಕ್ರೋಢಿಕೃತ ರೂ.30,000/–) 18.05.2026 (ಸೋಮವಾರ) ರಂದು ಬೆಳಗ್ಗೆ 10:30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ.
ವಿವರವಾದ ಜಾಹೀರಾತು ಪರಿಶೀಲಿಸಲು, ದಯವಿಟ್ಟು ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/– ಆಡಳಿತಾಧಿಕಾರಿ

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಕೋಲಾರ ಡೇರಿ, ಎನ್.ಎಚ್–75, ಹುತ್ತೂರು ಅಂಚೆ, ಕೋಲಾರ–563102
IFT No.: ಕೋ.ಹಾ.ಒ:ಇಂಜಿ–ಸಿವಿಲ್:00204:807:2026–27 ದಿ: 02.05.2026

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮರು ಟೆಂಡರ್ ಪ್ರಕಟಣೆ
ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಕೆಪಿಡಬ್ಲ್ಯೂಡಿ: ಸಿಪಿಡಬ್ಲ್ಯೂಡಿ: ಎಂ.ಇ.ಎಸ್ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸಿವಿಲ್ ಕೆಲಸಕ್ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ವೆಬ್‌ಸೈಟ್ www.kppp.karnataka.gov.in ಮೂಲಕ ಬಿಡ್ಡನ್ನು ಸಲ್ಲಿಸಬಹುದಾಗಿದೆ.

ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. (ತೆರಿಗೆ ಹೊರೆತು ಪಡಿಸಿ)	ಇ.ಎಂ.ಡಿ ರೂ.	ಮುಕ್ತಾಯದ ಅವಧಿ (ಮಳೆ ಕಾಲ ಸೇರಿ)	ಗುತ್ತಿಗೆದಾರರ ದರ್ಜೆ
Development of lawn and other beautification works in MVK Golden dairy premises.	47.63 Lakhs	95,260.00	03 Calendar months (including rainy season)	Class - 03 & above

1. ಟೆಂಡರ್ ಷೆಡ್ಯೂಲ್‌ಗಳನ್ನು ದಿನಾಂಕ: 29.04.2026 ರಿಂದ 12.05.2026ರ ಸಂಜೆ 5.00 ಘಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2. ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕವು 12.05.2026ರ ಸಂಜೆ 5.00 ಘಂಟೆಯಾಗಿರುತ್ತದೆ.
3. ಟೆಂಡರ್‌ಗೆ ಸಂಬಂಧಿಸಿದ ಪ್ರಶ್ನೆಗಳನ್ನು ಒಕ್ಕೂಟದ ಅಧಿಕೃತ ಮಿಂಚಂಚೆ komulmd@gmail.com & komulcivil@gmail.com ಗಳಿಗೆ ದಿನಾಂಕ: 07.05.2026ರ ಬೆಳಗ್ಗೆ 11.00 ಘಂಟೆಯ ಒಳಗೆ ರವಾನಿಸುವುದು.
4. ಟೆಂಡರಿನ ತಾಂತ್ರಿಕ ಭಾಗವನ್ನು ದಿನಾಂಕ: 14.05.2026 ರ ಬೆಳಗ್ಗೆ 11.00 ಘಂಟೆಯ ನಂತರ ತೆರೆಯಲಾಗುವುದು.
5. ತಾಂತ್ರಿಕ ಭಾಗದಲ್ಲಿ ಯಶಸ್ವಿಯಾದ ಟೆಂಡರ್‌ದಾರರಿಗೆ ವಾಣಿಜ್ಯ ಬಿಡ್‌ಅನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಕೋಲಾರ ಹಾಲು ಒಕ್ಕೂಟದ ಪರವಾಗಿ
ವ್ಯವಸ್ಥಾಪಕ ನಿರ್ದೇಶಕರು

₹2 ಕೋಟಿ ದೋಚಿದ ವಂಚಕರು

ಡಿಜಿಟಲ್ ಅರೆಸ್ಟ್: 78 ವರ್ಷದ ವೃದ್ಧೆ ಹಾಗೂ ಅವರ ಪುತ್ರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಜಯನಗರದಲ್ಲಿ ನೆಲಸಿರುವ 78 ವರ್ಷದ ವೃದ್ಧೆ ಹಾಗೂ ಅವರ ಪುತ್ರಿಯಿಂದ ಸೈಬರ್ ವಂಚಕರು ₹2.1 ಕೋಟಿ ದೋಚಿದ್ದಾರೆ.

ಏಪ್ರಿಲ್ 13ರಂದು ವಾಟ್ಸ್‌ಆ್ಯಪ್ ಮೂಲಕ ಕರೆ ಮಾಡಿ ವಂಚಕರು ಬೆದರಿಸಿದ್ದರು. 'ನಿಷೇಧಿತ ಪಿಎಫ್‌ಐ ಸಂಘಟನೆ ಸದಸ್ಯನೊಬ್ಬ ತಮ್ಮ ಹೆಸರಿನಲ್ಲಿ ಡೆಬಿಟ್ ಕಾರ್ಡ್ ಬಳಸುತ್ತಿದ್ದಾನೆ. ನಿಮ್ಮ ಪುತ್ರಿಯೂ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾಳೆ' ಎಂಬುದಾಗಿಯೂ ವಂಚಕರು ಹೆದರಿಸಿದ್ದರು. ಅಲ್ಲದೇ, ಎನ್‌ಐಎ ಅಧಿಕಾರಿಗಳ ಸೋಗಿನಲ್ಲಿ ವಂಚನೆ ನಡೆಸಿದ್ದಾರೆ.

'ಕರೆ ಮಾಡಿರುವುದನ್ನೂ ಯಾರಿಗೂ ತಿಳಿಸಬಾರದೆಂದು ಸೂಚಿಸಿದ್ದ ವಂಚಕರು, ವೃದ್ಧೆ ಹಾಗೂ ಅವರ ಮಕ್ಕಳಿಂದ ಎಲ್ಲ ದಾಖಲೆಗಳನ್ನೂ ಪಡೆದುಕೊಂಡಿದ್ದರು. ಪೊಲೀಸ್ ಠಾಣೆಯಂತೆ ಕಾಣುವ ಕೊಠಡಿಯಿಂದ ಆರೋಪಿಗಳು ವಿಡಿಯೊ ಕರೆ ಮಾಡಿದ್ದರು. ಈ ವಿಡಿಯೊ ಕರೆಯನ್ನು ವೀಕ್ಷಿಸಿದ ವೃದ್ಧೆ, ಎನ್‌ಐಎ ಅಧಿಕಾರಿಗಳೇ ಇರಬಹುದು ಎಂದು ಭಾವಿಸಿದ್ದರು. ಸ್ವವಿವರವನ್ನು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ವಿಡಿಯೊ ಕರೆ ಮಾಡಿದ್ದ ಆರೋಪಿ ಪ್ರದೀಪ್ ಜಸ್ವಾಲ್ ಎಂದು ತನ್ನನ್ನು ಪರಿಚಯಿಸಿಕೊಂಡಿದ್ದ. ಹೇಳಿಕೆ ದಾಖಲಿಸಿಕೊಳ್ಳುವಂತೆ ನಾಟಕವಾಡಿದ್ದ. ಸರಿಯಾದ ಮಾಹಿತಿ ನೀಡದಿದ್ದರೆ ಬಂಧಿಸಲಾಗುವುದೆಂದು ಬೆದರಿಕೆ ಒಡ್ಡಿದ್ದ' ಎಂದು ಮೂಲಗಳು ಹೇಳಿವೆ.

'ಬ್ಯಾಂಕ್ ವ್ಯವಹಾರದ ಪರಿಶೀಲನೆ ನಡೆಸಬೇಕು. ತಮ್ಮ ಖಾತೆಯಲ್ಲಿ ಇರುವ ಎಲ್ಲ ಹಣವನ್ನು ವರ್ಗಾವಣೆ ಮಾಡುವಂತೆ ಸೂಚಿಸಿ, ಕೆಲವು ಖಾತೆಗಳ ವಿವರವನ್ನು ನೀಡಿದ್ದ. ಆರ್‌ಬಿಐ ಮಾರ್ಗಸೂಚಿಯಂತೆ ಪರಿಶೀಲನೆ ಬಳಿಕ ಹಣ ಮರಳಿ ನೀಡಲಾಗುವುದು ಎಂದು ನಂಬಿಸಿದ್ದ. ವಂಚಕನ ಮಾತು ನಂಬಿದ ವೃದ್ಧೆ, ಹಂತ ಹಂತವಾಗಿ ಹಣ ವರ್ಗಾವಣೆ ಮಾಡಿದ್ದರು. ಅಲ್ಲದೇ ಚಿನ್ನವನ್ನು ಅಡಮಾನವಿಟ್ಟು ಸಾಲ ಪಡೆದು, ಆ ಹಣವನ್ನೂ ವರ್ಗಾವಣೆ ಮಾಡಿದ್ದರು. ಏಪ್ರಿಲ್ 15ರಿಂದ 23ರ ವರೆಗೆ ಒಟ್ಟು ₹2.1 ಕೋಟಿ ಹಣವನ್ನು ವರ್ಗಾವಣೆ ಮಾಡಿ ಕಳೆದುಕೊಂಡಿದ್ದಾರೆ' ಎಂದು ಸೈಬರ್ ಠಾಣೆಯ ಮೂಲಗಳು ತಿಳಿಸಿವೆ.

ಲೈಂಗಿಕ ಕಿರುಕುಳ: ಆರೋಪಿ ಸೆರೆ

ಅಪರಾಧ ಸುದ್ದಿ

ಬಹರೇನ್‌ನಿಂದ ಬೆಂಗಳೂರಿಗೆ ವಿಮಾನದಲ್ಲಿ ಬರುವಾಗ ಗಗನಸಖಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದ ಅಡಿ ಕೇರಳದ ಪ್ರಯಾಣಿಕನನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸರು ಬಂಧಿಸಿದ್ದಾರೆ.

24 ವರ್ಷದ ವಿದೇಶಿ ಮಹಿಳೆ ನೀಡಿದ ದೂರಿನ ಮೇರೆಗೆ ಜಾಕೋಬ್ ಅಲೆಕ್ಸಾಂಡರ್ ಎಂಬಾತನನ್ನು ಬಂಧಿಸಲಾಗಿದೆ.

ಮೇ 4ರಂದು ಗಲ್ಫ್ ಏರ್ ವಿಮಾನದಲ್ಲಿ ಬಹರೇನ್‌ನಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುವಾಗ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದರು.

'ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಆರೋಪಿ, ಸೊಂಟ ಮುಟ್ಟಲು ಯತ್ನಿಸಿದ್ದ. ಈ ಬಗ್ಗೆ ನಮ್ಮ ಕ್ಯಾಪ್ಟನ್‌ಗೆ ಮಾಹಿತಿ ನೀಡಲಾಗಿತ್ತು. ಅವರು ವಿಚಾರಿಸಿದಾಗ ಆರೋಪಿ ಅತಿರೇಕವಾಗಿ ವರ್ತನೆ ತೋರಿಸಿದ್ದ' ಎಂದು ಗಗನಸಖಿ ದೂರಿನಲ್ಲಿ ಉಲ್ಲೇಖಿಸಿದ್ದರು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

ರೋಗಿಯ ಆಭರಣ ಕಳ್ಳತನ: ಆಸ್ಪತ್ರೆ ಸಿಬ್ಬಂದಿ ವಶ

ಬೆಂಗಳೂರು: ಶಸ್ತ್ರಚಿಕಿತ್ಸೆಗೆಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಯ ಚಿನ್ನಾಭರಣ ಕಳವು ಮಾಡಿದ್ದ ಆಸ್ಪತ್ರೆಯೊಂದರ ಮಹಿಳಾ ಸಿಬ್ಬಂದಿಯನ್ನು ಹೆಣ್ಣೂರು ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹೆಣ್ಣೂರು–ಬಾಗಲೂರು ಮುಖ್ಯರಸ್ತೆಯಲ್ಲಿರುವ ಆಸ್ಪತ್ರೆಯ 36 ವರ್ಷದ ಮಹಿಳಾ ಸಿಬ್ಬಂದಿಯನ್ನು ವಶಕ್ಕೆ ಪಡೆಯಲಾಗಿದೆ. ಮೇ 1ರಂದು ಆಸ್ಪತ್ರೆಗೆ ದಾಖಲಾಗಿದ್ದ ಸ್ವಪ್ನಾ ಎಂಬವರ ₹9.68 ಲಕ್ಷ ಮೌಲ್ಯದ ಚಿನ್ನಾಭರಣ ಕಳವಾಗಿತ್ತು. ಸ್ವಪ್ನಾ ಅವರ ಪತಿ ಶ್ರೀನಿವಾಸ್ ನೀಡಿದ ದೂರಿನ ಮೇಲೆ ಸಿಬ್ಬಂದಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಮೇ 2ರ ಬೆಳಿಗ್ಗೆ ಶಸ್ತ್ರಚಿಕಿತ್ಸಾ ಕೊಠಡಿಗೆ ಕರೆದೊಯ್ಯುವ ಮೊದಲು ನರ್ಸಿಂಗ್ ಸಿಬ್ಬಂದಿ ಎಲ್ಲಾ ಆಭರಣಗಳನ್ನು ತೆಗೆಯುವಂತೆ ಸೂಚಿಸಿದ್ದರು. ಬಳಿಕ, ಮಹಿಳೆ 65 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ, 9 ಗ್ರಾಂ ತೂಕದ ಕಿವಿಯೋಲೆಗಳು ಹಾಗೂ 10 ಗ್ರಾಂ ತೂಕದ ಬೆಳ್ಳಿ ಕಾಲುಗೆಜ್ಜೆಗಳನ್ನು ಹ್ಯಾಂಡ್‌ಬ್ಯಾಗ್‌ನಲ್ಲಿ ಇಟ್ಟು ವಾರ್ಡ್‌ನ ಕಪಾಟಿನೊಳಗೆ ಇರಿಸಿದ್ದರು. ಶಸ್ತ್ರಚಿಕಿತ್ಸೆ ಬಳಿಕ ಕಪಾಟು ಪರಿಶೀಲಿಸಿದಾಗ ಆಭರಣಗಳು ಇರಲಿಲ್ಲ. ಬಳಿಕ ಆಸ್ಪತ್ರೆಯ ಸಿಬ್ಬಂದಿಯನ್ನು ವಿಚಾರಿಸಿದಾಗ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಆಸ್ಪತ್ರೆಯ ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯ ಗಮನಿಸಿ, ಇತ್ತೀಚೆಗೆ ಆಸ್ಪತ್ರೆಗೆ ಸೇರಿದ್ದ ಮಹಿಳಾ ಸಿಬ್ಬಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ವಿಚಾರಣೆ ವೇಳೆ ಆಭರಣ ತೆಗೆದುಕೊಂಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಆಭರಣವನ್ನು ಬೇರೆಡೆ ಅಡಮಾನ ಇಟ್ಟಿರುವುದಾಗಿ ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿಚಾರಣೆ ವೇಳೆ ಕೀಲಿ ನುಂಗಿ ಆತ್ಮಹತ್ಯೆಗೆ ಯತ್ನಿಸಿದ್ದ ಆರೋಪಿ

ಬೆಂಗಳೂರು: ಠಾಣೆಯಲ್ಲಿ ಕೀಲಿ ನುಂಗಿ ಆತ್ಮಹತ್ಯೆಗೆ ಯತ್ನಿಸಿದ್ದ ಆರೋಪಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆಯ ಜತೆಗೆ 10 ಕೆ.ಜಿ ಬಾಳೆಹಣ್ಣು ತಿನ್ನಿಸಿ ಕೀಲಿ ತೆಗೆಸುವಲ್ಲಿ ಪೊಲೀಸರು ಯಶಸ್ವಿಯಾಗಿರುವ ಘಟನೆ ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬಳ್ಳಾರಿಯ ಕಾರ್ತಿಕ್ ಅಲಿಯಾಸ್ ರಾಮು (24) ಆತ್ಮಹತ್ಯೆಗೆ ಯತ್ನಿಸಿದ್ದ ವ್ಯಕ್ತಿ. ರಾಮು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಏ.24ರಂದು 17 ವರ್ಷದ ಯುವತಿಯನ್ನು ಕರೆದೊಯ್ದಿದ್ದ ಆರೋಪದ ಮೇಲೆ ಕಾರ್ತಿಕ್ ವಿರುದ್ಧ ಪ್ರಕರಣ ದಾಖಲಾಗಿತ್ತು.

ಕಾರ್ತಿಕ್ ಬಾಲಕಿಯನ್ನು ಕರೆದೊಯ್ದ ಬಗ್ಗೆ ಮಾಹಿತಿ ಸಂಗ್ರಹಿಸಿ ಆತನನ್ನು ವಶಕ್ಕೆ ಪಡೆದ ಪೊಲೀಸರು ಠಾಣೆಗೆ ಕರೆತಂದಿದ್ದರು. ನಂತರ ಈತನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿ ವಿಚಾರಣೆ ಕೈಗೊಂಡಿದ್ದರು. ವಿಚಾರಣೆ ವೇಳೆ ಆರೋಪಿ ಕೀಲಿ ನುಂಗಿದ್ದ.

ಸತತ ಮೂರು ದಿನ ಆತನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಅಲ್ಲದೆ, ಆ ಮೂರು ದಿನ ಬರೋಬ್ಬರಿ 10 ಕೆ.ಜಿ ಬಾಳೆಹಣ್ಣು ತಿನ್ನಿಸಲಾಗಿದೆ. ಆರೋಪಿ ಶೌಚಕ್ಕೆ ಹೋಗಿದ್ದಾಗ, ಕೀ ಹೊರಕ್ಕೆ ಬಂದಿದ್ದು ಪೊಲೀಸರು ನಿಟ್ಟುಸಿರು ಬಿಟ್ಟಿದ್ದಾರೆ. ಆರೋಪಿ ಮೇಲೆ ಸರ್ಕಾರಿ ನೌಕರರಿಗೆ ಆತಂಕ ಸೃಷ್ಟಿಸಿದ ಆರೋಪದ ಮೇರೆಗೆ ಇತರೆ ಸೆಕ್ಷನ್‌ಗಳನ್ನು ವಿಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು. ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾರ್ಖಂಡ್ ಯುವತಿಯ ಸಾವಿಗೆ ಕಾರಣ ನಿಗೂಢ

ಎಫ್ಎಸ್ಎಲ್‌ಗೆ ಮಾದರಿ ರವಾನೆ

ಪ್ರಜಾವಾಣಿ ವಾರ್ತೆ

ಪೂಜಾ ದತ್ತಾ

ಬೆಂಗಳೂರು: ಆಡುಗೋಡಿಯ ಬಾಡಿಗೆ ಮನೆಯಲ್ಲಿ ಜಾರ್ಖಂಡ್‌ನ ಪೂಜಾ ದತ್ತಾ (34) ಎಂಬ ಯುವತಿಯ ಅನುಮಾನಾಸ್ಪದ ಸಾವಿನ ಕಾರಣ ಇನ್ನೂ ನಿಗೂಢವಾಗಿದೆ. ಮರಣೋತ್ತರ ಪರೀಕ್ಷೆ ವರದಿಯಲ್ಲೂ ಇನ್ನೂ ಸ್ಪಷ್ಟವಾದ ಕಾರಣ ಪತ್ತೆಯಾಗಿಲ್ಲ.

ಹೊಸೂರು ರಸ್ತೆಯಲ್ಲಿ ಇರುವ ಸಾಫ್ಟ್‌ವೇರ್ ಕಂಪನಿಯಲ್ಲಿ ಪೂಜಾ ದತ್ತಾ ಕೆಲಸ ಮಾಡುತ್ತಿದ್ದರು. ಆಡುಗೋಡಿ ಬಳಿಯ ಮುನಿಕೃಷ್ಣಪ್ಪ ಲೇಔಟ್‌ನ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಕೆಲವು ತಿಂಗಳಿಂದ ಕೆಲಸಕ್ಕೆ ಹೋಗದೇ ಮನೆಯಲ್ಲಿ ಇದ್ದವರು, ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಏಪ್ರಿಲ್ 27ರಂದು ಮನೆಯಿಂದ ದುರ್ನಾತ ಬರುತ್ತಿರುವುದನ್ನು ಗಮನಿಸಿದ್ದ ಮನೆಯ ಮಾಲೀಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಬಂದು ಬಾಗಿಲು ಒಡೆದು ಪರಿಶೀಲನೆ ನಡೆಸಿದಾಗ ಅರೆನಗ್ನ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿತ್ತು ಎಂದು ಮೂಲಗಳು ಹೇಳಿವೆ.

ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಪೂಜಾ ದತ್ತಾ ಸಾವಿನ ಬಗ್ಗೆ ಸ್ಪಷ್ಟತೆ ಸಿಕ್ಕಿಲ್ಲ. ಪೂಜಾ ಅವರದ್ದು ಆತ್ಮಹತ್ಯೆಯೇ ಅಥವಾ ಅನಾರೋಗ್ಯದಿಂದ ನಿಧನರಾಗಿದ್ದಾರೆಯೇ ಎಂಬುದು ತಿಳಿದುಬಂದಿಲ್ಲ. ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ನಿಖರ ಮಾಹಿತಿ ದೊರೆಯದ ಕಾರಣ, ದೇಹದ ಮಾದರಿಗಳನ್ನು ಎಫ್ಎಸ್ಎಲ್ (ವಿಧಿ ವಿಜ್ಞಾನ ಪ್ರಯೋಗಾಲಯ) ರವಾನೆ ಮಾಡಲಾಗಿದೆ. ಎಫ್ಎಸ್ಎಲ್ ವರದಿ ಬಂದ ಬಳಿಕ ಸಾವಿಗೆ ಕಾರಣ ಗೊತ್ತಾಗಲಿದೆ ಎಂದು ಮೂಲಗಳು ಹೇಳಿವೆ.

ಪೂಜಾ ಮೂರು ತಿಂಗಳಿನಿಂದ ಹೊರಗಡೆ ಅಷ್ಟಾಗಿ ಓಡಾಟ ನಡೆಸುತ್ತಿರಲಿಲ್ಲ. ಕೆಲಸಕ್ಕೂ ಹೋಗದೇ ಮನೆಯ ಖರ್ಚು ಹೇಗೆ ನಿಭಾಯಿಸುತ್ತಿದ್ದರು ಎಂಬ ಸಂದೇಹವಿದೆ. ಹಣದ ಮೂಲದ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ಬ್ಯಾಂಕ್ ಖಾತೆಗಳ ವಿವರ ಪಡೆದು, ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

'ಪೂಜಾ, ಯುವಕನೊಬ್ಬನನ್ನು ಪ್ರೀತಿಸುತ್ತಿದ್ದರು. ಆ ಯುವಕ ಆಗಾಗ್ಗೆ ಪೂಜಾರ ಮನೆಗೆ ಬಂದು ಹೋಗುತ್ತಿದ್ದ ಎಂದು ನೆರೆಹೊರೆಯವರ ವಿಚಾರಣೆಯಿಂದ ಗೊತ್ತಾಗಿತ್ತು. ಆ ಯುವಕನನ್ನು ವಿಚಾರಣೆ ನಡೆಸಲಾಗಿದೆ' ಎಂದು ಮೂಲಗಳು ಹೇಳಿವೆ.

'ಪೂಜಾಗೆ ದಿನಚರಿ ಬರೆಯುವ ಹವ್ಯಾಸ ಹೊಂದಿದ್ದರು. ದೈನಂದಿನ ಖರ್ಚು–ವೆಚ್ಚ, ವ್ಯಕ್ತಿಗಳ ಭೇಟಿ, ಕಚೇರಿಯ ಕಾರ್ಯ ಚಟುವಟಿಕೆಗಳು ಸೇರಿದಂತೆ ಎಲ್ಲಾ ಸಂಗತಿಗಳನ್ನು ಡೈರಿಯಲ್ಲಿ ಬರೆದಿದ್ದಾರೆ. ಡೈರಿಗಳನ್ನು ವಶಕ್ಕೆ ಪಡೆದುಕೊಂಡು ಪರಿಶೀಲನೆ ನಡೆಸಲಾಗಿದೆ. ಅದರಲ್ಲೂ ಮಹತ್ವದ ವಿಚಾರಗಳು ಸಿಕ್ಕಿಲ್ಲ' ಎಂದು ಮೂಲಗಳು ಹೇಳಿವೆ.

ಪ್ರತಿಭಾ ಪುರಸ್ಕಾರ: ಅರ್ಜಿ ಆಹ್ವಾನ

ರಾಜರಾಜೇಶ್ವರಿನಗರ: ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಯಲ್ಲಿ 90ಕ್ಕಿಂತಲೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಉಡುಗೊರೆ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳ ಪೋಷಕರು ಯಶವಂತಪುರ ಕ್ಷೇತ್ರದ ನಿವಾಸಿಗಳಾಗಿರಬೇಕು. ಸರ್ಕಾರಿ ಮತ್ತು ಖಾಸಗಿ ಕಾಲೇಜು ವಿದ್ಯಾರ್ಥಿಗಳು, ಸ್ಟೇಟ್, ಸಿಬಿಎಸ್‌ಇ, ಐಸಿಎಸ್‌ಇ ವಿದ್ಯಾರ್ಥಿಗಳು ತಮ್ಮ ಪ್ರಥಮ ಯತ್ನದಲ್ಲೇ 90ಕ್ಕಿಂತಲೂ ಹೆಚ್ಚಿನ ಅಂಕ ಪಡೆದಿರಬೇಕು. ಅಂಕಪಟ್ಟಿ, ಆಧಾರ್ ಕಾರ್ಡ್ ಅನ್ನು ಶಾಲಾ ಮುಖ್ಯಶಿಕ್ಷಕರು ಅಥವಾ ಪ್ರಾಂಶುಪಾಲರಿಂದ ದೃಢೀಕರಿಸಬೇಕು.

ಶಾಸಕ ಎಸ್.ಟಿ.ಸೋಮಶೇಖರ್ ಅವರು ವೈಯಕ್ತಿಕವಾಗಿ ಪ್ರತಿಭಾ ಪುರಸ್ಕಾರ ನೀಡುತ್ತಿದ್ದಾರೆ. ಅರ್ಜಿಗಳನ್ನು ಯಶವಂತಪುರ ಕ್ಷೇತ್ರದ ಶಾಸಕರ ಕಚೇರಿ ಬಿ.ಇ.ಎಲ್ (ಭಾರತ್ ನಗರ) 1ನೇ ಹಂತ, ಮಾಗಡಿ ರಸ್ತೆ, ಹೇರೋಹಳ್ಳಿ ಇಲ್ಲಿ ಪಡೆದು, ಮೇ 10ರೊಳಗೆ ಸಲ್ಲಿಸಬೇಕು. ಮಾಹಿತಿಗೆ 9187633911 /9686589494 ಸಂಪರ್ಕಿಸಬಹುದು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
ಅರಮನೆ ರಸ್ತೆ, ಬೆಂಗಳೂರು – 560001. Email:mcublr@gmail.com

ಪದವಿ ಪ್ರವೇಶಾತಿ ಅಧಿಸೂಚನೆ 2026–27
Notification No: MCU/AS1-070/02/2025-26 Date:05.05.2026

ಲಭ್ಯವಿರುವ ಪದವಿ ಕೋರ್ಸುಗಳು

B.A Bachelor of Arts	• HEOK, HEOE, HEP, HES, HEM, HET, PsySP, PsyJOE, PSOK, PSOE, JOKOE, TOKOE, SEP, PSM, JPsyM, PsyES.		
B.Com.	B.Com (Business Analytics)	B.B.A	BTTM
B.Sc Bachelor of Science	• PCM, PME, PMSt, PMCs, EMCs, CsMSt, CBZ, CBMi, CBBt, CZBt, BiSBt, BiSMi, BiBZ, BiZMi, BZP, BZS, CZMi.		
B.C.A., Bachelor of Computer Applications	B.C.A., (Data Science)	B.C.A., (Artificial Intelligence and Machine Learning)	
B.Sc., Data Science	B.Sc., Artificial Intelligence		
B.Sc., (Composite Home Science)	B.Sc., (Early Childhood Education & Inclusive Education)		
B.Sc., (Food Science and Nutrition)	B.Sc., (Fashion and Apparel Design)	B.Sc., (Interior Design and Decoration)	

ಮಹಿಳೆಯರು ಮಾತ್ರ ಅರ್ಜಿ ಸಲ್ಲಿಸಬಹುದು
ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ UUCMSನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅರ್ಜಿ ಸಲ್ಲಿಸಬೇಕು. ಒಬ್ಬ ಅಭ್ಯರ್ಥಿಯು ತಾನು ಅರ್ಹತೆ ಹೊಂದಿರುವ ಒಂದಕ್ಕಿಂತ ಹೆಚ್ಚು ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ, ಸಂಪರ್ಕಿಸಿ Email ID:mcublr@gmail.com. Landline: 6362446600
ಡಿಐಪಿಆರ್/ಸಿಪಿ/553/ಸಿಎಲ್/2026–27

ಸಾರ್ವಜನಿಕ ಪ್ರಕಟಣೆ
ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ಐಟಂ ನಂ. 1 ರಿಂದ 4 ರಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಕೆಳಕಂಡ ಷೆಡ್ಯೂಲಿನಲ್ಲಿ ಕ್ರಮವಾಗಿ ಕಾಣಿಸಿರುವ ಮಾಲೀಕರಿಂದ ಜಂಟಿಯಾಗಿ ಅಭಿವೃದ್ಧಿ ಪಡಿಸಲು ಇಚ್ಚಿಸಿರುತ್ತಾರೆ. ಷೆಡ್ಯುಲ್ ಸ್ವತ್ತುಗಳು ಸದರಿ ಕೆಳಕಂಡ ಮಾಲೀಕರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಅಭಿವೃದ್ಧಿಪಡಿಸುವ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.
ಸದರಿ ಷೆಡ್ಯುಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 7 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು, ಸದರಿ ಕೆಳಕಂಡ ಮಾಲೀಕರ ಮಾಲೀಕತ್ವಕ್ಕೆ ಮತ್ತು ಸದರಿ ಅಭಿವೃದ್ಧಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯುಲ್ ಸ್ವತ್ತಿನ ಅಭಿವೃದ್ಧಿಗೆ ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾನ ಹೋಬಳಿ, ದೊಡ್ಡಚೀಮನಹಳ್ಳಿ ಗ್ರಾಮದಲ್ಲಿರುವ ಒಟ್ಟು ವಿಸ್ತೀರ್ಣ 5 ಎಕರೆ 23 ಗುಂಟೆ ಉಳ್ಳ ಈ ಕೆಳಗೆ ವಿವರಿಸಿರುವ ಸ್ಥಿರ ಸ್ವತ್ತುಗಳು :

ನಂ.	ಸರ್ವೆ ನಂ.	ವಿಸ್ತೀರ್ಣ (ಎ =ಗು)	ಮಾಲೀಕರ ಹೆಸರು	ಚಕ್ಕುಬಂದಿ: ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
01.	6/3	10 ಗುಂಟೆ	ಶ್ರೀ ನಾರಾಯಣಸ್ವಾಮಿ ರವರ ಪತ್ನಿ ಶ್ರೀಮತಿ. ನೀಲಮ್ಮ	ಸರ್ವೆ ನಂ. 7/4 ಮತ್ತು 7/3 ರ ಜಮೀನುಗಳು	ಸರ್ವೆ ನಂ. 4/1 ಮತ್ತು 4/2 ರ ಜಮೀನುಗಳು	ಕೆಳಗೆ ಐಟಂ ನಂ. 2 ರಲ್ಲಿ ವಿವರಿಸಿರುವ ಜಮೀನು	ಸರ್ವೆ ನಂ. 6/2 ರ ಜಮೀನು
		10 ಗುಂಟೆ	ಶ್ರೀ. ಮಂಜಣ್ಣ ಅವರ ಪತ್ನಿ ಶ್ರೀಮತಿ. ಗೌರಮ್ಮ				
02.	6/4	1 ಎಕರೆ 20 ಗುಂಟೆ	ಶ್ರೀ. ನಾರಾಯಣಪ್ಪ ರವರ ಮಗ ಶ್ರೀ. ರಾಮಾಂಜಿನಪ್ಪ	ಸರ್ವೆ ನಂ. 7/4 ಮತ್ತು 150 ರ ಜಮೀನುಗಳು	ಸರ್ವೆ ನಂ. 4/1, 4/4 ಮತ್ತು 4/5 ರ ಜಮೀನುಗಳು	ಕೆಳಗೆ ಐಟಂ ನಂ. 3 ರಲ್ಲಿ ವಿವರಿಸಿರುವ ಜಮೀನು	ಮೇಲಿನ ಐಟಂ ನಂ. 1 ರಲ್ಲಿ ವಿವರಿಸಿರುವ ಜಮೀನು
03.	165	11½ ಗುಂಟೆ	ಶ್ರೀ. ನಾರಾಯಣಪ್ಪ ರವರ ಮಗ ಶ್ರೀ. ರಾಮಾಂಜಿನಪ್ಪ	ಸರ್ವೆ ನಂ. 131, 152, 151, 132 ಮತ್ತು 150 ರ ಜಮೀನುಗಳು	ಸರ್ವೆ ನಂ. 208 ಮತ್ತು 104 ರ ಜಮೀನುಗಳು	ಕೆಳಗೆ ಐಟಂ. ನಂ. 4 ರಲ್ಲಿ ವಿವರಿಸಿರುವ ಜಮೀನು	ಮೇಲಿನ ಐಟಂ ನಂ. 2 ರಲ್ಲಿ ವಿವರಿಸಿರುವ ಜಮೀನು
		12 ಗುಂಟೆ	ಶ್ರೀ. ನಾರಾಯಣಪ್ಪ ರವರ ಮಗ ಶ್ರೀ. ವೆಂಕಟೇಶ್				
		1 ಎಕರೆ 31½ ಗುಂಟೆ	ದಿವಂಗತ ಶಿವಪ್ಪ ರವರ ಪತ್ನಿ ಶ್ರೀಮತಿ. ಶೈಲಜಾ				
04.	166	1 ಎಕರೆ	ಶ್ರೀ ಅನ್ನಪ್ಪ ರವರ ಮಗ ಶ್ರೀ ನಂಜಪ್ಪ	ಸರ್ವೆ ನಂ. 131 ರ ಜಮೀನು	ಸರ್ವೆ ನಂ. 167 ಮತ್ತು 208 ರ ಜಮೀನುಗಳು	ಸರ್ವೆ ನಂ. 164 ಮತ್ತು 104 ರ ಜಮೀನುಗಳು	ಮೇಲಿನ ಐಟಂ ನಂ. 3 ರಲ್ಲಿ ವಿವರಿಸಿರುವ ಜಮೀನು ಮತ್ತು ಸರ್ವೆ ನಂ. 167 ಮತ್ತು 208 ರ ಜಮೀನುಗಳು

ಸಹಿ./- ಪ್ರಶಾಂತ್ ಶೆಣೈ, ಪಾಲುದಾರರು
ಅಲೈಡ್ ಲಾ ಪ್ರಾಕ್ಟಿಸಸ್, ವಕೀಲರು
1/1, 3ನೇ ಮಹಡಿ, ಮಿಲ್ಲರ್ಸ್ ಆರ್ಕೇಡ್ ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಂಗಳೂರು - 560 001. ದೂ: +91 (080) 2222 0003
ಸ್ಥಳ : ಬೆಂಗಳೂರು
ದಿನಾಂಕ : ಮೇ 8, 2026

ಹಲ್ಲೆ ಪ್ರಕರಣ: ಆರೋಪಿ ಸೆರೆ

ಬೆಂಗಳೂರು: ಪತ್ನಿಗೆ ಅಶ್ಲೀಲ ಸನ್ನೆ ಮಾಡಿ ಚುಡಾಯಿಸಿದ್ದನ್ನು ಪ್ರಶ್ನಿಸಿದ್ದ ಪತಿಗೆ ಮಾರಕಾಸ್ತ್ರದಿಂದ ಹಲ್ಲೆ ನಡೆಸಿದ್ದ ಆರೋಪಿಯನ್ನು ಶಂಕರಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪುಟ್ಟರಾಜು (40) ಬಂಧಿತ ಆರೋಪಿ. ನಂದೀಶ್ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ. ಮೇ 4ರ ರಾತ್ರಿ ಶಂಕರಪುರದ ರಂಗರಾವ್ ರಸ್ತೆಯಲ್ಲಿ ಘಟನೆ ನಡೆದಿದೆ ಎಂದು ಪೊಲೀಸಲು ಹೇಳಿದರು.

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/172/2026
ದಿನಾಂಕ : 27–02–2026ಗೆ ತಿದ್ದುಪಡಿ

ಕೆಲಸದ ಹೆಸರು	ಅಂದಾಜು ಮೌಲ್ಯ
ತುಮಕೂರು – ಚಿತ್ರದುರ್ಗ – ದಾವಣಗೆರೆ ಹೊಸ ಮಾರ್ಗ ಯೋಜನೆಯಲ್ಲಿ ಇಪಿಸಿ ವಿಧಾನದಲ್ಲಿ ಹಿರಿಯೂರು (HIRYR) (ಒಳಗೊಂಡಂತೆ) ಮತ್ತು ಪಾಲವ್ವನಹಳ್ಳಿ (PLVHL) (ಒಳಗೊಂಡಂತೆ) ನಿಲ್ದಾಣಗಳ ನಡುವೆ ಚೈನೇಜ್ 90000 ಮತ್ತು ಚೈನೇಜ್ 130375 (40.375 ಕಿಮೀ) ನಡುವೆ ಸಿವಿಲ್ ಮತ್ತು ಟ್ರಾಕ್ ಕಾಮಗಾರಿಗಳು, ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿಗಳು, ರೈಲ್ವೆ ವಿದ್ಯುದೀಕರಣ ಮತ್ತು ವಿದ್ಯುತ್ ಸಾಮಾನ್ಯ ಸೇವೆಗಳನ್ನು ಒಳಗೊಂಡಂತೆ ಹೊಸ ಬ್ರಾಡ್ ಗೇಜ್ ಮಾರ್ಗದ ನಿರ್ಮಾಣ ಮತ್ತು ಪಾಲವ್ವನಹಳ್ಳಿ (PLVHL) (ಹೊರತುಪಡಿಸಿ) ಮತ್ತು ಚಿತ್ರದುರ್ಗ (CTA) (ಹೊರತುಪಡಿಸಿ) ನಿಲ್ದಾಣಗಳ (ಚೈನೇಜ್ 130375 ನಿಂದ ಚೈನೇಜ್ 140490 ವರೆಗೆ (10.115 ಕಿಮೀ) ನಡುವೆ ಹಲವಾರು ಸೇತುವೆಗಳ ವಿಸ್ತರಣೆಗಾಗಿ (ಸಿವಿಲ್ ಕಾಮಗಾರಿಗಳು) ಪ್ರಸ್ತಾವನೆಗಾಗಿ ಕೋರಿಕೆ. **(ಟೆಂಡರ್ ಉಲ್ಲೇಖ ಸಂ. ಟಿಕೆ–ಡಿವಿಜಿ–ಇಪಿಸಿ–05)**	ರೂ. 7,82,76,56,049/-

ಮುಕ್ತಾಯದ ದಿನಾಂಕ: ಹಾಲಿ ಇರುವ ದಿನಾಂಕ	ಪರಿಷ್ಕೃತ ದಿನಾಂಕ
13–05–2026 (15:00 ಗಂಟೆಗಳು)	26–05–2026 (15:00 ಗಂಟೆಗಳು)

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
ಪಿಯುಬಿ/99/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway-SWR SWRRLY @SWRAILWAYHQ @sw_railways

ನಗರಸಭಾ ಕಾರ್ಯಾಲಯ, ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ–562123
ದೂರವಾಣಿ ಸಂ.: 080–27222135 e-mail: ka.nelmangala.cmc@gmai.com
ಸಂ.: ನಸನೆ/ತಾಂತ್ರಿಕ(ವಿ)/ಟೆಂಡರ್/16/2026–27 ದಿನಾಂಕ: 07.05.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)
(ಸ್ಟಾಂಡರ್ಡ್ ಡಾಕ್ಯೂಮೆಂಟ್ KW 1&2 ರ & KG ನಿಬಂಧನೆಗಳಂತೆ ಟೆಂಡರ್ ಆಹ್ವಾನಿಸಲಾಗಿದೆ)
ಪೌರಾಯುಕ್ತರು, ನಗರಸಭೆ ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2026–27ನೇ ಸಾಲಿನ ನಗರಸಭೆ ನಿಧಿಯಡಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ಮೊತ್ತ **ರೂ: 149.93 ಲಕ್ಷಗಳ** ಕಾಮಗಾರಿಗಳ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್‌ನ ಕೆಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ತೆರೆಯುವ ದಿನಾಂಕ ಮುಂತಾದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **https://kppp.karnataka.gov.in** ಹಾಗೂ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.
ವಿವರಗಳು ಈ ಕೆಳಕಂಡಂತಿದೆ:

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2026-27/OW/WORK_INDENT57600	49.96
2	DMA/2026-27/OW/WORK_INDENT57593	49.98
3	DMA/2026-27/RD/WORK_INDENT57599	49.99

ಸಹಿ/– ಅಧ್ಯಕ್ಷರು, ನಗರಸಭೆ, ನೆಲಮಂಗಲ
DIPR/CP/546/SA/2026-27
ಸಹಿ/– ಪೌರಾಯುಕ್ತರು, ನಗರಸಭೆ, ನೆಲಮಂಗಲ

ಪ್ರೀತಿಗಾಗಿ ವಿಷ ಕುಡಿದ 15ರ ಬಾಲಕ

26ರ ಯುವತಿ ಜತೆ ಪ್ರೇಮ • ಪೋಷಕರ ವಿರೋಧ: ನೊಂದು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ವಯಸ್ಸಿನಲ್ಲಿ ತನಗಿಂತ ಹನ್ನೊಂದು ವರ್ಷ ದೊಡ್ಡವಳಾದ ಯುವತಿಯನ್ನು ಪ್ರೀತಿಸುತ್ತಿದ್ದ 15 ವರ್ಷದ ಬಾಲಕನೊಬ್ಬ ಮನೆಯವರು ತನ್ನ ಪ್ರೀತಿಯನ್ನು ವಿರೋಧಿಸಿದರು ಎಂದು ಮನನೊಂದು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ರಾಮನಗರ ತಾಲ್ಲೂಕಿನ ಬಿಡದಿಯ 15 ವರ್ಷದ ಬಾಲಕ ತನ್ನದೇ ಊರಿನ 26 ವರ್ಷದ ಯುವತಿಯನ್ನು ಪ್ರೀತಿಸುತ್ತಿದ್ದ. ಆಕೆಯೂ ಸಹ ಬಾಲಕನನ್ನು ಪ್ರೀತಿಸುತ್ತಿದ್ದಳು.

ಈ ವಿಷಯ ತಿಳಿದ ಬಾಲಕನ ಪೋಷಕರು ಪ್ರೀತಿಗೆ ವಿರೋಧ ವ್ಯಕ್ತಪಡಿಸಿದ್ದರು. ವಯಸ್ಸಿನಲ್ಲಿ ಸಾಕಷ್ಟು ಅಂತರವಿದೆ. ಇದು ಸರಿಯಲ್ಲ ಎಂದು ಬುದ್ಧಿವಾದ ಹೇಳಿ ನಿರ್ಬಂಧ ಹಾಕಿದ್ದರು. ಆದರೂ ಸಾಮಾಜಿಕ ಜಾಲತಾಣಗಳಲ್ಲಿ ಇಬ್ಬರೂ ನಿರಂತರ ಸಂಪರ್ಕದಲ್ಲಿದ್ದರು. ಇದೇ ವಿಚಾರವಾಗಿ ಮನೆಯವರ ಜೊತೆ ಮನಸ್ತಾಪದಿಂದ ಬಾಲಕ 25 ದಿನಗಳ ಹಿಂದೆ ಮನೆ ಬಿಟ್ಟು ಹೋಗಿದ್ದ. ಚನ್ನಪಟ್ಟಣದ ತನ್ನ ಸ್ನೇಹಿತನ ಮನೆಯಲ್ಲಿ ಉಳಿದುಕೊಂಡಿದ್ದ ಎಂದು ತಿಳಿದುಬಂದಿದೆ.

ಪೋಷಕರಿಗೆ ಕರೆ ಮಾಡಿ ಸ್ನೇಹಿತನ ಮನೆಯಲ್ಲಿರುವ ವಿಷಯ ತಿಳಿಸಿದ್ದ. ಏ.29ರಂದು ಸಂಜೆ ತಾಯಿಗೆ ಕರೆ ಮಾಡಿದ್ದ ಬಾಲಕ, 'ನಾನು ಮತ್ತು ನಾನು ಪ್ರೀತಿಸಿದ ಯುವತಿ ಜೊತೆಯಾಗಿ ಇರಲು ನೀವು ಬಿಡುತ್ತಿಲ್ಲ. ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದು ಹೇಳಿ ವಿಷ ಸೇವಿಸಿದ್ದ.

ಬಾಲಕನ ಸ್ನೇಹಿತರು ಆತನನ್ನು ಚನ್ನಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಪೋಷಕರಿಗೆ ಮಾಹಿತಿ ನೀಡಿದ್ದರು. ಸುದ್ದಿ ತಿಳಿದು ಚನ್ನಪಟ್ಟಣಕ್ಕೆ ಬಂದ ಬಾಲಕನ ತಂದೆ, ಆತನನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಬಾಲಕ ಮೇ 3ರಂದು ಮೃತಪಟ್ಟಿದ್ದಾನೆ.

'ಮಗನ ಸಾವಿಗೆ ಆತನ ಪ್ರೇಯಸಿಯೇ ಕಾರಣ. ಅಪ್ರಾಪ್ತ ವಯಸ್ಸಿನ ಮಗನಿಗೆ ಪ್ರೀತಿ, ಪ್ರೇಮ ಎಂದು ತಲೆ ಕೆಡಿಸಿ, ಆತ್ಮಹತ್ಯೆಗೆ ಪ್ರಚೋದಿಸಿದ್ದಾಳೆ' ಎಂದು ಬಾಲಕನ ಪೋಷಕರು ಯುವತಿಯ ವಿರುದ್ಧ ಮೇ 4ರಂದು ಚನ್ನಪಟ್ಟಣದ ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲಿನ ದೌರ್ಜನ್ಯ ಹಾಗೂ ಆತ್ಮಹತ್ಯೆ ಪ್ರಕರಣಗಳ ಹಿನ್ನೆಲೆಯಲ್ಲಿ ಒತ್ತಡ ತಗ್ಗಿಸಿ ಸುರಕ್ಷಿತ ಕೆಲಸದ ವಾತಾವರಣ ನಿರ್ಮಿಸುವಂತೆ ಆಗ್ರಹಿಸಿ ನಗರ ಜಿಲ್ಲಾ ಪಂಚಾಯಿತಿ ಪಿಡಿಒಗಳ ಸಂಘದ ವತಿಯಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್. ಯತೀಶ್ ಅವರಿಗೆ ಮನವಿ ಸಲ್ಲಿಸಲಾಯಿತು

ಸೋಮಶೇಖರ್‌ಗೆ ಮಾತೃ ವಿಯೋಗ

ಸೀತಮ್ಮ

ರಾಜರಾಜೇಶ್ವರಿ ನಗರ: ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ. ಸೋಮಶೇಖರ್ ಅವರ ತಾಯಿ ಸೀತಮ್ಮ (98) ಅವರು ವಯೋಸಹಜ ಕಾಯಿಲೆಯಿಂದ ಗುರುವಾರ ನಿಧನರಾದರು.

ಬನ್ನೇರುಘಟ್ಟ ರಸ್ತೆಯ ಬಿಬಿಎಂ ಲೇಔಟ್ 2ನೇ ಹಂತದಲ್ಲಿರುವ ಸೋಮಶೇಖರ್ ಅವರ ನಿವಾಸದಲ್ಲಿ ಬೆಳಿಗ್ಗೆ 8ರಿಂದ 11ರವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಚನ್ನಪಟ್ಟಣ ತಾಲ್ಲೂಕಿನ ಶೆಟ್ಟಹಳ್ಳಿಯಲ್ಲಿ ಸಂಜೆ 4 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ. ಮಾಹಿತಿಗೆ 9448081118, 7829163999.

ನಿಧನ ವಾರ್ತೆ

ಕೆ.ಆರ್.ಶಿವಪ್ರಕಾಶ್

ಚಿತ್ರದುರ್ಗ: ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಅವರ ತಂದೆ ಕೆ.ಆರ್. ಶಿವಪ್ರಕಾಶ್ (86) ಗುರುವಾರ ಅನಾರೋಗ್ಯದಿಂದ ಬೆಂಗಳೂರಿನ ವಸಂತನಗರದ ನಿವಾಸದಲ್ಲಿ ನಿಧನರಾದರು.

ಶುಕ್ರವಾರ ನಗರದ ವಿ.ಪಿ. ಬಡಾವಣೆಯಲ್ಲಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಶನಿವಾರ ಮಧ್ಯಾಹ್ನ ಹೊಳಲ್ಕೆರೆ ತಾಲ್ಲೂಕಿನ ಸ್ವಗ್ರಾಮ ಎನ್.ಜಿ. ಹಳ್ಳಿಯ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

'ಆರ್ಟ್ ಆಫ್ ಗಿವಿಂಗ್'ನಿಂದ ದಿನಸಿ ವಿತರಣೆ

13ನೇ ವರ್ಷಾಚರಣೆ: 25ಕ್ಕೂ ಹೆಚ್ಚು ಮಹಿಳೆಯರಿಗೆ ನೆರವು

ಪ್ರಜಾವಾಣಿ ವಾರ್ತೆ

ಪ್ರಮುಖ ಅಂಶಗಳು
- ಮನೆ ಕೆಲಸ ಮಾಡುವ ಮಹಿಳೆಯರಿಗೆ ದಿನಸಿ ಸಾಮಗ್ರಿ, ಬಟ್ಟೆ ವಿತರಣೆ
- ಪ್ರತಿ ವರ್ಷ ಮೇ 17ರಂದು ವಿಶ್ವದೆಲ್ಲೆಡೆ 'ಆರ್ಟ್ ಆಫ್ ಗಿವಿಂಗ್'ನ ವರ್ಷಾಚರಣೆ

ಬೆಂಗಳೂರು: 'ಆರ್ಟ್ ಆಫ್ ಗಿವಿಂಗ್'ನ 13ನೇ ವರ್ಷಾಚರಣೆ ಅಂಗವಾಗಿ ಜಕ್ಕೂರಿನ ನವ್ಯನಗರದಲ್ಲಿ ಮನೆಕೆಲಸ ಮಾಡುವ ಮಹಿಳೆಯರಿಗೆ ದಿನಸಿ ಸಾಮಗ್ರಿ, ಬಟ್ಟೆ ವಿತರಣೆ ಮಾಡಲಾಯಿತು.

ಜಕ್ಕೂರಿನ ಸ್ಥಳೀಯ ಮಹಿಳೆಯರೇ ಶೇರ್ ಟು ಶೈನ್ ಘೋಷವಾಕ್ಯಕ್ಕೆ ಪೂರಕವಾಗಿ 25ಕ್ಕೂ ಹೆಚ್ಚು ಮಹಿಳೆಯರಿಗೆ ದಿನಸಿ, ಬಟ್ಟೆಗಳನ್ನು ಹಂಚಿದರು.

ಪ್ರತಿ ವರ್ಷ ಮೇ 17ರಂದು ವಿಶ್ವದೆಲ್ಲೆಡೆ 'ಆರ್ಟ್ ಆಫ್ ಗಿವಿಂಗ್'ನ ವರ್ಷಾಚರಣೆ ನಡೆಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ದಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಮನೆಗೆಲಸ, ಕೂಲಿ ಮಾಡುವವರು ದಾನ ಸ್ವೀಕರಿಸಿ ಖುಷಿಪಟ್ಟರು.

ದಾನ ಕಾರ್ಯಕ್ರಮ ಅಲ್ಲದೇ ಆರೋಗ್ಯವಂತ ಜೀವನಕ್ಕಾಗಿ ಸ್ವಯಂಸೇವಕರು ಅರಿವು ಮೂಡಿಸಿದರು. ಪ್ಲಾಸ್ಟಿಕ್ ಬಳಕೆಯಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮ, ಸಕ್ಕರೆ ಬಳಕೆ ಕಡಿಮೆ ಮಾಡುವುದು, ಮಣ್ಣಿನ ಪಾತ್ರೆಗಳ ಮಹತ್ವದ ಬಗ್ಗೆ ಮಾಹಿತಿ ನೀಡಿದರು.

'ಅಚ್ಯುತ ಸಮಂತ ಪರಿಕಲ್ಪನೆಯ ಆರ್ಟ್ ಆಫ್ ಗಿವಿಂಗ್‌ನ ಭಾಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಗತ್ಯ ಇರುವವರಿಗೆ ಬಟ್ಟೆ, ಆಹಾರ ಪದಾರ್ಥ ಹಂಚಲಾಯಿತು' ಎಂದು ಜಕ್ಕೂರಿನ ನಿವಾಸಿ ಲಕ್ಷ್ಮಿ ಹೇಳಿದರು.

'ಆರ್ಟ್ ಆಫ್ ಗಿವಿಂಗ್' ಅಡಿ ಮಹಿಳೆಯರಿಗೆ ದಿನಸಿ ಪದಾರ್ಥ, ಬಟ್ಟೆ ವಿತರಣೆ ಮಾಡಲಾಯಿತು

ಜನರ ಮಡಿಲಲ್ಲಿ
ಸಾರ್ಥಕ 50 ವರುಷ
BSY
ಅಭಿಮಾನೋತ್ಸವ
ರೈತ ನಾಯಕ, ನಿಕಟ ಪೂರ್ವ ಮುಖ್ಯ ಮಂತ್ರಿಯಾದಂತಹ
50ವರ್ಷಗಳ ರಾಜಕೀಯ ಜೀವನವನ್ನು ಪೂರೈಸಿರುವ
ಸನ್ಮಾನ್ಯ ಶ್ರೀ ಬಿ.ಎಸ್.
ಯಡಿಯೂರಪ್ಪ ರವರಿಗೆ
ಹೃದಯಪೂರ್ವಕ
ಅಭಿನಂದನೆಗಳು
09 ಮೇ, 2026
ಸ್ಥಳ : ಚಿತ್ರದುರ್ಗ
ಶುಭಕೋರುವವರು :
ಬಿ.ಎಸ್. ಅನಿಲ್ ಕುಮಾರ್,
ಬಿಜೆಪಿ ಕಾರ್ಯಕರ್ತ, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,330
ಇಂದಿನ ಅಂತ್ಯ:	24,326
ದಿನದ ಕನಿಷ್ಠ:	24,284
▼	4

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹590
12 ಕ್ಕೆ	₹84
ಮೈಸೂರು: 100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹248
ಆರ್‌ಎಸ್‌ಎಸ್-5	₹243
ಗುಡ್ ಲಾಟ್	₹213

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹239-579
ದ್ವಿತಳಿ (ಬಿ.ವಿ)	₹260-759

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1610 (1640)
ಸೋಯಾ (ರಿಫೈನ್ಡ್)	₹1510 (1520)
ಸೂರ್ಯಕಾಂತಿ (ರಿಫೈನ್ಡ್)	₹1640(1660)
ಪಾಮೋಲಿನ್	₹1480 (1480)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23600
ಎಸಿ	₹14000
ಆರ್‌ಪಿ	₹18150
ಆರ್‌ಸಿ	₹9800

ಕರ್ನಾಟಕಕ್ಕೆ ಕಾಲಿಟ್ಟ ಅಮೆರಿಕ 'ಚಿಪ್' ಕಂಪನಿ

₹3,600 ಕೋಟಿ ಹೂಡಿಕೆಯ ಭರವಸೆ • 140 ಎಕರೆ ಜಮೀನು ಹಂಚಿಕೆ

• ಭರತ್ ಜೋಶಿ

ಮುಖ್ಯಾಂಶಗಳು

- ವಿಶ್ವದ ಪ್ರಮುಖ ಸೆಮಿಕಂಡಕ್ಟರ್ ಕಂಪನಿಗೆ ಜಮೀನು
- ಮತ್ತಷ್ಟು ಕಂಪನಿಗಳನ್ನು ಆಕರ್ಷಿಸಲು ರಾಜ್ಯ ಸರ್ಕಾರದ ಯತ್ನ
- ಬಿಎಸ್‌ಬಿಪಿಯಲ್ಲಿ ಇನ್ನೂ 267 ಎಕರೆ ಜಮೀನು ಲಭ್ಯ

ಬೆಂಗಳೂರು: ಅನ್ಯ ರಾಜ್ಯಗಳತ್ತ ಮುಖ ಮಾಡಿರುವ ಸೆಮಿಕಂಡಕ್ಟರ್ ಉದ್ಯಮಗಳನ್ನು ಆಕರ್ಷಿಸುವುದಕ್ಕಾಗಿ, ಉದ್ಯಮ ಸ್ನೇಹಿ ನೀತಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದ್ದರಿಂದಾಗಿ ಅಮೆರಿಕದ ಪ್ರಭಾವಿ ಕಂಪನಿಯೊಂದು ಕರ್ನಾಟಕಕ್ಕೆ ಕಾಲಿಡಲಿದೆ.

ಅಮೆರಿಕನ್ ಸೆಮಿಕಂಡಕ್ಟರ್ ಯೋಜನೆಯನ್ನು ಆಕರ್ಷಿಸಲು ತನ್ನ ಭೂಹಂಚಿಕೆ ನೀತಿಯನ್ನು ಸರ್ಕಾರ ಬದಲಾವಣೆ ಮಾಡಿದೆ. 'ಚಿಪ್' ತಯಾರಿಕಾ ಉದ್ಯಮವನ್ನು ವಿಸ್ತರಿಸುವುದಕ್ಕಾಗಿ ಮತ್ತು ಭವಿಷ್ಯದಲ್ಲಿ ಈ ಕ್ಷೇತ್ರದ ಮೇಲೆ ಹೂಡಿಕೆಗೆ ಇದೇ ರೀತಿಯ 'ರಿಯಾಯಿತಿ' ನೀಡಲು ಸರ್ಕಾರ ಮುನ್ನುಡಿ ಬರೆದಿದೆ.

ಕ್ಯಾಲಿಫೋರ್ನಿಯಾದ ಅಪ್ಲೈಡ್ ಮೆಟಿರಿಯಲ್ಸ್ ಕಂಪನಿಯು ಈ ಯೋಜನೆಗೆ ₹3,600 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ. ಇದು ವಿಶ್ವದ ಅತಿ ದೊಡ್ಡ ಸೆಮಿಕಂಡಕ್ಟರ್ ಸಾಧನಗಳ ತಯಾರಿಕಾ ಕಂಪನಿಗಳಲ್ಲಿ ಒಂದು. ಬೆಂಗಳೂರಿನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಪೂರಕ ವ್ಯವಸ್ಥೆ ಅಭಿವೃದ್ಧಿ ಯೋಜನೆಯನ್ನು ಸ್ಥಾಪಿಸಲಿದೆ.

ಈ ಕಂಪನಿಗೆ ಫ್ಲೋರ್ ಸ್ಪೇಸ್ ಇಂಡೆಕ್ಸ್ (ಎಫ್‌ಎಸ್‌ಐ) ಅಡಿ ಪ್ರತಿ ಚದರಡಿಗೆ ₹1,288ರಂತೆ ಲೀಸ್ ಕಂ ಸೇಲ್ ಆಧಾರದಲ್ಲಿ ಭೂಮಿ ಹಂಚಿಕೆ ಮಾಡಲಾಗಿದೆ. ಇದು ಬೆಂಗಳೂರು ಸಿಗ್ನೇಚರ್ ಬಿಜಿನೆಸ್ ಪಾರ್ಕ್ (ಬಿಎಸ್‌ಬಿಪಿ) ಅಡಿ ನೀಡಲಾಗುವ ನೀತಿಗೆ ವ್ಯತಿರಿಕ್ತವಾಗಿದೆ ಎಂಬುದು ದಾಖಲೆಗಳಿಂದ ಗೊತ್ತಾಗಿದೆ. ಬಿಎಸ್‌ಬಿಪಿಯಲ್ಲಿ ಲೀಸ್ ಆಧಾರದಲ್ಲಿ ಮಾತ್ರ ಜಮೀನು ಹಂಚಿಕೆ ಮಾಡಬಹುದಾಗಿತ್ತು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ಬಿಎಸ್‌ಬಿಪಿಯಲ್ಲಿ ಕ್ಯಾಲಿಫೋರ್ನಿಯಾ ಅಪ್ಲೈಡ್ ಮೆಟಿರಿಯಲ್ಸ್ ಕಂಪನಿಗೆ 140 ಎಕರೆ ಹಂಚಿಕೆ ಮಾಡಲು ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿದೆ.

ರಾಜ್ಯದಲ್ಲಿ ಸೆಮಿಕಂಡ್ಟರ್ ಉದ್ಯಮವನ್ನು ಬೆಳೆಸಲು ಅಪ್ಲೈಡ್ ಮೆಟಿರಿಯಲ್ಸ್ ಯೋಜನೆ ಅನುಷ್ಠಾನಕ್ಕೆ ಅವಕಾಶ ನೀಡುವುದರಿಂದ ಈ ಕ್ಷೇತ್ರದ ಬೆಳವಣಿಗೆಗೆ ಒಂದು ಉತ್ತಮ ಅವಕಾಶ ನೀಡಿದಂತಾಗುತ್ತದೆ. ಸಂಶೋಧನೆ ಮತ್ತು ಅಭಿವೃದ್ಧಿಗೆ ಸೂಕ್ತ ವಾತಾವರಣ ನಿರ್ಮಿಸಲು ಸಾಧ್ಯ ಎಂದು ಸಚಿವ ಸಂಪುಟ ಸಭೆಗೆ ಮಂಡಿಸಿದ ಪ್ರಸ್ತಾವದಲ್ಲಿ ಪ್ರತಿಪಾದಿಸಿದೆ.

ಹಂಚಿಕೆ ಮಾಡಿದ ಭೂಮಿ ದುರ್ಬಳಕೆ ಆಗಬಾರದು ಮತ್ತು ₹3,600 ಕೋಟಿ ಬಂಡವಾಳ ಹೂಡಿಕೆ ಆಗಬೇಕು ಎಂದು ಸರ್ಕಾರ ಷರತ್ತು ವಿಧಿಸಿದೆ.

ಅಪ್ಲೈಡ್ ಮೆಟಿರಿಯಲ್ಸ್‌ಗೆ ಅನುಕೂಲ ಮಾಡಿಕೊಡಲು ನೀತಿಯಲ್ಲಿ ಇನ್ನೂ ಒಂದು ಮಾರ್ಪಾಡು ಮಾಡಲಾಗಿದೆ. ಜಾಗತಿಕ ಮಟ್ಟದಲ್ಲಿ ಖ್ಯಾತಿ ಪಡೆದ ಸೆಮಿಕಂಡಕ್ಟರ್ ಉತ್ಪಾದನಾ ಮತ್ತು ಸಂಬಂಧಿತ ಚಟುವಟಿಕೆ ನಡೆಸುವ ಕಂಪನಿಗಳು ಹೂಡಿಕೆಗೆ ಮುಂದೆ ಬಂದರೆ ಸ್ಪರ್ಧಾತ್ಮಕ ಬಿಡ್ಡಿಂಗ್ ಇಲ್ಲದೆ ಬಿಎಸ್‌ಬಿಪಿಯಲ್ಲಿ ಜಮೀನು ಹಂಚಿಕೆ ಮಾಡಲು ಸರ್ಕಾರ ಮುಂದಾಗಿದೆ.

ರಾಜ್ಯ ಸರ್ಕಾರ ಬಿಎಸ್‌ಬಿಪಿಯಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ ₹433.72 ಕೋಟಿ ವೆಚ್ಚ ಮಾಡಿದೆ. ಇಲ್ಲಿ ನೀರು ಪೂರೈಕೆ ಮೂಲಸೌಕರ್ಯ ಅಭಿವೃದ್ಧಿಪಡಿಸಲು ₹780 ಕೋಟಿ ವೆಚ್ಚವಾಗಬಹುದು ಎಂದು ಕೆಎಸ್‌ಐಐಡಿಸಿ ಅಂದಾಜು ಮಾಡಿದೆ. ಹೀಗಾಗಿ ಅಪ್ಲೈಡ್ ಮೆಟಿರಿಯಲ್ಸ್‌ಗೆ ನಿಗದಿ ಮಾಡಿರುವ ಚದರಡಿಗೆ ₹1,288ರ ದರ ನೀರು ಪೂರೈಕೆ ವೆಚ್ಚದ ಅನುಪಾತವನ್ನೂ ಒಳಗೊಂಡಿರಬೇಕು ಎಂದು ಹಣಕಾಸು ಇಲಾಖೆ ಅಭಿಪ್ರಾಯಪಟ್ಟಿದೆ.

ಒಟ್ಟು 407 ಎಕರೆಯ ಬಿಎಸ್‌ಬಿಪಿ ಈಗ ಸೆಮಿಕಂಡ್ಟರ್ ಪಾರ್ಕ್ ಆಗಿ ಅಭಿವೃದ್ಧಿಗೊಂಡಿದೆ. ಈಗಾಗಲೇ ಅಪ್ಲೈಡ್ ಮೆಟಿರಿಯಲ್ಸ್ ಕಂಪನಿಗೆ 140 ಎಕರೆ ಹಂಚಿಕೆ ಮಾಡಲಾಗಿದೆ. ಈ ಕಂಪನಿಗೆ ಅನುಸರಿಸಿರುವ ಭೂಹಂಚಿಕೆ ನೀತಿಯು ಉಳಿದಿರುವ 267 ಎಕರೆಗೂ ಅನ್ವಯವಾಗಲಿದೆ.

ಸುದ್ದಿ 2 ನಿಮಿಷ

'ಮದ್ಯದ ದರ ಹೆಚ್ಚಳಕ್ಕೆ ಅನುಮತಿಸಿ'

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷದಿಂದ ಕ್ಯಾನ್ ಮತ್ತು ಬಾಟಲಿಗಳ ಪೂರೈಕೆಯಲ್ಲಿ ಅಡಚಣೆ ಉಂಟಾಗಿದ್ದು, ಇವುಗಳ ಬೆಲೆ ಏರಿಕೆಯಾಗಿದೆ. ಹೀಗಾಗಿ, ದರ ಏರಿಕೆಯನ್ನು ನಿಭಾಯಿಸಲು ಮದ್ಯದ ಬೆಲೆ ಹೆಚ್ಚಿಸುವಂತೆ ಮದ್ಯ ತಯಾರಕ ಒಕ್ಕೂಟ ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿದೆ.

ಭಾರತೀಯ ಮದ್ಯ ತಯಾರಿಕಾ ಕಂಪನಿಗಳ ಒಕ್ಕೂಟ (ಸಿಐಎಬಿಸಿ) ಮತ್ತು ಭಾರತೀಯ ಮದ್ಯ ತಯಾರಕರ ಸಂಘವು (ಬಿಎಐ) ದೇಶದಲ್ಲಿ ತಯಾರಾದ ವಿದೇಶಿ ಮದ್ಯದ (ಐಎಂಎಫ್‌ಎಲ್) ದರವನ್ನು (ವೈನ್ ಮತ್ತು ಬಿಯರ್) ಪರಿಷ್ಕರಣೆ ಮಾಡಲು ಅನುಮತಿ ನೀಡುವಂತೆ ಒತ್ತಾಯಿಸಿದೆ. ಇದು ಹೆಚ್ಚುತ್ತಿರುವ ತಯಾರಿಕಾ ವೆಚ್ಚವನ್ನು ನಿಭಾಯಿಸಲು ತಯಾರಕರಿಗೆ ಸಹಾಯ ಮಾಡಲಿದೆ ಎಂದು ಹೇಳಿವೆ.

'ಸಂಘರ್ಷದಿಂದ ವಿವಿಧ ಉತ್ಪನ್ನಗಳ ಬೆಲೆಯಲ್ಲಿ ತ್ವರಿತ ಏರಿಕೆಯಾಗಿದೆ. ಇದಕ್ಕಾಗಿ ಶೇ 15ರಿಂದ ಶೇ 20ರಷ್ಟು ಬೆಲೆ ಹೆಚ್ಚಿಸಲು ಅವಕಾಶ ನೀಡುವಂತೆ' ಭಾರತೀಯ ಮದ್ಯ ತಯಾರಕರ ಒಕ್ಕೂಟದ ಪ್ರಧಾನ ನಿರ್ದೇಶಕ ವಿನೋದ್ ಗಿರಿ ರಾಜ್ಯ ಸರ್ಕಾರಗಳಿಗೆ ಪತ್ರ ಬರೆದಿದ್ದಾರೆ.

ಗಾಜಿನ ಬಾಟಲಿಗಳ ದರ ಶೇ 20ರಷ್ಟು, ಪೇಪರ್ ಕಾರ್ಟೂನ್ ಬೆಲೆ ಶೇ 100ರಷ್ಟು ಸೇರಿದಂತೆ ವಿವಿಧ ಸರಕುಗಳ ಬೆಲೆಯಲ್ಲಿ ಭಾರಿ ಹೆಚ್ಚಳವಾಗಿದೆ ಎಂದು ಗಿರಿ ತಿಳಿಸಿದ್ದಾರೆ.

ವಾಣಿಜ್ಯ ಬಳಕೆಯ ಎಲ್‌ಎನ್‌ಜಿ ಪೂರೈಕೆಯಲ್ಲಿನ ತೀವ್ರ ಅಡಚಣೆಯಿಂದ ಗಾಜು ತಯಾರಕರು ಒತ್ತಡದಲ್ಲಿ ಸಿಲುಕಿದ್ದಾರೆ. ಇದರಿಂದ ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಘಟಕಗಳನ್ನು ಸ್ಥಗಿತಗೊಳಿಸಲು ಮುಂದಾಗುತ್ತಿದ್ದಾರೆ. ಮುಂಬರುವ ತಿಂಗಳಿನಲ್ಲಿ ಕ್ಯಾನ್‌ಗಳ ಪೂರೈಕೆಯಲ್ಲಿ ತೀವ್ರ ತೊಂದರೆ ಉಂಟಾಗಬಹುದು ಎಂದು ಬಿಎಐ ತಿಳಿಸಿದೆ.



ರಾಯಲ್ ಎನ್‌ಫೀಲ್ಡ್‌ನಿಂದ ₹2,200 ಕೋಟಿ ಹೂಡಿಕೆ

ಅಮರಾವತಿ (ಪಿಟಿಐ): ಐಷರ್ ಮೋಟರ್ಸ್ ಸಮೂಹಕ್ಕೆ ಸೇರಿರುವ ರಾಯಲ್ ಎನ್‌ಫೀಲ್ಡ್, ಆಂಧ್ರ ಪ್ರದೇಶದ ತಿರುಪತಿ ಜಿಲ್ಲೆಯಲ್ಲಿ ವಾಹನಗಳ ತಯಾರಿಕಾ ಘಟಕ ನಿರ್ಮಿಸಲು ಮುಂದಾಗಿದೆ. ಇದಕ್ಕಾಗಿ ₹2,200 ಕೋಟಿ ಹೂಡಿಕೆ ಮಾಡಲಿದೆ.

ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಹೂಡಿಕೆ ಉತ್ತೇಜನ ಮಂಡಳಿಯ ಸಭೆಯು ಯೋಜನೆಗೆ ಅನುಮೋದನೆ ನೀಡಿದೆ. ಈ ಘಟಕದಿಂದ ನೇರ ಮತ್ತು ಪರೋಕ್ಷವಾಗಿ 5 ಸಾವಿರ ಉದ್ಯೋಗ ಅವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ.

ಆಂಧ್ರ ಪ್ರದೇಶ ಮತ್ತು ತಮಿಳುನಾಡು ಗಡಿ ಭಾಗದಲ್ಲಿನ ಸತ್ಯವೇಡು ಮಂಡಲದ ವಾನೆಲ್ಲೂರು ಮತ್ತು ರಾಳ್ಳಕುಪ್ಪಂ ಗ್ರಾಮದಲ್ಲಿ ಈ ಯೋಜನೆಗೆ ರಾಜ್ಯ ಸರ್ಕಾರ ಭೂಮಿಯನ್ನು ಮಂಜೂರು ಮಾಡಿದೆ. ಘಟಕವು ಅಂದಾಜು 9 ಲಕ್ಷ ವಾಹನಗಳನ್ನು ನಿರ್ಮಾಣ ಮಾಡಲಿದೆ.

ಈ ಯೋಜನೆಯು ಆಂಧ್ರಪ್ರದೇಶದ ದಕ್ಷಿಣ ಭಾಗದಲ್ಲಿ ಕೈಗಾರಿಕಾ ಅಭಿವೃದ್ಧಿಯನ್ನು ಮತ್ತಷ್ಟು ವೇಗಗೊಳಿಸುತ್ತದೆ ಮತ್ತು ಹೂಡಿಕೆಗಳಿಗೆ ಆದ್ಯತೆಯ ತಾಣವಾಗಿ ರಾಜ್ಯದ ಸ್ಥಾನವನ್ನು ಬಲಪಡಿಸುತ್ತದೆ ಎಂದು ಐ.ಟಿ ಸಚಿವ ನಾರಾ ಲೋಕೇಶ್ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

07-05-2026

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1650)
ಒಂದು ವಾರದ ಡೆಲಿವರಿ	1615 (1645)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1545 (1555)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,000 (1,51,000)
ಬೆಳ್ಳಿ ಕೆ.ಜಿಗೆ	2,54,000 (2,50,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಡಿಜಿಟಲ್ ಚಿನ್ನ, ಬೆಳ್ಳಿ ಖರೀದಿ ಮತ್ತೆ ಶುರು

ನವದೆಹಲಿ (ಪಿಟಿಐ): ಅಮೂಲ್ಯ ಲೋಹಗಳ ಶುದ್ಧೀಕರಣ ಸಂಸ್ಥೆ ಎಂಎಂಟಿಸಿ–ಪಿಎಎಂಪಿ, ತನ್ನ ವೆಬ್‌ಸೈಟ್ ಮತ್ತು ಆ್ಯಂಡ್ರಾಯ್ಡ್ ಆ್ಯಪ್ ಮೂಲಕ ನೇರವಾಗಿ ಡಿಜಿಟಲ್ ರೂಪದಲ್ಲಿ ಚಿನ್ನ ಮತ್ತು ಬೆಳ್ಳಿಯನ್ನು ಖರೀದಿಸುವ ಆಯ್ಕೆಯನ್ನು ಮತ್ತೆ ಆರಂಭಿಸಿದೆ.

ಗೂಗಲ್ ಪೇ, ಪೇಟಿಎಂ ಮತ್ತು ಫೋನ್ ಪೇ ಮೂಲಕವೂ ಸಹ ಗ್ರಾಹಕರು ಖರೀದಿ ಮಾಡಬಹುದಾಗಿದೆ. ಇದಕ್ಕಾಗಿ ಈ ಕಂಪನಿಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

2017ರಲ್ಲಿ ಮೊದಲ ಬಾರಿಗೆ ಡಿಜಿಟಲ್ ಚಿನ್ನವನ್ನು ಮಾರಾಟ ಮಾಡಲು ಕಂಪನಿ ಆರಂಭಿಸಿತ್ತು. 2023ರ ಫೆಬ್ರುವರಿಯಲ್ಲಿ ಬೆಳ್ಳಿ ಮಾರಾಟ ಸಹ ಪ್ರಾರಂಭ ಮಾಡಿತ್ತು. ಆದರೆ, 2024ರಲ್ಲಿ ವೆಬ್‌ಸೈಟ್ ಅನ್ನು ನವೀಕರಣಗೊಳಿಸಲು ನೇರ ಮಾರಾಟವನ್ನು ರದ್ದು ಮಾಡಿತ್ತು. ಮತ್ತೆ ಇದೀಗ ಸೇವೆಯನ್ನು ಆರಂಭಿಸಿದೆ.

ಗ್ರಾಹಕರು ಕನಿಷ್ಠ ₹10ರ ಮೊತ್ತದಿಂದಲೂ ಚಿನ್ನ ಮತ್ತು ಬೆಳ್ಳಿಯಲ್ಲಿ ಹೂಡಿಕೆ ಶುರು ಮಾಡಬಹುದಾಗಿದೆ. ಇಷ್ಟೇ ಮೌಲ್ಯದ ಭೌತಿಕ ರೂಪದಲ್ಲಿನ ಲೋಹವನ್ನು ಗ್ರಾಹಕರ ಹೆಸರಿನಲ್ಲಿ ದಾಸ್ತಾನು ಮಾಡಿ, ನಿರ್ವಹಣೆ ಮಾಡಲಾಗುವುದು. ಮಾರಾಟದ ವೇಳೆ ನೈಜ ಮಾರುಕಟ್ಟೆಯ ದರಕ್ಕೆ ಅನುಗುಣವಾಗಿ ಗ್ರಾಹಕನ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಲಾಗುವುದು ಅಥವಾ ಭೌತಿಕ ರೂಪದಲ್ಲಿ (ನಾಣ್ಯ ಮತ್ತು ಬಾರ್‌ಗಳು) ಪಡೆದುಕೊಳ್ಳಬಹುದು ಎಂದು ತಿಳಿಸಿದೆ.

ಬೆಳ್ಳಿ ದರ ₹7 ಸಾವಿರ ಏರಿಕೆ

ನವದೆಹಲಿ / ಮುಂಬೈ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆಯ) ದರವು ₹600 ಹೆಚ್ಚಳವಾಗಿ, ₹1.56 ಲಕ್ಷದಂತೆ ಮಾರಾಟವಾಗಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹7 ಸಾವಿರ ಏರಿಕೆಯಾಗಿ, ₹2,61,500ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಇಳಿಕೆ ಹಾಗೂ ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದವಾಗುವ ನಿರೀಕ್ಷೆಯಿಂದ ಹೂಡಿಕೆದಾರರು ಅಮೂಲ್ಯ ಲೋಹಗಳ ಖರೀದಿಗೆ ಮುಂದಾದರು. ಇದು ದರ ಏರಿಕೆಗೆ ಕಾರಣವಾಯಿತು' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಸೆನ್ಸೆಕ್ಸ್ ಇಳಿಕೆ: ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 114 ಅಂಶ ಇಳಿಕೆಯಾಗಿ, 77,844ಕ್ಕೆ ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 4 ಅಂಶ ಕಡಿಮೆಯಾಗಿ, 24,326ಕ್ಕೆ ಕೊನೆಗೊಂಡಿದೆ.

ರೂಪಾಯಿ ಮೌಲ್ಯ ಏರಿಕೆ: ಡಾಲರ್ ಎದುರು ರೂಪಾಯಿ ಮೌಲ್ಯವು 27 ಪೈಸೆ ಏರಿಕೆಯಾಗಿದ್ದು, ವಹಿವಾಟಿನ ಅಂತ್ಯದ ವೇಳೆಗೆ ಮೌಲ್ಯವು 94.22 ಆಗಿದೆ.

ಅಡಿಕೆ ಧಾರಣೆ

ಕಾರ್ಕಳ	
ಹೊಸತು	30000-47500
ಹಳತು	35000-55000
ಕುಮಟಾ	
ಚಿಪ್ಪು	26001-40889
ಕೋಕ	20011-35509
ಹಳೆಚಾಲಿ	31600-48898
ಹೊಸಚಾಲಿ	24011-48069
ಪುತ್ತೂರು	
ಕೋಕ	20000-34500
ಹೊಸತು	30000-47500
ಸಾಗರ	
ಬಿಳಿಗೋಟು	18327-34099
ಚಾಲಿ	34569-43599
ಕೋಕ	9119-36600

ಕೆಂಪುಗೋಟು	24999-40099
ರಾಶಿ	35299-56969
ಸಿಪ್ಪೆಗೋಟು	8209-22419
ಶಿವಮೊಗ್ಗ	
ಸರಕು	54009-97896
ಬೆಟ್ಟೆ	50119-65629
ರಾಶಿ	46669-55399
ಗೊರಬಲು	19010-44601
ಸಿದ್ದಾಪುರ	
ಬಿಳಿಗೋಟು	27800-35389
ಚಾಲಿ	39399-47329
ಕೋಕ	23699-33589
ಕೆಂಪುಗೋಟು	28900-34900
ರಾಶಿ	46600-53899
ತಟ್ಟಿಬೆಟ್ಟೆ	33900-33900

ಶಿರಸಿ	
ಬೆಟ್ಟೆ	42899-51699
ಬಿಳಿಗೋಟು	25699-37700
ಚಾಲಿ	44399-48539
ಕೆಂಪುಗೋಟು	26589-37699
ರಾಶಿ	50909-54099
ಯಲ್ಲಾಪುರ	
ಆಪಿ	58921-58921
ಬಿಳಿಗೋಟು	20786-38199
ಚಾಲಿ	39309-48485
ಕೋಕ	17501-34599
ಕೆಂಪುಗೋಟು	20189-36991
ರಾಶಿ	50100-56899
ತಟ್ಟಿಬೆಟ್ಟೆ	39506-48999

ಬಾಗ್ಮನೆ ಐಪಿಒಗೆ ಭಾರಿ ಬೇಡಿಕೆ

ನವದೆಹಲಿ (ಪಿಟಿಐ): ಬಾಗ್ಮನೆ ಪ್ರೈಮ್ ಆಫೀಸ್ ಆರ್‌ಇಐಟಿನ ಸಾರ್ವಜನಿಕ ಷೇರು ಹಂಚಿಕೆಗೆ (ಐಪಿಒ) ಹೂಡಿಕೆದಾರರಿಂದ ಭಾರಿ ಸ್ಪಂದನೆ ದೊರೆತಿದೆ. ಕಂಪನಿಯು ನಿರೀಕ್ಷಿಸಿದ್ದ ₹3,405 ಕೋಟಿ ಬಂಡವಾಳ ಸಂಗ್ರಹವಾಗಿದೆ.

ಎನ್‌ಎಸ್‌ಇ ದತ್ತಾಂಶದ ಪ್ರಕಾರ, ಕಂಪನಿಯ 14.79 ಕೋಟಿ ಯೂನಿಟ್ ಗಳಿದ್ದವು. ಇದಕ್ಕೆ 350 ಕೋಟಿ ಯೂನಿಟ್‌ಗೆ ಬೇಡಿಕೆ ಬಂದಿದೆ. ಒಟ್ಟಾರೆ 23.71 ಪಟ್ಟು ಬೇಡಿಕೆ ಕಂಡುಬಂದಿದೆ ಎಂದು ಷೇರುಪೇಟೆಯ ಅಂಕಿ–ಅಂಶಗಳು ತಿಳಿಸಿವೆ.

ಸಾಂಸ್ಥಿಕ ಹೂಡಿಕೆದಾರರಿಂದ 25.25 ಪಟ್ಟು ಚಂದಾದಾರಿಕೆ ಪಡೆದರೆ, ಇತರೆ ಹೂಡಿಕೆದಾರರಿಂದ 21.87 ಪಟ್ಟು ಬಿಡ್ ಪಡೆದುಕೊಂಡಿದೆ ಎಂದು ತಿಳಿಸಿದೆ.

ಪೇಟಿಎಂಗೆ ₹183 ಕೋಟಿ ಲಾಭ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಪೇಟಿಎಂ ಕಂಪನಿಯು ₹183 ಕೋಟಿ ಲಾಭ ಗಳಿಸಿದೆ.

2024-25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹545 ಕೋಟಿ ನಷ್ಟ ಕಂಡಿತ್ತು. ವರಮಾನದಲ್ಲಿ ಶೇ 18ರಷ್ಟು ಹೆಚ್ಚಳವಾಗಿದ್ದು, ₹2,264 ಕೋಟಿಯಾಗಿದೆ. ಸಾಲದ ಮರುಪಾವತಿಯು ಹೆಚ್ಚಳವಾಗಿದೆ. ಇದು ಲಾಭ ಏರಿಕೆಗೆ ಒಂದು ಕಾರಣ ಎಂದು ಕಂಪನಿ ಗುರುವಾರ ತಿಳಿಸಿದೆ.

ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿ ₹552 ಕೋಟಿ ಲಾಭ ಕಂಡಿದೆ. ಆದರೆ, 2024–25ರಲ್ಲಿ ₹663 ಕೋಟಿ ನಷ್ಟ ಕಂಡಿತ್ತು ಎಂದು ತಿಳಿಸಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹32000-33000
ತಿಪಟೂರು	₹30105-34000
ತುರುವೇಕೆರೆ	₹30000-33000

ಜೈಲಿನಲ್ಲಿ ನಲಿಯುತಾ ಕಲಿಕೆಗೆ ಅವಕಾಶ

ಒಂದನೇ ಪುಟದಿಂದ...

ಕಾರಾಗೃಹದ ಕಠಿಣ ವಾತಾವರಣದಲ್ಲಿ ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣ ಸೃಷ್ಟಿಸಲಾಗಿದೆ. 'ನಮಗೂ ಹೊಸ ಜೀವನ ಇದೆ' ಎಂಬ ಆಶಾಭಾವನೆಯನ್ನು ಮಕ್ಕಳಲ್ಲಿ ಮೂಡಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಕೊಲೆ, ಕಳ್ಳತನ ಸೇರಿ ಬೇರೆ ಬೇರೆ ಅಪರಾಧ ಕೃತ್ಯಗಳಲ್ಲಿ ತಾಯಂದಿರು ಜೈಲು ಸೇರಿದಾಗ ಅವರೊಂದಿಗೆ ಹಸುಗೂಸುಗಳು, ಆರು ವರ್ಷದೊಳಗಿನ ಮಕ್ಕಳೂ ಜೈಲಿಗೆ ಸೇರಬೇಕಾದ ಅನಿವಾರ್ಯ ಇದೆ. ತಾಯಂದಿರು ಜಾಮೀನು ಪಡೆದು ಹೊರಬರುವ ತನಕವೂ ಮಕ್ಕಳ ಭವಿಷ್ಯ ಹಾಳಾಗುತ್ತಿತ್ತು. ಮಾಡದ ತಪ್ಪಿಗೆ ಮಕ್ಕಳ ಭವಿಷ್ಯ ಕಮರುತ್ತಿತ್ತು. ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಲು ಈ ಕೇಂದ್ರ ಆರಂಭಿಸಲಾಗಿದೆ.

ಕೊಠಡಿಗೆ ಬಣ್ಣ, ಮೂಡಿದ ಚಿತ್ರಕಲೆ: 'ಈ ಕೇಂದ್ರ ಸ್ಥಾಪಿಸಲು ಕಾರಾಗೃಹ ಇಲಾಖೆ ಪ್ರತ್ಯೇಕ ಕೊಠಡಿಗಳನ್ನು ನೀಡಿದೆ. ಕಲಾವಿದ ಬಾದಲ್ ನಂಜುಂಡಸ್ವಾಮಿ ಅವರನ್ನು ಡಿಸಿಪಿ ಅಧಿಕಾರಿಗಳು ಖುದ್ದು ಸಂಪರ್ಕಿಸಿ ಮಕ್ಕಳ ಭಾವನಾತ್ಮಕ ಬೆಳವಣಿಗೆಗೆ ಪೂರಕವಾದ ಚಿತ್ರಗಳನ್ನು ಗೋಡೆಯ ಮೇಲೆ ರಚಿಸಿಕೊಡುವಂತೆ ಕೋರಿದ್ದರು. ಅಧಿಕಾರಿಗಳ ಕೋರಿಕೆಯಂತೆ ಜೈಲಿನ ಗೋಡೆಗಳಲ್ಲಿ ಮಕ್ಕಳಿಗೆ ಮುದ ನೀಡುವ ಚಿತ್ರಗಳನ್ನು ನಂಜುಂಡಸ್ವಾಮಿ ತಂಡ ರಚಿಸಿದೆ. ಅಲ್ಲದೇ ಮಕ್ಕಳ ಸ್ನೇಹಿ ಶೌಚಾಲಯ ನಿರ್ಮಿಸಲಾಗಿದೆ. ಕೈ ತೊಳೆಯುವ ವ್ಯವಸ್ಥೆ, ಆಟವಾಡುವ ಸ್ಥಳವನ್ನು ಅಭಿವೃದ್ಧಿ ಪಡಿಸಲಾಗಿದೆ. ಇಡೀ ಕೊಠಡಿಗಳಿಗೆ ಜ್ಞಾನ ಜ್ಯೋತಿ ಎಂದು ಹೆಸರಿಡಲಾಗಿದೆ. ನರ್ಸರಿ ಶಿಕ್ಷಣದಿಂದ ಮಕ್ಕಳು ವಂಚಿತರಾಗದಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಜೈಲಿನೊಳಗೆ ಮಕ್ಕಳ ಹಕ್ಕುಗಳಿಗೆ ಚ್ಯುತಿ ಬಾರದಂತೆಯೂ ನಿಗಾ ಇಡಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಇಬ್ಬರು ಶಿಕ್ಷಕರ ನಿಯೋಜನೆ: 'ಇಲಾಖೆಯಿಂದ ಇಬ್ಬರು ಶಿಕ್ಷಕಿಯರನ್ನು ನೇಮಿಸಲಾಗಿದೆ. ರಜಾ ದಿನ ಹೊರತುಪಡಿಸಿ ಉಳಿದ ದಿನಗಳಂದು ಶಿಕ್ಷಕಿಯರು ಜೈಲಿಗೆ ಹೋಗಿ ಮಕ್ಕಳಿಗೆ ಪಾಠ ಮಾಡಿ ಬರುತ್ತಾರೆ. ವರ್ಣಮಾಲೆ, ಪ್ರಾಸಬದ್ಧ ಹಾಡುಗಳು ಮತ್ತು ಸೃಜನಶೀಲ ಕಲೆಗಳನ್ನು ಮಕ್ಕಳಿಗೆ ಕಲಿಸುತ್ತಿದ್ದಾರೆ. ಆರಂಭದಲ್ಲಿ ಮಕ್ಕಳನ್ನು ಕಳುಹಿಸಲು ತಾಯಂದಿರು ಹಿಂದೇಟು ಹಾಕಿದ್ದರು. ಮಕ್ಕಳ ಕಲಿಕಾ ಸಾಮರ್ಥ್ಯ ಕಂಡು ಪೋಷಕರೇ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ' ಎಂದು ಡಿಸಿಪಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರತಿ ತಿಂಗಳು ತಾಯಂದಿರ ಜತೆಗೆ ಸಭೆ ನಡೆಸಿ ಪ್ರತಿಕ್ರಿಯೆ ಕೇಳಲಾಗುತ್ತಿದೆ. ಅವರು ನೀಡಿದ ಸಲಹೆಯಂತೆ ಕೆಲವು ಬದಲಾವಣೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಶ್ರೀಗಂಧ ಮರ ಕಳವು ತಡೆಗೆ ಕ್ರಮ

ತಾಂತ್ರಿಕ ಪರಿಹಾರ: ಸಾರ್ವಜನಿಕರು ಸಲಹೆಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಎಂ.ಬಿ. ಪಾಟೀಲ

ಬೆಂಗಳೂರು: ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಶ್ರೀಗಂಧವು ಪ್ರಮುಖ ಕಚ್ಚಾ ವಸ್ತುವಾಗಿದ್ದು, ಅದರ ಬೆಳೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ (ಕೆಎಸ್‌ಡಿಎಲ್) ಮಹತ್ವದ ಉಪಕ್ರಮವೊಂದನ್ನು ರೂಪಿಸಿದೆ.

ಜತೆಗೆ ಶ್ರೀಗಂಧದ ಮರ, ಗಿಡಗಳ ಕಳ್ಳತನ ತಡೆಯುವುದು ಕೂಡ ದೊಡ್ಡ ಸವಾಲಾಗಿದ್ದು, ಇದರ ತಡೆಗೆ ಯಾರೇ ತಂತ್ರಜ್ಞಾನದ ನೆರವು ನೀಡಿದರೂ ಅದನ್ನು ಸ್ವೀಕರಿಸಲು ಸಂಸ್ಥೆ ಸಿದ್ಧ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಈ ಉಪಕ್ರಮದ ಭಾಗವಾಗಿ, ಶ್ರೀಗಂಧ ಕಳ್ಳತನ ತಡೆಗೆ ಸಂಬಂಧಿಸಿದ ಸುಧಾರಿತ ಉಪಕರಣಗಳು ಅಥವಾ ಆಧುನಿಕ ತಂತ್ರಜ್ಞಾನಗಳ ಮಾಹಿತಿ ಹೊಂದಿರುವ ರೈತರು, ವಿಜ್ಞಾನಿಗಳು ಹಾಗೂ ಸಂಸ್ಥೆಗಳಿಗೆ ಕೆಎಸ್‌ಡಿಎಲ್ ಅನ್ನು ಸಂಪರ್ಕಿಸಿ ಮಾಹಿತಿ ಹಂಚಿಕೊಳ್ಳುವಂತೆ ಕೋರಲಾಗಿದೆ.

ಸಂಸ್ಥೆಯ ಮುಂದೆ ಇಂತಹ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ನೀಡಲು ಅವಕಾಶ ಕಲ್ಪಿಸಲಾಗುವುದು. ಪ್ರಸ್ತಾಪಿತ ಪರಿಹಾರಗಳು ಸೂಕ್ತ ಹಾಗೂ ಪರಿಣಾಮಕಾರಿ ಎಂದು ಕಂಡುಬಂದರೆ, ಅವುಗಳನ್ನು ಪರಿಗಣಿಸಿ ಅನುಷ್ಠಾನಗೊಳಿಸಲಾಗುವುದು. ಆಯ್ಕೆಯಾಗುವ ಯಾವುದೇ ತಂತ್ರಜ್ಞಾನದ ಅನುಷ್ಠಾನಕ್ಕೆ ಬೇಕಾಗುವ ವೆಚ್ಚವನ್ನು ಕೆಎಸ್‌ಡಿಎಲ್ ಭರಿಸಲಿದೆ ಎಂದು ಪಾಟೀಲ ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಕೆಎಸ್‌ಡಿಎಲ್ ರಾಜ್ಯದ ವಿವಿಧ ಭಾಗಗಳ ರೈತರಿಂದ 174.5 ಟನ್ ಶ್ರೀಗಂಧವನ್ನು ಖರೀದಿಸಿದ್ದು, ಅವರ ಖಾತೆಗಳಿಗೆ ಒಟ್ಟು ₹ 6.08 ಕೋಟಿಯನ್ನು ನೇರ ವರ್ಗಾವಣೆ ಮಾಡಿದೆ ಎಂದು ಪಾಟೀಲ ತಿಳಿಸಿದ್ದಾರೆ.

ಶ್ರೀಗಂಧ ಬೆಳೆ ಉತ್ತೇಜಿಸುವ ಉದ್ದೇಶದಿಂದ ಕೆಎಸ್‌ಡಿಎಲ್‌ಗೆ ಅತಿ ಹೆಚ್ಚು ಪ್ರಮಾಣದಲ್ಲಿ ಶ್ರೀಗಂಧ ಪೂರೈಸಿದ ನಾಲ್ವರು ರೈತರಿಗೆ ಜೂನ್ 4ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಇದೇ ವೇಳೆ, ಶ್ರೀಗಂಧ ಚೋರರನ್ನು ಬಂಧಿಸುವಲ್ಲಿ ಹಾಗೂ ಪ್ರಕರಣ ದಾಖಲಿಸುವಲ್ಲಿ ಗಮನಾರ್ಹ ಸಾಧನೆ ಮಾಡಿರುವ ಪೊಲೀಸ್ ಸಿಬ್ಬಂದಿ, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಈ ಸಂಬಂಧ ಮಹತ್ವದ ಮಾಹಿತಿ ನೀಡಿದ ಸಾರ್ವಜನಿಕರನ್ನು ಪುರಸ್ಕರಿಸಲಾಗುವುದು ಎಂದು ತಿಳಿಸಿದ್ದಾರೆ.

ತೀಸ್ತಾ ನದಿ ಯೋಜನೆ: ಚೀನಾ ಬೆಂಬಲ ಕೋರಿದ ಬಾಂಗ್ಲಾ

ಬೀಜಿಂಗ್ (ಪಿಟಿಐ): ತೀಸ್ತಾ ನದಿ ಪುನರುಜ್ಜೀವನ ಯೋಜನೆಯನ್ನು ಬೆಂಬಲಿಸುವಂತೆ ಹಾಗೂ ಈ ಯೋಜನೆಯಲ್ಲಿ ಭಾಗಿಯಾಗುವಂತೆ ಬಾಂಗ್ಲಾದೇಶವು ಚೀನಾಕ್ಕೆ ಮನವಿ ಮಾಡಿರುವುದು ಭಾರತದ ಕಳವಳಕ್ಕೆ ಕಾರಣವಾಗಿದೆ.

ಬಾಂಗ್ಲಾದೇಶದ ಪ್ರಧಾನಿ ತಾರಿಕ್ ರೆಹಮಾನ್ ಸದ್ಯ ಚೀನಾ ಪ್ರವಾಸದಲ್ಲಿದ್ದು, ತೀಸ್ತಾ ನದಿ ಸಮಗ್ರ ನಿರ್ವಹಣೆ ಮತ್ತು ಪುನರುಜ್ಜೀವನ ಯೋಜನೆಗೆ (ಟಿಆರ್‌ಸಿಎಂಆರ್‌ಪಿ) ಚೀನಾದ ಆರ್ಥಿಕ ನೆರವು ಕೋರಿದ್ದಾರೆ.

ಬಾಂಗ್ಲಾದೇಶದ ವಿದೇಶಾಂಗ ಸಚಿವ ಖಲೀಲುರ್ ರೆಹಮಾನ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಬುಧವಾರ ಬೀಜಿಂಗ್‌ನಲ್ಲಿ ತೀಸ್ತಾ ನದಿ ಪುನರುಜ್ಜೀವನ ಯೋಜನೆ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ಬಾಂಗ್ಲಾದೇಶದ ಸರ್ಕಾರಿ ಸ್ವಾಮ್ಯದ ಬಿಎಸ್‌ಎಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಸಿಕ್ಕಿಂನಲ್ಲಿ ಹುಟ್ಟಿ, ಪಶ್ಚಿಮ ಬಂಗಾಳದ ಮೂಲಕ ಬಾಂಗ್ಲಾದತ್ತ ಹರಿದು ನಂತರ ಬ್ರಹ್ಮಪುತ್ರ ನದಿಯನ್ನು ಸೇರುವ ತೀಸ್ತಾ ನದಿಯನ್ನು ಸಂರಕ್ಷಿಸುವ ಯೋಜನೆ ಇದಾಗಿದೆ. ಆದರೆ, ಚೀನಾ ಈ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಅದು ದೇಶದ ಭದ್ರತೆಯ ದೃಷ್ಟಿಯಿಂದ ಒಳಿತಲ್ಲ ಹಾಗೂ ತೀಸ್ತಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ನನೆಗುದಿಗೆ ಬಿದ್ದಿರುವ ಭಾರತ–ಬಾಂಗ್ಲಾ ಮಾತುಕತೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎನ್ನುವ ಕಳವಳ ಭಾರತದ್ದು.

ಖಲೀಲುರ್ ರೆಹಮಾನ್ ಜತೆಗೆ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ನಡೆಸಿದ ಮಾತುಕತೆಯಲ್ಲಿ, ಬಾಂಗ್ಲಾದೇಶದ ಮೂಲಸೌಕರ್ಯ, ಸಾರಿಗೆ, ಉದ್ಯಮ ಕ್ಷೇತ್ರಗಳಲ್ಲಿ ದೀರ್ಘಾವಧಿ ಪಾಲುದಾರಿಕೆ– ಹೂಡಿಕೆಗೆ ಸಹಮತ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಸ್ತಾವ ಪರಿಶೀಲಿಸುತ್ತಿದ್ದೇವೆ: ಇರಾನ್

ದುಬೈ / ವ್ಯಾಟಿಕನ್ (ಎಪಿ): 'ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಅಮೆರಿಕ ಮುಂದಿಟ್ಟಿರುವ ಅಂತಿಮ ಒಪ್ಪಂದ ಪ್ರಸ್ತಾವವನ್ನು ಪರಿಶೀಲಿಸುತ್ತಿದ್ದೇವೆ' ಎಂದು ಇರಾನ್ ಹೇಳಿದೆ.

ಆದಷ್ಟು ಬೇಗ ಅಂತಿಮ ಒಪ್ಪಂದಕ್ಕೆ ಸಹಿ ಹಾಕಿ, ಹೊರ್ಮುಜ್ ಜಲಸಂಧಿ ತೆರೆಯುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಮೇಲೆ ಒತ್ತಡ ಮುಂದುವರಿಸಿದ್ದಾರೆ. ಇಲ್ಲದಿದ್ದರೆ ಬಾಂಬ್ ದಾಳಿ ಮುಂದುವರಿಸುವುದಾಗಿ ಬೆದರಿಕೆ ಹಾಕಿದ್ದಾರೆ.

ಅಮೆರಿಕ ಇರಾನ್ ಬಂದರಿನ ಮೇಲೆ ದಿಗ್ಬಂಧನ ಹೇರಿದ್ದು, ಇದನ್ನು ಉಲ್ಲಂಘಿಸಿದ ಕಾರಣಕ್ಕೆ ಒಮಾನ್ ಕರಾವಳಿಯಲ್ಲಿ ಇರಾನ್ ತೈಲ ನೌಕೆಯ ಮೇಲೆ ಅಮೆರಿಕದ ಸೇನೆ ಬುಧವಾರ ದಾಳಿ ನಡೆಸಿದೆ. ಈ ಘಟನೆ ಹೊರತುಪಡಿಸಿದರೆ ಅಮೆರಿಕ–ಇರಾನ್ ನಡುವೆ ಕೆಲವು ದಿನಗಳಿಂದ ಬೇರೆ ದಾಳಿಗಳು ವರದಿಯಾಗಿಲ್ಲ.

ಯುದ್ಧಾಂತ್ಯಕ್ಕೆ ವೇದಿಕೆ ಸಜ್ಜುಗೊಳ್ಳುತ್ತಿರುವುದರಿಂದ ಮಾರುಕಟ್ಟೆ ಪೂರಕವಾಗಿ ಸ್ಪಂದಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಬ್ಯಾರಲ್‌ಗೆ ₹100 ಡಾಲರ್‌ಗಳಿಗೆ ಸ್ಥಿರಗೊಂಡಿದೆ.

ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ಸೇನೆ ಗುರುವಾರ ನಡೆಸಿದ ವೈಮಾನಿಕ ದಾಳಿಯಲ್ಲಿ ದಟ್ಟ ಹೊಗೆ ಮೇಲೆದ್ದಿರುವ ದೃಶ್ಯ. – ಎಎಫ್‌ಪಿ ಚಿತ್ರ

ಅಮೆರಿಕ– ಇರಾನ್ ನಡುವೆ ಏಪ್ರಿಲ್ 8ರಿಂದ ದುರ್ಬಲವಾದ ಕದನ ವಿರಾಮ ಜಾರಿಯಲ್ಲಿದೆ. ಉಭಯ ದೇಶಗಳ ನಡುವೆ ಅಂತಿಮ ಸುತ್ತಿನ ನೇರ ಮಾತುಕತೆ ಆಯೋಜಿಸಲು ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನ ಒಂದು ತಿಂಗಳಿಂದ ಸತತವಾಗಿ ಶ್ರಮಿಸುತ್ತಿದೆ.

14ರಿಂದ ಟ್ರಂಪ್ ಚೀನಾ ಪ್ರವಾಸ: ಡೊನಾಲ್ಡ್ ಟ್ರಂಪ್ ಅವರು ಮೇ 14 ಮತ್ತು 15ರಂದು ಚೀನಾ ಪ್ರವಾಸ ನಡೆಸಲಿದ್ದು, ಅಧ್ಯಕ್ಷ ಷಿ ಜಿನ್‌ಪಿಂಗ್ ಜತೆಗೆ ಮಾತುಕತೆ ನಡೆಸಲಿದ್ದಾರೆ. ಟ್ರಂಪ್ ಚೀನಾ ಭೇಟಿಗೂ ಮುನ್ನವೇ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಚೀನಾಕ್ಕೆ ಭೇಟಿ ನೀಡಿದ್ದು, ಹೊರ್ಮುಜ್ ಜಲಸಂಧಿ ತೆರೆಯುವ ನಿಟ್ಟಿನಲ್ಲಿ ಮಾತುಕತೆ ನಡೆಸಿದ್ದಾರೆ ಎಂದು ಇರಾನ್‌ನ ಸರ್ಕಾರಿ ಸ್ವಾಮ್ಯದ ಟಿವಿ ವರದಿ ಮಾಡಿದೆ.

ಮಾತುಕತೆ: 'ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮರುಸ್ಥಾಪಿಸುವ ನಿಟ್ಟಿನಲ್ಲಿ ಪೋಪ್ 14ನೇ ಲಿಯೊ ಜತೆಗೆ ಮಾತುಕತೆ ನಡೆಸಿದ್ದೇನೆ' ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೂರನೇ ವರ್ಷದ ಸವಿನೆನಪು



ಪಾಳ್ಯದ ವೈ. ಶ್ರೀರಾಮರೆಡ್ಡಿ
ಕೋರಮಂಗಲ
ನೀವು ನಮ್ಮನ್ನು ಅಗಲಿ ಮೂರು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಶ್ರೀಮತಿ ಮಂಜುಳ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Marketing & Sales

Job Opportunities with Hinduja Housing Finance
We have opportunities for Branch Sales Manager positions at multiple locations.
Position: Branch Sales Manager
• 2-3 years of experience required
• Graduate in any discipline
• Salary: ₹3 LPA - ₹5 LPA
Salary will be determined based on experience and performance.
Locations: Bangalore
Interested candidates can send their CV to mohan.h@hindujahousingfinance.com, swati.reddy@hindujahousingfinance.com
You can directly submit your application via email.
9513375225, 8217872910

Part-Time Jobs

ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆ ವಿದ್ಯಾರ್ಹತೆಯಿಲ್ಲದವರಿಗೂ. 20,000 / 25,000 ಕೊರಿಯರ್, 7090177446

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ಪ್ರವಾಸ

Travel Agencies

ಚಾರ್ಧಾಮ್ ಪ್ರವಾಸ 13 ದಿನಗಳು 26/5/26, ನೇಪಾಳ ಪ್ರವಾಸ 9 ದಿನಗಳು 4/6/26, ಕಾಮಾಕ್ಯ ಅಸ್ಸಾಂ ಮೇಘಾಲಯ ಪ್ರವಾಸ 9 ದಿನಗಳು 10/6/26 ಸುವರ್ಣಯಾತ್ರ 6360146483 9008381022

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಾರ್ಷ್ ಶತಕ; ಲಖನೌಗೆ ಜಯ

ಪ್ರಿನ್ಸ್ ಯಾದವ್, ಶಾಬಾಜ್ ಅಹಮದ್ ಮಿಂಚು • ಆರು ಪಂದ್ಯ ಸೋಲಿನ ಬಳಿಕ ಗೆದ್ದ ಪಂತ್ ಬಳಗ • ರಜತ್ ಅರ್ಧಶತಕ

ಲಖನೌ (ಪಿಟಿಐ): ಗುರುವಾರ ರಾತ್ರಿ ಆಗಾಗ ಸುರಿದು ನಿಂತ ಮಳೆಯ ನಡುವೆ ಮಿಚೆಲ್ ಮಾರ್ಷ್ ಅವರ ಸಿಡಿಲಬ್ಬರದ ಶತಕ ಅರಳಿತು. ಬಳಿಕ, ಪ್ರಿನ್ಸ್ ಯಾದವ್ (33ಕ್ಕೆ3) ಹಾಗೂ ಶಾಬಾಜ್ ಅಹಮದ್ (33ಕ್ಕೆ2) ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್‌ಗಳಿಗೆ ಆಘಾತ ನೀಡಿದರು.

ರಿಷಭ್ ಪಂತ್ ನಾಯಕತ್ವದ ಲಖನೌ ಸೂಪರ್‌ಜೈಂಟ್ಸ್ ತಂಡವು 9 ರನ್‌ಗಳಿಂದ ರೋಚಕ ಗೆಲುವು ಸಾಧಿಸಿತು.

ಏಕನಾ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮಾರ್ಷ್ ಅವರ ಶತಕದ ಬಲದಿಂದ ಲಖನೌ ತಂಡವು 19 ಓವರ್‌ಗಳಲ್ಲಿ 3 ವಿಕೆಟ್‌ಗೆ 209 ರನ್ ಗಳಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡದ ಆರಂಭಿಕರಾದ ಜೇಕಬ್ ಬೆಥೆಲ್ (4; 5ಎ) ಹಾಗೂ ವಿರಾಟ್ ಕೊಹ್ಲಿ (0; 2ಎ) ಮತ್ತೆ ವಿಫಲರಾದರು. ಇವರಿಬ್ಬರು ಔಟಾದಾಗ ತಂಡದ ಮೊತ್ತ ಕೇವಲ 9.

ಸಂಕಷ್ಟದಲ್ಲಿದ್ದ ಆರ್‌ಸಿಬಿ ತಂಡಕ್ಕೆ ರಜತ್ ಪಾಟೀದಾರ್ (61; 31ಎ, 4x3, 6x6) ಹಾಗೂ ದೇವದತ್ತ ಪಡಿಕ್ಕಲ್ (34; 25ಎ) ಮೂರನೇ ವಿಕೆಟ್‌ಗೆ 95 (53 ಎಸೆತ) ರನ್ ಜೊತೆಯಾಟವಾಡಿ ಆಸರೆಯಾದರು. ಕೊನೆಯಲ್ಲಿ ಟಿಮ್ ಡೇವಿಡ್ (40; 17ಎ, 4x4, 6x3), ಕೃಣಾಲ್ ಪಾಂಡ್ಯ (ಔಟಾಗದೇ 28; 16ಎ) ಹಾಗೂ ರೊಮಾರಿಯೊ ಶೆಫರ್ಡ್ (ಔಟಾಗದೇ 23; 15ಎ) ಹೋರಾಟ ತೋರಿದರಾದರೂ ಗೆಲುವು ಕೈಗೆಟುಕಲಿಲ್ಲ.

ಕೊನೆಯ ಓವರ್‌ನಲ್ಲಿ ಆರ್‌ಸಿಬಿ ಗೆಲುವಿಗೆ 20 ರನ್ ಅಗತ್ಯವಿತ್ತು. ಲಖನೌ ನಾಯಕ ಪಂತ್ ಚೆಂಡನ್ನು ಸ್ಪಿನ್ನರ್ ದಿಗ್ವೇಶ್‌ಗೆ ನೀಡಿದರು. ಕೇವಲ 10 ರನ್ ಬಿಟ್ಟುಕೊಟ್ಟ ದಿಗ್ವೇಶ್, ಲಖನೌ ತಂಡಕ್ಕೆ ಲೀಗ್‌ನಲ್ಲಿ ಮೂರನೇ ಗೆಲುವು ತಂದುಕೊಟ್ಟರು. ಆರ್‌ಸಿಬಿ 19 ಓವರ್‌ಗಳ ಅಂತ್ಯಕ್ಕೆ 6 ವಿಕೆಟ್‌ಗೆ 203 ರನ್ ಗಳಿಸಿತು. ಲಖನೌ ತಂಡವು ಇದಕ್ಕೆ ಮೊದಲು ಹಾಲಿ ಲೀಗ್‌ನಲ್ಲಿ ಸತತ ಆರು ಪಂದ್ಯಗಳಲ್ಲಿ ಸೋಲನುಭವಿಸಿತ್ತು.

ಟಾಸ್ ಗೆದ್ದ ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆತಿಥೇಯ ತಂಡದ ಆರಂಭಿಕ ಜೋಡಿ ಮಿಚೆಲ್ ಮಾರ್ಷ್ (111; 51ಎ) ಅವರು ಯುವ ಆಟಗಾರ ಅರ್ಷಿಣ್ ಕುಲಕರ್ಣಿ (17 ರನ್) ಅವರೊಂದಿಗೆ ಅಮೋಘ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 95 ರನ್ ಸೇರಿಸಿದರು. ಅದರಲ್ಲಿ ಮಾರ್ಷ್ ಅವರದ್ದೇ ಸಿಂಹಪಾಲು.

ಐಪಿಎಲ್‌ನಲ್ಲಿ 200ನೇ ಪಂದ್ಯವಾಡಿದ ಭುವನೇಶ್ವರ್ ಕುಮಾರ್ ಮತ್ತು ಸ್ಪಿನ್ನರ್ ಕೃಣಾಲ್ ಪಾಂಡ್ಯ ಅವರನ್ನು ಬಿಟ್ಟರೆ ಉಳಿದ ಬೌಲರ್‌ಗಳು ದುಬಾರಿಯಾದರು. ಎಲ್ಲರಿಗೂ ಮಾರ್ಷ್ ಬಿಸಿ ಮುಟ್ಟಿಸಿದರು.

10ನೇ ಓವರ್‌ನಲ್ಲಿ ಕುಲಕರ್ಣಿ ವಿಕೆಟ್ ಗಳಿಸಿದ ಕೃಣಾಲ್ ಅವರು ಜೊತೆಯಾಟವನ್ನು ಮುರಿದರು. ಆಗ ಕ್ರೀಸ್‌ಗೆ ಬಂದ ನಿಕೊಲಸ್ ಪೂರನ್ (ಬ್ಯಾಟಿಂಗ್ 38; 23ಎ, 4x4, 6x1) ಅವರೊಂದಿಗೂ ಉತ್ತಮ ಜೊತೆಯಾಟವನ್ನು ಮಾರ್ಷ್ ಬೆಳೆಸಿದರು.

ಈ ಅವಧಿಯಲ್ಲಿ ಮೂರು ಸಲ (ಓವರ್: 2ನೇ, 9ನೇ ಮತ್ತು 14ನೇ) ಮಳೆಯಿಂದಾಗಿ ಆಟ ನಿಂತಿತ್ತು. ಮಳೆ ಬಂದಾಗೊಮ್ಮೆ 15–20 ನಿಮಿಷ ಆಟ ಸ್ಥಗಿತವಾಗಿ ಮತ್ತೆ ಆರಂಭವಾಯಿತು. ಆದರೂ ಮಾರ್ಷ್ ಅವರ ಏಕಾಗ್ರತೆ ಮತ್ತು ಲಯಕ್ಕೆ ಯಾವುದೇ ಭಂಗ ಬರಲಿಲ್ಲ. ಬೌಲರ್‌ಗಳನ್ನು ದಂಡಿಸಿದರು.

ಮಾರ್ಷ್ ಅವರು 20 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಒಟ್ಟು 49 ಎಸೆತಗಳಲ್ಲಿ 100ರ ಗಡಿ ದಾಟಿದರು. ಇದರಲ್ಲಿ ತಲಾ 9 ಬೌಂಡರಿ ಮತ್ತು ಸಿಕ್ಸರ್‌ಗಳಿದ್ದವು. ಅಮೋಘವಾದ ಡ್ರೈವ್‌ಗಳು ಮತ್ತು ಫ್ಲಿಕ್‌ಗಳ ಆಟದ ಸೊಬಗನ್ನು ಅವರು ಉಣಬಡಿಸಿದರು.

ಕೊನೆಯಲ್ಲಿ ನಾಯಕ ರಿಷಭ್ ಪಂತ್ (ಔಟಾಗದೇ 32; 10ಎ, 4x4, 6x2) ಮಿಂಚಿನ ಬ್ಯಾಟಿಂಗ್ ಮೂಲಕ ತಂಡವನ್ನು 200ರ ಗಡಿ ದಾಟಿಸಿದರು. ಮಳೆಯ ಅಡಚಣೆಯಿಂದಾಗಿ ಇನಿಂಗ್ಸ್ ಅನ್ನು ತಲಾ 19 ಓವರ್‌ಗಳಿಗೆ ಇಳಿಸಲಾಯಿತು.

ಪಂದ್ಯದ ಆಟಗಾರ: ಮಿಚೆಲ್ ಮಾರ್ಷ್



ಮಿಚೆಲ್ ಮಾರ್ಷ್
111 ರನ್
56 ಎಸೆತ
9 ಬೌಂಡರಿ
9 ಸಿಕ್ಸರ್

ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್: 3ಕ್ಕೆ 209 (19 ಓವರ್‌ಗಳಲ್ಲಿ)
ಮಾರ್ಷ್ ಸಿ ಬೆಥೆಲ್ ಬಿ ಹೇಝಲ್‌ವುಡ್ 111 (56ಎ, 4x9, 6x9)
ಅರ್ಷಿಣ್ ಸಿ ರಜತ್ ಬಿ ಕೃಣಾಲ್ 17 (24ಎ, 4x1)
ಪೂರನ್ ಸಿ ಕೃಣಾಲ್ ಬಿ ರಸೀಕ್ 38 (23ಎ, 4x1, 6x1)
ರಿಷಭ್ ಪಂತ್ ಔಟಾಗದೇ 32 (10ಎ, 4x4, 6x2), ಏಡನ್ ಮರ್ಕರಂ ಔಟಾಗದೇ 1 (1ಎ)
ಇತರೆ: 10 (ಲೆಗ್‌ಬೈ 5, ವೈಡ್ 5)
ವಿಕೆಟ್ ಪತನ: 1–95 (ಅರ್ಷಿಣ್ ಕುಲಕರ್ಣಿ, 9.2), 2–165 (ಮಿಚೆಲ್ ಮಾರ್ಷ್, 16.1), 3–194 (ನಿಕೊಲಸ್ ಪೂರನ್, 18.2)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–34–0, ಜೋಶ್ ಹೇಝಲ್‌ವುಡ್ 4–0–49–1, ಕೃಣಾಲ್ ಪಾಂಡ್ಯ 4–0–31–1, ರಸೀಕ್ ಸಲಾಂ ಡಾರ್ 4–0–53–1, ಸುಯಶ್ ಶರ್ಮಾ 2–0–21–0, ರೊಮಾರಿಯೊ ಶೆಫರ್ಡ್ 1–0–16–0

ರಾಯಲ್ ಚಾಲೆಂಜರ್ಸ್ ಬೆಂಗಳೂರು: 6ಕ್ಕೆ 203 (19 ಓವರ್‌ಗಳಲ್ಲಿ)
ಬೆಥೆಲ್ ಸಿ ಪ್ರಿನ್ಸ್ ಬಿ ಶಮಿ 4 (5ಎ, 4x1), ವಿರಾಟ್ ಬಿ ಪ್ರಿನ್ಸ್ 0 (2ಎ)
ದೇವದತ್ತ ಸಿ ಮತ್ತು ಬಿ ಪ್ರಿನ್ಸ್ 34 (25ಎ, 4x3, 6x1)
ರಜತ್ ಸಿ ಅರ್ಷಿಣ್ ಬಿ ಶಾಬಾಜ್ 61 (31ಎ, 4x3, 6x6)
ಜಿತೇಶ್ ಸಿ ಪಂತ್ ಬಿ ಪ್ರಿನ್ಸ್ 1 (3ಎ), ಟಿಮ್ ಡೇವಿಡ್ ಸಿ ದಿಗ್ವೇಶ್ ಬಿ ಶಾಬಾಜ್ 40 (17ಎ, 4x4, 6x3), ಕೃಣಾಲ್ ಔಟಾಗದೇ 28 (16ಎ, 4x2, 6x2), ರೊಮಾರಿಯೊ ಶೆಫರ್ಡ್ ಔಟಾಗದೇ 23 (15ಎ, 4x3, 6x1) **ಇತರೆ:** 12 (ಲೆಗ್‌ಬೈ 4, ವೈಡ್ 8)
ವಿಕೆಟ್ ಪತನ: 1–9 (ಜೇಕಬ್ ಬೆಥೆಲ್, 0.5), 2–9 (ವಿರಾಟ್ ಕೊಹ್ಲಿ, 1.2), 3–104 (ದೇವದತ್ತ ಪಡಿಕ್ಕಲ್, 10.1), 4–106 (ಜಿತೇಶ್ ಶರ್ಮಾ, 10.5), 5–112 (ರಜತ್ ಪಾಟೀದಾರ್, 11.3), 6–158 (ಟಿಮ್ ಡೇವಿಡ್, 15.3)
ಬೌಲಿಂಗ್: ಮೊಹಮ್ಮದ್ ಶಮಿ 4–0–33–1, ಪ್ರಿನ್ಸ್ ಯಾದವ್ 4–0–33–3, ಮಯಂಕ್ ಯಾದವ್ 4–0–50–0, ದಿಗ್ವೇಶ್ ರಾಠಿ 4–0–50–0, ಶಾಬಾಜ್ ಅಹಮದ್ 3–0–33–2

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಎಸ್‌ಆರ್‌ಎಚ್	11	7	4	0	14	0.737
ಪಿಬಿಕೆಎಸ್	10	6	3	1	13	0.571
ಆರ್‌ಸಿಬಿ	10	6	4	0	12	1.234
ಆರ್ ಆರ್	10	6	4	0	12	0.510
ಜಿ ಟಿ	10	6	4	0	12	- 0.147
ಸಿಎಸ್‌ಕೆ	10	5	5	0	10	0.151
ಡಿ ಸಿ	10	4	6	0	8	- 0.949
ಕೆಕೆಆರ್	9	3	5	1	7	- 0.539
ಎಂ ಐ	10	3	7	0	6	- 0.649
ಎಲ್‌ಎಸ್‌ಜಿ	10	3	7	0	6	- 0.934

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (494 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)

ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ಹೇಳಿಕೆ
ಕೆಎಸ್‌ಸಿಎಯಿಂದ ಹೆಚ್ಚುವರಿ ಟಿಕೆಟ್ ಬೇಡಿಕೆ

ಗುವಾಹಟಿ: ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಫೈನಲ್ ಪಂದ್ಯದಲ್ಲಿ 10 ಸಾವಿರ ಹೆಚ್ಚುವರಿ ಉಚಿತ ಟಿಕೆಟ್‌ಗಳಿಗಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಬೇಡಿಕೆ ಇಟ್ಟಿತ್ತು. ಅದನ್ನು ಈಡೇರಿಸುವುದು ಅಸಾಧ್ಯವಾದ ಕಾರಣ ಫೈನಲ್ ಪಂದ್ಯವನ್ನು ಸ್ಥಳಾಂತರಿಸಬೇಕಾದ ಕಠಿಣ ನಿರ್ಧಾರ ಕೈಗೊಳ್ಳಬೇಕಾಯಿತು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ದೇವಜೀತ್ ಸೈಕಿಯಾ ಹೇಳಿದ್ದಾರೆ.

‘ಐಪಿಎಲ್ ಶಿಷ್ಟಾಚಾರದ ಪ್ರಕಾರ ಆತಿಥ್ಯ ವಹಿಸುವ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಆಯಾ ಕ್ರೀಡಾಂಗಣದ ಆಸನ ಸಾಮರ್ಥ್ಯದ ಶೇ 15ರಷ್ಟು ಟಿಕೆಟ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ. ಆದರೆ ಕೆಎಸ್‌ಸಿಎ ನಿಗದಿಯ ಕೋಟಾ ಅಲ್ಲದೇ ಹೆಚ್ಚುವರಿ 10 ಸಾವಿರ ಟಿಕೆಟ್‌ಗಳನ್ನೂ ಕೇಳಿತ್ತು. ಲೀಗ್ ಪಂದ್ಯಗಳ ಸಂದರ್ಭದಲ್ಲಿಯೂ ಕೆಎಸ್‌ಸಿಎ ನಿಗದಿತ ಸಂಖ್ಯೆಗಿಂತಲೂ ಹೆಚ್ಚುವರಿ ಉಚಿತ ಟಿಕೆಟ್‌ಗಳನ್ನು ಪಡೆದಿತ್ತು ಎಂದು ಬೇರೆ ಬೇರೆ ಮೂಲಗಳಿಂದ ನಮಗೆ ತಿಳಿದುಬಂದಿತು’ ಎಂದು ಸೈಕಿಯಾ ಅವರು ಎಎನ್‌ಐ ಸುದ್ದಿಸಂಸ್ಥೆಯೊಂದಿಗಿನ ಸಂವಾದದಲ್ಲಿ ಬಹಿರಂಗಪಡಿಸಿದ್ದಾರೆ.

‘ಈ ವಿಷಯ ಕುರಿತು ಮಾಹಿತಿಗಳನ್ನು ನೀಡುವಂತೆ ಕೋರಿ ನಾವು (ಬಿಸಿಸಿಐ) ಕೆಎಸ್‌ಸಿಎಗೆ ಇಮೇಲ್ ಮಾಡಿದೆವು. ಅದಕ್ಕೆ ಪ್ರತಿಕ್ರಿಯೆಯಾಗಿ ಅವರಿಂದ ಬಂದ ಮೇಲ್‌ನಲ್ಲಿ ನಿಗದಿತ ಶೇ15 ಟಿಕೆಟ್ ಮತ್ತು ಹೆಚ್ಚುವರಿ ಟಿಕೆಟ್‌ಗಳಿಗೆ ಬೇಡಿಕೆ ಇಟ್ಟಿತು. ಸಂಸ್ಥೆಯ ಸದಸ್ಯರು, ಮಾನ್ಯತೆ ಪಡೆದ ಕ್ಲಬ್‌ಗಳು, ಮತ್ತಿತರರಿಗೆ ನೀಡಲು ಉಚಿತ ಟಿಕೆಟ್ ಕೇಳಿತ್ತು. ಸ್ಥಳೀಯ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರಿಗೆ ಉಚಿತ ಟಿಕೆಟ್ ಹಂಚಲು ಕೂಡ ಉಚಿತ ಟಿಕೆಟ್‌ಗಾಗಿ ಮನವಿ ಮಾಡಿತ್ತು’ ಎಂದು ತಿಳಿಸಿದರು.

ಹಾಲಿ ಚಾಂಪಿಯನ್ ಆರ್‌ಸಿಬಿಯ ತವರೂರಾದ ಬೆಂಗಳೂರಿನಲ್ಲಿಯೇ ಫೈನಲ್ ನಡೆಸುವುದಾಗಿ ಈ ಮುಂದೆ ಪ್ರಕಟಿಸಲಾಗಿತ್ತು. ಆದರೆ ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಿಸಿರುವುದಾಗಿ ಬುಧವಾರ ಬಿಸಿಸಿಐ ಪ್ರಕಟಿಸಿತ್ತು. ಇದು ಅಭಿಮಾನಿಗಳಿಗೆ ಬೇಸರ ತರಿಸಿತ್ತು. ಮೇ 31ರಂದು ಫೈನಲ್ ಪಂದ್ಯ ನಡೆಯಲಿದೆ. ಪ್ಲೇ ಆಫ್ ಪಂದ್ಯಗಳು ಧರ್ಮಶಾಲಾ ಮತ್ತು ಮುಲ್ಲನಪುರದಲ್ಲಿ ಆಯೋಜನೆಗೊಂಡಿವೆ.

ಧುಮಾಲ್ ಹೇಳಿಕೆ (ಪಿಟಿಐ ವರದಿ): ‘ಬೆಂಗಳೂರಿನಲ್ಲಿಯೇ ಪಂದ್ಯ ನಡೆಯಬೇಕಿತ್ತು. ಆದ್ದರಿಂದ ರಾಜ್ಯ ಸಂಸ್ಥೆಯಿಂದ ಮಾಹಿತಿ ಪಡೆದುಕೊಂಡಿದ್ದೆವು. ಕೆಎಸ್‌ಸಿಎ ಮುಂದೆ ಕೆಲವು ಸವಾಲುಗಳಿದ್ದವು. ಶಾಸಕರಿಗೆ ಉಚಿತ ಟಿಕೆಟ್ ನೀಡುವುದು ಸೇರಿದಂತೆ ಇನ್ನೂ ಕೆಲವು ಸವಾಲುಗಳು ಕೆಎಸ್‌ಸಿಎ ಮುಂದಿವೆ. ಈ ಕ್ರೀಡಾಂಗಣದ ಆಸನ ಸಾಮರ್ಥ್ಯ ಕಡಿಮೆ ಇದೆ. ಐಪಿಎಲ್ ಫೈನಲ್ ವೀಕ್ಷಿಸಲು ದೇಶದ ಬೇರೆ ಬೇರೆ ಭಾಗಗಳಿಂದ ಹಾಗೂ ವಿದೇಶಗಳಿಂದಲೂ ಅತಿಥಿಗಳು, ಅಭಿಮಾನಿಗಳು ಬರುತ್ತಾರೆ. ಇದೇ ಹೊತ್ತಿನಲ್ಲಿ ಐಸಿಸಿ ಸಭೆಯೂ ಇರುವುದರಿಂದ ವಿದೇಶಗಳ ಪ್ರತಿನಿಧಿಗಳು ಇಲ್ಲಿ ಸೇರುತ್ತಾರೆ. ಅವರಿಗೆ ಐಪಿಎಲ್ ಫೈನಲ್ ವೀಕ್ಷಣೆಯ ಅವಕಾಶ ನೀಡಬೇಕಾಗುತ್ತದೆ. ಅದಕ್ಕಾಗಿ ದೊಡ್ಡ ಮಟ್ಟದ ಆಸನ ಸಾಮರ್ಥ್ಯ ಇರುವ ಅಹಮದಾಬಾದ್ ಕ್ರೀಡಾಂಗಣವೇ ಸೂಕ್ತವೆಂದು ನಿರ್ಧರಿಸಲಾಯಿತು’ ಎಂದು ಐಪಿಎಲ್ ಸಮಿತಿ ಮುಖ್ಯಸ್ಥ ಅರುಣ್ ಧುಮಾಲ್ ಹೇಳಿದ್ದಾರೆ.

‘ಮೇ 31ರಂದು ನಡೆಯಲಿರುವ ಫೈನಲ್ ಪಂದ್ಯದ ವೇಳೆಯಲ್ಲಿಯೇ ಅಹಮದಾಬಾದಿನಲ್ಲಿ ಐಸಿಸಿ ಸಭೆ ಕೂಡ ಆಯೋಜನೆಗೊಂಡಿದೆ. ನರೇಂದ್ರ ಮೋದಿ ಕ್ರೀಡಾಂಗಣದ ಪ್ರೇಕ್ಷಕರ ಆಸನ ಸಾಮರ್ಥ್ಯ ಉಳಿದೆಲ್ಲ ಮೈದಾನಗಳಿಗಿಂತ ಹೆಚ್ಚಿರುವುದರಿಂದ ಫೈನಲ್ ಪಂದ್ಯವನ್ನು ಇಲ್ಲಿಗೆ ಸ್ಥಳಾಂತರಿಸಲಾಗಿದೆ’ ಎಂದಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದ ಆಸನ ಸಾಮರ್ಥ್ಯವು 36 ಸಾವಿರ ಇದೆ. ಆದರೆ ಅಹಮದಾಬಾದಿನಲ್ಲಿ 1.32 ಲಕ್ಷ ಇದೆ.

ರಾಹುಲ್ ಮೇಲೆ ಭರವಸೆ

ಗೆಲ್ಲುವ ಒತ್ತಡದಲ್ಲಿ ಡೆಲ್ಲಿ ಕ್ಯಾಪಿಟಲ್ಸ್–ಕೋಲ್ಕತ್ತ ನೈಟ್ ರೈಡರ್ಸ್

ನವದೆಹಲಿ (ಪಿಟಿಐ): ಅಂಕಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ತವರಿನಂಗಳದಲ್ಲಿ ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಕೋಲ್ಕತ್ತ ನೈಟ್‌ರೈಡರ್ಸ್ ಎದುರು ಆಡಲಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಡೆಲ್ಲಿ ತಂಡವು ಸುಲಭ ಗೆಲುವುಗಳನ್ನು ದಾಖಲಿಸುವಲ್ಲಿ ವಿಫಲವಾಗಿದೆ. ಇದರಿಂದಾಗಿ ತಂಡವು ಆಡಿರುವ ಒಟ್ಟು 10 ಪಂದ್ಯಗಳಲ್ಲಿ ಎಂಟು ಅಂಕ ಮಾತ್ರ ಗಳಿಸಿದೆ. ಪ್ಲೇಆಫ್ ರೇಸ್‌ನಲ್ಲಿ ಉಳಿಯಬೇಕಾದರೆ ತನ್ನ ಪಾಲಿಗೆ ಉಳಿದಿರುವ ನಾಲ್ಕು ಪಂದ್ಯಗಳನ್ನೂ ಗೆಲ್ಲುವ ಒತ್ತಡ ತಂಡಕ್ಕೆ ಇದೆ.

ಕೋಲ್ಕತ್ತ ತಂಡವೂ ತನಗೆ ಉಳಿದಿರುವ ಐದು ಪಂದ್ಯಗಳನ್ನೂ ಜಯಿಸಬೇಕು. ಆಗ ಒಟ್ಟು 17 ಅಂಕಗಳೊಂದಿಗೆ ಪ್ಲೇ ಆಫ್ ಪ್ರವೇಶಿಸುವ ದಾರಿ ಕಂಡುಕೊಳ್ಳಬಹುದು.

ಕೋಲ್ಕತ್ತ ತಂಡದ ಸ್ಪಿನ್ ಜೋಡಿ ವರುಣ್ ಚಕ್ರವರ್ತಿ ಮತ್ತು ಸುನಿಲ್ ನಾರಾಯಣ್ ಅವರ ಆಟ ನಡೆಯದಂತೆ ನೋಡಿಕೊಳ್ಳುವ ತಂತ್ರಗಾರಿಕೆಯನ್ನು ಡೆಲ್ಲಿ ಪಾಲಿಸುವುದು ಖಚಿತ. ಅದಕ್ಕಾಗಿ ಇಲ್ಲಿರುವ ಆರನೇ ಪಿಚ್ (ಸಪಾಟಾಗಿರುವ ಅಂಕಣ) ಮೇಲೆ ಆಡುವುದು. ಅಕ್ಷರ್ ಪಟೇಲ್ ಬಳಗವು ಇದೇ ಅಂಕಣದಲ್ಲಿ ಪಂಜಾಬ್ ಕಿಂಗ್ಸ್ ಎದುರು 264 ರನ್ ಗಳಿಸಿತ್ತು. ಆದರೂ ಆ ಬೃಹತ್ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ಡೆಲ್ಲಿ ಬೌಲರ್‌ಗಳೂ ಎಡವಿದ್ದರು.

ಆದರೆ ಡೆಲ್ಲಿ ಸ್ಪಿನ್ನರ್ ಕುಲದೀಪ್ ಯಾದವ್ (10 ಪಂದ್ಯ; 7 ವಿಕೆಟ್) ಅವರು ಇಲ್ಲಿ ಯಶಸ್ವಿಯಾಗಿಲ್ಲ. ಇದು ತಂಡಕ್ಕೆ ದುಬಾರಿಯಾಗುತ್ತಿದೆ. ವೇಗಿ ಲುಂಗಿ ಎನ್‌ಗಿಡಿ ಅವರು ಈ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆ ಇದೆ. ಮಿಚೆಲ್ ಸ್ಟಾರ್ಕ್ ಮೇಲೆ ಡೆಲ್ಲಿಗೆ ಹೆಚ್ಚು ಭರವಸೆ ಇದೆ.

ಬ್ಯಾಟಿಂಗ್ ವಿಭಾಗದಲ್ಲಿ ಕೆ.ಎಲ್. ರಾಹುಲ್ ಅವರ ಮೇಲೆ ಭರವಸೆ ಇಡಬಹುದು. ಅವರು 180ರ ಸ್ಟ್ರೈಕ್ ರೇಟ್‌ನಲ್ಲಿ 445 ರನ್ ಪೇರಿಸಿದ್ದಾರೆ. ಅವರೊಂದಿಗೆ ಪಥುಮ್ ನಿಸಾಂಕಾ (228 ರನ್), ಸಮೀರ್ ರಿಜ್ವಿ ಮತ್ತು ನಿತೀಶ್ ರಾಣಾ ಅವರು ತಮ್ಮ ಲಯವನ್ನು ಕಾಪಾಡಿಕೊಳ್ಳುವುದು ಅಗತ್ಯ. ಟ್ರಿಸ್ಟನ್ ಸ್ಟಬ್ಸ್ ಕೂಡ ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್

ಕೆ.ಎಲ್. ರಾಹುಲ್ ಪಿಟಿಐ ಚಿತ್ರ

ಬಲಾಬಲ ಒಟ್ಟು ಪಂದ್ಯ 35

ಕ್ಯಾಪಿಟಲ್ಸ್ ಗೆಲುವು	15
ನೈಟ್‌ರೈಡರ್ಸ್ ಜಯ	19
ಫಲಿತಾಂಶವಿಲ್ಲ	1

2005ರ ಸೊಹ್ರಾಬುದ್ದೀನ್ ಶೇಖ್ ನಕಲಿ ಎನ್‌ಕೌಂಟರ್ ಪ್ರಕರಣ
22 ಜನರ ಖುಲಾಸೆ ಎತ್ತಿಹಿಡಿದ ಕೋರ್ಟ್

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: 2005ರಲ್ಲಿ ನಡೆದಿದ್ದ ಶಂಕಿತ ‘ಗ್ಯಾಂಗ್‌ಸ್ಟರ್’ ಸೊಹ್ರಾಬುದ್ದೀನ್ ಶೇಖ್ ಮತ್ತು ತುಳಸಿರಾಮ್ ಪ್ರಜಾಪತಿ ನಕಲಿ ಎನ್‌ಕೌಂಟರ್ ಹಾಗೂ ಸೊಹ್ರಾಬುದ್ದೀನ್ ಪತ್ನಿ ಕೌಸರ್‌ಬಿ ಹತ್ಯೆ ಪ್ರಕರಣದ ಎಲ್ಲ 22 ಆರೋಪಿಗಳನ್ನು ಖುಲಾಸೆಗೊಳಿಸಿ ಸಿಬಿಐ ವಿಶೇಷ ನ್ಯಾಯಾಲಯ ನೀಡಿದ್ದ ತೀರ್ಪನ್ನು ಬಾಂಬೆ ಹೈಕೋರ್ಟ್ ಗುರುವಾರ ಎತ್ತಿಹಿಡಿದಿದೆ.

ಸಿಬಿಐ ವಿಶೇಷ ನ್ಯಾಯಾಲಯವು 2018ರ ಡಿಸೆಂಬರ್‌ನಲ್ಲಿ ಪ್ರಕರಣದ ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಿತ್ತು. ವಿಶೇಷ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಶೇಖ್ ಸಹೋದರರಾದ ರುಬಾಬುದ್ದೀನ್ ಮತ್ತು ನಯಾಬುದ್ದೀನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಶ್ರೀಚಂದ್ರಶೇಖರ್, ಗೌತಮ್ ಅಂಖಡ್ ಅವರ ಪೀಠ ವಜಾಗೊಳಿಸಿದೆ.

ಖುಲಾಸೆಗೊಂಡ 22 ಆರೋಪಿಗಳಲ್ಲಿ, 21 ಮಂದಿ ಗುಜರಾತ್ ಪೊಲೀಸ್ ಭಯೋತ್ಪಾದಕ ನಿಗ್ರಹ ದಳ ಮತ್ತು ರಾಜಸ್ಥಾನ ಪೊಲೀಸ್‌ನ ಕಿರಿಯ ಅಧಿಕಾರಿಗಳಾಗಿದ್ದಾರೆ. ಈ ಅಧಿಕಾರಿಗಳು ಮೂವರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದ ತಂಡಗಳ ಭಾಗವಾಗಿದ್ದರು ಎಂದು ಹೇಳಲಾಗಿದೆ.

ಉಳಿದ ಒಬ್ಬ ಆರೋಪಿ ಗುಜರಾತ್‌ನ ತೋಟದ ಮನೆಯ ಮಾಲೀಕರಾಗಿದ್ದು, ಶೇಖ್ ಮತ್ತು ಕೌಸರ್‌ಬಿ ಅವರನ್ನು ಕೊಲ್ಲುವ ಮೊದಲು ತೋಟದ ಮನೆಯಲ್ಲಿ ಅಕ್ರಮವಾಗಿ ಇರಿಸಲಾಗಿತ್ತು ಎಂದು ಆರೋಪಿಸಲಾಗಿದೆ. ಹೈದರಾಬಾದ್‌ನಿಂದ ಮಹಾರಾಷ್ಟ್ರದ ಸಾಂಗ್ಲಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಶೇಖ್, ಆತನ ಪತ್ನಿ ಮತ್ತು ಸಹಚರ ಪ್ರಜಾಪತಿಯನ್ನು 2005ರ ನವೆಂಬರ್ 22-23ರ ರಾತ್ರಿ ಪೊಲೀಸ್ ತಂಡ ವಶಕ್ಕೆ ತೆಗೆದುಕೊಂಡಿತ್ತು. ಆ ಬಳಿಕ ದಂಪತಿಯನ್ನು ಒಂದು ವಾಹನದಲ್ಲಿ ಮತ್ತು ಪ್ರಜಾಪತಿಯನ್ನು ಇನ್ನೊಂದು ವಾಹನದಲ್ಲಿ ಕರೆದೊಯ್ಯಲಾಗಿತ್ತು.

ಪ್ರಕರಣದ ತನಿಖೆ ನಡೆಸಿದ ಸಿಬಿಐ ಪ್ರಕಾರ, ಸೊಹ್ರಾಬುದ್ದೀನ್‌ನನ್ನು 2005ರ ನವೆಂಬರ್ 26ರಂದು ಗುಜರಾತ್ ಮತ್ತು ರಾಜಸ್ಥಾನ ಪೊಲೀಸರನ್ನು ಒಳಗೊಂಡ ಜಂಟಿ ತಂಡ ಎನ್‌ಕೌಂಟರ್‌ನಲ್ಲಿ ಕೊಂದಿತ್ತು. ಅದಾದ ಮೂರು ದಿನಗಳ ಬಳಿಕ ಕೌಸರ್‌ಬಿ ಹತ್ಯೆ ನಡೆಸಿ ಮೃತದೇಹ ಸುಟ್ಟುಹಾಕಲಾಗಿತ್ತು.

ಉದಯಪುರ ಕೇಂದ್ರ ಜೈಲಿನಲ್ಲಿದ್ದ ಪ್ರಜಾಪತಿಯನ್ನು 2006ರ ಡಿ. 27ರಂದು ಗುಜರಾತ್-ರಾಜಸ್ಥಾನ ಗಡಿಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಕೊಲ್ಲಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್‌ನ ಆಗಿನ ಗೃಹ ಸಚಿವ, ಪ್ರಸ್ತುತ ಕೇಂದ್ರದ ಗೃಹ ಸಚಿವರಾಗಿರುವ ಅಮಿತ್ ಶಾ, ರಾಜಸ್ಥಾನದ ಮಾಜಿ ಗೃಹ ಸಚಿವ ಗುಲಾಬ್ ಚಂದ್ ಕಟಾರಿಯಾ ಸೇರಿದಂತೆ ಒಟ್ಟು 38 ಮಂದಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿತ್ತು. 38 ಆರೋಪಿಗಳಲ್ಲಿ ಶಾ, ಕಟಾರಿಯಾ ಮತ್ತು ಹಲವು ಐಪಿಎಸ್ ಅಧಿಕಾರಿಗಳು ಸೇರಿದಂತೆ 16 ಮಂದಿಯನ್ನು 2014 ಮತ್ತು 2017ರ ನಡುವೆ ಆರೋಪ ಮುಕ್ತಗೊಳಿಸಲಾಗಿತ್ತು.

‘ತೀರ್ಪು ಪರಿಶೀಲಿಸಿದ ಬಳಿಕ ನಿರ್ಧಾರ’

ಸೊಹ್ರಾಬುದ್ದೀನ್ ಕುಟುಂಬದ ಸದಸ್ಯರು ಬಾಂಬೆ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುತ್ತಾರೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

‘ನಾವು ಹೈಕೋರ್ಟ್ ತೀರ್ಪನ್ನು ಪರಿಶೀಲಿಸುತ್ತೇವೆ. ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬೇಕೇ ಎಂದು ಆ ಬಳಿಕ ನಿರ್ಧರಿಸುತ್ತೇವೆ. ಅವರು (ಸೊಹ್ರಾಬುದ್ದೀನ್ ಕುಟುಂಬದ ಸದಸ್ಯರು) ಪ್ರಕರಣಕ್ಕೆ ಸಂಬಂಧಿಸಿದಂತೆ 21 ವರ್ಷಗಳಿಂದ ಕಾನೂನು ಹೋರಾಟ ನಡೆಸಿ ದಣಿದಿದ್ದಾರೆ’ ಎಂದು ಹೈಕೋರ್ಟ್‌ನಲ್ಲಿ ರುಬಾಬುದ್ದೀನ್ ಮತ್ತು ನಯಾಬುದ್ದೀನ್ ಅವರನ್ನು ಪ್ರತಿನಿಧಿಸಿದ ವಕೀಲ ಗೌತಮ್ ತಿವಾರಿ ಹೇಳಿದರು.

‘ಮೋದಿ ಹತ್ಯೆಗೆ ಸಂಚು’

ಲಷ್ಕರ್-ಎ-ತಯಬಾ ಮತ್ತು ಪಾಕಿಸ್ತಾನದ ಐಎಸ್‌ಐ ಜೊತೆ ನಂಟು ಹೊಂದಿದ್ದ ಸೊಹ್ರಾಬುದ್ದೀನ್, ಗುಜರಾತ್‌ನ ಅಂದಿನ ಮುಖ್ಯಮಂತ್ರಿಯಾಗಿದ್ದ ಮೋದಿ ಅವರ ಹತ್ಯೆಗೆ ಸಂಚು ರೂಪಿಸುತ್ತಿದ್ದನೆಂದು ಗುಜರಾತ್ ಎಟಿಎಸ್ ಆರೋಪಿಸಿತ್ತು.

ಸೇನಾ ಕಾರ್ಯಾಚರಣೆ ರಾಷ್ಟ್ರ ಭದ್ರತೆಯ ದೃಢ ಸಂಕಲ್ಪದ ಪ್ರತೀಕ: ಪ್ರಧಾನಿ ಮೋದಿ
ಆಪರೇಷನ್ ಸಿಂಧೂರಕ್ಕೆ ವರ್ಷ

ನವದೆಹಲಿ (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಭಾರತ ನಡೆಸಿದ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ಗುರುವಾರ ಒಂದು ವರ್ಷ ಪೂರೈಸಿದೆ.

ಕಾರ್ಯಾಚರಣೆ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಅವರು ‘ಎಕ್ಸ್’ನಲ್ಲಿ ಸಂದೇಶ ಹಂಚಿಕೊಂಡಿದ್ದು, ‘ಭಯೋತ್ಪಾದನೆಯ ವಿರುದ್ಧ ಭಾರತದ ಕಠಿಣ ನಿಲುವು ಮತ್ತು ರಾಷ್ಟ್ರ ಭದ್ರತೆಯ ದೃಢ ಸಂಕಲ್ಪವನ್ನು ಆಪರೇಷನ್ ಸಿಂಧೂರ ಪ್ರತಿಬಿಂಬಿಸುತ್ತದೆ’ ಎಂದು ಹೇಳಿದ್ದಾರೆ.

‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ನೆನಪಿನ ನಿಮಿತ್ತ ರಕ್ಷಣಾ ಸಚಿವ ರಾಜನಾಥ ಸಿಂಗ್, ವಿದೇಶಾಂಗ ಸಚಿವ ಎಸ್.ಜೈಶಂಕರ್, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ಸಚಿವರು ತಮ್ಮ ಸಾಮಾಜಿಕ ಜಾಲತಾಣಗಳ ಪ್ರೊಫೈಲ್ ಫೋಟೋ ಬದಲಿಸಿ, ‘ಆಪರೇಷನ್ ಸಿಂಧೂರ’ ಚಿಹ್ನೆಯನ್ನು ಹಾಕಿಕೊಂಡಿದ್ದಾರೆ.

ಭದ್ರತಾಪಡೆಗಳಿಗೆ ಗೌರವ ಸೂಚಿಸುವ ನಿಟ್ಟಿನಲ್ಲಿ ಪ್ರೊಫೈಲ್ ಫೋಟೊ ಬದಲಿಸಿ, ಸಿಂಧೂರ ಚಿಹ್ನೆ ಬಳಸುವಂತೆ ಎಲ್ಲರಿಗೂ ಪ್ರಧಾನಿ ಮೋದಿ ಕರೆ ನೀಡಿದ್ದರು.

ವಿಶೇಷ ಪ್ರಾರ್ಥನೆ: ಜಮ್ಮು–ಕಾಶ್ಮೀರದ ಪೂಂಚ್ ಜಿಲ್ಲೆಯ ಗುರುದ್ವಾರ ಶ್ರೀ ಗುರು ಸಿಂಗ್ ಸಭಾದಲ್ಲಿ ಜನರು ಗುರುವಾರ ವಿಶೇಷ ಪ್ರಾರ್ಥನೆ ಸಲ್ಲಿಸಿ, ಶಾಂತಿಗಾಗಿ ಪ್ರಾರ್ಥಿಸಿದರು. ಜತೆಗೆ ಗಡಿಭಾಗದಲ್ಲಿ ಹತ್ಯೆಗೀಡಾದವರನ್ನೂ ಸ್ಮರಿಸಿದ್ದಾರೆ. ಪೂಂಚ್ ಜಿಲ್ಲೆಯಲ್ಲಿ 12 ಮಂದಿ ಮೃತಪಟ್ಟಿದ್ದರು.

ನಾಶ ಖಚಿತ: ‘ಯಾವ ಭಯೋತ್ಪಾದಕ ನೆಲೆಯೂ ಸುರಕ್ಷಿತವಲ್ಲ ಅವುಗಳನ್ನೂ ನಾಶಪಡಿಸಲಾಗುವುದು ಎಂಬ ಸ್ಪಷ್ಟ ಸಂದೇಶವನ್ನು ‘ಸಿಂಧೂರ’ ಕಾರ್ಯಾಚರಣೆ ನೀಡಿದೆ. ಇದು ಕೇವಲ ಅಂತ್ಯವಲ್ಲ, ಆರಂಭ’ ಎಂದು ಭಾರತೀಯ ಭದ್ರತಾಪಡೆಗಳು ಹೇಳಿವೆ.

ಜಮ್ಮುವಿನಲ್ಲಿ ಗುರುವಾರ ನಡೆದ ಕಾರ್ಯಕ್ರಮವೊಂದರಲ್ಲಿ ಮಕ್ಕಳು ಚಿತ್ರಗಳನ್ನು ಪ್ರದರ್ಶಿಸಿದರು ಪಿಟಿಐ ಚಿತ್ರ

‘ನೋವಿಗೆ ಸಿಕ್ಕ ನ್ಯಾಯ’

ಪಹಲ್ಗಾಮ್ ದಾಳಿಯಲ್ಲಿ ಮೃತರಾದ ಶುಭಂ ದ್ವಿವೇದಿ ಅವರ ಪತ್ನಿ ಐಶಾನ್ಯ ಅವರು ಆಪರೇಷನ್ ಸಿಂಧೂರದ ಕುರಿತು ಮಾತನಾಡಿ, ಕೇಂದ್ರ ಸರ್ಕಾರ ಮತ್ತು ಸೇನೆಯನ್ನು ಶ್ಲಾಘಿಸಿದ್ದಾರೆ.

‘ಸರ್ಕಾರ ಮತ್ತು ಸೇನೆ ನೀಡಿದ ತಿರುಗೇಟು, ದಾಳಿಯಲ್ಲಿ ಹತರಾದ ಕುಟುಂಬಸ್ಥರು ಪಡುತ್ತಿರುವ ನೋವಿಗೆ ಸಿಕ್ಕಿರುವ ನ್ಯಾಯದಂತೆ ಭಾಸವಾಗುತ್ತಿದೆ’ ಎಂದಿದ್ದಾರೆ.

ಯಡಿಯೂರಪ್ಪ: ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ

ಲೇಖನ: ಡಾ.ರವಿ ಸಿ.ಟಿ, ಸದಸ್ಯರು, ಕರ್ನಾಟಕ ವಿಧಾನ ಪರಿಷತ್

ಮಾಜಿ ಮುಖ್ಯಮಂತ್ರಿ, ರೈತ ನಾಯಕ ಶ್ರೀಬಿ.ಎಸ್.ಯಡಿಯೂರಪ್ಪನವರು ಚುನಾಯಿತ ಜನಪ್ರತಿನಿಧಿಯಾಗಿ, ಸಾರ್ವಜನಿಕ ಜೀವನದ ಐವತ್ತು ವರ್ಷಗಳನ್ನು ಪೂರೈಸಿದ್ದಾರೆ. 1976-77ರಲ್ಲಿ ಪುರಸಭಾ ಸದಸ್ಯರಾಗಿ ಚುನಾಯಿತರಾಗುವ ಮೂಲಕ ಯಡಿಯೂರಪ್ಪನವರ ರಾಜಕೀಯ ಜೀವನ ಆರಂಭಗೊಂಡಿತ್ತು.

ನಾಲ್ಕು ದಶಕಗಳ ಒಡನಾಟ: ಯಡಿಯೂರಪ್ಪನವರ ಜೊತೆ ನನ್ನದು ಬಹುತೇಕ 37-38 ವರ್ಷಗಳ ಒಡನಾಟ. ಆಗ ಯಡಿಯೂರಪ್ಪನವರು ರೈತ ಜಾಥಾಕ್ಕಾಗಿ ನಮ್ಮೂರಾದ ಆಲ್ದೂರಿಗೆ ಬರುವವರಿದ್ದರು. ಯಡಿಯೂರಪ್ಪನವರ ನೇತೃತ್ವದಲ್ಲಿ ರೈತ ಜಾಥಾ ಬರುತ್ತದೆ ಎಂದು ನಾವೆಲ್ಲ ಸಭೆಗೆ ತಯಾರಿ ನಡೆಸಿದ್ದೆವು. ಆಗೆಲ್ಲ ನಮಗೆ ವೇದಿಕೆ, ಪೆಂಡಾಲ್ ಹಾಕಿಸುವ ಸಾಮರ್ಥ್ಯವೂ ಇರಲಿಲ್ಲ. ಟ್ರ್ಯಾಕ್ಟರ್ ಟ್ರಾಲಿಯನ್ನು ಒಂದೆಡೆ ನಿಲ್ಲಿಸಿ, ಅದರ ಮೇಲೆ ನಾಲ್ಕು ಕುರ್ಚಿ ಇಟ್ಟರೆ ಅದೇ ವೇದಿಕೆ, ಅಲ್ಲಿಂದಲೇ ಭಾಷಣ. ಜನರನ್ನು ಸೇರಿಸುವ, ಅವರಿಗೆ ವಾಹನ ಮಾಡಿ ಕರೆಸಿಕೊಳ್ಳುವ ಪದ್ಧತಿಗಳೇ ಆಗಿರಲಿಲ್ಲ. ಜನರೆಲ್ಲ ಸ್ವಯಂಪ್ರೇರಿತರಾಗಿ ಬಂದು, ಭಾಷಣ ಕೇಳುತ್ತಿದ್ದರು.

ಆಗ ವಿಠಲ ರಾಯರು ಬಿಜೆಪಿ ಜಿಲ್ಲಾಧ್ಯಕ್ಷರಾಗಿದ್ದರು. ನಾನು ಆಗ ಆಲ್ದೂರು ಹೋಬಳಿಯ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ಆ ಸಮಯದಲ್ಲಿ ಯಡಿಯೂರಪ್ಪನವರ ಜೊತೆ ಮಾತನಾಡುತ್ತಾ ವಿಠಲ ರಾಯರು ನಮ್ಮ ಸಿ. ಟಿ. ರವಿ ವಿರುದ್ಧ ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿ ತುಂಬಾ ತೊಂದರೆ ಕೊಡುತ್ತಿದ್ದಾರೆ, ಓರ್ವ ಇನ್ಸ್‌ಪೆಕ್ಟರ್ ಅಂತೂ ನಮ್ಮ ಕಾರ್ಯಕರ್ತರನ್ನೇ ಗುರಿಯಾಗಿಸಿದ್ದಾರೆ ಎಂದರು. ಆಗ ರಾಜ್ಯದಲ್ಲಿ ಯಡಿಯೂರಪ್ಪ, ಈಶ್ವರಪ್ಪ, ರುಕ್ಮಯ್ಯ ಪೂಜಾರಿ, ನಾರಾಯಣ ರಾವ್ ಅವರನ್ನೊಳಗೊಂಡು, ಕೇವಲ ನಾಲ್ವರು ಬಿಜೆಪಿ ಶಾಸಕರಿದ್ದರು. ಆ ದಿನ ಭಾಷಣ ಮಾಡುವಾಗ ಯಡಿಯೂರಪ್ಪನವರು ಬಿಜೆಪಿ ಕಾರ್ಯಕರ್ತರಿಗೆ ತೊಂದರೆ ಕೊಡುತ್ತಿದ್ದ ಇನ್ಸ್‌ಪೆಕ್ಟರ್‌ಗೆ ಎಚ್ಚರಿಕೆ ನೀಡಿ, ಕಾರ್ಯಕರ್ತರಿಗೆ ತೊಂದರೆ ಕೊಟ್ಟರೆ ಹುಷಾರು ಎಂದಿದ್ದರು. ನಾವೆಲ್ಲ ಕಾರ್ಯಕರ್ತರು ಸಂಭ್ರಮದಿಂದ ಚಪ್ಪಾಳೆ ತಟ್ಟಿದ್ದೆವು. ಈ ರೀತಿ ಸಾರ್ವಜನಿಕವಾಗಿಯೇ ಕಾರ್ಯಕರ್ತರ ಬೆನ್ನಿಗೆ ನಿಲ್ಲುವ, ಅವರಲ್ಲಿ ಧೈರ್ಯ, ಆತ್ಮವಿಶ್ವಾಸ ತುಂಬುವ ಕೆಲಸ ಯಡಿಯೂರಪ್ಪನವರು ಮಾಡುತ್ತಿದ್ದರು.

ಅಂದು ರಾತ್ರಿ ಸಭೆ ಮುಗಿದ ಬಳಿಕ, ಯಡಿಯೂರಪ್ಪನವರೊಂದಿಗೆ ಆಲ್ದೂರಿನಲ್ಲಿದ್ದ ತಮ್ಮ ಸಂಬಂಧಿ ಕಟಾರದಳ್ಳಿ ಹೊನ್ನಪ್ಪನವರ ಮನೆಗೆ ಊಟಕ್ಕೆ ತೆರಳಿದ್ದೆವು. ಆ ದಿನ ನನ್ನೊಡನೆ ಕುಳಿತು ಮಾತನಾಡುತ್ತಾ, ಯಡಿಯೂರಪ್ಪನವರು ತಮ್ಮ ತಲೆಯನ್ನು ತೋರಿಸಿ, ಇಲ್ಲೊಮ್ಮೆ ಮುಟ್ಟು ಎಂದರು. ನನ್ನ ತಲೆಗೆ ಹೊಡೆದು, ಯಡಿಯೂರಪ್ಪ ಸತ್ತು ಹೋದ ಎಂದು ಎಸೆದು ಹೋಗಿದ್ದರು. ಆದರೆ, ನಾನಿಂದು ಶಾಸಕನಾಗಿದ್ದೇನೆ. ಮುಂದೊಂದು ದಿನ ನೀನೂ ಶಾಸಕನಾಗುತ್ತೀಯ. ಯಾವುದಕ್ಕೂ ಹೆದರದೆ ಹೋರಾಟ ಮುಂದುವರಿಸು ಎಂದು ಧೈರ್ಯ ತುಂಬಿದರು. ಬಹುಶಃ ನನ್ನ ಮನಸ್ಸಲ್ಲೂ ಎಂಎಲ್‌ಎ ಆಗಬಹುದು ಎನ್ನುವ ಆಸೆಯ ಬೀಜಾಂಕುರ ಮಾಡಿದ್ದು ಯಡಿಯೂರಪ್ಪನವರ ಮಾತು.

ರಾಜಕೀಯ ಹಿನ್ನೆಲೆ ಇಲ್ಲದೆಯೂ ಮುನ್ನಲೆಗೆ: ಆಗ ನಾವಿದ್ದದ್ದು ಆಲ್ದೂರಿನಲ್ಲಿ. ಅದು ಮೂಡಿಗೆರೆ ಮೀಸಲು ವಿಧಾನಸಭಾ ಕ್ಷೇತ್ರ. ನಾನು ಹೋಬಳಿ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ರಾಜಕೀಯ ಹಿನ್ನೆಲೆ ಇರಲಿಲ್ಲ. ನಮ್ಮ ತಂದೆ ಓರ್ವ ಮಧ್ಯಮ ವರ್ಗದ ರೈತ. ಚಿಕ್ಕಮಗಳೂರಿಗೆ ಬಂದು ಹೋರಾಟ ಸಂಘಟಿಸಿ, ಶಾಸಕನಾಗಲು ಯಡಿಯೂರಪ್ಪನವರ ಮಾತು ಪ್ರೇರಣೆ ನೀಡಿತ್ತು.

ಆ ಸಮಯದಲ್ಲಿ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಒಂದು ಹೋರಾಟ ನಡೆಯುತ್ತಿತ್ತು. ಆಗೆಲ್ಲ ಸಂಜೆ ಪತ್ರಿಕೆಗಳು ವಿಶಿಷ್ಟವಾಗಿ ಸುದ್ದಿಗೆ ಶೀರ್ಷಿಕೆ ನೀಡುತ್ತಿದ್ದವು. ನಾನು ಹೋರಾಟದ ಕಾರ್ಯಕ್ರಮ ನಿರೂಪಣೆ ಮಾಡುತ್ತಾ, ಘೋಷಣೆ, ಜಯಕಾರ ಹಾಕಿಸುತ್ತಿದ್ದೆ. ಆ ಸಮಯದಲ್ಲಿ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದರು. ವಿಧಾನಸೌಧದಲ್ಲಿ ಒಂದು ಚರ್ಚೆಯ ವೇಳೆ ಯಡಿಯೂರಪ್ಪನವರು ಬಂಗಾರಪ್ಪನವರನ್ನು ಉದ್ದೇಶಿಸಿ, ನಿಮ್ಮ ತಲೆಗೆ ಕಿರೀಟ ಇಟ್ಟುಕೊಂಡಿರಿ, ರೈತರ ಕೈಗೆ ಚಿಪ್ಪು ಕೊಟ್ಟಿರಿ ಎಂದಿದ್ದರು. ಸಂಜೆವಾಣಿ ಪತ್ರಿಕೆಯಲ್ಲಿ 'ಬಂಗಾರಪ್ಪನ ತಲೆಗೆ ಕಿರೀಟ - ರೈತರ ಕೈಗೆ ಚಿಪ್ಪು' ಎಂಬ ಶೀರ್ಷಿಕೆ ನೀಡಿ ಸುದ್ದಿ ಪ್ರಕಟಿಸಿತ್ತು. ಆಗಿನ್ನೂ ವಿಧಾನ ಸೌಧದಿಂದ ಯಡಿಯೂರಪ್ಪನವರು ಬಂದಿರಲಿಲ್ಲ. ನನ್ನ ಕಣ್ಣಿಗೆ ಸಂಜೆವಾಣಿಯ ಸುದ್ದಿ ಶೀರ್ಷಿಕೆ ಬಿತ್ತು. ನಾನು ತಕ್ಷಣವೇ 'ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು' ಎಂದು ಘೋಷಣೆ ಕೂಗಿದೆ. ಆ ಘೋಷಣೆ ಅತ್ಯಂತ ಜನಪ್ರಿಯವಾಗಿ, ಇಂದಿಗೂ ಅದೇ ಸಾಲು ಎಲ್ಲೆಡೆ ಕೇಳುವುದುಂಟು.

ಏಕಾಂಗಿಯಾದರೂ ಹೋರಾಟ ಬಿಡದ ಛಲದಂಕಮಲ್ಲ: ಯಡಿಯೂರಪ್ಪನವರು ಏಕಾಂಗಿಯಾದರೂ ಹೋರಾಟದ ಮನೋಭಾವ ಕೈಬಿಡದವರು. ಅವರ ಹೋರಾಟ ಮನೋಭಾವವನ್ನು ಗಮನಿಸುವಾಗ, ಡಿವಿಜಿಯವರ "ಹೋರಾಡು ಬೀಳ್ವನ್ನಮೊಬ್ಬಂಟಿಯಾದೊಡಂ |
ಧೀರಪಥವನೆ ಬೆದಕು ಸಕಲಸಮಯದೊಳಂ ||
ದೂರದಲಿ ಗೊಣಗುತ್ತ ಬಾಳ್ವ ಬಾಳ್ಗೇನು ಬೆಲೆ? |
ಹೋರಿ ಸತ್ವವ ಮೆರೆಸು – ಮಂಕುತಿಮ್ಮ ||" ಎನ್ನುವ ಕಗ್ಗ ನೆನಪಾಗುತ್ತದೆ. ಇದೇ ರೀತಿ ಯಡಿಯೂರಪ್ಪನವರೂ ಯಾರಿಗೂ ಕಾಯದೆ, ಹೋರಾಟ ನಡೆಸುತ್ತಾ ಸಾಗುವವರು.

ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ: ಒಂದು ಸುಭಾಷಿತವಿದೆ. 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ' ಎಂದು. ವಜ್ರದಷ್ಟು ಕಠಿಣವೂ ಹೌದು, ಹೂವಿನಷ್ಟು ಮೃದುವೂ ಹೌದು ಎನ್ನುವುದು ಅದರ ಭಾವಾರ್ಥ. ಇದು ಯಡಿಯೂರಪ್ಪನವರಿಗೆ ಸೂಕ್ತವಾಗಿ ಹೊಂದಿಕೊಳ್ಳುತ್ತಿತ್ತು. ಅದು ನಮ್ಮ ಅನುಭವವೂ ಹೌದು. ಎಷ್ಟೋ ಬಾರಿ ಅವರು ಗುರ್ ಗುರ್ ಅನ್ನದಿದ್ದರೆ ಅವರು ಸರಿಯಾಗಿ ಮಾತನಾಡಿಸಲಿಲ್ಲವಲ್ಲ ಎನಿಸುತ್ತಿತ್ತು! ಆಗ ಸ್ವಾಮಿಗೋ, ಧರಣಪ್ಪನವರಿಗೋ ಜೋರು ಮಾಡಿ, 'ಹಾ, ಏನ್ ಬಂದೆ?' ಎಂದರೆ ಇವರು ಯಾಕೋ ಸಿಟ್ಟಲ್ಲಿದ್ದಾರೆ ಎನಿಸಿ, ಏನಿಲ್ಲ, ಹಾಗೇ ಸುಮ್ಮನೆ ಮಾತಾಡಿಸಿಕೊಂಡು ಹೋಗೋಣ ಅಂತ ಬಂದ್ವಿ ಎನ್ನುತ್ತಾ ಮರಳಿದ್ದೂ ಇತ್ತು. ಅದು ಯಡಿಯೂರಪ್ಪನವರ ನೈಜ ಸ್ವಭಾವ.

ಅತಿಥಿ ಸತ್ಕಾರಕ್ಕೆ ಸದಾ ಬದ್ಧ: ಯಡಿಯೂರಪ್ಪನವರು ಮನೆಗೆ ಬಂದವರನ್ನು ಊಟ ಮಾಡಿಸದೆ ಕಳುಹಿಸುವವರಲ್ಲ. ಊಟದ ವೇಳೆಗೆ ಹೋದಾಗ ಊಟ ಮಾಡದೆ ಬಿಡುವವರೂ ಅಲ್ಲ. ನಾವು ಎಷ್ಟೋ ಬಾರಿ ಅವರ ಮನೆಯಲ್ಲಿ ಊಟ ಮಾಡಿದ್ದೇವೆ. ಒಂದು ಬಾರಿ ಶಿಕಾರಿಪುರದ ಅವರ ಹಳೆ ಮನೆಯಲ್ಲಿ ಯಡಿಯೂರಪ್ಪನವರು ಮಲಗಿದ್ದರು. ನಾವು ಮನೆಗೆ ತಲುಪಿದಾಗ ತಡವಾಗಿತ್ತು. ಅಷ್ಟಾದರೂ ನಮಗೆಲ್ಲ ಊಟಕ್ಕೆ ವ್ಯವಸ್ಥೆ ಮಾಡಿ, ಬಳಿಕ ಅಟ್ಟದ ಮೇಲೆ ನಿದ್ದೆಗೆ ವ್ಯವಸ್ಥೆ ಮಾಡಿಸಿಕೊಟ್ಟು, ನಾವು ಮಲಗಿದ ಬಳಿಕವೇ ಅವರು ಮಲಗಿದ್ದರು. ಯಾವುದೇ ಸಂದರ್ಭದಲ್ಲೂ ಅವರು ಮನೆಗೆ ಬಂದವರನ್ನು ಸತ್ಕರಿಸದೆ ಇದ್ದವರಲ್ಲ. ಗ್ರಾಮೀಣ ಸೊಗಡನ್ನು ತನ್ನೊಳಗೆ ಹೊತ್ತುಕೊಂಡೇ ಸಾರ್ವಜನಿಕ ಜೀವನದಲ್ಲಿ ಯಶಸ್ವಿಯಾದವರು ನಮ್ಮ ಯಡಿಯೂರಪ್ಪ.

ಶೆಟ್ರು - ಭಟ್ರ ಪಾರ್ಟಿಯಿಂದ ಜನ ಸಾಮಾನ್ಯರ ಪಾರ್ಟಿಯತ್ತ: ಒಂದು ಕಾಲದಲ್ಲಿ ನಮ್ಮನ್ನು ಶೆಟ್ರು ಭಟ್ರ ಪಾರ್ಟಿ, ಚಿತ್ರಾನ್ನ ಮೊಸರನ್ನ ಪಾರ್ಟಿ ಎಂದು ಲೇವಡಿ ಮಾಡುವುದಿತ್ತು. ಆದರೆ, ಕೆಲವೇ ಸಮುದಾಯಗಳ ಪಕ್ಷ ಎನ್ನುವುದರಿಂದ, ರೈತರ, ಜನಸಾಮಾನ್ಯರ ಪಾರ್ಟಿಯಾಗಿ ಮಾಡುವಲ್ಲಿ ಯಡಿಯೂರಪ್ಪನವರ ಯೋಗದಾನ ಬಹಳ ದೊಡ್ಡದು. ಇದು ಕೇವಲ ಹೊಗಳಿಕೆಯ ಮಾತಲ್ಲ. ಯಡಿಯೂರಪ್ಪ ಮತ್ತು ಅನಂತ ಕುಮಾರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಇದ್ದಂತೆ ಕಾರ್ಯಾಚರಿಸಿದವರು. ಅನಂತ ಕುಮಾರ್‌ರವರು ಸಾಫ್ಟ್‌ವೇರ್ ರೀತಿಯಲ್ಲಿ ಯೋಜನೆ, ಕಾರ್ಯಾಚರಣೆ ರೂಪಿಸಿದರೆ, ಯಡಿಯೂರಪ್ಪನವರು ಹಾರ್ಡ್‌ವೇರ್ ರೀತಿಯಲ್ಲಿ ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದರು.

ಮಾಸ್ ಲೀಡರ್ - ಬಿಎಸ್‌ವೈ: ಯಡಿಯೂರಪ್ಪನವರು ಎಂತಹ ಯೋಜನೆಗಾದರೂ ನಾಯಕತ್ವ ನೀಡುತ್ತಿದ್ದವರು. ಅಂತಹ ನಾಯಕತ್ವವೇ ಯಡಿಯೂರಪ್ಪನವರ ವ್ಯಕ್ತಿತ್ವ. ಎಷ್ಟೋ ಜನರಿಗೆ ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಲು, ರಾಜಕಾರಣದಲ್ಲಿ ಹೋರಾಟ ನಡೆಸಲು ಯಡಿಯೂರಪ್ಪನವರ ಬದುಕು ಪ್ರೇರಣೆ ನೀಡಿದೆ. ಅಂತಹ ಪ್ರೇರಣೆ ಪಡೆದ ಸಾವಿರಾರು ಕಾರ್ಯಕರ್ತರಲ್ಲಿ ನಾನೂ ಒಬ್ಬ. ಏಕಾಂಗಿಯಾದರೂ ಹೋರಾಟ ನಡೆಸಬೇಕು ಎನ್ನುವ ಗುಣವನ್ನು ಯಡಿಯೂರಪ್ಪನವರಿಂದ ನಾನು ಕಲಿತಿದ್ದೇನೆ, ಅನುಸರಿಸಿದ್ದೇನೆ.

ಯಡಿಯೂರಪ್ಪ ರಾಜಕಾರಣದ ಸುವರ್ಣ ಸಂಭ್ರಮ: ಇಂತಹ ನಾಯಕ ಯಡಿಯೂರಪ್ಪನವರ ಸಾರ್ವಜನಿಕ ಬದುಕಿಗೆ 50 ವರ್ಷ ತುಂಬಿದೆ. ಇದು ಸಂಭ್ರಮಕ್ಕೆ ಮಾತ್ರ ಸೀಮಿತವಾದ ಕ್ಷಣವಲ್ಲ. ಅವರ ಬದುಕಿನಿಂದ ಪ್ರೇರಣೆ ಪಡೆಯುವ ಸಂದರ್ಭವೂ ಹೌದು. 50 ವರ್ಷಗಳ ಪ್ರೇರಣದಾಯಿ ರಾಜಕಾರಣ ನಡೆಸಿದ ಯಡಿಯೂರಪ್ಪನವರಿಗೆ ಅಭಿನಂದನೆಗಳು. ಅವರ ಮಾರ್ಗದರ್ಶನ ಸದಾಕಾಲ ನಮ್ಮ ಮೇಲಿರಲಿ.





ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನ್ಯೂಜಿಲೆಂಡ್ ತಂಡದಲ್ಲಿ ಕೇನ್ ವಿಲಿಯಮ್ಸನ್



ವೆಲಿಂಗ್ಟನ್ (ಎಎಫ್‌ಪಿ): ಅನುಭವಿ ಬ್ಯಾಟರ್ ಕೇನ್ ವಿಲಿಯಮ್ಸನ್, ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧ ಈ ತಿಂಗಳು ಮತ್ತು ಜೂನ್‌ನಲ್ಲಿ ನಡೆಯಲಿರುವ ಟೆಸ್ಟ್ ಸರಣಿಗೆ ಆಯ್ಕೆ ಮಾಡಿರುವ ನ್ಯೂಜಿಲೆಂಡ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಟೆಸ್ಟ್‌ನಲ್ಲಿ 10 ಸಹಸ್ರ ರನ್ ಪೂರೈಸುವ ಗುರಿಯತ್ತ 35 ವರ್ಷ ವಯಸ್ಸಿನ ವಿಲಿಯಮ್ಸನ್ ಮುಂದಡಿಯಿಡಲಿದ್ದಾರೆ. 108 ಟೆಸ್ಟ್ ಪಂದ್ಯಗಳನ್ನು ಆಡಿರುವ ಅವರು 54.7ರ ಸರಾಸರಿಯಲ್ಲಿ 9,461 ರನ್ ಕಲೆಹಾಕಿದ್ದಾರೆ. ಐರ್ಲೆಂಡ್ ವಿರುದ್ಧ ಏಕೈಕ ಟೆಸ್ಟ್ ಪಂದ್ಯ ಮೇ 27ರಂದು ಆರಂಭವಾಗಲಿದೆ. ಇಂಗ್ಲೆಂಡ್ ವಿರುದ್ಧ ಸರಣಿ ಜೂನ್ 4ರಿಂದ ನಡೆಯಲಿದೆ.

19 ಸದಸ್ಯರ ತಂಡ ಹೀಗಿದೆ: ಟಾಮ್ ಲೇಥಮ್ (ನಾಯಕ), ಟಾಮ್ ಬ್ಲಂಡೆಲ್, ಕ್ರಿಸ್ಟಿಯನ್ ಕ್ಲಾರ್ಕ್, ಡೆವಾನ್ ಕಾನ್ವೆ, ಜಾಕ್ ಫೌಲ್ಕ್ಸ್, ಡೀನ್ ಫಾಕ್ಸ್‌ಕ್ರಾಫ್ಟ್, ಮ್ಯಾಟ್ ಹೆನ್ರಿ, ಕೈಲ್ ಜೇಮಿಸನ್, ಡೇರಿಲ್ ಮಿಚೆಲ್, ಹೆನ್ರಿ ನಿಕೋಲ್ಸ್, ವಿಲ್ ಒ ರೂರ್ಕಿ, ಗ್ಲೆನ್ ಫಿಲಿಪ್ಸ್, ಮೈಕೆಲ್ ರೇ, ರಚಿನ್ ರವೀಂದ್ರ, ಬೆನ್ ಸಿಯರ್ಸ್, ನೇಥನ್ ಸ್ಮಿತ್, ಬ್ಲೇರ್ ಟಿಕ್ನರ್, ಕೇನ್ಸ್ ವಿಲಿಯಮ್ಸನ್, ವಿಲ್ ಯಂಗ್. ಇವರಲ್ಲಿ ಕ್ರಿಸ್ಟಿಯನ್ ಕ್ಲಾರ್ಕ್, ಮೈಕೆಲ್ ರೇ ಮತ್ತು ವಿಲ್ ಯಂಗ್ ಅವರು ಐರ್ಲೆಂಡ್ ಸರಣಿಗೆ ಮಾತ್ರ ಅವಕಾಶ ಪಡೆದಿದ್ದಾರೆ.

ಹಿನ್ನಡೆಯಿಂದ ಪುಟಿದೆದ್ದ ಯೂಸ್ಟಿನಾ

ತುಮಕೂರು ಓಪನ್: ಎಂಟರ ಘಟ್ಟಕ್ಕೆ ಶ್ರೇಯಾಂಕ ಆಟಗಾರ್ತಿಯರ ಲಗ್ಗೆ

ಪ್ರಜಾವಾಣಿ ವಾರ್ತೆ

ತುಮಕೂರು: ಮೊದಲ ಆರು ಮಂದಿ ಶ್ರೇಯಾಂಕ ಆಟಗಾರ್ತಿಯರು, ತುಮಕೂರು ಓಪನ್ ಐಟಿಎಫ್ ಡಬ್ಲ್ಯು 35 ಟೂರ್ನಿಯಲ್ಲಿ ಗುರುವಾರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು. ಆ ಮೂಲಕ ಕುತೂಹಲಕಾರಿ ಹಣಾಹಣಿಗೆ ವೇದಿಕೆ ಸಜ್ಜುಗೊಂಡಿದೆ.

ಅಗ್ರ ಶ್ರೇಯಾಂಕದ ಯೂಸ್ಟಿನಾ ಮಿಕೂಲ್‌ಸ್ಕಿಟೆ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮೊದಲ ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡು 0–6, 6–3, 6–1 ರಿಂದ ಪೋಲೆಂಡ್‌ನ ಝುರ್ಝಾನಾ ಕೊಲೊನಸ್ ಅವರನ್ನು ಹಿಮ್ಮೆಟ್ಟಿಸಿದರು. ಮೊದಲ ಸೆಟ್‌ನಲ್ಲಿ ಒಂದೂ ಗೇಮ್ ಗೆಲ್ಲಲಾಗದಿದ್ದರೂ ಸಕಾಲದಲ್ಲಿ ಲಯ ಕಂಡುಕೊಂಡ ನಂತರ ಯೂಸ್ಟಿನಾ ಪಂದ್ಯದ ಮೇಲೆ ಹಿಡಿತ ಸಾಧಿಸಿದರು.

ಉಳಿದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯಗಳು ನೇರ ಸೆಟ್‌ಗಳಲ್ಲಿ ಇತ್ಯರ್ಥಗೊಂಡವು. ಎರಡನೇ ಶ್ರೇಯಾಂಕದ ಆಟಗಾರ್ತಿ ಝುರ್ಝಾನಾ ಪಾವ್ಲಿಕೊವಾಸ್ಕಾ, ಮೂರನೇ ಶ್ರೇಯಾಂಕದ ವೈದೇಹಿ ಚೌಧರಿ, ನಾಲ್ಕನೇ ಶ್ರೇಯಾಂಕದ ಝೀಲ್ ದೇಸಾಯಿ ಅವರೂ ಅಧಿಕಾರಯುತ ಗೆಲುವುಗಳೊಂದಿಗೆ ಎಂಟರ ಘಟ್ಟ ತಲುಪಿದರು. ಪೋಲೆಂಡ್‌ನ ಪಾವ್ಲಿಕೊವಾಸ್ಕಾ ಅವರು 16ರ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಭಾರತದ ಸೋನಾಲ್ ಪಾಟೀಲ್ ಅವರನ್ನು 6–2, 6–4 ರಿಂದ ಸೋಲಿಸಿದರು.

ಗುಜರಾತ್‌ನ ವೈದೇಹಿ ಪಂದ್ಯದುದ್ದಕ್ಕೂ ನಿಯಂತ್ರಣ ಸಾಧಿಸಿ 6–2, 6–2 ರಿಂದ ಸ್ವದೇಶದ ಮಧುರಿಮಾ ಸಾವಂತ್ ಅವರನ್ನು ಹಿಮ್ಮೆಟ್ಟಿಸಿದರು. ಗುಜರಾತ್‌ನ ಝೀಲ್ ದೇಸಾಯಿ ಅಮೋಘ ಆಟವಾಡಿ 6–2, 6–3 ರಿಂದ ಸ್ವದೇಶದ ಜೆನ್ನಿಫರ್ ಲುಯಿಖಮ್ ಅವರನ್ನು ಪರಾಭವಗೊಳಿಸಿ ಎಂಟರ ಘಟ್ಟಕ್ಕೆ ಮುನ್ನಡೆದರು.

ಅರಿನಾ ಅರಿಫುಲಿನಾ, ಇಕತೆರಿನಾ ಯಶೀನಾ, ಸೇನಿಯಾ ಲೆಸ್ಕುಟೋವಾ, ಎಲಿನಾ ನೆಪ್ಲಿ ಅವರೂ ಎಂಟರ ಘಟ್ಟ ತಲುಪಿದರು. ಈ ನಾಲ್ವರೂ ರಷ್ಯಾದ ಆಟಗಾರ್ತಿಯರು.

ಐದನೇ ಶ್ರೇಯಾಂಕದ ಎಲಿನಾ 6–1, 6–1 ರಿಂದ ಭಾರತದ ಲಕ್ಷ್ಮೀಸಿರಿ ದಂಡು ಅವರನ್ನು ಹಿಮ್ಮೆಟ್ಟಿಸಿದರೆ, ಆರನೇ ಶ್ರೇಯಾಂಕದ ಇಕತೆರಿನಾ 4–0 ಯಿಂದ ಮುನ್ನಡೆ ಸಾಧಿಸಿದ್ದಾಗ ಅವರ ಎದುರಾಳಿ ಕಾಶಿಶ್ ಭಾಟಿಯಾ ಪಂದ್ಯ ಬಿಟ್ಟುಕೊಟ್ಟರು.

ಅರಿಫುಲಿನಾ ಮತ್ತು ಲೆಸ್ಕುಟೋವಾ ಅವರು ಮಾತ್ರ ಎಂಟರ ಘಟ್ಟ ತಲುಪಿದ ಶ್ರೇಯಾಂಕರಹಿತ ಆಟಗಾರ್ತಿಯರಾಗಿದ್ದಾರೆ. ಅರಿಫುಲಿನಾ 6–4, 6–2 ರಿಂದ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಪೂಜಾ ಇಂಗ್ಲೆ ವಿರುದ್ಧ ಜಯಗಳಿಸಿದರೆ, ಲೆಸ್ಕುಟೋವಾ 6–4, 6–2 ರಿಂದ ಭಾರತದ ಸಂದೀಪ್ತಿ ಸಿಂಗ್ ರಾವ್ ಅವರನ್ನು ಸೋಲಿಸಿದರು.

ಭಾರತದ ವೈದೇಹಿ ಚೌಧರಿ ಆಟದ ವೈಖರಿ

ಕ್ವಾರ್ಟರ್‌ಫೈನಲ್ ಹಣಾಹಣಿ

ಮಿಕೂಲ್‌ಸ್ಕಿಟೆ– ಲೆಸ್ಕುಟೋವಾ; ವೈದೇಹಿ– ಇಕತೆರಿನಾ; ಅರಿಫುಲಿನಾ– ಝೀಲ್ ದೇಸಾಯಿ; ಎಲಿನಾ ನೆಪ್ಲಿ– ಝುರ್ಝಾನಾ.

ಡಬಲ್ಸ್‌ನಲ್ಲಿ ಭಾರತದ ಶ್ರಾವ್ಯಾ ಶಿವಾನಿ ಚಿಲಕಲಪುಡಿ– ಝೀಲ್ ದೇಸಾಯಿ, ಅಕಾಂಕ್ಷಾ ನಿಟ್ಟುರೆ– ಮಿಚಿಕಾ ಒಝೆಕಿ (ಜಪಾನ್), ಅಗ್ರ ಶ್ರೇಯಾಂಕದ ವೈದೇಹಿ – ಝುರ್ಝಾನಾ, ಸೇನಿಯಾ ಲೆಸ್ಕುಟೋವಾ– ಎಲಿನಾ ನೆಪ್ಲಿ ಜೋಡಿಗಳು ಸೆಮಿಫೈನಲ್ ತಲುಪಿವೆ.

ವಿಶ್ವಕಪ್: ಮಹಿಳಾ ತಂಡಕ್ಕೆ ಶರಣಾದ ದಕ್ಷಿಣ ಕೊರಿಯಾ

ಆರ್ಚರಿ: ಭಾರತ ತಂಡಗಳಿಗೆ ಮಿಶ್ರಫಲ

ಶಾಂಘೈ (ಪಿಟಿಐ): ಭಾರತ ತಂಡಗಳಿಗೆ ಆರ್ಚರಿ ವಿಶ್ವಕಪ್ ಸ್ಟೇಜ್ 2 ಟೂರ್ನಿಯ ರಿಕರ್ವ್ ವಿಭಾಗದಲ್ಲಿ ಗುರುವಾರ ಮಿಶ್ರಫಲ. ಪುರುಷರ ತಂಡವು ಮೊದಲ ಸುತ್ತಿನಲ್ಲೇ ಹೊರಬಿದ್ದರೆ, ಮಹಿಳಾ ತಂಡವು ಸೆಮಿಫೈನಲ್‌ನಲ್ಲಿ ಪ್ರಬಲ ದಕ್ಷಿಣ ಕೊರಿಯಾ ತಂಡವನ್ನು ಸೋಲಿಸಿ ಭಾರತಕ್ಕೆ ಮೊದಲ ಪದಕ ಖಚಿತಪಡಿಸಿಕೊಂಡಿತು.

ಪುರುಷರ ತಂಡ, ಬಾಂಗ್ಲಾ ದೇಶ ಎದುರು ಆಘಾತಕಾರಿ ಸೋಲನು ಭವಿಸಿತು. ಮಿಶ್ರ ತಂಡ ವಿಭಾಗದಲ್ಲೂ ತಂಡವು ನಿರಾಶೆ ಅನುಭವಿಸಿತು. ಮಿಶ್ರ ತಂಡ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಧೀರಜ್ ಬೊಮ್ಮದೇವರ–ಅಂಕಿತಾ ಭಕತ್ ಜೋಡಿ ಎರಡನೇ ಸುತ್ತಿನಲ್ಲಿ ಬ್ರೆಜಿಲ್ ತಂಡದೆದುರು 4–5ರಲ್ಲಿ ಸೋಲನುಭವಿಸಿತು.

ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಹದಿಹರೆಯದ ಸ್ಪರ್ಧಿ ಕುಂಕುಮ್ ಮೊಹೊದ್ ಅವರನ್ನು ಒಳಗೊಂಡ ಭಾರತ ರಿಕರ್ವ್ ತಂಡವು, ಹತ್ತು ಬಾರಿಯ ಒಲಿಂಪಿಕ್ ಚಾಂಪಿಯನ್ ದಕ್ಷಿಣ ಕೊರಿಯಾ ತಂಡವನ್ನು 5–1 ಅಂತರದಿಂದ ಸೋಲಿಸಿತು. ನಾಲ್ಕನೇ ಶ್ರೇಯಾಂಕದ ಭಾರತ ತಂಡವು ಭಾನುವಾರ ಚಿನ್ನದ ಪದಕಕ್ಕಾಗಿ ನಡೆಯುವ ಫೈನಲ್ ಪಂದ್ಯದಲ್ಲಿ ಆತಿಥೇಯ ಹಾಗೂ ಎರಡನೇ ಶ್ರೇಯಾಂಕದ ಚೀನಾ ತಂಡವನ್ನು ಎದುರಿಸಲಿದೆ.

ಆದರೆ ಪುರುಷರ ವಿಭಾಗದಲ್ಲಿ ತಂಡಕ್ಕೆ ಮುಖಭಂಗವಾಯಿತು. ಅನುಭವಿಗಳಾದ ತರುಣದೀಪ್ ರಾಯ್, ಧೀರಜ್ ಬೊಮ್ಮದೇವರ ಮತ್ತು ಯಶದೀಪ್ ಭೋಗೆ ಅವರಿದ್ದ ತಂಡ ಒಂದೂ ಸೆಟ್ ಗೆಲ್ಲಲಾಗದೇ ಬಾಂಗ್ಲಾ ದೇಶ ತಂಡಕ್ಕೆ 2–6 ರಲ್ಲಿ ಮಣಿಯಿತು.

ಕೊರಿಯಾ ತಂಡವು ಹೊಸ ಸ್ವರೂಪ ಪಡೆದಿತ್ತು. ತಂಡದಲ್ಲಿ ಇದೇ ಮೊದಲ ಬಾರಿ ಇಬ್ಬರು ಹೊಸಬರು – ಲೀ ಯುನ್‌ಜಿ ಮತ್ತು ಒ ಯೆಜಿನ್ ಕಣಕ್ಕಿಳಿದಿದ್ದರು. ಹಾಲಿ ವಿಶ್ವ ಚಾಂಪಿಯನ್ ಕಾಂಗ್ ಚೇಯಾಂಗ್ ಮಾತ್ರ ತಂಡದಲ್ಲಿದ್ದ ಅನುಭವಿ ಬಿಲ್ಗಾರ್ತಿಯಾಗಿದ್ದರು.

ಭಾರತ ಮಹಿಳಾ ತಂಡ ಮೊದಲ ಸುತ್ತಿನಲ್ಲಿ 6–2 ರಿಂದ ಉಜ್ಬೇಕಿಸ್ತಾನ ತಂಡವನ್ನು ಸೋಲಿಸಿತ್ತು. ಆದರೆ ಭಾರತಕ್ಕೆ ಪ್ರಬಲ ಸವಾಲು ಎದುರಾಗಿದ್ದು ಕ್ವಾರ್ಟರ್‌ಫೈನಲ್ಸ್‌ನಲ್ಲಿ ವಿಯೆಟ್ನಾಂ ವಿರುದ್ಧ. ಭಾರತ ಆ ಹಣಾಹಣಿಯನ್ನು 5–4 ರಲ್ಲಿ (28–25) ರೋಚಕ ಶೂಟ್ ಆಫ್‌ನಲ್ಲಿ ಜಯಿಸಿತು.

ಭಾರತದ ದೀಪಿಕಾ ಕುಮಾರಿ

ಮುಖ್ಯಾಂಶಗಳು

- ಭಾರತ ಮಹಿಳಾ ರಿಕರ್ವ್ ತಂಡಕ್ಕೆ ಫೈನಲ್‌ನಲ್ಲಿ ಚೀನಾ ಎದುರಾಳಿ
- ಬಾಂಗ್ಲಾದೇಶಕ್ಕೆ ಮೊದಲ ಸುತ್ತಿನಲ್ಲಿ ಮಣಿದ ಪುರುಷರ ತಂಡ

ಏಷ್ಯನ್ ಗೇಮ್ಸ್: ವಿನೇಶ್‌ಗೆ ತಪ್ಪಿದ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕುಸ್ತಿ ಸಂಸ್ಥೆಯು (ಡಬ್ಲ್ಯುಎಫ್‌ಐ) ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವ ಕುಸ್ತಿಪಟುಗಳ ಆಯ್ಕೆಗಾಗಿ ಮೇ 30 ಹಾಗೂ 31ರಂದು ಟ್ರಯಲ್ಸ್ ಆಯೋಜಿಸಿದೆ. ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್ ಹಾಗೂ ಫೆಡರೇಶನ್ ಕಪ್‌ನಲ್ಲಿ ಪದಕ ಗೆದ್ದ ಕುಸ್ತಿಪಟುಗಳು ಮಾತ್ರ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಈ ನಿಯಮದಿಂದಾಗಿ, ವಿನೇಶ್ ಫೋಗಟ್ ಅವರಿಗೆ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವ ಅವಕಾಶದ ಬಾಗಿಲು ಮುಚ್ಚಿದಂತಾಗಿದೆ.

ರಾಷ್ಟ್ರೀಯ ರ‍್ಯಾಂಕಿಂಗ್ ಕುಸ್ತಿ ಚಾಂಪಿಯನ್‌ಷಿಪ್‌ನ ಪದಕ ವಿಜೇತರಿಗೂ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಡಬ್ಲ್ಯುಎಫ್‌ಐ ಅವಕಾಶ ನೀಡಲಿದೆ ಎಂಬ ನಿರೀಕ್ಷೆಯಿತ್ತು. ಆದರೆ, ಡಬ್ಲ್ಯುಎಫ್‌ಐ ಈಚೆಗೆ ಹೊರಡಿಸಿದ ಸುತ್ತೋಲೆಯಲ್ಲಿ ಈ ಬಗ್ಗೆ ಉಲ್ಲೇಖಿಸಿಲ್ಲ.



ವಿನೇಶ್ ಫೋಗಟ್

ಮಹಿಳೆಯರ ಆಯ್ಕೆ ಟ್ರಯಲ್ಸ್ ಮೇ 30ರಂದು ದೆಹಲಿಯಲ್ಲಿ ಹಾಗೂ ಪುರುಷರ ಆಯ್ಕೆ ಟ್ರಯಲ್ಸ್ ಮೇ 31ರಂದು ಲಖನೌನಲ್ಲಿ ನಡೆಯಲಿದೆ. ಅಂತಿಮ್ ಪಂಘಲ್, ಅಮನ್ ಸೆಹ್ರಾವತ್ ಸೇರಿ ತಾರಾ ಕುಸ್ತಿಪಟುಗಳು ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

31 ವರ್ಷ ವಯಸ್ಸಿನ ವಿನೇಶ್ ಅವರು ಉತ್ತರ ಪ್ರದೇಶದ ಗೊಂಡಾದಲ್ಲಿ ಇದೇ 10ರಂದು ಆರಂಭವಾಗಲಿರುವ ರಾಷ್ಟ್ರೀಯ ರ‍್ಯಾಂಕಿಂಗ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲು ಸಜ್ಜಾಗಿದ್ದಾರೆ. ಆದರೆ, ನಿವೃತ್ತಿ ವಾಪಸು ಪಡೆದು 6 ತಿಂಗಳು ಕಳೆದ ನಂತರವಷ್ಟೇ ಸ್ಪರ್ಧೆಗೆ ಮರಳಲು ಅವಕಾಶವಿದ್ದು, ವಿನೇಶ್ ಅವರು ಭಾಗವಹಿಸುವ ಬಗ್ಗೆ ಅನುಮಾನವೂ ಸೃಷ್ಟಿಯಾಗಿದೆ.

ನಿಯಮಗಳ ಪ್ರಕಾರ, ಸ್ಪರ್ಧಾಕಣಕ್ಕೆ ಮರಳುವ ಬಗ್ಗೆ ಹಾಗೂ ಉದ್ದೀಪನ ಮದ್ದು ಸೇವನೆ ಪರೀಕ್ಷೆಗೆ ಲಭ್ಯವಿರುವುದಾಗಿ ‘ವಾಡಾ’ ಅಥವಾ ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ನಿಗ್ರಹ ಘಟಕಕ್ಕೆ ಅಥ್ಲೀಟ್‌ಗಳು 6 ತಿಂಗಳು ಮುಂಚಿತವಾಗಿ ಲಿಖಿತ ಮನವಿ ಸಲ್ಲಿಸಬೇಕಿದೆ.

ವಿನೇಶ್ ಅವರು ನಿವೃತ್ತಿ ವಾಪಸು ಪಡೆಯುವುದಾಗಿ 2025ರ ಡಿಸೆಂಬರ್‌ನಲ್ಲಿ ಘೋಷಿಸಿದ್ದರು.

ಕಾಮನ್‌ವೆಲ್ತ್ ಕೂಟ: ಸಚಿವರಿಂದ ಪರಾಮರ್ಶೆ

ನವದೆಹಲಿ (ಪಿಟಿಐ): ‘ಸಕಾಲದಲ್ಲಿ ಚುನಾವಣೆ ಮತ್ತು ಆಯ್ಕೆಯಲ್ಲಿ ಪಾರದರ್ಶಕತೆ ಇರುವಂತೆ ನೋಡಿಕೊಳ್ಳಬೇಕು’ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ (ಎನ್‌ಎಸ್‌ಎಫ್) ಜೊತೆ ಗುರುವಾರ ನಡೆದ ಪರಾಮರ್ಶೆ ಸಭೆಯಲ್ಲಿ ಒತ್ತಿ ಹೇಳಿದರು.

ಡೋಪಿಂಗ್‌ನಲ್ಲಿ ಸಿಲುಕಿದ ಕ್ರೀಡಾಪಟುಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂಬ ಅವರ ಅಭಿಪ್ರಾಯಕ್ಕೆ ಬಹುತೇಕ ಸರ್ವಾನುಮತದ ಬೆಂಬಲ ವ್ಯಕ್ತವಾಯಿತು.

ದೇಶದ 37 ಎನ್‌ಎಸ್‌ಎಫ್‌ಗಳ ಪ್ರತಿನಿಧಿಗಳು, ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ, ಕ್ರೀಡಾ ಇಲಾಖೆ ಕಾರ್ಯದರ್ಶಿ ಹರಿರಂಜನ್ ರಾವ್, ಕ್ರೀಡಾ ಖಾತೆ ರಾಜ್ಯ ಸಚಿವೆ ರಕ್ಷಾ ಖಾಡ್ಸೆ ಅವರೂ ಸಭೆಯಲ್ಲಿ ಹಾಜರಿದ್ದು, ಈ ವರ್ಷದ ಏಷ್ಯಾಡ್ ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಿಗೆ ನಡೆಸುತ್ತಿರುವ ಸಿದ್ಧತೆಗಳ ಬಗ್ಗೆ ಮಾಹಿತಿ ಪಡೆದರು.

ಸಿದ್ಧತೆಯ ಮೇಲೆ ನಿಗಾ ಇಡಲು ಸಚಿವರು ಈ ಕ್ರೀಡಾಕೂಟಗಳು ಆರಂಭವಾಗುವವರೆಗೆ ನಿಯಮಿತವಾಗಿ ಪರಿಶೀಲನಾ ಸಭೆಗಳನ್ನು ನಡೆಸಲು ಉದ್ದೇಶಿಸಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ. ಕಾಮನ್‌ವೆಲ್ತ್ ಕ್ರೀಡೆಗಳು ಜುಲೈ– ಆಗಸ್ಟ್‌ನಲ್ಲಿ ಗ್ಲಾಸ್ಗೊದಲ್ಲಿ, ಏಷ್ಯನ್ ಕ್ರೀಡೆಗಳು ಸೆಪ್ಟೆಂಬರ್– ಅಕ್ಟೋಬರ್ ತಿಂಗಳಲ್ಲಿ ಜಪಾನ್‌ನಲ್ಲಿ (ಐಚಿ–ನಗೋಯಾದಲ್ಲಿ) ನಡೆಯಲಿವೆ.

ಭಾರತದ ಕ್ರೀಡಾ ಭವಿಷ್ಯವು, ಅಥ್ಲೀಟುಗಳು, ಫೆಡರೇಷನ್‌ಗಳು ಮತ್ತು ಸರ್ಕಾರದ ನಡುವೆ ಸಮನ್ವಯದ ಮೇಲೆ ಅವಲಂಬಿತವಾಗಿದೆ ಎಂದು ಮಾಂಡವೀಯ ಹೇಳಿದರು.

ಸಭೆಯಲ್ಲಿ ಏನು ಸಂದೇಶ ನೀಡಬೇಕಾಗಿತ್ತೊ ಅದನ್ನು ಸಚಿವರು ಖಡಕ್ಕಾಗಿ ನೀಡಿದರು ಎಂದು ಸಭೆಯಲ್ಲಿ ಹಾಜರಿದ್ದ ಫೆಡರೇಷನ್ ಒಂದರ ಅಧಿಕಾರಿ ಪಿಟಿಐಗೆ ತಿಳಿಸಿದರು.

ಫೆಡರೇಷನ್‌ಗಳು ಹೆಚ್ಚಿನ ಪಾರದರ್ಶಕತೆ, ಕಾಲಮಿತಿಯೊಳಗೆ ಚುನಾವಣೆ ಮತ್ತು ಉತ್ತರದಾಯಿತ್ವ ಹೊಂದಬೇಕು. ಇದರಿಂದ ಅವುಗಳ ಚಟುವಟಿಕೆ ಕ್ಷಮತೆಯಿಂದ ನಡೆಯುವುದರ ಜೊತೆಗೆ ಕ್ರೀಡಾಪಟುಗಳ ಹಿತಾಸಕ್ತಿ ಕಾಪಾಡಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಸಂಕ್ಷಿಪ್ತ ಸುದ್ದಿ

ಬೆಲರೂಸ್ ಕ್ರೀಡಾಪಟುಗಳ ಮೇಲಿನ ನಿರ್ಬಂಧ ಹಿಂಪಡೆದ ಐಒಸಿ

ಲುಸಾನ್ (ಎಎಫ್‌ಪಿ): ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಬೆಲರೂಸ್ ಕ್ರೀಡಾಪಟುಗಳಿಗೆ ವಿಧಿಸಲಾಗಿದ್ದ ನಿರ್ಬಂಧವನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಹಿಂಪಡೆದಿದೆ. ಆದರೆ ರಷ್ಯಾದ ಅಥ್ಲೀಟುಗಳ ಮೇಲಿನ ನಿರ್ಬಂಧ ಮುಂದುವರಿದಿದೆ.

2022ರಲ್ಲಿ ಉಕ್ರೇನ್ ವಿರುದ್ಧ ಯುದ್ಧ ಸಾರಿದ ನಂತರ ರಷ್ಯಾ ಮತ್ತು ಅದರ ಮಿತ್ರರಾಷ್ಟ್ರ ಬೆಲರೂಸ್ ಕ್ರೀಡಾಪಟುಗಳು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸದಂತೆ ಐಒಸಿ ನಿಷೇಧಿಸಿತ್ತು. ರಷ್ಯಾದ ಅಥ್ಲೀಟುಗಳು ತಟಸ್ಥ ಧ್ವಜದಡಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿತ್ತು.

2024ರ ಪ್ಯಾರಿಸ್ ಒಲಿಂಪಿಕ್ಸ್ ಮತ್ತು ಮಿಲಾನ್– ಕೊರ್ಟಿನಾ ಚಳಿಗಾಲದ ಒಲಿಂಪಿಕ್ ಕ್ರೀಡೆಗಳಲ್ಲಿ ಬೆಲರೂಸ್ ಮತ್ತು ರಷ್ಯಾದ ಕ್ರೀಡಾಪಟುಗಳು ‘ವೈಯಕ್ತಿಕ ತಟಸ್ಥ ಅಥ್ಲೀಟ್ಸ್’ (ಐಎನ್‌ಎ) ತಂಡದ ಹೆಸರಿನಲ್ಲಿ ಭಾಗವಹಿಸಿದ್ದರು.

ಆದರೆ ಹೀಗೆ ಭಾಗವಹಿಸಿದ ಕ್ರೀಡಾಪಟುಗಳ ಸಂಖ್ಯೆ (ಪ್ಯಾರಿಸ್‌ನಲ್ಲಿ 17 ಮತ್ತು ಇಟಲಿಯಲ್ಲಿ 7) ತೀರಾ ಕಡಿಮೆಯಿತ್ತು.

ಬೆಲರೂಸ್‌ನ ರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಪರಿಸ್ಥಿತಿ ಈಗ ರಷ್ಯಾ ಒಲಿಂಪಿಕ್ ಸಮಿತಿಗಿಂತ ಸುಧಾರಿಸಿದೆ ಎಂದು ಐಒಸಿ ಹೇಳಿದೆ.

ಸೆಪಕ್ ಟಕ್ರಾ ವಿಶ್ವಕಪ್; ಮಂಜುನಾಥ ರೆಫರಿ

ಹುಬ್ಬಳ್ಳಿ: ಇಲ್ಲಿನ ಪಿ.ಮಂಜುನಾಥ ಅವರು ಅಂತರರಾಷ್ಟ್ರೀಯ ಸೆಪಕ್ ಟಕ್ರಾ ಫೆಡರೇಷನ್ (ಐಎಸ್‌ಟಿಎಫ್) ವತಿಯಿಂದ ಮಲೇಷ್ಯಾದ ಕ್ವಾಲಾಲಂಪುರದಲ್ಲಿ ಮೇ 16ರಿಂದ 23ರವರೆಗೆ ನಡೆಯುವ ಸೆಪಕ್ ಟಕ್ರಾ ವಿಶ್ವಕಪ್ ಟೂರ್ನಿಯ ರೆಫರಿಯಾಗಿ ಭಾಗವಹಿಸುವರು.

ಕರ್ನಾಟಕ ಅಮೆಚೂರ್ ಸೆಪಕ್ ಟಕ್ರಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಆಗಿರುವ ಮಂಜುನಾಥ ಅವರು, ವಿಶ್ವಕಪ್ ಟೂರ್ನಿಯಲ್ಲಿ ಐದನೇ ಬಾರಿಗೆ ರೆಫರಿಯಾಗಿ ಕಾರ್ಯನಿರ್ವಹಿಸುವರು. ಭಾರತದಿಂದ ಮಂಜುನಾಥ ಅವರ ಜತೆಗೆ ಪಟ್ನಾದ ಕರುಣೇಶ್ ಕುಮಾರ್ ಸಹ ರೆಫರಿಯಾಗಿ ಆಯ್ಕೆಯಾಗಿದ್ದಾರೆ.

ಟೇಬಲ್ ಟೆನಿಸ್ ಆಟಗಾರರಿಗೆ ಉಚಿತ ಕೋಚಿಂಗ್ ಶಿಬಿರ ಇದೇ 18ರಿಂದ

ಬೆಂಗಳೂರು: ಬೆಂಗಳೂರು ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು (ಬಿಯುಡಿಟಿಟಿಎ) ಉದಯೋನ್ಮುಖ ಆಟಗಾರರಿಗಾಗಿ ಇದೇ 18ರಿಂದ 30ರ ವರೆಗೆ ಉಚಿತ ತರಬೇತಿ ಶಿಬಿರವನ್ನು ಆಯೋಜಿಸಿದೆ. ಕಂಠೀರವ ಕ್ರೀಡಾಂಗಣದಲ್ಲಿನ ರಾಜ್ಯ ಟೇಬಲ್ ಟೆನಿಸ್ ಸಂಸ್ಥೆಯ ಆವರಣದಲ್ಲಿ ಶಿಬಿರ ನಡೆಯಲಿದೆ.

ಪ್ರತಿದಿನ ಬೆಳಿಗ್ಗೆ 9.30ರಿಂದ 11.30ರ ವರೆಗೆ ತರಬೇತಿ ನೀಡಲಾಗುತ್ತದೆ. 6ರಿಂದ 19 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರು ಶಿಬಿರದಲ್ಲಿ ಪಾಲ್ಗೊಳ್ಳಬಹುದು. ನೋಂದಣಿಗೆ ಇದೇ 15 ಕೊನೆಯ ದಿನವಾಗಿದ್ದು, ಆಸಕ್ತರು ಬಿಯುಡಿಟಿಟಿಎ ಗೌರವ ಕಾರ್ಯದರ್ಶಿ ಟಿ.ಎಸ್.ರಾಮಕುಮಾರ್ (ಮೊ. 9449466913) ಅವರನ್ನು ಸಂಪರ್ಕಿಸಬಹುದು.



ಶುಕ್ರವಾರ, ಮೇ 8, 2026 | ₹ 7.00
prajavani.net | prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಎಂಟರ ಘಟ್ಟಕ್ಕೆ ಝೀಲ್

ಭಾರತದ ಝೀಲ್ ದೇಸಾಯಿ ಅವರು 'ತುಮಕೂರು ಓಪನ್' ಐಟಿಎಫ್ ಡಬ್ಲ್ಯು 35 ಮಹಿಳಾ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..



ತೆರವಾಗದ ಮರ; ಸಂಚಾರಕ್ಕೆ ಸಂಚಕಾರ

ಏಪ್ರಿಲ್ 29ರಿಂದ 500ಕ್ಕೂ ಹೆಚ್ಚು ಮರ ಧರೆಗೆ; ರಸ್ತೆ ಪಕ್ಕದಲ್ಲಿಯೇ ಕೊಂಬೆಗಳ ರಾಶಿ, ಪಾದಚಾರಿ ಮಾರ್ಗ ಒತ್ತುವರಿ

● ಆರ್.ಮಂಜುನಾಥ್

ಬೆಂಗಳೂರು: ನಗರದಲ್ಲಿ ಮಳೆ-ಬಿರುಗಾಳಿಗೆ ಒಂದು ವಾರದಿಂದ ಧರೆಗುರುಳಿದ ನೂರಾರು ಮರ ಹಾಗೂ ಸಾವಿರಾರು ರೆಂಬೆ-ಕೊಂಬೆಗಳು, ತೆರವಾಗದೆ ರಸ್ತೆ ಹಾಗೂ ಪಾದಚಾರಿ ಮಾರ್ಗದಲ್ಲಿಯೇ ರಾಶಿ ಬಿದ್ದಿದ್ದು, ಪಾದಚಾರಿಗಳು, ವಾಹನ ಸವಾರರಿಗೆ ಸಂಕಷ್ಟ ತಂದೊಡ್ಡಿವೆ.

ಆಲಿಕಲ್ಲು-ಬಿರುಗಾಳಿ ಸಹಿತ ಏಪ್ರಿಲ್ 29ರಂದು ಸುರಿದ ಮಳೆ ಹಾಗೂ ನಂತರದ ದಿನಗಳಲ್ಲಿ ಬಿದ್ದ ಮರ-ಕೊಂಬೆಗಳನ್ನು ಸಂಪೂರ್ಣವಾಗಿ ತೆರವು ಮಾಡಲಾಗಿದೆ ಎಂದು ಜಿಬಿಎ ಹಾಗೂ ನಗರ ಪಾಲಿಕೆಗಳು ಅಂಕಿ-ಅಂಶದ ಸಹಿತ ಮಾಹಿತಿ ನೀಡಿವೆ. ಆದರೆ, ವಾಸ್ತವದಲ್ಲಿ ಮರ-ಕೊಂಬೆಗಳು ರಸ್ತೆಯಿಂದ ತೆರವಾಗಿಲ್ಲ. ರಸ್ತೆಯ ಮಧ್ಯಕ್ಕೆ ಬಿದ್ದವನ್ನು ಪಕ್ಕಕ್ಕೆ ಸರಿಸಲಾಗಿದೆ.

ನಗರದ ಹಲವು ಪ್ರಮುಖ ರಸ್ತೆಗಳ ಮಧ್ಯಕ್ಕೆ ಬಿದ್ದಿದ್ದ ಮರಗಳನ್ನು ಕತ್ತರಿಸಿ, ರಸ್ತೆಯ ಬದಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ರಾಶಿ ಹಾಕಲಾಗಿದೆ. ಒಂದು ವಾರವಾಗಿದ್ದರೂ ಅವುಗಳನ್ನು ತೆರವು ಮಾಡಿಲ್ಲ. ಹೀಗಾಗಿ, ವಾಹನ ಸಂಚಾರ ಹಾಗೂ ಪಾದಚಾರಿಗಳ ಓಡಾಟಕ್ಕೆ ಅಡ್ಡಿಯಾಗಿದೆ.

ಬೈರಸಂದ್ರ 22ನೇ ಅಡ್ಡ ರಸ್ತೆಯ ವಾಸವಿ ವೈದಿಕ ಭವನದ ಪಕ್ಕದಲ್ಲಿ ಬಿದ್ದಿರುವ ಮರ

ಜಯನಗರದ 5ನೇ ಬ್ಲಾಕ್ 11ನೇ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗದ ಮೇಲೇ ಉಳಿದಿರುವ ಮರ–ಕೊಂಬೆ

ಜಿಬಿಎ ಹಾಗೂ ಐದೂ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಏಪ್ರಿಲ್ 29ರಿಂದ ಮರಗಳು- ಕೊಂಬೆಗಳು ಬಿದ್ದಿರುವ ಬಗ್ಗೆ ಮಾಹಿತಿಯನ್ನು ನಿತ್ಯವೂ ನೀಡಲಾಗುತ್ತಿದೆ. ಮೇ 5ರಂದು ನೀಡಿರುವ ಪ್ರಕಟಣೆಯಂತೆ, ನಗರದಾದ್ಯಂತ 516 ಮರಗಳು ಬಿದ್ದಿದ್ದು, ಅದರಲ್ಲಿ 507 ಮರಗಳನ್ನು ತೆರವು ಮಾಡಲಾಗಿದೆ. 1,305 ರೆಂಬೆ- ಕೊಂಬೆಗಳಲ್ಲಿ 1,256 ರೆಂಬೆ-ಕೊಂಬೆಗಳನ್ನು ತೆರವು ಮಾಡಲಾಗಿದೆ ಎಂದು ತಿಳಿಸಲಾಗಿದೆ. ಆದರೆ, ನಗರದ ರಸ್ತೆ ಹಾಗೂ ಪಾದಚಾರಿ ಮಾರ್ಗ-ಗಳಲ್ಲಿರುವ ಮರ-ಕೊಂಬೆಗಳ ರಾಶಿ ಬೇರೆಯದೇ ಚಿತ್ರಣ ನೀಡುತ್ತದೆ.

ಪಶ್ಚಿಮ ಹಾಗೂ ದಕ್ಷಿಣ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಮರಗಳು ಧರೆಗುರುಳಿದ್ದು, ನಂತರದ ಸ್ಥಾನದಲ್ಲಿ ಕೇಂದ್ರ ನಗರ ಪಾಲಿಕೆ ವ್ಯಾಪ್ತಿ ಇದೆ. ಮೂರೂ ನಗರ ಪಾಲಿಕೆಗಳು ಬಹುತೇಕ ಎಲ್ಲ ಮರ-ಕೊಂಬೆಗಳನ್ನು ತೆರವು ಮಾಡಲಾಗಿದೆ ಎಂದು ಹೇಳಿವೆ. ಆದರೆ, ಮಲ್ಲೇಶ್ವರ, ಜಯನಗರ, ರಾಜಾಜಿನಗರ, ಪದ್ಮನಾಭ ನಗರ, ಕಬ್ಬನ್ ರಸ್ತೆ, ಶಿವಾಜಿನಗರ, ಶಾಂತಿನಗರ, ಸಿ.ವಿ. ರಾಮನ್ ನಗರ, ಮಹಾಲಕ್ಷ್ಮಿ ಲೇಔಟ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಧರೆಗುರುಳಿದ್ದ ಮರ-ರೆಂಬೆ ಕೊಂಬೆಗಳು ರಸ್ತೆ ಬದಿ ಹಾಗೂ ಪಾದಚಾರಿ ಮಾರ್ಗದಲ್ಲಿಯೇ ಉಳಿದಿವೆ.

‘ಮರ ಬಿದ್ದು ಒಂದು ವಾರವಾಯಿತು. ಒಂದಷ್ಟು ಕಡಿದು ಪಕ್ಕಕ್ಕೆ ಸರಿಸಿದ್ದಾರೆ. ಪಾದಚಾರಿ ಮಾರ್ಗ ಹಾಗೂ ರಸ್ತೆಯ ಮೇಲೇ ಇನ್ನೂ ಬಿದ್ದಿದೆ. ಇದನ್ನು ತೆಗೆಯುತ್ತಿಲ್ಲ. ಪಾದಚಾರಿ ಮಾರ್ಗದಲ್ಲಿ ಓಡಾಡಲೂ ಆಗುತ್ತಿಲ್ಲ. ರಸ್ತೆಗೆ ಇಳಿದು, ವಾಹನಗಳಿಗೆ ಅಡ್ಡಿಯಾಗಿ ನಡೆಯುವಂತಾಗಿದೆ’ ಎಂದು ಜಯನಗರ 5ನೇ ಬ್ಲಾಕ್‌ನ ನಿವಾಸಿ ರಮೇಶ್ ಹೇಳಿದರು.

‘ಕಬ್ಬನ್ ರಸ್ತೆಯಲ್ಲಿ ಪಾದಚಾರಿ ಮಾರ್ಗವಲ್ಲದೆ ಅರ್ಧ ರಸ್ತೆಯಲ್ಲೂ ಬಿದ್ದಿರುವ ಮರ- ಅದರ ಕೊಂಬೆಗಳನ್ನು ಹಾಗೇ ಬಿಡಲಾಗಿದೆ. ಅವುಗಳನ್ನು ತೆರವು ಮಾಡದಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಇದರಿಂದ ಸಣ್ಣಪುಟ್ಟ ಅಪಘಾತಗಳೂ ಆಗುತ್ತಿವೆ’ ಎಂದು ಸವಾರ ಮುನಿರಾಜು ತಿಳಿಸಿದರು.

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಶೀಘ್ರ ತೆರವು: ಡಿಸಿಎಫ್

‘ನಗರದಲ್ಲಿ ಬಿದ್ದಿರುವ ಮರ ಹಾಗೂ ಕೊಂಬೆಗಳನ್ನು ತೆರವುಗೊಳಿಸುವ ಕಾರ್ಯವನ್ನು 30 ತಂಡಗಳು ನಿತ್ಯವೂ ಮಾಡುತ್ತಿವೆ. ಅತಿ ಹೆಚ್ಚು ಮರಗಳು- ಕೊಂಬೆಗಳು ಮೂರ್ನಾಲ್ಕು ದಿನದಲ್ಲಿ ಬಿದ್ದಿರುವುದರಿಂದ ಕೆಲವೆಡೆ ತೆರವು ಕಾರ್ಯವಾಗಿಲ್ಲ. ಎಲ್ಲವನ್ನೂ ಕೂಡಲೇ ತೆರವು ಮಾಡಲಾಗುತ್ತದೆ’ ಎಂದು ಜಿಬಿಎ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿ.ಕೆ. ಸುದರ್ಶನ್ ತಿಳಿಸಿದರು.

‘ಮರಗಳ ತೆರವು ಕಾರ್ಯಾಚರಣೆ ನಡೆಸುತ್ತಿರುವ 30 ತಂಡಗಳ ಅವಧಿ ಮುಗಿಯುತ್ತಿದ್ದು, ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 66 ತಂಡಗಳನ್ನು ನಿಯೋಜಿಸುವ ಕಾರ್ಯ ಅಂತಿಮ ಹಂತದಲ್ಲಿದೆ. ಅವರಿಗೆ ಕಾರ್ಯಾದೇಶ ನೀಡಿ ಮುಂದಿನ ವಾರದಿಂದ ಅವರು ಕಾರ್ಯಾರಂಭಿಸುವ ಸಾಧ್ಯತೆ ಇದೆ. ಇದಲ್ಲದೆ, 18 ಕ್ರೇನ್‌ಗಳನ್ನೂ ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದೆ. ಮಳೆಗಾಲದ ವೇಳೆಗೆ ಸಂಪೂರ್ಣ ಸಿದ್ಧತೆ ಮಾಡಿಕೊಳ್ಳಲಾಗಿದೆ. ಅರಣ್ಯ ವಿಭಾಗದ ಸಿಬ್ಬಂದಿಯಿಂದ ಎಲ್ಲ ಸಾಧ್ಯವಾಗುವುದಿಲ್ಲ. ಇತರೆ ವಿಭಾಗಗಳೂ ಕೈಜೋಡಿಸುತ್ತಿವೆ’ ಎಂದರು.

ಮರ– ಕೊಂಬೆ ಬಿದ್ದ ವಿವರ (ಏಪ್ರಿಲ್ 29ರಿಂದ ಮೇ 5ರವರೆಗೆ)

ನಗರ ಪಾಲಿಕೆ	ಮರ ಧರೆಗೆ	ತೆರವು	ಬಿದ್ದ ಕೊಂಬೆ	ತೆರವು
ಕೇಂದ್ರ	142	136	273	258
ಪೂರ್ವ	6	6	10	10
ಪಶ್ಚಿಮ	180	177	587	564
ದಕ್ಷಿಣ	147	146	317	309
ಉತ್ತರ	41	41	118	115
ಒಟ್ಟು	516	507	1,305	1,256

* ಜಿಬಿಎ ಮಾಹಿತಿ

ಬಿ.ಪಿ. ವಾಡಿಯಾ ರಸ್ತೆಯಲ್ಲಿ ತೆರವಾಗದೇ ಉಳಿದಿರುವ ಮರ ಕೊಂಬೆಗಳು, ಪಾದಚಾರಿ ಮಾರ್ಗಗಳಲ್ಲಿ ಗುರುವಾರ ಕಂಡುಬಂತು ಪ್ರಜಾವಾಣಿ ಚಿತ್ರಗಳು. ಪ್ರಶಾಂತ್ ಎಚ್‌.ಜಿ.

ಸುದ್ದಿ 2 ನಿಮಿಷ

ತಮಿಳುನಾಡು ರಾಜ್ಯಪಾಲರ ನಡೆಗೆ ಡಿ.ಕೆ.ಶಿವಕುಮಾರ್ ಟೀಕೆ

ಬೆಂಗಳೂರು: ತಮಿಳುನಾಡಿನಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಟಿವಿಕೆ ಪಕ್ಷದ ವಿಜಯ್ ಅವರಿಗೆ ಸರ್ಕಾರ ರಚನೆಗೆ ಅವಕಾಶ ನೀಡದ ರಾಜ್ಯಪಾಲರ ನಡೆ ಸರಿಯಲ್ಲ. ಸರ್ಕಾರ ರಚನೆ ಮಾಡಿದ ನಂತರ ಬಹುಮತ ಸಾಬೀತುಪಡಿಸುವುದನ್ನು ತಡೆಯಲು ಅವರಿಗೆ ಅಧಿಕಾರವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಟಿವಿಕೆಗೆ ಸರ್ಕಾರ ರಚಿಸಲು ಅವಕಾಶ ನೀಡಬೇಕು. ಕರ್ನಾಟಕದಲ್ಲಿ 2018ರ ವಿಧಾನಸಭಾ ಚುನಾವಣೆಯ ನಂತರ ಯಡಿಯೂರಪ್ಪ ಅವರಿಗೆ ರಾಜ್ಯಪಾಲರು ಅನುಮತಿ ನೀಡಿದ್ದರು. ಅತಿ ಹೆಚ್ಚು ಸ್ಥಾನ ಪಡೆದ ಪಕ್ಷಗಳಿಗೆ ಸರ್ಕಾರ ರಚಿಸಲು ಈ ಹಿಂದೆಯೂ ಅನುಮತಿ ನೀಡಲಾಗಿತ್ತು. ರಾಷ್ಟ್ರಪತಿಗಳಾಗಿದ್ದ ನಾರಾಯಣನ್, ಅಬ್ದುಲ್ ಕಲಾಂ ಅವರೂ ಇಂತಹ ಮಾದರಿ ಅನುಸರಿ-ಸಿದ್ದರು. ವಾಜಪೇಯಿ ಅವರಿಗೂ ಸರ್ಕಾರ ರಚಿಸಲು ಅನುಮತಿ ನೀಡಿ, ಸದನದಲ್ಲಿ ಬಹುಮತ ಸಾಬೀತಿಗೆ ಅವಕಾಶ ನೀಡಲಾಗಿತ್ತು’ ಎಂದರು.

ಮೊದಲು ಸರ್ಕಾರ ರಚನೆಗೆ ಆಹ್ವಾನಿಸಬೇಕು. ಬಹುಮತ ಸಾಬೀತಿಗೆ ಅವಕಾಶ ನೀಡಬೇಕು. ರಾಜ್ಯದ ಜನರ ಭಾವನೆಗಳಿಗೆ ಬೆಲೆ ಕೊಡಬೇಕು. ಇದು ಪ್ರಜಾಪ್ರಭುತ್ವ. ಒಂದು ಮತದಿಂದ ಬಹುಮತ ಬರಬಹುದು ಅಥವಾ ಕಳೆದುಕೊಳ್ಳಬಹುದು. ವಾಜಪೇಯಿ ಅವರಿಗೆ ಇದೇ ರೀತಿ ಆಗಲಿಲ್ಲವೇ? ಬಹುಮತ ಸಾಬೀತು ಮಾಡಲು ಸಾಧ್ಯವಾ-ಗದಿದ್ದರೆ ಮುಂದಿನ ಆಯ್ಕೆಗೆ ಹೋಗಬಹುದು’ ಎಂದು ಹೇಳಿದರು.

ಥಲಸ್ಸೇಮಿಯಾ: ಮಕ್ಕಳಿಗೆ ಉಚಿತ ಪರೀಕ್ಷೆ

ಬೆಂಗಳೂರು: ಥಲಸ್ಸೇಮಿಯಾ ಕಾಯಿಲೆಯಿಂದ ಬಳಲುತ್ತಿರುವ 12 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿ ಎಚ್‌ಎಲ್ ಪರೀಕ್ಷೆ ಮಾಡಲಾಗುವುದು ಎಂದು ಡಿ.ಕೆ.ಎಂ.ಎಸ್. ಫೌಂಡೇಶನ್ ಇಂಡಿಯಾ ತಿಳಿಸಿದೆ.

ದೇಶದಲ್ಲಿ ಪ್ರತಿವರ್ಷ 10,000ದಿಂದ 15,000 ಮಕ್ಕಳು ಥಲಸ್ಸೇಮಿಯಾ ಕಾಯಿಲೆಯೊಂದಿಗೆ ಜನಿಸುತ್ತಿದ್ದಾರೆ. ಈ ಕಾಯಿಲೆಗೆ ರಕ್ತ ವರ್ಗಾವಣೆಯಷ್ಟೇ ಪರಿಹಾರವಲ್ಲ. ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಕಸಿ ಸಹಾಯಕ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಫೌಂಡೇಶನ್ ಇಂಡಿಯಾದ ಕಾರ್ಯನಿರ್ವಾಹಕ ಅಧ್ಯಕ್ಷ ಪ್ಯಾಟ್ರಿಕ್ ಪಾಲ್ ಹೇಳಿದರು.

‘ದೇಶದಲ್ಲಿ ದಾನಿಗಳ ಸಂಖ್ಯೆ ಕಡಿಮೆ ಇದೆ. ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರ ಕೋಶ ದಾನ ಮಾಡುವ ಮೂಲಕ ರೋಗಿಗಳ ಚೇತರಿಕೆಗೆ ನೆರವಾಗಬೇಕು. 18–55 ವರ್ಷ ವಯಸ್ಸಿನ ಆರೋಗ್ಯವಂತ ವ್ಯಕ್ತಿ ರಕ್ತದ ಆಕರ ಕೋಶದಾನಕ್ಕೆ ನೋಂದಾಯಿಸಿಕೊಳ್ಳಬಹುದು. ವ್ಯಕ್ತಿಯ ಹೆಸರನ್ನು ಗೋಪ್ಯವಾಗಿ ಇಡಲಾಗುವುದು’ ಎಂದರು.

ಡಿಕೆಎಂಎಸ್ ಸಮೂಹದ ಜಾಗತಿಕ ಸಿಇಒ ಡಾ.ಎಲ್ಕೆ ನುಜಾರ್ ಮಾತನಾಡಿ, ‘ಚಿಕಿತ್ಸೆ ಮತ್ತು ವಂಶವಾಹಿ ದೋಷಗಳ ಆಧಾರದ ಮೇಲೆ ಕಾಯಿಲೆಯನ್ನು ಮೈನರ್ ಮತ್ತು ಮೇಜರ್ ಎಂದು ಗುರುತಿಸ-ಲಾಗುತ್ತದೆ. ಈ ಚಿಕಿತ್ಸೆಗೆ ಹೆಚ್ಚು ಹಣ ಖರ್ಚಾಗುತ್ತದೆ. ಹಾಗಾಗಿ ಚಿಕಿತ್ಸಾ ವೆಚ್ಚಕ್ಕೆ ಆರ್ಥಿಕ ನೆರವು ನೀಡಲಾಗುವುದು’ ಎಂದು ಮಾಹಿತಿ ನೀಡಿದರು.

ರಕ್ತಕ್ಕೆ ಸಂಬಂಧಿಸಿದ ಸಮಸ್ಯೆಯಾದ ಥಲಸ್ಸೇಮಿಯಾ-ದಿಂದ ಬಳಲುತ್ತಿದ್ದ ಮಹಾರಾಷ್ಟ್ರದ 12 ವರ್ಷದ ಬಾಲಕಿಗೆ ಕೋಲಾರದ 27 ವರ್ಷದ ಯುವಕ ರಕ್ತದ ಆಕರ ಕೋಶ ದಾನ ಮಾಡುವ ಮೂಲಕ ಚೇತರಿಕೆಗೆ ನೆರವಾಗಿದ್ದಾರೆ. ಡಿಕೆಎಂಎಸ್ ಫೌಂಡೇಷನ್ ನೆರವಿನಿಂದ ಈ ಇಬ್ಬರೂ ಮೂರು ವರ್ಷಗಳ ಬಳಿಕ ಗುರುವಾರ ಮುಖಾಮುಖಿಯಾದರು. ಬಾಲಕಿಯ ಚಿಕಿತ್ಸೆಗೆ ಫೌಂಡೇಶನ್ ಆರ್ಥಿಕ ನೆರವು ನೀಡಿದೆ ಎಂದರು.

ಚಿಟಿಕೆ ಸುದ್ದಿ

ಜಲಮಂಡಳಿ ಫೋನ್–ಇನ್ ಇಂದು

ಬೆಂಗಳೂರು:ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಮೇ 8ರ ಬೆಳಿಗ್ಗೆ 09.30ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವುದು, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ದೂರವಾಣಿ: 080-22945119, 080-22229639.

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಸವಿತಾ ಸಮಾಜ ನೌಕರರ ಸಂಘವು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ರಾಜಣ್ಣ ಕೆ.ವಿ., ‘2026ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ಸವಿತಾ ಸಮಾಜದ ವಿದ್ಯಾರ್ಥಿಗಳು ಜೂನ್ 5ರೊಳಗೆ ಅರ್ಜಿ ಸಲ್ಲಿಸಬಹುದು’ ಎಂದು ತಿಳಿಸಿದರು. ಮಾಹಿತಿಗೆ: 99644 24315.

‘ಮಹಿಳಾ ಮೀಸಲಾತಿ ಜಾರಿಗೊಳಿಸಲು ಆಗ್ರಹ’

ಬೆಂಗಳೂರು: ‘ಮಹಿಳಾ ಮೀಸಲಾತಿ ಮಸೂದೆಯನ್ನು 2023ರಲ್ಲಿ ಸಂಸತ್ತಿನಲ್ಲಿ ಅಂಗೀಕರಿಸಲಾಗಿದೆ. ಆದರೆ ಕೇಂದ್ರ ಸರ್ಕಾರ ಇದರ ಅನುಷ್ಠಾನವನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿದೆ’ ಎಂದು ಕೆಪಿಸಿಸಿ ದಕ್ಷಿಣ ಜಿಲ್ಲಾ ಪ್ರಚಾರ ಸಮಿತಿ ಸಂಚಾಲಕಿ ಕೃಪಾ ಆಳ್ವ ಆರೋಪಿಸಿದರು.

ಕೃಪಾ ಆಳ್ವ

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಹಿಳೆಯರ ರಾಜಕೀಯ ಸಬಲೀಕರಣದ ಹೆಸರಿನಲ್ಲಿ ಕೇಂದ್ರ ಸರ್ಕಾರ ಜನರನ್ನು ದಾರಿ ತಪ್ಪಿಸುತ್ತಿದೆ. ಮಹಿಳೆಯರಿಗೆ ಶೇ 33ರಷ್ಟು ರಾಜಕೀಯ ಮೀಸಲಾತಿ ನೀಡುವ ಭರವಸೆಯನ್ನು ಕೇಂದ್ರ ಸರ್ಕಾರ ತಕ್ಷಣ ಈಡೇರಿಸಬೇಕು’ ಎಂದು ಒತ್ತಾಯಿಸಿದರು.

ಕೆಪಿಸಿಸಿ ದಕ್ಷಿಣ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಆರ್. ಅರುಣ್ ಕುಮಾರ್, ಸಂಚಾಲಕರಾದ ದಿನೇಶ್ ಪ್ರಸಾದ್, ಮಲ್ಲಿಕಾರ್ಜುನ್, ಅಮರನಾಥ, ನಾಗವೇಣಿ, ಕೃಷ್ಣಮೂರ್ತಿ ಹಾಗೂ ಭಾಗ್ಯ ಸುದಿಗೋಷ್ಠಿಯಲಿದ್ದರು.

ಆರೋಗ್ಯ ತುರ್ತು ಕಾರ್ಯಾಚರಣೆ ಕೇಂದ್ರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತುರ್ತು ಸಂದರ್ಭದಲ್ಲಿ ಜನರಿಗೆ ಮಾಹಿತಿ ನೀಡಿ ವೇಗದ ಸ್ಪಂದನ ನೀಡಲು ‘ಆರೋಗ್ಯ ತುರ್ತು ಕಾರ್ಯಾಚರಣೆ ಕೇಂದ್ರ’ ಸಹಕಾರಿಯಾಗಲಿದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದ ಆರೋಗ್ಯ ಸೌಧದಲ್ಲಿ ‘ಆರೋಗ್ಯ ತುರ್ತು ಕಾರ್ಯಾಚರಣೆ ಕೇಂದ್ರ’ಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಆರೋಗ್ಯ ವಲಯದ ತುರ್ತು ಸಂದರ್ಭಗಳಲ್ಲಿ ಸಮಯೋಚಿತ ನಿರ್ಧಾರ ಕೈಗೊಳ್ಳುವ ಜೊತೆಗೆ ಸಂಪನ್ಮೂಲಗಳ ಸರಿಯಾದ ಬಳಕೆ ಮಾಡಿಕೊಳ್ಳುವುದು ಮುಖ್ಯವಾಗುತ್ತದೆ. ಇದರೊಟ್ಟಿಗೆ ಜನರಿಗೆ ಸರಿಯಾದ ಮಾಹಿತಿ ತಲುಪಿಸಿ, ಆತಂಕಕ್ಕೆ ಒಳಗಾಗದಂತೆ ಎಚ್ಚರಿಸಲು ಕೇಂದ್ರೀಯ ನಿಯಂತ್ರಣ ಘಟಕವಾಗಿ ಇದು ಕೆಲಸ ನಿರ್ವಹಿಸಲಿದೆ’ ಎಂದು ಹೇಳಿದರು.

ಆರೋಗ್ಯ ತುರ್ತು ಕಾರ್ಯಾಚರಣೆ ಕೇಂದ್ರಕ್ಕೆ ದಿನೇಶ್ ಗುಂಡೂರಾವ್ ಅವರು ಗುರುವಾರ ಚಾಲನೆ ನೀಡಿದರು

‘ತುರ್ತು ಸಂದರ್ಭಗಳಲ್ಲಿ ಕಂದಾಯ, ವಿಪತ್ತು ನಿರ್ವಹಣಾ ಪ್ರಾಧಿಕಾರ, ಪೊಲೀಸ್, ಅಗ್ನಿಶಾಮಕ ಸೇವೆ ಮುಂತಾದವುಗಳ ಸಮನ್ವಯದಿಂದ ಆರೋಗ್ಯ ಇಲಾಖೆಯು ಪರಿಸ್ಥಿತಿ ನಿರ್ವಹಿಸಲು ಇದು ಸಹಕಾರಿ ಆಗಲಿದೆ. 24/7 ಕಾರ್ಯನಿರ್ವಹಿಸುವ ಈ ಕೇಂದ್ರ ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಸೇವೆಗಳು ಇವುಗಳೊಂದಿಗೆ ತಕ್ಷಣ ಸಂಪರ್ಕ ಸಾಧಿಸಿ ಮಾಹಿತಿ ವಿನಿಮಯ ಮತ್ತು ಸೂಕ್ತ ನಿರ್ದೇಶನ ನೀಡಲು ನೆರವಾಗಲಿದೆ’ ಎಂದರು.

‘ಕೋವಿಡ್ ಸಂದರ್ಭದಲ್ಲಿ ಉಂಟಾದ ಸಮನ್ವಯದ ಕೊರತೆ ನೀಗಿಸಲು ಈ ವ್ಯವಸ್ಥೆ ಅತ್ಯವಶ್ಯಕ. ಸಾಂಕ್ರಾಮಿಕ ರೋಗಗಳು, ಬೆಂಕಿ ಅವಘಡ, ಪ್ರಕೃತಿ ವಿಕೋಪಗಳನ್ನು ಸಮರ್ಪಕವಾಗಿ ನಿರ್ವಹಿಸಲು ವಿಶ್ವ ಆರೋಗ್ಯ ಸಂಸ್ಥೆ ಮಾರ್ಗದರ್ಶನದಂತೆ ಪ್ರತಿ ರಾಜ್ಯದಲ್ಲೂ ಕಮಾಂಡ್ ಕಂಟ್ರೋಲ್ ರೂಂ ಮಾಡಲಾಗುತ್ತಿದೆ. ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲಸೌಕರ್ಯ ಮಿಷನ್ ಅಡಿಯಲ್ಲಿ ನೆರವು ನೀಡಲಾಗಿದೆ’ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ, ಆಯುಕ್ತ ಗುರುದತ್ತ ಹೆಗಡೆ, ರಾಷ್ಟ್ರೀಯ ಆರೋಗ್ಯ ಮಿಷನ್ ನಿರ್ದೇಶಕ ಅವಿನಾಶ್ ಮೆನನ್, ಇಲಾಖೆ ನಿರ್ದೇಶಕಿ ಡಾ.ರಜನಿ ಉಪಸ್ಥಿತರಿದ್ದರು.

ವಯಹ್ ವಿಕಾಸ್ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ನಾಗರಿಕರ ಸಬಲೀಕರಣ ಸಂಸ್ಥೆ ‘ವಯಹ್ ವಿಕಾಸ್’ನ ಐದನೇ ವಾರ್ಷಿಕೋತ್ಸವ ಜರುಗಿತು.

ವಯಹ್ ವಿಕಾಸ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ ಮಾತನಾಡಿ, ‘ವಯಹ್ ವಿಕಾಸ್‌ನಲ್ಲಿ ವಯಸ್ಸಾದವರೂ ಸಕ್ರಿಯವಾಗಿ ಭಾಗವಹಿಸುವ ಅವಕಾಶವಿದೆ’ ಎಂದು ಹೇಳಿದರು.

ಸ್ಥಾಪಕ ಮಂಡಳಿ ಸದಸ್ಯ ಅಲೆಕ್ಸಾಂಡರ್ ಥಾಮಸ್ ಮಾತನಾಡಿ, ‘ವ್ಯವಸ್ಥಿತವಾಗಿ ಹಿರಿಯರ ಆರೈಕೆ, ಈ ಬಗ್ಗೆ ಸಂಶೋಧನೆ ನಿರಂತರವಾಗಿ ನಡೆಯುತ್ತಿದೆ. ಹಿರಿಯರ ಪರ ಸ್ಪಂದನೆ ಮತ್ತು ಅದನ್ನು ಸಾಮೂಹಿಕ ಕ್ರಿಯೆಯಾಗಿ ಇಲ್ಲಿ ಮಾಡಲಾಗುತ್ತಿದೆ. ಹಿರಿಯರಲ್ಲಿ ಬದಲಾವಣೆಯ ಗಾಳಿ ಬೀಸುವಂತೆ ಮಾಡಿದೆ’ ಎಂದು ವಿವರಿಸಿದರು.

ಮಂಡಳಿಯ ಸದಸ್ಯರಾದ ಡಾ. ದೇವಿ ಪ್ರಸಾದ್ ಶೆಟ್ಟಿ ಮಾತನಾಡಿ, ‘ಲಸಿಕೆ ಮತ್ತು ರೋಗ ತಡೆಗಟ್ಟುವ ಆರೈಕೆಯು ವೃದ್ಧಾಪ್ಯದಲ್ಲಿ ಘನತೆಯಿಂದ ಬದುಕಲು ಮತ್ತು ದೀರ್ಘಾಯುಷ್ಯ ಪಡೆಯಲು ಇರುವ ರಕ್ಷಣಾ ಕವಚ’ ಎಂದು ಬಣ್ಣಿಸಿದರು.

ಟಾಟಾ 1ಎಂಜಿ ಮತ್ತು ಅಸೋಸಿಯೇಷನ್ ಆಫ್ ಹೆಲ್ತ್‌ಕೇರ್ ಪ್ರೊವೈಡರ್ಸ್ (ಇಂಡಿಯಾ) ಸಹಭಾಗಿತ್ವದಲ್ಲಿ, ರೋಗನಿರೋಧಕಗಳನ್ನು ನೀಡುವ ಜಾಗೃತಿ ಅಭಿಯಾನಕ್ಕೆ ಇದೇ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ನಿವೃತ್ತ ಸರ್ಕಾರಿ ಮತ್ತು ಪಿಂಚಣಿದಾರರ ಸಂಘಗಳು, ನಿವಾಸಿ ಕಲ್ಯಾಣ ಸಂಘಗಳು (ಆರ್‌ಡಬ್ಲ್ಯುಎ), ಹಿರಿಯ ಆರೈಕೆ ಸೇವಾ ಪೂರೈಕೆದಾರರು, ಆರೋಗ್ಯ ಸಂಸ್ಥೆಗಳು, ರೋಟೇರಿಯನ್‌ಗಳು, ಲಯನ್ಸ್ ಕ್ಲಬ್‌ಗಳು ಮತ್ತು ವಯಾ ವಿಕಾಸ್‌ನ ಪದಾಧಿಕಾರಿಗಳು ಭಾಗವಹಿಸಿದ್ದರು.

ಹಿರಿಯ ನಾಗರಿಕರ ಸಬಲೀಕರಣ ಸಂಸ್ಥೆ ‘ವಯಹ್ ವಿಕಾಸ್’ನ ಐದನೇ ವಾರ್ಷಿಕೋತ್ಸವದಲ್ಲಿ ಗಣ್ಯರು ಪಾಲ್ಗೊಂಡಿದ್ದರು

ಮಾರೇನಹಳ್ಳಿ ದೇವಾಲಯದ ಪುನರ್ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಮಾರೇನಹಳ್ಳಿ ಗ್ರಾಮದಲ್ಲಿ ಸೋಮೇಶ್ವರಸ್ವಾಮಿ ಸೇರಿದಂತೆ ವೇಣುಗೋಪಾಲಸ್ವಾಮಿ, ಅಯ್ಯಪ್ಪಸ್ವಾಮಿ, ವಿಘ್ನೇಶ್ವರ ಹಾಗೂ ನವಗ್ರಹ ಪುನರ್ ಪ್ರತಿಷ್ಠಾಪನಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಪುನರ್ ಪ್ರತಿಷ್ಠಾಪನಾ ಮಹೋತ್ಸವ ಅಂಗವಾಗಿ ಮಹಾ ಗಣಪತಿ ಪೂಜೆ, ಗಂಗಾಪೂಜೆ, ಮಂಗಳವಾದ್ಯದೊಂದಿಗೆ ಬ್ರಹ್ಮಕಲಶ ಪುರಪ್ರದಕ್ಷಣೆ, ಆಲಯ ಪ್ರವೇಶ, ಧ್ವಜಾರೋಹಣ ನೆರವೇರಿಸಲಾಯಿತು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ರವಿಕುಮಾರ್, ಮಾಜಿ ಸದಸ್ಯ ದಾನೇಗೌಡ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಪುಟ್ಟು ಆಂಜಿನಪ್ಪ, ಪಿ.ರಾಹುಲ್, ವಿ.ನಂಜೇಗೌಡ, ಬಿ.ಎಂ. ನಾಗೇಶ್, ಎ.ಕೆಂಪೇಗೌಡ, ಡಿ.ಎಂ. ಚೌಡಪ್ಪ, ಭೂನ್ಯಾಯ ಮಂಡಳಿ ಸದಸ್ಯ ನಾಗರಾಜ್, ಮುಖಂಡರಾದ ಗೀತಾ ಆನಂದ್ ಕುಮಾರ್, ಅನಿಲ್, ಪ್ರಭುಸ್ವಾಮಿ, ಧನಂಜಯ, ಸೈಯದ್ ಶಬ್ಬೀರ್, ಮರಳುಕುಂಟೆ ಸುರೇಶ್ ಉಪಸ್ಥಿತರಿದ್ದರು.

ಡೊನೇಷನ್ ಹಾವಳಿ: ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೊನೇಷನ್ ನಿಯಂತ್ರಣಕ್ಕೆ ‘ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರ’ವನ್ನು (ಡೊನೇಷನ್ ವಿರೋಧಿ ಸಮಿತಿ) ತಕ್ಷಣ ರಚಿಸಬೇಕು ಹಾಗೂ ವಂತಿಗೆ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಪ್ರತಿಭಟನೆ ನಡೆಸಿತು.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಶಿಕ್ಷಣ ಇಲಾಖೆಯ ಮುಖ್ಯಸ್ಥರು, ಪಾಲಕರು, ವಿದ್ಯಾರ್ಥಿ ಸಂಘಟನೆಯ ಪ್ರತಿನಿಧಿಗಳ ಜಂಟಿ ಸಭೆಯನ್ನು ಶೀಘ್ರ ಕರೆಯಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಫೆಡರೇಷನ್ ರಾಜ್ಯ ಉಪಾಧ್ಯಕ್ಷ ಬಸವರಾಜ್ ಗುಳೇದಳ್ ಮಾತನಾಡಿ, ‘ಶಿಕ್ಷಣ ಸಂಸ್ಥೆಗಳು ಪ್ರತಿ ತಿಂಗಳಿಗೊಮ್ಮೆ ಪಾಲಕರ ಸಭೆ ಕರೆದು ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸುವಂತೆ ನಿರ್ದೇಶಿಸಬೇಕು. ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರ ರಚನೆ ಕುರಿತು 15 ದಿನದೊಳಗೆ ಪಾಲಕರು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು. ಶಿಕ್ಷಣ ಇಲಾಖೆಯ ಮುಖ್ಯಸ್ಥರು, ವಿದ್ಯಾರ್ಥಿ ಸಂಘಟನೆಯ ಪ್ರತಿನಿಧಿಗಳ ಜಂಟಿ ಸಭೆ ಕರೆಯಬೇಕು’ ಎಂದು ಒತ್ತಾಯಿಸಿದರು.

ಬಳಿಕ ಬೆಂಗಳೂರು ದಕ್ಷಿಣ ಹಾಗೂ ಉತ್ತರ ಜಿಲ್ಲಾ ಡಿಡಿಪಿಐಗೆ ಮನವಿ ಸಲ್ಲಿಸಲಾಯಿತು. ಬೆಂಗಳೂರು ಜಿಲ್ಲಾ ಅಧ್ಯಕ್ಷ ಅರ್ಪಿತಾ ಗ್ರೇಸಿ, ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್, ಸಹ ಕಾರ್ಯದರ್ಶಿ ರಾಜಿ ಘಫೂರ್, ಜಿಲ್ಲಾ ಉಪಾಧ್ಯಕ್ಷ ಪ್ರಧಾನ್, ಜಿಲ್ಲಾ ಉಪಾಧ್ಯಕ್ಷ ಕಾವ್ಯ, ಜಿಲ್ಲಾ ಸಮಿತಿ ಸದಸ್ಯರಾದ ಪ್ರಭು ಹಾಜರಿದ್ದರು.

ಮಾವು ಮೇಳಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಕಬ್ಬನ್ ಉದ್ಯಾನದಲ್ಲಿ ಮೇ 8ರಿಂದ 17ರವರೆಗೆ ನಡೆಯುವ ಮಾವು, ಹಲಸಿನ ಮಾರಾಟ ಮೇಳಕ್ಕೆ ಕಬ್ಬನ್ ಉದ್ಯಾನ ನಡಿಗೆದಾರರ ಸಂಘ ವಿರೋಧ ವ್ಯಕ್ತಪಡಿಸಿದೆ.

ಈ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಎಸ್. ಉಮೇಶ್, ‘ವಾಣಿಜ್ಯ ಉದ್ದೇಶದ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಕಬ್ಬನ್ ಉದ್ಯಾನದಲ್ಲಿ ಆಯೋಜನೆ ಮಾಡದಂತೆ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

‘ನಾದಯೋಗಿ ಡಾ. ರಾಜಕುಮಾರ್’ ಜನಾರ್ಪಣೆ ಕಾರ್ಯಕ್ರಮದಲ್ಲಿ ಪೂರ್ಣಿಮಾ

‘ಗಝಲ್ ಪ್ರೇಮಿಯಾಗಿದ್ದ ರಾಜ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಂದೆಯವರು ಎಲ್ಲ ರೀತಿಯ ಹಾಡುಗಳನ್ನು ಕೇಳುತ್ತಿದ್ದರು. ಅದರಲ್ಲಿ ಗಝಲ್‌ಗಳನ್ನು ಹೆಚ್ಚು ಇಷ್ಟಪಡುತ್ತಿದ್ದರು’ ಎಂದು ರಾಜ್‌ಕುಮಾರ್ ಅವರ ಮಗಳು ಪೂರ್ಣಿಮಾ ರಾಮ್‌ಕುಮಾರ್ ನೆನಪು ಮಾಡಿಕೊಂಡರು.

ಆರ್. ಮಂಜುನಾಥ್ ಚವಾಣ್ ಮತ್ತು ಸೌಮ್ಯಾ ಮಂಜುನಾಥ್ ಚವಾಣ್ ಅವರ ‘ನಾದಯೋಗಿ ಡಾ. ರಾಜಕುಮಾರ್’ ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಾದಯೋಗಿ–ಡಾ. ರಾಜಕುಮಾರ್’ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪೂರ್ಣಿಮಾ ರಾಮ್‌ಕುಮಾರ್ ಮಾತನಾಡಿದರು–ಪ್ರಜಾವಾಣಿ ಚಿತ್ರ

‘ನಮ್ಮ ಮನೆಯೇ ಸಂಗೀತ-ಮಯವಾಗಿತ್ತು. ರಾಜ್ ಕುಮಾರ್ ಅವರು ಸರಳ ಮತ್ತು ಸುಲಭವಾಗಿ ಹಾಡುತ್ತಿದ್ದರು. ಹಾಗಾಗಿ ಯಾರೂ ಬೇಕಾದರೂ ಆಮೇಲೆ ಹಾಡಬಹು-ದಾಗಿತ್ತು’ ಎಂದು ಹೇಳಿದರು.

ಕೃತಿಕಾರ ಆರ್. ಮಂಜುನಾಥ್ ಮಾತನಾಡಿ, ‘1990ರಿಂದ ರಾಜ್‌ಕುಮಾರ್ ಅವರ ಒಡನಾಟವಿತ್ತು. ಅವರು ಗಝಲ್, ತುಮರಿ, ಖಯಾಜ್, ಪಪಾನ್ ಸಹಿತ ವಿವಿಧ ಸಂಗೀತಗಳನ್ನು ಕೇಳುವುದಷ್ಟೇ ಅಲ್ಲ, ಅವುಗಳನ್ನು ಹಾಡಬೇಕು ಎಂದು ಬಯಸುತ್ತಿದ್ದರು. ಅವರೊಳಗಿನ ನಾದಯೋಗಿಯನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಹಿಂದೆಯೇ ಯೋಚನೆ ಮಾಡಲಾಗಿತ್ತು. ಈಗ ಕಾರ್ಯರೂಪಕ್ಕೆ ಬಂದಿದೆ’ ಎಂದು ತಿಳಿಸಿದರು.

ಸಂಗೀತ ಸಂಯೋಜಕರಾದ ಮಹೋಹರ್ ನಾಯ್ಡು, ಲಹರಿ ವೇಲು, ಚಲನಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ತಾಂಜಾನಿಯದ ಗೌಡ ಸಿ.ಡಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಕಾಲೇಜು ಚಟುವಟಿಕೆಗಳ ಸಮಾರೋಪ ಸಮಾರಂಭ: ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಚಂದ್ರಕಾಂತ್, ಮಿಮಿಕ್ರಿ ದಯಾನಂದ್, ಉಪಸ್ಥಿತಿ: ಬಿ.ಸಿ. ನಾಗೇಂದ್ರ ಕುಮಾರ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ. ಆರ್. ಅಂಬೇಡ್ಕರ್ ವೀದಿ, ಬೆಳಿಗ್ಗೆ 10

ಮಕ್ಕಳ ರಂಗ ಹಬ್ಬ: ಉದ್ಘಾಟನೆ: ಬಿ.ಎಸ್. ಮಂಜುನಾಥಸ್ವಾಮಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಶುಭ ಧನಂಜಯ, ಜೋಕಿಂ ಸ್ಟ್ಯಾನಿ ಅಲ್ವಾರಿಸ್, ರಂಗ ಗೌರವ ಸ್ವೀಕರಿಸುವವರು: ಶೋಭಾ ವೆಂಕಟೇಶ್, ಎನ್. ಮಂಗಳ ರಂಗಾಯಣ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30ರಿಂದ

ಸಾಂಸ್ಕೃತಿಕ ವೈಭವ, ‘ಕರುನಾಡು ರತ್ನ’ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಪಲ್ಲಕ್ಕಿ ನಾರಾಯಣಸ್ವಾಮಿ, ಉದ್ಘಾಟನೆ: ಎಸ್‌.ಟಿ. ಸೋಮಶೇಖರ್, ಅಧ್ಯಕ್ಷತೆ: ರಾಜಣ್ಣ, ಪ್ರಶಸ್ತಿ ಪ್ರದಾನ: ರಿಚರ್ಡ್ ಲೂಯಿಸ್, ಅತಿಥಿಗಳು: ಕಾ.ನಾ. ಶ್ರೀನಿವಾಸ್, ಅಶೋಕ್ ಎನ್. ಛಲವಾದಿ, ಚಂದ್ರಶೇಖರ್ ಬಸ್ರೂರು, ಶೈಲೇಶ್ ನಾಜರೆ ಅಶೋಕ್, ಕೆಂಚನೂರು ಶಂಕರ್, ಆಯೋಜನೆ: ಸಂಗೀತನಾದ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30ರಿಂದ

ಸಹಕಾರ ಸಮೃದ್ಧಿ ಸೌಧ ಲೋಕಾರ್ಪಣೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅತಿಥಿಗಳು: ಎಚ್. ಕೆ. ಪಾಟೀಲ, ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಖಾನ್, ಬೈರತಿ ಸುರೇಶ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಹಕಾರ ಇಲಾಖೆ, ಸ್ಥಳ: ಸಹಕಾರ ಸಂಘಗಳ ನಿಬಂಧಕರ ಕಚೇರಿ, ನಂ.1, ಅಲಿ ಅಸ್ಕರ್ ರಸ್ತೆ, ಸಂಜೆ 4

ಸಿ.ವಿ. ಶಿವಶಂಕರ್‌ಗೆ ನುಡಿನಮನ, ಜಿ.ಜಿ. ನಾಗರಾಜ್ ಅವರ ‘ಅಭಿಮಾನಿ’ ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಜಯಮಾಲಾ, ಅತಿಥಿಗಳು: ಗಿರಿಜಾ ಲೋಕೇಶ್, ಮದನ್ ಪಟೇಲ್, ಸದಾಶಿವ ಶೆಣೈ, ಗೌರವ ಸ್ವೀಕರಿಸುವವರು: ಕೃಷ್ಣವೇಣಿ ನಾಗರಾಜ್, ಅರುಣ್ ಹೊಸಕೊಪ್ಪ, ಈಶ್ವರ್ ಎಸ್. ಬಡಿಗೇರ್, ‘ಸಿ.ವಿ. ಶಿವಶಂಕರ್’ ಪ್ರಶಸ್ತಿ ಸ್ವೀಕರಿಸುವವರು: ಕವಿರಾಜ್, ಸಂದೀಪ್ ಸುಂಕದ, ಆಯೋಜನೆ: ಸಿ.ವಿ. ಶಿವಶಂಕರ್ ಕಲಾ ಪ್ರತಿಷ್ಠಾನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 6

ಗಿರಿಜಾ ಲೋಕೇಶ್

ಉಮಾ ಮಹೇಶ್ವರ ಸಂವಾದ (ಧಾರ್ಮಿಕ ಪ್ರವಚನ): ಚಂದ್ರಶೇಖರ ಆಚಾರ್ಯ, ಆಯೋಜನೆ: ಪ್ರವಚನ ಬಳಗ, ಸ್ಥಳ: ಭೀಮನಕಟ್ಟೆ ರಾಘವೇಂದ್ರ ಸ್ವಾಮಿ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಸಂಜೆ 6.15

ಹರಿನಾಮ ಸಂಕೀರ್ತನೆ: ಗಾಯನ: ಪ್ರಣೀತಾ ಟಿ. ಮಣೂರ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಅಡ್ಡರಸ್ತೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

‘ವಾದ್ಯ ವೈಭವ’ ಸಂಗೀತ ಕಛೇರಿ: ಕೊಳಲು ವಾದನ: ವಂಶಿಧರ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಆರ್. ಅದಮ್ಯ, ಘಟ: ಶಮಿತ್ ಗೌಡ, ಹಾರ್ಮೋನಿಯಂ: ವಿಶ್ವನಾಥ್, ಪಿಟೀಲು: ಯಶಸ್ವಿ, ಮೃದಂಗ: ಆನೂರು ದತ್ತಾತ್ರೇಯ ಶರ್ಮ, ಖಂಜೀರಾ: ಭಾರ್ಗವ ಹಾಲಂಬಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.15ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಟೋ ಲಾಮ್ ಭೇಟಿ
ವಿಯೆಟ್ನಾಂ ಅಧ್ಯಕ್ಷ ಟೋ ಲಾಮ್ ಅವರು ಮುಂಬೈನಲ್ಲಿರುವ ರಾಷ್ಟ್ರೀಯ ಷೇರುಪೇಟೆ ಕಚೇರಿಗೆ ಗುರುವಾರ ಭೇಟಿ ನೀಡಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಿಚಾರಣೆಗೆ ಹಾಜರು
'ಕೆಡಿ: ದಿ ಡೆವಿಲ್' ಚಿತ್ರದಲ್ಲಿದ್ದ ವಿವಾದಿತ ಹಾಡಿಗೆ ಸಂಬಂಧಿಸಿ ನಟ ನೋರಾ ಫತೇಹಿ ಅವರು ರಾಷ್ಟ್ರೀಯ ಮಹಿಳಾ ಆಯೋಗದ ಮುಂದೆ ಗುರುವಾರ ವಿಚಾರಣೆಗೆ ಹಾಜರಾದರು

ಬೌರಿಂಗ್ ದುರಂತ: ಇನ್ನೂ ದುಗುಡ

ಆದಾಯ ಕುಸಿತದ ಆತಂಕದಲ್ಲಿ ವ್ಯಾಪಾರಸ್ಥರು • ಪಾದಚಾರಿಗಳಲ್ಲಿ ಭಯ

• ಉಮೇಶ ಭಟ್ಟ ಪಿ.ಎಚ್.

ಬೆಂಗಳೂರು: ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿದು, ಏಳು ಜನರ ಜೀವ ಕಸಿದುಕೊಂಡು ಎಂಟು ದಿನವಾಗಿದ್ದರೂ ಸ್ಥಳದಲ್ಲಿ ಇನ್ನೂ ಆತಂಕ ಮನೆಮಾಡಿದೆ. ಇಲ್ಲಿನ ಬೀದಿ ಬದಿಯ ವ್ಯಾಪಾರವನ್ನೇ ನಂಬಿಕೊಂಡಿದ್ದವರ ಬದುಕು ಅತಂತ್ರವಾಗಿದೆ.

ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಗೋಡೆಯ ಸಮೀಪ 15–20 ವರ್ಷದಿಂದ ವ್ಯಾಪಾರ ನಡೆಸುತ್ತಿದ್ದವರನ್ನು ಅಲ್ಲಿಂದ ತೆರವುಗೊಳಿಸಿದ ಮೇಲೆ ಸೂಕ್ತ ಜಾಗವಿಲ್ಲದೇ ಸಿಕ್ಕ ಸ್ಥಳದಲ್ಲೇ ವಹಿವಾಟು ನಡೆಸುತ್ತಿದ್ದಾರೆ. ನಿತ್ಯದ ಆದಾಯಕ್ಕೆ ಹೊಡೆತ ಬಿದ್ದಿರುವ ಜೊತೆಗೆ ಮುಂದೆ ಏನಾಗಲಿದೆಯೋ ಎನ್ನುವ ದುಗುಡವೂ ಅವರಲ್ಲಿದೆ.

ಸದಾ ಜನಜಂಗುಳಿ ಇರುವ ಬೌರಿಂಗ್ ಆಸ್ಪತ್ರೆ ಸುತ್ತಮುತ್ತಲಿನ ಜಾಗದಲ್ಲಿ ಸಾವಿರಾರು ಮಂದಿ ಸಂಚರಿಸುತ್ತಾರೆ. ಕೆಲವರು ಆಸ್ಪತ್ರೆಗೆ, ಇನ್ನಷ್ಟು ಮಂದಿ ಚರ್ಚ್, ದೇವಸ್ಥಾನಗಳಿಗೂ ಬರುವವರೂ ಇದ್ದಾರೆ. ವಹಿವಾಟಿನ ಕಾರಣಕ್ಕೂ ಈ ಭಾಗ ಜನಸಂದಣಿ ಪ್ರದೇಶವಾಗಿ ಮಾರ್ಪಟ್ಟಿದೆ. ಅಕ್ಕಪಕ್ಕ-ದಲ್ಲಿ ವಾಸಿಸುವವರಿಗೆ ನಿತ್ಯ ಸಂಚಾರಕ್ಕೆ ಇದೇ ಮುಖ್ಯ ಮಾರ್ಗವಾಗಿದೆ.

ದುರ್ಘಟನೆ ಬಳಿಕ ಆ ರಸ್ತೆಯ ಎರಡೂ ಬದಿಗಳಲ್ಲಿ ವ್ಯಾಪಾರಿಗಳನ್ನು ಸಂಪೂರ್ಣ ತೆರವು ಮಾಡಲಾಗಿದೆ. ಕಾಂಪೌಂಡ್ ಕುಸಿದ ಸ್ಥಳದಲ್ಲಿ ಮರಳಿನ ಮೂಟೆಗಳನ್ನು ಜೋಡಿಸಿ, ಇನ್ನಷ್ಟು ಮಣ್ಣು ಕುಸಿಯದಂತೆ ಎಚ್ಚರಿಕೆ ವಹಿಸಲಾಗಿದೆ. ಉಳಿದಿರುವ ಗೋಡೆಯ ಉದ್ದಕ್ಕೂ ಹಳದಿ ಪಟ್ಟಿಯನ್ನು ಅಳವಡಿಸಿ, ಜನರು ಅಲ್ಲಿ ಸಂಚರಿಸದಂತೆ ನಿರ್ಬಂಧಿಸಲಾಗಿದೆ.

ಸ್ಥಳೀಯರಲ್ಲದೆ ಹೊರ ರಾಜ್ಯದ ವ್ಯಾಪಾರಿಗಳು, ನಾನಾ ಭಾಗಗಳ ಪಾದಚಾರಿಗಳು ದುರಂತ ನಡೆದ ಅವಶೇಷದ ಮುಂದೆಯೇ ನಿತ್ಯ ನಡೆದು ಕೊಂಡು ಹೋಗುತ್ತಾರೆ. ಕುಸಿದಿರುವ ಗೋಡೆ ಅವರಲ್ಲಿ ಭೀತಿ ಮೂಡಿಸುತ್ತಿದೆ.

ಮುಖ್ಯಾಂಶಗಳು
- ಮೂರು ತನಿಖಾ ತಂಡಗಳಿಂದ ಸ್ಥಳ ಪರಿಶೀಲನೆ
- ವಸ್ತುಸ್ಥಿತಿ ವಿವರ ಪಡೆದುಕೊಂಡಿರುವ ಅಧಿಕಾರಿಗಳು
- ವರದಿ ಸಲ್ಲಿಸಿದ ಬಳಿಕ ಸೂಕ್ತ ನಿರ್ಧಾರದ ನಿರೀಕ್ಷೆ

ಗೋಡೆ ಕುಸಿದ ಮರುದಿನವೇ ಇಲ್ಲಿಂದ ಹೋಗುವಂತೆ ಹೇಳಿದರು. ಹತ್ತಿರದಲ್ಲೇ ವ್ಯಾಪಾರ ಮಾಡಿಕೊಂಡಿದ್ದೇನೆ. ಆದಾಯ ಕಡಿಮೆಯಾಗಿದೆ, ನಮ್ಮ ಕಷ್ಟವನ್ನು ಯಾರಿಗೆ ಹೇಳುವುದು?
ಶಂಕರ್, ಬಟ್ಟೆ ವ್ಯಾಪಾರಿ

ಘಟನೆ ನಡೆದ ಇನ್ನೊಂದು ಬದಿಯಲ್ಲಿ ವಿದ್ಯಾರ್ಥಿಗಳು ಆಟವಾಡಲು ವ್ಯವಸ್ಥೆ ಮಾಡಲಾಗಿತ್ತು. ಈಗ ಯಾರನ್ನೂ ಇಲ್ಲಿ ಆಟವಾಡಲು ಬಿಡದಂತೆ ಸೂಚಿಸಿದ್ದಾರೆ
ಆಸ್ಪತ್ರೆ ಭದ್ರತಾ ಸಿಬ್ಬಂದಿ

'ಏಳೆಂಟು ವರ್ಷಗಳಿಂದ ಗೋಡೆ ಬದಿಯಲ್ಲಿಯೇ ವ್ಯಾಪಾರ ಮಾಡಿಕೊಂಡಿದ್ದೆ. ದುರಂತ ಸ್ಥಳದಿಂದ ನನ್ನ ಮಳಿಗೆ ದೂರವಿತ್ತು. ಆದರೂ ಅನಾಹುತ ಆಗಬಹುದು ಎಂದು ತೆರವುಗೊಳಿಸಿದ್ದಾರೆ. ಇದರಿಂದ ಚರ್ಚ್ ಸಮೀಪದ ರಸ್ತೆಯಲ್ಲಿ ಕುಳಿತು ವ್ಯಾಪಾರ ಮಾಡುತ್ತಿದ್ದೇನೆ. ಹಿಂದೆ ದಿನಕ್ಕೆ ₹1 ಸಾವಿರವರೆಗೂ ವ್ಯಾಪಾರ ವಾಗುತ್ತಿತ್ತು. ಈಗ ₹400ರಿಂದ ₹500ಕ್ಕೆ ಇಳಿಕೆಯಾಗಿದೆ. ಬೇಗನೆ ಗೋಡೆ ನಿರ್ಮಿಸಿ ನಮಗೆ ಅಲ್ಲಿ ಸುರಕ್ಷಿತ ಜಾಗ ಒದಗಿಸಿದರೆ ಒಳ್ಳೆಯದಾಗಲಿದೆ' ಎಂದು ತಮಿಳುನಾಡು ಮೂಲದ ವ್ಯಾಪಾರಿ ಸರೋಜ ಹೇಳಿದರು.

ಪೊಲೀಸ್ ಸಂಚಾರ: ಘಟನೆ ನಂತರ ಪೊಲೀಸ್ ಗಸ್ತನ್ನು ಇಲ್ಲಿ ಹೆಚ್ಚಿಸಲಾಗಿದೆ. ವ್ಯಾಪಾರಸ್ಥರು ಪಾದಚಾರಿ ಮಾರ್ಗಕ್ಕೆ ಮರಳದಂತೆ ಸಂಚಾರ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೂಚನೆ ನೀಡುತ್ತಿದ್ದಾರೆ. ಆಸ್ಪತ್ರೆಯ ಭದ್ರತಾ ಸಿಬ್ಬಂದಿಯೂ ಜನ ಗೋಡೆಯ ಬದಿಯಲ್ಲಿ ನಿಲ್ಲದಂತೆ ಮನವಿ ಮಾಡುತ್ತಿದ್ದಾರೆ. ಆದರೆ, ಆಸ್ಪತ್ರೆಯ ಮುಂಭಾಗ, ಮತ್ತೊಂದು ಬದಿಯ ಗೋಡೆಯ ಪಕ್ಕದಲ್ಲಿ ಪಾದಚಾರಿಗಳ ಸಂಚಾರ, ವಹಿವಾಟು ಯಥಾರೀತಿಯಿದೆ.

ದುರಂತಕ್ಕೆ ಕಾರಣವಾದ ಗೋಡೆಯ ಜಾಗದಲ್ಲಿ ಮರಳಿನ ಮೂಟೆಗಳನ್ನು ಹಾಕಲಾಗಿದೆ ಚಿತ್ರ. ಪ್ರಶಾಂತ್ ಎಚ್‌ಜಿ.

ಮಣ್ಣು ಸುರಿದವರು ಯಾರು?

ಮಣ್ಣು ಸುರಿದಿದ್ದರಿಂದಲೇ ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿದಿರುವುದು ಸ್ಪಷ್ಟವಾಗಿದ್ದರೂ, ಅದನ್ನು ಯಾರು ಅಲ್ಲಿ ಸುರಿದರು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಗೋಡೆ ದುರಂತದ ಕುರಿತು ತನಿಖೆಗೆ ಮೂರು ಪ್ರತ್ಯೇಕ ಸಮಿತಿ ರಚಿಸಲಾಗಿದ್ದು, ಎಲ್ಲ ಸಮಿತಿಗಳೂ ಸ್ಥಳಕ್ಕೆ ಭೇಟಿ ನೀಡಿ ಈಗಾಗಲೇ ಮಾಹಿತಿಯನ್ನು ಸಂಗ್ರಹಿಸಿವೆ.

'ಮಣ್ಣು ಸಂಗ್ರಹದಿಂದಲೇ ಗೋಡೆ ಕುಸಿತ ಕಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಿಂದಿದ್ದ ಕಟ್ಟಡವನ್ನು ತೆರವುಗೊಳಿಸಿದ ಮಣ್ಣೋ ಅಥವಾ ಹೊಸ ಕಾಮಗಾರಿ ವೇಳೆಯಲ್ಲಿ ಹಾಕಿರುವ ಮಣ್ಣೋ ಎಂಬುದು ಸಮಿತಿಗಳಿಗೆ ಸ್ಪಷ್ಟವಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

'ದುರಂತ ನಡೆದ ಭಾಗದ ಗೋಡೆ ಗುಣಮಟ್ಟದಿಂದ ಕೂಡಿಲ್ಲ. ಇದನ್ನು ಸಂಪೂರ್ಣವಾಗಿ ಬದಲಿಸಿ ಸುಸಜ್ಜಿತ ಗೋಡೆಯನ್ನು ತುರ್ತಾಗಿ ನಿರ್ಮಿಸುವಂತೆ ಸಮಿತಿಗಳು ಶಿಫಾರಸು ಮಾಡಬಹುದು' ಎನ್ನಲಾಗಿದೆ.

'ನಗರ ಜಿಲ್ಲಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿ, ಲೋಕಾಯುಕ್ತ ಅಧಿಕಾರಿ ನೇತೃತ್ವದ ತನಿಖಾ ತಂಡ, ಅಧೀಕ್ಷಕ ಎಂಜಿನಿಯರ್ ನೇತೃತ್ವದ ತಾಂತ್ರಿಕ ತಂಡಗಳೂ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಿವೆ. ಗೋಡೆ ಪಕ್ಕದಲ್ಲಿಯೇ ಹಿಂದೆ ಇದ್ದ 'ಡಿ' ದರ್ಜೆ ನೌಕರರ ಕಟ್ಟಡ ತೆರವುಗೊಳಿಸಿ, ಸುರಿದಿದ್ದ ಅವಶೇಷಗಳ ಮಾಹಿತಿ ಸಹಿತ ಎಲ್ಲಾ ವಿವರ ಒದಗಿಸಿದ್ದೇವೆ' ಎಂದು ಬೌರಿಂಗ್ ಆಸ್ಪತ್ರೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ನೇತೃತ್ವದ ಸಮಿತಿ, ಸರ್ಕಾರಕ್ಕೆ ಮೇ 8ರಂದು ವರದಿ ಸಲ್ಲಿಸುವ ಸಾಧ್ಯತೆಯಿದೆ.

ಮರದ ಕೊಂಬೆ ತೆರವಿಲ್ಲ

ಘಟನೆ ನಡೆದ ಸ್ಥಳದಿಂದ ಅನತಿ ದೂರದಲ್ಲಿಯೇ ಆಸ್ಪತ್ರೆಯ ಶವಾಗಾರವೂ ಇದೆ. ಅಲ್ಲಿಂದ ಮುಂದಕ್ಕೆ 300 ಮೀಟರ್‌ವರೆಗೂ ಇರುವ ಗೋಡೆಯೂ ಶಿಥಿಲಗೊಂಡಿದೆ. ಪಕ್ಕದಲ್ಲಿ ವೈದ್ಯರು, ಸಿಬ್ಬಂದಿ ವಸತಿಗೃಹವಿದೆ. ಅಲ್ಲಿನ ಆವರಣದ ಗೋಡೆಯೂ ಹಳೆಯದಾಗಿದೆ. ಆ ಭಾಗದಲ್ಲಿ ಮರದ ಕೊಂಬೆಗಳು ಗಾಳಿಗೆ ಮುರಿದುಬಿದ್ದಿದ್ದು, ಅವುಗಳನ್ನು ತೆರವುಗೊಳಿಸಿಲ್ಲ. ಜನ ಸಂಚರಿಸದಂತೆ ಪೊಲೀಸರು ಕ್ರಮ ಕೈಗೊಂಡಿದ್ದರೂ ಕೆಲವರು ಅಲ್ಲಿಯೇ ವಾಹನ ನಿಲ್ಲಿಸುತ್ತಿದ್ದಾರೆ.

'ಒಂದು ಭಾಗದಲ್ಲಿ ಬಿದ್ದ ಮರದ ಕೊಂಬೆಗಳನ್ನು ರಸ್ತೆಯಲ್ಲೇ ಬಿಟ್ಟಿದ್ದಾರೆ. ಇದನ್ನು ತೆರವು ಮಾಡಲಿ' ಎಂದು ಚರ್ಚ್ ಮುಂಭಾಗದಲ್ಲಿಯೇ 15 ವರ್ಷದಿಂದ ಹಣ್ಣಿನ ರಸ ಮಾರಾಟ ಮಾಡುವ ಖಲೀಲ್ ಹೇಳಿದರು.

ಬೆಂಗಳೂರಿನಿಂದ ಹೈದರಾಬಾದ್, ಚೆನ್ನೈ ನಗರಗಳಿಗೆ ಸಂಪರ್ಕ

ಬುಲೆಟ್ ರೈಲು: ನಕ್ಷೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಿಂದ ಹೈದರಾಬಾದ್ ಮತ್ತು ಚೆನ್ನೈಗೆ ಸಂಪರ್ಕಿಸುವ ಅತಿವೇಗದ (ಹೈಸ್ಪೀಡ್-ಬುಲೆಟ್) ರೈಲು ಯೋಜನೆಗಳನ್ನು ಕೇಂದ್ರ ಸರ್ಕಾರ ಘೋಷಿಸಿದ 3 ತಿಂಗಳ ನಂತರ ಭಾರತೀಯ ರೈಲ್ವೆಯು ಎರಡೂ ಮಾರ್ಗಗಳನ್ನು ಅಂತಿಮಗೊಳಿಸಿ ನಕ್ಷೆ ಬಿಡುಗಡೆ ಮಾಡಿದೆ.

ಬಜೆಟ್‌ನಲ್ಲಿ ಸೇರ್ಪಡೆಯಾಗದಿದ್ದರೂ ಬೆಂಗಳೂರು-ಮೈಸೂರು ಬುಲೆಟ್ ರೈಲು ಮಾರ್ಗದ ಅಂದಾಜು ನಕ್ಷೆಯನ್ನೂ ಸಿದ್ಧಪಡಿಸಲಾಗಿದೆ.

ನಕ್ಷೆಯ ಪ್ರಕಾರ, ಬೆಂಗಳೂರು-ಚೆನ್ನೈ ಮಾರ್ಗವು (306 ಕಿಮೀ) ಬೈಯಪ್ಪನಹಳ್ಳಿಯಿಂದ ಪ್ರಾರಂಭ-ವಾಗಲಿದೆ. ವೈಟ್‌ಫೀಲ್ಡ್, ಕೋಡಿಹಳ್ಳಿ (ಹೊಸಕೋಟೆ ಬಳಿ) ಮತ್ತು ಕೋಲಾರ ಮೂಲಕ ಆಂಧ್ರ ಪ್ರದೇಶವನ್ನು ಪ್ರವೇಶಿಸಲಿದೆ. ಚಿತ್ತೂರು, ಪರಂದೂರು ಮತ್ತು ಪೂನಮಲ್ಲೆ ಮೂಲಕ ಹಾದುಹೋಗಲಿದೆ. ನಂತರ ಚೆನ್ನೈ ಸೆಂಟ್ರಲ್‌ನಲ್ಲಿ ಕೊನೆಗೊಳ್ಳಲಿದೆ.

ತಮಿಳುನಾಡು ಸರ್ಕಾರ ಚೆನ್ನೈಗೆ ಹತ್ತಿರವಾಗಿ ಎರಡನೇ ವಿಮಾನ ನಿಲ್ದಾಣ ನಿರ್ಮಿಸಲು ಯೋಜಿಸಿರುವ ಕಾಂಚೀಪುರಂ ಜಿಲ್ಲೆಯ ಪರಂದೂರು ಈ ರೈಲು ಯೋಜನೆಯಲ್ಲಿ ಮೊದಲು ಇರಲಿಲ್ಲ. ಪ್ರಸ್ತುತ ಬಿಡುಗಡೆ ಮಾಡಲಾದ ಮಾರ್ಗದಲ್ಲಿ ಸೇರ್ಪಡೆ ಮಾಡಲಾಗಿದೆ.

ಬೆಂಗಳೂರು-ಹೈದರಾಬಾದ್ ಮಾರ್ಗವು ಹಿಂದೂಪುರ, ದುದ್ದೇಬಂಡಾ (ಪೆನುಕೊಂಡ ಬಳಿ), ಅನಂತಪುರ, ಗೂಟಿ, ಧೋಣೆ (ದ್ರೋಣಾಚಲಂ), ಕರ್ನೂಲ್, ಮನ್ನನೂರು (ನಾಗರ್‌ಕರ್ನೂಲ್), ಭಾರತ್ ಸಿಟಿ (ಹೈದರಾಬಾದ್ ಬಳಿಯ ಯೋಜಿತ ಪಟ್ಟಣ) ಮತ್ತು ಹೈದರಾಬಾದ್ ವಿಮಾನ ನಿಲ್ದಾಣಗಳ (ಶಂಶಾಬಾದ್) ಮೂಲಕ ಹಾದು ಹೋಗಿ ಹೈದರಾಬಾದ್‌ನಲ್ಲಿ ಕೊನೆಗೊಳ್ಳಲಿದೆ.

▶ 2

ಅಂಕಿ ಅಂಶಗಳು

100.7 ಕಿ.ಮೀ. ಕರ್ನಾಟಕದಲ್ಲಿ ಹಾದು ಹೋಗುವ ಬೆಂಗಳೂರು–ಚೆನ್ನೈ ಕಾರಿಡಾರ್	**607.03** ಕಿ.ಮೀ. ಬೆಂಗಳೂರು-ಹೈದರಾಬಾದ್ ಕಾರಿಡಾರ್‌ನ ಉದ್ದ
1,358.96 ಹೆಕ್ಟೇರ್ ರಾಜ್ಯದಲ್ಲಿ ಅಗತ್ಯ ಇರುವ ಜಮೀನು	**101.03** ಕಿ.ಮೀ. ರಾಜ್ಯದಲ್ಲಿ ಕಾರಿಡಾರ್‌ನ ಉದ್ದ
15.94 ಕಿ.ಮೀ. ಬೆಂಗಳೂರಿನೊಳಗೆ ಹಾದು ಹೋಗುವ ಸುರಂಗ ಮಾರ್ಗ	**237.5** ಹೆಕ್ಟೇರ್ ರಾಜ್ಯದಲ್ಲಿ ಬೇಕಿರುವ ಜಮೀನು

ರೈಲು ಕ್ರಮಿಸುವ ಅವಧಿ

ಬೆಂಗಳೂರು-ಚೆನ್ನೈ ಕಾರಿಡಾರ್‌ನಲ್ಲಿ ಒಂದು ಗಂಟೆ 13 ನಿಮಿಷ ಮತ್ತು ಬೆಂಗಳೂರು-ಹೈದರಾಬಾದ್ ಕಾರಿಡಾರ್‌ನಲ್ಲಿ ಎರಡು ಗಂಟೆಯಲ್ಲಿ ರೈಲು ಕ್ರಮಿಸಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಎರಡು ತಿಂಗಳ ಹಿಂದೆಯೇ ಮಾಹಿತಿ ನೀಡಿದ್ದರು.

ಈ ಯೋಜನೆಗಳು ಬಿ -28 ರೈಲುಗಳನ್ನು ಒಳಗೊಂಡಿರಲಿದ್ದು, ಇವುಗಳನ್ನು ಭಾರತ್-ನಿರ್ಮಿತ ಬುಲೆಟ್ ಟ್ರೈನ್‌ಸೆಟ್‌ಗಳು ಎಂದೂ ಕರೆಯಲಾಗುತ್ತದೆ. ಪಿಎಸ್‌ಯು ಬಿಇಎಂಎಲ್ ವಿಶೇಷ ಘಟಕವು ಹೈಸ್ಪೀಡ್ ರೈಲು ತಯಾರಿಸುತ್ತಿದೆ.

ಬಿಡಿಎ ನಿವೇಶನಕ್ಕಾಗಿ ಸುಳ್ಳು ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಗ್ರೂಪ್ 'ಸಿ' ಮತ್ತು 'ಡಿ' ವರ್ಗದ ನೌಕರರಿಗೆ ಮೀಸಲಾಗಿದ್ದ ಬಡಾವಣೆಯಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನಿವೇಶನ ಪಡೆದ ಖಾಸಗಿ ವ್ಯಕ್ತಿಗಳ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಡಿಎ ಜಾಗೃತ ದಳದ ಡಿವೈಎಸ್‌ಪಿ ಬಿ.ಹನುಮಂತರಾಯ ಅವರ ದೂರಿನ ಮೇರೆಗೆ ಲಿಂಗಧೀರನಹಳ್ಳಿ ನಿವಾಸಿ ಎಚ್.ನಾಗರಾಜ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ದೊಡ್ಡ ಕಲ್ಲಸಂದ್ರ ಮತ್ತು ಲಿಂಗಧೀರನಹಳ್ಳಿ ಬಡಾವಣೆಗಳಲ್ಲಿ ಪ್ರಾಧಿಕಾರದ ಕೆಳಹಂತದ ನೌಕರರಿಗಾಗಿ ನಿವೇಶನಗಳನ್ನು ಮೀಸಲಿಡಲಾಗಿತ್ತು. ಇಲ್ಲಿನ ಎಂಕೆಎಸ್ 2ನೇ ಹಂತದ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 04 (9.14X12.19 ಅಳತೆ) ಅನ್ನು ನಾಗರಾಜ್ ಅವರು ತಾವು ಬಿಡಿಎ ನೌಕರ ಎಂದು ಸುಳ್ಳು ದಾಖಲೆ ನೀಡಿ ಪಡೆದಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ನಾಗರಾಜ್ ಮತ್ತು ಇತರರು ಸುಳ್ಳು ದಾಖಲೆ ಸೃಷ್ಟಿಸಿ ತಾವೂ ನೌಕರರೆಂದು ಬಿಂಬಿಸಿ ನಿವೇಶನ ಪಡೆದಿರುವುದು ಪ್ರಾಥಮಿಕ ವಿಚಾರಣೆಯಲ್ಲಿ ಗೊತ್ತಾಗಿದೆ. ಈ ಕಾರ್ಯಕ್ಕೆ ಪ್ರಾಧಿಕಾರದ ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಸಹಕಾರ ಹಾಗೂ ಒಳಸಂಚು ಇರುವುದು ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಿದೆ. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಆಸ್ತಿ ಕಬಳಿಸಿರುವ ನಾಗರಾಜ್ ಮತ್ತು ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಎಂದು ದೂರಿನಲ್ಲಿ ಕೋರಿದ್ದಾರೆ.



ಸಹಕಾರ ಸಂಘಗಳ ನಿಬಂಧಕರ ನೂತನ ಆಡಳಿತ ಕಚೇರಿ

"ಸಹಕಾರ ಸಮೃದ್ಧಿ ಸೌಧ"

ಲೋಕಾರ್ಪಣೆ

ದಿನಾಂಕ: 08-05-2026, ಶುಕ್ರವಾರ | ಸಮಯ: ಸಂಜೆ 4.00 ಗಂಟೆಗೆ

ಸ್ಥಳ: ಸಹಕಾರ ಸಂಘಗಳ ನಿಬಂಧಕರ ಕಚೇರಿ, ನಂ. 1, ಅಲಿಅಸ್ಕರ್ ರಸ್ತೆ, ಬೆಂಗಳೂರು - 52

ಸಹಕಾರ ಇಲಾಖೆ

"ಸಹಕಾರ ಸಮೃದ್ಧಿ ಸೌಧ"

ಲೋಕಾರ್ಪಣೆ

: ಉದ್ಘಾಟನೆ :
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

: ಘನ ಉಪಸ್ಥಿತಿ :
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ, ಹಣಕಾಸು
ಮತ್ತು ಕಾರ್ಪೊರೇಟ್ ವ್ಯವಹಾರಗಳ
ಸಚಿವರು, ಭಾರತ ಸರ್ಕಾರ

ಸು. ಶ್ರೀ ಶೋಭಾ ಕರಂದ್ಲಾಜೆ
ಮಾನ್ಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ
ಉದ್ಯಮಗಳ ಹಾಗೂ ಕಾರ್ಮಿಕ ಮತ್ತು
ಉದ್ಯೋಗ ಸಚಿವಾಲಯದ ರಾಜ್ಯ ಸಚಿವರು
ಭಾರತ ಸರ್ಕಾರ

: ಮುಖ್ಯ ಅತಿಥಿಗಳು :
ಶ್ರೀ ಹೆಚ್. ಕೆ. ಪಾಟೀಲ
ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಶ್ರೀ ಕೆ. ಜೆ. ಜಾರ್ಜ್
ಮಾನ್ಯ ಇಂಧನ ಸಚಿವರು

ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಸಚಿವರು

ಶ್ರೀ ಬಿ. ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಶ್ರೀ ಬಿ. ಎಸ್. ಸುರೇಶ್ (ಬೈರತಿ)
ಮಾನ್ಯ ನಗರಾಭಿವೃದ್ಧಿ ಸಚಿವರು

: ಅಧ್ಯಕ್ಷತೆ :
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು
ಶಿವಾಜಿನಗರ ವಿಧಾನಸಭಾ ಕ್ಷೇತ್ರ

: ಆಹ್ವಾನಿತರು :
ಶ್ರೀ ಆರ್. ಅಶೋಕ್
ಮಾನ್ಯ ವಿರೋಧ ಪಕ್ಷದ ನಾಯಕರು
ಕರ್ನಾಟಕ ವಿಧಾನಸಭೆ

ಶ್ರೀ ಛಲವಾದಿ ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು
ಕರ್ನಾಟಕ ವಿಧಾನ ಪರಿಷತ್ತು

: ವಿಶೇಷ ಆಹ್ವಾನಿತರು :
ಶ್ರೀ ಕೆ. ಎನ್. ರಾಜಣ್ಣ
ಮಾಜಿ ಸಚಿವರು ಹಾಗೂ
ಮಾನ್ಯ ಶಾಸಕರು, ಮಧುಗಿರಿ ವಿಧಾನಸಭಾ ಕ್ಷೇತ್ರ

: ಅತಿಥಿಗಳು :
ಡಾ. ಶಾಲಿನಿ ರಜನೀಶ್ ಭಾ.ಆ.ಸೇ.,
ಮುಖ್ಯಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಶ್ರೀ ಎಸ್.ಬಿ. ಶೆಟ್ಟೆಣ್ಣವರ ಭಾ.ಆ.ಸೇ.,
ಕಾರ್ಯದರ್ಶಿಗಳು, ಸಹಕಾರ ಇಲಾಖೆ

ಶ್ರೀ ಪಿ.ಎಸ್. ಕಾಂತರಾಜ್ ಭಾ.ಆ.ಸೇ.,
ಸಹಕಾರ ಸಂಘಗಳ ನಿಬಂಧಕರು, ಸಹಕಾರ ಇಲಾಖೆ

ಪ್ರಕಟಣೆ : ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಉಲ್ಲಾಸ ಸಂಗೀತ

ಪ್ರಜಾವಾಣಿ ವಾರ್ತೆ

ಉಲ್ಲಾಸದಲ್ಲಿ ಪ್ರದರ್ಶನಗೊಳ್ಳಲಿರುವ ನೃತ್ಯ ರೂಪಕ

ಬೆಂಗಳೂರು: ನಗರದ ಕಾರ್ನುಕೋಪಿಯ ಕ್ರಿಯೇಷನ್ಸ್ ಸಂಸ್ಥೆಯು ಉಲ್ಲಾಸ-2026 ಎನ್ನುವ ಕಥಕ್ ಹಾಗೂ ಸಮಕಾಲೀನ ನೃತ್ಯ ಕಾರ್ಯಕ್ರಮವನ್ನು ಮೇ 10ರಂದು ಮಲ್ಲೇಶ್ವರದ ಸೇವಾ ಸದನದಲ್ಲಿ ಹಮ್ಮಿಕೊಂಡಿದೆ.

ಯುವ ಕಲಾವಿದರು ವಿವಿಧ ವಿಷಯಗಳ ಮೇಲೆ ಕಥೆ ಹೇಳುತ್ತಲೇ ಅದಕ್ಕೆ ನೃತ್ಯ ರೂಪ ನೀಡುವರು. ಮೂರು ಗಂಟೆಗಳ ಕಾಲ ನಡೆಯುವ ಕಾರ್ಯಕ್ರಮ ಕಲಾಪ್ರಿಯರ ಮನ ತಣಿಸಲಿದೆ ಎಂದು ಸಂಸ್ಥೆಯ ಜನಾರ್ದನ ರಾಜ್ ಅರಸ್ ತಿಳಿಸಿದ್ದಾರೆ.

ಕಥಕ್ ನೃತ್ಯ ರೂಪಕದಲ್ಲಿ ಭವಾನಿ ಸ್ತುತಿ, ಚತುರಂಗ್, ಸಾನಿಧ್ಯ, ಪುಣ್ಯಕೋಟಿಯ ಕಥೆಯೊಂದಿಗೆ ಕಲಾವಿದರು ಹೆಜ್ಜೆ ಹಾಕಿದರೆ, ಸಮಕಾಲೀನ ನೃತ್ಯದಲ್ಲಿ ನಟರಾಜ, ರಾಮನ ಜೀವನ ಗಾಥೆಯ ಕರ್ಮಣ್ಯೆ ವಾಧಿಕಾರಸ್ಯ, ಅಶೋಕ, ಮಣಿಪುರ ಹಿಂಸಾಚಾರದ ಸನ್ನಿವೇಶದ ಬಳಿಕ ಶಾಂತಿ ಸಾರುವ ಸಂದೇಶವು ಇರಲಿದೆ ಎಂದು ತಿಳಿಸಿದ್ದಾರೆ. ಮಾಹಿತಿಗೆ 9663939931, 9886085680.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-392/25–26/492/2026–27(E-169966) ದಿನಾಂಕ: 06.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015 ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಸಂಪಂಗಿ ರಾಮರೆಡ್ಡಿ ಬಿನ್ ಚಿಕ್ಕಮುನಿಯಪ್ಪ, ನಂ. 1, ಕೃಷಿ ನಿಲಯ, ಹುಲಿಮಂಗಲ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–560 105.	ಆನೇಕಲ್	ಜಿಗಣಿ	ಹುಲಿಮಂಗಲ	121	1–37	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳ ಸುತ್ತಲೂ ಅಭಿವೃದ್ಧಿ ಹೊಂದಿರುವುದರಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿದ್ದು, ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಪ್ರದೇಶವನ್ನು ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ''ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ. ಸಹಾಯವಾಣಿ/ವಾಟ್ಸ್ಪ್: 9483166622 (24X7). X @BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

'ಆರ್ಟಿಸಾನ್ಸ್ ಹಾಟ್' ಇನ್ನು 3 ದಿನ

'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಆಯೋಜನೆ • ಮೇ 10ರವರೆಗೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ಜಯಮಹಲ್ ಪ್ಯಾಲೇಸ್ ಹೋಟೆಲ್ ಸಭಾಂಗಣದಲ್ಲಿ 'ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್' (ಟಿಐಎಎಚ್) ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಕೊನೇ ಮೂರುದಿನ ಮಾತ್ರ ಇರಲಿದ್ದು, ಸಾರ್ವಜನಿಕರು ಈ ಅವಕಾಶವನ್ನು ಬಳಸಿಕೊಳ್ಳುವಂತೆ ಆಯೋಜಕರು ಕೋರಿದ್ದಾರೆ.

ಮೇ 10ರವರೆಗೆ ಪ್ರದರ್ಶನ ಇರಲಿದ್ದು, ದೇಶದಾದ್ಯಂತ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ನಡೆಯುತ್ತಿದೆ. ಪ್ರಮುಖವಾಗಿ ಚನ್ನಪಟ್ಟಣದ ಆಟಿಕೆಗಳು, ಉತ್ತರ ಪ್ರದೇಶದ ಖುರ್ಜಾದ ಮಣ್ಣಿನ ಪಾತ್ರೆ ಹಾಗೂ ಆಲಂಕಾರಿಕ ವಸ್ತುಗಳು, ಜೈಪುರದ ನೀಲಿ ಮಡಕೆಗಳು, ಜೈಪುರ ಲೋಹ, ಒಡಿಶಾದ ಕಲ್ಲಿನ ವಿಗ್ರಹಗಳು, ಬೇವಿನ ಮರದ ಪಾತ್ರೆ, ಪಟಚಿತ್ರ, ಬಿಹಾರದ ಮಧುಬನಿ ವರ್ಣಚಿತ್ರಗಳು, ತಮಿಳುನಾಡಿನ ತಂಜಾವೂರು ವರ್ಣಚಿತ್ರ ಪಶ್ಚಿಮ ಬಂಗಾಳದ ಕಾಲಿಗಟ್ ವರ್ಣಚಿತ್ರ, ಸೋಲಾ ಹೂವು, ಮಹಾರಾಷ್ಟ್ರದ ರಾಳದ ಕಲೆ, ಸಂಗೀತ ವಾದ್ಯಗಳು, ಆಂಧ್ರಪ್ರದೇಶದ ಚರ್ಮದ ಬೊಂಬೆ ಮತ್ತು ದೀಪ, ಆಗ್ರಾದ ಅಮೃತಶಿಲೆ ಕೆತ್ತನೆ, ಮಧ್ಯ ಪ್ರದೇಶದ ಭಿಲ್ ಚಿತ್ರಕಲೆ, ಕರ್ನಾಟಕದ ಸುರಪುರ ಸುಣ್ಣದ ಕಲೆ, ಹರಿಯಾಣದ ಕಲ್ಲಿನ ದೂಳಿನ ಚಿತ್ರಕಲೆ, ಮಧ್ಯ ಪ್ರದೇಶದ ಗೊಂಡ್ ಚಿತ್ರಕಲೆ, ಹರಿಯಾಣದ ಮರದ ಕೆತ್ತನೆ, ಕೇರಳದ ಮರದ ಕೆತ್ತನೆಗಳು ಸೇರಿದಂತೆ ಹಲವು ಸಾಂಪ್ರದಾಯಿಕ ಉತ್ಪನ್ನಗಳು ಒಂದೇ ಸೂರಿನಡಿವೆ.

'ದಿ ಇಂಡಿಯನ್ ಆರ್ಟಿಸಾನ್ಸ್ ಹಾಟ್' ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ತಮ್ಮಿಷ್ಟದ ಬಟ್ಟೆ ಹುಡುಕುತ್ತಿರುವ ಗ್ರಾಹಕರು

ಕೈಮಗ್ಗ ಬಟ್ಟೆಗಳು, ಖಾದಿ, ವಿವಿಧ ಸೀರೆಗಳು, ಕಂಬಳಿಗಳು ಆಕರ್ಷಕವಾಗಿವೆ. ಪ್ರಾಚೀನ ಪೀಠೋಪಕರಣಗಳು, ಪ್ರಾಚೀನ ಕೆತ್ತನೆಗಳು ಮನ ಸೆಳೆಯುತ್ತಿವೆ ಎಂದು 'ದಿ ಇಂಡಿಯನ್ ಆರ್ಟಿಸನ್ಸ್ ಹಾಟ್' ಸಹ ಸಂಸ್ಥಾಪಕರಾದ ನಾಗರಾಜ್ ಹುಂಡೇಕರ್, ಅಹ್ಮದ್ ಖಾನ್ ತಿಳಿಸಿದ್ದಾರೆ.

ಎಲ್‌ಪಿಜಿ ದರ ಏರಿಕೆ: ಕೆಆರ್‌ಎಸ್ ಪ್ರತಿಭಟನೆ

ಬೆಂಗಳೂರು: ವಾಣಿಜ್ಯ ಬಳಕೆ ಎಲ್‌ಪಿಜಿ ಮತ್ತು ಗೃಹ ಬಳಕೆ ವಿದ್ಯುತ್ ದರ ಏರಿಕೆ ಖಂಡಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ರಘು ಜಾಣಗೆರೆ ಮಾತನಾಡಿ, 'ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ತೀವ್ರ ಅಭಾವ ಹಾಗೂ ದಿಢೀರ್ ಬೆಲೆ ಏರಿಕೆಯಿಂದ ಹೋಟೆಲ್ ಉದ್ಯಮ, ಸಣ್ಣ ಕೈಗಾರಿಕೆಗಳು ಮತ್ತು ಸಾಮಾನ್ಯ ಜನರ ಬದುಕು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಜಂಟಿ ಕಾರ್ಯದರ್ಶಿ ಎಲ್. ಜೀವನ್, 'ಬೆಸ್ಕಾಂ ವ್ಯಾಪ್ತಿಯಲ್ಲಿ ಪ್ರತಿ ಯೂನಿಟ್‌ಗೆ 56 ಪೈಸೆ ಹೆಚ್ಚಳ ಮಾಡಿರುವುದು ಮಧ್ಯಮ ವರ್ಗದವರ ಮಾಸಿಕ ಬಜೆಟ್‌ಗೆ ಗಂಭೀರ ಹೊಡೆತ ನೀಡಿದೆ' ಎಂದರು. ಉಪಾಧ್ಯಕ್ಷ ಮಂಜುನಾಥ್ ಎಸ್. ಮಾತನಾಡಿ, 'ಮೂರು ವರ್ಷಗಳಾದರೂ ಕಾಂಗ್ರೆಸ್ ಸರ್ಕಾರ ಯುವಕರಿಗೆ ಸಮರ್ಪಕ ಉದ್ಯೋಗ ಒದಗಿಸುವಲ್ಲಿ ವಿಫಲವಾಗಿದೆ' ಎಂದು ಆಗ್ರಹಿಸಿದರು.

ಬುಲೆಟ್ ರೈಲು: ನಕ್ಷೆ ಸಿದ್ಧ

ಒಂದನೇಪುಟದಿಂದ...

ಬೆಂಗಳೂರಿನ ಪ್ರಮುಖ ಸಾರಿಗೆ ಕೇಂದ್ರವಾದ ಮೆಜೆಸ್ಟಿಕ್ ಅನ್ನು ಎರಡೂ ಕಾರಿಡಾರ್‌ಗಳು ಸಂಪರ್ಕಿಸದೇ ನಗರದ ಹೊರಗಿನಿಂದಲೇ ಸಂಚರಿಸುತ್ತಿರುವುದು ರೈಲ್ವೆ ಪ್ರಯಾಣಿಕರಿಗೆ ನಿರಾಸೆ ತಂದಿದೆ.

ಮೈಸೂರು ಮಾರ್ಗ: ಬೆಂಗಳೂರು-ಮೈಸೂರು ಮಾರ್ಗವು (157.34 ಕಿ.ಮೀ.) ಮಂಡ್ಯ, ರಾಮನಗರ, ಕೆಂಗೇರಿ ಮತ್ತು ಎಲೆಕ್ಟ್ರಾನಿಕ್ಸ್ ಸಿಟಿ (ಹುಸ್ಕೂರು ಬಳಿ) ನಿಲ್ದಾಣಗಳನ್ನು ಒಳಗೊಂಡಿದೆ. ರಾಮನಗರ ನಿಲ್ದಾಣವು ಮೊದಲು ಇರಲಿಲ್ಲ. ಆಮೇಲೆ ಸೇರ್ಪಡೆ ಮಾಡಲಾಗಿದ್ದು, ಮೈಸೂರು ಮಾರ್ಗವು ಕೋಡಿಹಳ್ಳಿಯಲ್ಲಿ ಚೆನ್ನೈ ಮಾರ್ಗವನ್ನು ಸಂಧಿಸಲಿದೆ.

ಹೈದರಾಬಾದ್-ಪುಣೆ ಮಾರ್ಗವು ಕಲಬುರಗಿ ಯಲ್ಲಿ ನಿಲ್ದಾಣವನ್ನು ಹೊಂದಿರು ತ್ತದೆ. ಎಲ್ಲ ಮಾರ್ಗಗಳಿಗೂ ಸಮೀಕ್ಷೆಗಳು ನಡೆಯುತ್ತಿವೆ ಎಂದು ಯೋಜನೆಗಳನ್ನು ಕಾರ್ಯಗತಗೊಳಿಸುವ ರಾಷ್ಟ್ರೀಯ ಹೈ ಸ್ಪೀಡ್ ರೈಲು ನಿಗಮ ಲಿಮಿಟೆಡ್‌ನ (ಎನ್‌ಎಚ್‌ಎಸ್‌ಆರ್‌ಸಿಎಲ್) ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಸ್ಥಳ ದತ್ತಾಂಶ, ಸಂಚಾರ, ಪರಿಸರದ ಮೇಲೆ ಬೀರುವ ಪರಿಣಾಮದ ಬಗ್ಗೆ ಮೌಲ್ಯಮಾಪನ ಅಧ್ಯಯನಗಳನ್ನು ಒಳಗೊಂಡಿರುವ ಲಿಡರ್ (ಎಲ್‌ಐಡಿಎಆರ್) ಸಮೀಕ್ಷೆಗಳು ಪೂರ್ಣಗೊಂಡಿವೆ ಎಂದು ಕೋಲಾರ ಸಂಸದ ಎಂ. ಮಲ್ಲೇಶ್ ಬಾಬು ತಿಳಿಸಿದ್ದಾರೆ.

'ಅಗತ್ಯವಿರುವ ಜಮೀನುಗಳನ್ನು ಗುರುತಿಸಲಾಗಿದೆ. ಕೋಲಾರಕ್ಕೆ ಒಂದು ನಿಲ್ದಾಣ ಸಿಗುತ್ತದೆ. 2027-28ರ ಸುಮಾರಿಗೆ ಕಾಮಗಾರಿ ಆರಂಭವಾಗುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಸಕಾರಾತ್ಮಕ ಸ್ಪಂದನೆ

ಯದುವೀರ್ ಕೃಷ್ಣದತ್ತ

'ಹೈಸ್ಪೀಡ್ ರೈಲು ಯೋಜನೆಗೆ ಮೈಸೂರು-ಬೆಂಗಳೂರು ಮಾರ್ಗವನ್ನು ಸೇರಿಸುವ ಮೂಲಕ ಮೈಸೂರಿಗೆ ವಿಸ್ತರಿಸಲು ರೈಲ್ವೆ ಸಚಿವರಿಗೆ ಮನವಿ ಮಾಡಿದ್ದೇನೆ. ಸಚಿವರು ಸಕಾರಾತ್ಮಕ ವಾಗಿ ಪ್ರತಿಕ್ರಿಯೆ ನೀಡಿದ್ದಾರೆ' ಎಂದು ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

'ಜರ್ಮನ್ ಸಂಸ್ಥೆಯೊಂದು ನಡೆಸಿದ ಅಧ್ಯಯನ ಸೇರಿದಂತೆ ಎಲ್ಲ ಅಧ್ಯಯನಗಳು ಮೈಸೂರು ಈ ಕಾರಿಡಾರ್‌ನ ಭಾಗವಾಗಿರಬೇಕು ಎಂದು ದೃಢಪಡಿಸಿವೆ. ಮೈಸೂರನ್ನು ಸೇರಿಸುವ ಬಗ್ಗೆ ಶೀಘ್ರದಲ್ಲೇ ನಿರ್ಧಾರವಾಗಲಿದೆ ಎಂದು ನಾನು ಭಾವಿಸಿದ್ದೇನೆ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

M.E.I.POLYTECHNIC, BENGALURU
Rajajinagar, Benglauru -560010
Grand-in-Aid & AICTE Approved Institution
FACULTY, TECHNICAL & ADMINISTRATIVE STAFF RECRUITMENT
M.E.I. Polytechnic invites applications for Full Time Faculty, Lab Instructors, Lab Assistants and Administrative Staff. (Purely on Contract Basis)
FACULTY & TECHNICAL STAFF REQUIREMENT
DEPARTMENT
1 Mechanical Engineering (General)
2 Electrical & Electronics Engineering
3 Electronics & Communication Engineering
4 Computer Science & Engineering
5 Electronics Instrumentation & Control Engineering
6 Cloud Computing (New)
7 Cyber Physical Systems & Security (New)
8 Mathematics
9 English Language
POSITIONS
• Head of Department (For New Computer Science allied courses)
• Teaching Faculty, All departments
• Laboratory Instructors All departments
• Lab Assistants, All departments
QUALIFICATIONS
Head of Department: M.E. / M. Tech in relevant discipline + minimum 5 years teaching experience
Faculty: B.E. / B. Tech in relevant discipline + 2 years teaching experience / 5 years industry experience
Mathematics Faculty: M. Sc. in Mathematics + 2 years teaching experience
English Faculty: M.A. (Specialization in English Literature) + 2 years teaching experience
Lab Instructor: Diploma in respective / allied branch. B.Sc(C.Sc)/ BCA
Lab Assistant: Diploma / ITI in relevant field
All: Good communication: English and Kannada
ADMINISTRATIVE STAFF REQUIREMENT QUALIFICATIONS
POSITIONS: • Head Administrator • Office Admin Staff
QUALIFICATIONS: • Head Admin: Any Graduate, + minimum 5 Years Leadership Experience
• Office Staff : Any Gradute, +minimum 5 years Experience
• Both: Good written & and communication: English and Kannada. Computer typing in English and Kannada
RESPONSIBILITIES : • Head Admin: Institute Registrar Role, Estate Management and HR Management
• Office Staff: Financial Accountancy with Tally knowledge, Asset Management, HR and Communications office work
Send your resume with qualification & experience details to: meipolytechnic@gmail.com or Submit directly to: M.E.I. Polytechnic, Rajajinagar, Bengaluru-560010. Last Date : May 17, 2026 Attractive salaries for deserving candidates. All positions are purely on Contract Basis.
CONTACT: 080-23351919 | 23202341 | 8217469933 MYSORE TECHNICAL EDUCATION SOCIETY

Marketing & Sales
WANTED SALES Managers, Sales Executives, Telecallers. Opportunity to earn up to 40,000 P.M. Contact 8867627879

Graphic Designers
REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

HRD & Admin
WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

PERSONAL

Change of Name

CHANGE OF NAME
I, VIJAYALAXMI ANACHI, residing at No.1, 2nd Main, 5th Cross, Mysore Road, Deepanjalinagar, Bengaluru– 560026, have changed my name to VIJAYALAXMI BILKAR vide affidavit dated 07-05-2026 sworn before notary K.N. Ramadevi, Bengaluru. Henceforth I shall be called as VIJAYALAXMI BILKAR only.

CHANGE OF NAME
I, GANDAVARAPU ANITHA REDDY, residing at No.704, 5th Cross, HRBR Layout, Kalyananagar, Bengaluru- 560043 have changed my name to G ANITHA vide affidavit dated 07-05-2026 sworn before notary B.V. Nagabhushana, Bengaluru. Henceforth I shall be called as G ANITHA only.

CHANGE OF NAME
I, RANJINI DEV VASUDEVA, residing at No. 1234, 1st Main, 4th Cross, Kalyan Nagar, T Dasarahalli, Bengaluru-560057, have changed my name to RANJINI DEVANAMANA VASUDEV vide affidavit dated 07-05-2026 before notary Sivakumara M.N., Bengaluru.

REAL ESTATE SELLING

Farm House/ Land/ Resorts

Mysore Road
SALE OF 20 acres Yellow zone land near Big Banyan Tree, Tavarekere Hobli, Bangalore South Taluka. Adjacent to sanctioned 300 feet IRR road. Valuable Mango Teak etc. Suitable for Layout, Villas, Resort- 9148572576

BUILDERS ESSENTIAL

Water Proofing
'WE-FIX' LEAKING ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING. MACBOND. 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH DECCAN HERALD Classifieds More value, more impact
EDUCATION
ಪ್ರಜಾವಾಣಿ
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9845114560 | +91 9900428036

Sulakshmi Silks Proudly Presents
Mysore Silk Weaves Seere Utsava
6th SEERE UTSAVA
6ನೇ ಸೀರೆ ಉತ್ಸವ
A Celebration of Elegance
PRE VARAMAHALAKSHMI SALE
FLAT 50% OFF
on all Pure Mysore Silk Saree collections
Exclusive Health Offer!
Get a FREE Blood Checkup (Includes 50 comprehensive tests) *on every bill above Rs. 10,000*
ನಿಮ್ಮ ಆರೋಗ್ಯವೇ ನಮ್ಮ ಭಾಗ್ಯ!
6th - 17th May 2026
Address: Hemachandra Sagara Kalyana Mantapa, Jayanagar, Bengaluru
Call: 99727 18898 | 96631 27606
Experience the legacy

MQI INSTITUTIONS
Recognised by Govt. of Karnataka
ISO 9001:2015
LIMITED SEATS
ADMISSIONS OPEN FOR 2026 – 2027
MQI COLLEGE OF MANAGEMENT (MBA Program)
MQI DEGREE COLLEGE (B.Com, BBA and BCA)
MQI PRE-UNIVERSITY COLLEGE (Science, Commerce and Arts)
MQI HIGH SCHOOL
SPECIAL SCHOLARSHIPS For Meritorious, SC/ST and Economically Deserving Students
For admissions and more details contact us at:
Call: 080-48144679 +91 88920 19865
https://mqidegreecollege.com / mqidc2007@gmail.com
ROUNAQH

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-26701

PROPERTY
To Place your Classified Ads Contact 9845114560

BENGALURU'S LEADING EDUCATION POWERHOUSE
• Aviation • Engineering • Management
AME Aircraft Maintenance Engineering
Approved by DGCA, Govt. of India
B1.1 Aeroplane Turbine • B2 Avionics
Cadet AME Programme
with leading airlines. Recruitment at the time of joining and placement on completion of the course.
DGCA CAR 147 Basic
B1.3 Helicopter Turbine
Eligibility: 12th Std. with PCM or Diploma (DTE approved)
ADMISSIONS OPEN 2026-27
8971404357
9740037853
Business and Management Courses
Affiliated with Bengaluru North University and Approved by AICTE
BBA Aviation Management | B.Sc. Aircraft Maintenance | B.Com
BCA | BBA | MBA
Eligibility: 12th Std. or Diploma (DTE approved)
Polytechnic Eligibility: 10th Std.
• Aeronautical • Mechanical
• Computer Science Engineering
IATA AUTHORIZED TRAINING CENTER
HBS HINDUSTAN BUSINESS SCHOOL
Affiliated with Bengaluru North University and Approved by AICTE / UPES
HINDUSTAN BUSINESS SCHOOL
(A unit of EveHans Academy)
Ashwathnagar, Chinnappanahalli, Marathahalli, Bengaluru - 560037 Ph: 080-25238650, 25232217
E: admissions@hindustanacademy.edu.in
www.hindustanacademy.edu.in

MYSORE SILK EXHIBITION
BIG SALE
SRI CHAMUNDI SILKS
By Namita Kathare
AT UNNATHI PARTY HALL- Next to Sapna Book House JAYANAGAR
Hotel Nandini Deluxe, Next to Sapna Book House, 4th Block Jayanagar, Bangalore-560011
7th May to 10th May (Thursday - Sunday)
SALE UPTO 50%
Timing : 10AM- 8PM
Instagram : @mysoresilksareesss
Ph : + 91 9663398130
+91 9663963344
Experience the timeless elegance of Mysore Silk sarees
Our Branches :
Sri Chamundi Silks - Whitefield
Sri Chamundi Silks - Rajajinagar

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್
ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ, ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
तत्क्षण हण
10 Days only
ದಿನಾಂಕ 08-05-2026 to 19-05-2026
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್
ನಂ. 58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
ಕರೆ ಮಾಡಿ: 9632781499

RAMAN GROUP OF INSTITUTIONS
134, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org
RAMAN P.U. COLLEGE
36, Magadi Main Road, Next to Samrudhi Hotel, Opp. Pooja Convension Hall, Bengaluru-560079
In association with Deeksha Vedantu
Science + Integrated ♦ Commerce
Contact: 9686162639 / 9686162637
RAMAN DEGREE COLLEGE
BBA BCom BCA
Contact: 9686162639 / 9686162637
RAMAN POLYTECHNIC & ITI
♦ Civil ♦ Mechanical ♦ Electrical ♦ Electronics ♦ Computer Science ♦ Automobile ♦ Fitter ♦ Electronic Mechanic ♦ Electrician
Contact: 6360903500 / 8050066771
CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255
RMN-26701

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

भारत सरकार
सोमनाथ
अनंत ऊर्जा का अनुभव
सोमलिङ्गं नरो दृष्ट्वा सर्वपापैः प्रमुच्यते।
लभते फलं मनोवाञ्छितं मृतः स्वर्गं समाश्रयेत्॥
ಸೋಮನಾಥ
ಪರಂಪರೆಯ 75 ವರ್ಷಗಳು
ಸೋಮನಾಥ ಭಾರತದ ಅದಮ್ಯ ನಾಗರಿಕತೆಯ ಪ್ರತೀಕವಾಗಿದೆ. 1000 ವರ್ಷಗಳ ಕಾಲ ವಿನಾಶಕಾರಿ ಪ್ರಹಾರಗಳಿಗೆ ಈಡಾಗಿದ್ದರೂ, ಇಂದಿಗೂ ಕೂಡ ಸೋಮನಾಥ ನಮ್ಮ ಆತ್ಮಗೌರವ ಮತ್ತು ಸಾಹಸಗಳ ಪ್ರತಿರೂಪವಾಗಿ ತಲೆಯೆತ್ತಿ ನಿಂತಿದೆ. 75 ವರ್ಷಗಳ ಹಿಂದೆ, ಉಕ್ಕಿನ ಮನುಷ್ಯ ಸರದಾರ್ ವಲ್ಲಭಭಾಯಿ ಪಟೇಲ್‌ರವರ ಸಂಕಲ್ಪದಿಂದ ಆಧುನಿಕ ಸೋಮನಾಥ ಮಾರ್ಗ ನಿರ್ಮಾಣಗೊಂಡಿತು. ಈಗ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಈ ಪವಿತ್ರ ಕ್ಷೇತ್ರವು ಭಾರತದ ಸಾಂಸ್ಕೃತಿಕ ಪುನರುತ್ಥಾನವನ್ನು ಹೆಮ್ಮೆಯಿಂದ ಸಾರುತ್ತಿದೆ.
ಈ ಅವಿಸ್ಮರಣೀಯ ಸಂದರ್ಭಕ್ಕೆ ಸಾಕ್ಷಿಯಾಗೋಣ ಬನ್ನಿ
ಪ್ರಮುಖ ವಿಧಿ ವಿಧಾನಗಳು
ಕಳಸ ಯಾತ್ರೆ | ಸಂಜೆ ಭಜನೆ | ಓಂಕಾರ ಮಂತ್ರ ಪಠಣ | ಸೋಮನಾಥ ಕೃತಿಯಲ್ಲಿ ಮಂತ್ರ ಲೇಖನ
ಸೋಮನಾಥಕ್ಕೆ ಸಂಬಂಧಿತ ಕಥೆಗಳ ವಾಚನ
ಶ್ರೀ ಸೋಮನಾಥ ಮಂದಿರದ ಆವರಣ, ಪ್ರಭಾಸ್ ಪಾಟನ್ | 8–11 ಮೇ, 2026
"ಸೋಮನಾಥ ಆಶಾ ಗೀತೆಯು, ಸೃಷ್ಟಿಯ ಶಕ್ತಿಯು ವಿನಾಶಕ್ಕಿಂತ ಅಧಿಕ ಪ್ರಬಲವಾಗಿರುತ್ತದೆ, ಎಂಬುದನ್ನು ನಮಗೆ ಕಲಿಸುತ್ತದೆ"
–ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ (ಅಧ್ಯಕ್ಷರು, ಶ್ರೀ ಸೋಮನಾಥ ಟ್ರಸ್ಟ್)
CBC 09101/13/0004/2627
ಸೋಮನಾಥದ ದಿವ್ಯತೆ ಮತ್ತು ಭವ್ಯತೆಗೆ ಕೊಡುಗೆ ಸಲ್ಲಿಸಲು
ಹಾಗೂ ಗೌರವಶಾಲಿ ಇತಿಹಾಸದ ಭಾಗವಾಗಿರಲು ಇಲ್ಲಿ
ಸ್ಕ್ಯಾನ್ ಮಾಡಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮನೆನೊಣದಂತೆ ಅಸಹ್ಯ ಜೀವನ ಬೇಡ. ಜೇನುನೊಣದಂತೆ ಉಪಕಾರಿಯಾಗಿ ಬಾಳು.

–ರಾಮಕೃಷ್ಣ ಪರಮಹಂಸ

ಸಂಪಾದಕೀಯ

ಐಪಿಎಲ್ ಫೈನಲ್ ಪಂದ್ಯ ಸ್ಥಳಾಂತರ ರಾಜಕೀಯದ 'ಆಟ', ಕ್ರಿಕೆಟ್‌ಗೆ ನಷ್ಟ

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಫೈನಲ್ ಪಂದ್ಯವನ್ನು ಬೆಂಗಳೂರಿನಿಂದ ಕಿತ್ತುಕೊಂಡು ಅಹಮದಾಬಾದ್‌ಗೆ ನೀಡಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕ್ರಮವು, ಆಟದ ಹಿತಾಸಕ್ತಿಯ ಮೇಲೆ ರಾಜಕೀಯ ಹಾಗೂ ವಾಣಿಜ್ಯಾತ್ಮಕ ಲೆಕ್ಕಾಚಾರಗಳು ಮೇಲುಗೈ ಸಾಧಿಸಿರುವುದರ ಸಂಕೇತ. ಇದು, ರಾಜ್ಯದ ಕ್ರೀಡಾಭಿಮಾನಿಗಳಿಗೆ ನಿರಾಶೆ ತರುವ ಹಾಗೂ ಕ್ರಿಕೆಟ್ ಬೆಳವಣಿಗೆಗೆ ಹಿನ್ನಡೆ ಉಂಟುಮಾಡುವ ಬೆಳವಣಿಗೆ. ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಪ್ರಮುಖ ಪಂದ್ಯ ಕೈತಪ್ಪಿರುವುದರಿಂದ 'ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ' (ಕೆಎಸ್‌ಸಿಎ) ಆರ್ಥಿಕ ನಷ್ಟವನ್ನೂ ಅನುಭವಿಸಲಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮುಖ್ಯಸ್ಥರಾಗಿರುವ ಜಯ್ ಶಾ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹಸಚಿವ ಅಮಿತ್ ಶಾ ಅವರ ತವರಿನ ಮೇಲೆ ಬಿಸಿಸಿಐಗೆ ವಿಶೇಷ ಪ್ರೀತಿ ಇರುವುದು ಗುಟ್ಟೇನಲ್ಲ. ಕಳೆದ ಐದು ವರ್ಷಗಳಲ್ಲಿ ಪ್ರತಿಷ್ಠಿತ ಕ್ರಿಕೆಟ್ ಟೂರ್ನಿಗಳ ಐದು ಫೈನಲ್ ಪಂದ್ಯಗಳ ಆತಿಥ್ಯ ಅಹಮದಾಬಾದ್‌ಗೆ ದೊರೆತಿದೆ. ಅದರಲ್ಲಿ 2022, 2023 ಹಾಗೂ 2025ರ ಐಪಿಎಲ್ ಫೈನಲ್‌ಗಳು ಸೇರಿವೆ. 2023ರ ಐಸಿಸಿ ಏಕದಿನ ಮತ್ತು 2026ರ ಐಸಿಸಿ ಟಿ20 ಟೂರ್ನಿಯ ಫೈನಲ್ ಪಂದ್ಯಗಳೂ ಅಲ್ಲಿ ನಡೆದಿವೆ. ಇದೀಗ ನಾಲ್ಕನೇ ಬಾರಿ ಐಪಿಎಲ್ ಪ್ರಶಸ್ತಿ ಸುತ್ತಿನ ಹಣಾಹಣಿ ನಡೆಯಲಿದೆ. 2021ರಲ್ಲಿ ಮೊಟೇರಾದಲ್ಲಿ ನವೀಕೃತ ಕ್ರೀಡಾಂಗಣ ಉದ್ಘಾಟನೆಯಾದ ನಂತರ ಪ್ರಮುಖ ಪಂದ್ಯಗಳನ್ನು ಅಲ್ಲಿ ಆಯೋಜಿಸುವ ಪರಿಪಾಠ ಆರಂಭವಾಗಿದೆ. ಇದರಿಂದ, ಭಾರತದ ಕ್ರಿಕೆಟ್‌ನ 'ಪಂಚಪೀಠ'ಗಳೆಂದು ಪ್ರಸಿದ್ಧವಾಗಿರುವ ಕೋಲ್ಕತ್ತ, ಬೆಂಗಳೂರು, ಮುಂಬೈ, ಚೆನ್ನೈ ಮತ್ತು ಹೈದರಾಬಾದ್ ನಗರಗಳ ಕ್ರೀಡಾಂಗಣಗಳು ದೊಡ್ಡಮಟ್ಟದ ಪಂದ್ಯಗಳ ಆಯೋಜನೆಯಿಂದ ವಂಚಿತವಾಗುತ್ತಿವೆ.

ಐಪಿಎಲ್ ಫೈನಲ್ ಪಂದ್ಯದ ಆತಿಥ್ಯ ಬೆಂಗಳೂರಿಗೆ ದೊರೆಯದಿರುವುದರ ಹಿಂದೆ ರಾಜಕೀಯದ ಹಸ್ತಕ್ಷೇಪ ಇದೆ. ಶಾಸಕರ ಟಿಕೆಟ್ ಆಸೆ ಹಾಗೂ ಕೆಎಸ್‌ಸಿಎ ವೈಫಲ್ಯವೂ ಇದೆ.

2008ರಲ್ಲಿ ಐಪಿಎಲ್ ಆರಂಭವಾದಾಗಿನಿಂದಲೂ ಪ್ರತಿವರ್ಷವೂ ಬೇರೆ ಬೇರೆ ತಾಣಗಳಲ್ಲಿ ಫೈನಲ್ ಹಾಗೂ ಪ್ಲೇ ಆಫ್ ಪಂದ್ಯಗಳ ಆಯೋಜನೆ ನಡೆಸಲಾಗುತ್ತಿತ್ತು. ಆಯಾ ವರ್ಷದ ಚಾಂಪಿಯನ್ ತಂಡದ ತವರಿಗೆ ಉದ್ಘಾಟನೆ ಮತ್ತು ಫೈನಲ್ ಪಂದ್ಯಗಳನ್ನು ನಡೆಸುವ ಅವಕಾಶ ಸಾಮಾನ್ಯವಾಗಿ ದೊರೆಯುತ್ತಿತ್ತು. ಕಳೆದ ಆವೃತ್ತಿಯಲ್ಲಿ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' ತಂಡ ಗೆಲುವು ಸಾಧಿಸಿದ್ದರಿಂದಾಗಿ, ಬೆಂಗಳೂರಿಗೆ ಈ ಬಾರಿಯ ಫೈನಲ್ ನಡೆಸುವ ಅವಕಾಶ ಸಿಗಲಿದೆ ಎಂದು ಟೂರ್ನಿಯ ಆರಂಭಕ್ಕೂ ಮೊದಲು ಕೆಎಸ್‌ಸಿಎ ಪದಾಧಿಕಾರಿಗಳು ಹೇಳಿದ್ದರು. ಪ್ಲೇ ಆಫ್ ಹಂತದ ಪಂದ್ಯಗಳ ಆತಿಥ್ಯವೂ ಬೆಂಗಳೂರಿಗೆ ಸಿಗುವ ಸಾಧ್ಯತೆ ಇತ್ತು. ಆದರೆ, ಇದ್ದಕ್ಕಿದ್ದಂತೆ ಪ್ಲೇ ಆಫ್ ಪಂದ್ಯಗಳ ಅವಕಾಶವನ್ನು ಧರ್ಮಶಾಲಾ ಹಾಗೂ ಮುಲ್ಲನಪುರಗಳಿಗೆ ನೀಡಲಾಗಿದೆ.

ಬೆಂಗಳೂರಿನಿಂದ ಫೈನಲ್ ಸ್ಥಳಾಂತರಕ್ಕೆ ಬಿಸಿಸಿಐ ಸ್ಪಷ್ಟ ಕಾರಣಗಳನ್ನು ನೀಡಿಲ್ಲ. ಶಾಸಕರು ಮತ್ತು ಸಂಸದರಿಗೆ ಉಚಿತ ಪಾಸ್‌ಗಳನ್ನು ನೀಡುವುದು ನಷ್ಟದ ಬಾಬ್ತು ಎನ್ನುವ ನಿಲುವಿಗೆ ಮಂಡಳಿ ಬಂದಿರುವುದು ಪಂದ್ಯದ ಸ್ಥಳಾಂತರಕ್ಕೆ ಕಾರಣಗಳಲ್ಲೊಂದು ಎನ್ನಲಾಗುತ್ತಿದೆ. ಕಳೆದ ವರ್ಷ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ಸಾವಿಗೀಡಾಗಿದ್ದರು. ಆ ದುರಂತವೂ ಪ್ರಮುಖ ಪಂದ್ಯದಿಂದ ಚಿನ್ನಸ್ವಾಮಿ ಕ್ರೀಡಾಂಗಣ ವಂಚಿತವಾಗಲು ಕಾರಣವಾಗಿರಬಹುದು. ಆದರೆ, ಕೆಎಸ್‌ಸಿಎ ಪದಾಧಿಕಾರಿಗಳು ಈ ಕಾರಣಗಳನ್ನು ಒಪ್ಪುವುದಿಲ್ಲ. ಐಪಿಎಲ್, ದೇಶಿ ಮತ್ತು ಅಂತರರಾಷ್ಟ್ರೀಯ ಪಂದ್ಯಗಳ ಆಯೋಜನೆಗೆ ತಾವು ಸನ್ನದ್ಧರಾಗಿರುವುದಾಗಿ ಹೇಳುತ್ತಾರೆ. ಬಿಸಿಸಿಐ ಮಾರ್ಗಸೂಚಿಗೆ ಅನುಗುಣವಾಗಿ ಎಲ್ಲ ಮಾಹಿತಿಗಳನ್ನು ನೀಡಲಾಗಿದೆ ಎಂದೂ ಕೆಎಸ್‌ಸಿಎ ಹೇಳುತ್ತಿದೆ. ಕಾರಣ ಏನೇ ಇದ್ದರೂ, ಪ್ರಮುಖ ಪಂದ್ಯಗಳು ಬೆಂಗಳೂರಿಗೆ ತಪ್ಪದಂತೆ ಬಿಸಿಸಿಐ ಮನವೊಲಿಸುವಲ್ಲಿ 'ಕೆಎಸ್‌ಸಿಎ' ವಿಫಲವಾಗಿರುವುದು ಸ್ಪಷ್ಟ. ಆರ್‌ಸಿಬಿ ಗೆಲುವಿನ ವಿಜಯೋತ್ಸವದ ಸಂದರ್ಭದಲ್ಲಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಘಟನೆಯು ರಾಜ್ಯದ ಕ್ರಿಕೆಟ್‌ಗೆ ಕಂಟಕವಾಗಿ ಪರಿಣಮಿಸಿತ್ತು. ಆ ದುರಂತದ ನೆನಪು ಮಾಸುವ ಮುನ್ನವೇ, ಇತ್ತೀಚೆಗೆ ಐಪಿಎಲ್ ಪಂದ್ಯ ನಡೆದ ದಿನವೇ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 200ಕ್ಕೂ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾಗಳು ನಿಷ್ಕ್ರಿಯಗೊಂಡಿದ್ದವು. ಆ ಪ್ರಕರಣವೂ ಸುರಕ್ಷತೆಯ ಬಗ್ಗೆ ಅನುಮಾನ ಮೂಡಿಸಿರಬಹುದು. ಉಚಿತ ಟಿಕೆಟ್‌ಗಳಿಗೆ ಪಟ್ಟು ಹಿಡಿದ ಶಾಸಕರ ವರ್ತನೆಯೂ ಬೆಂಗಳೂರಿನ ಕ್ರೀಡಾವರ್ಚಸ್ಸಿಗೆ ತಕ್ಕುದಾಗಿರಲಿಲ್ಲ. ಐಪಿಎಲ್ ಫೈನಲ್ ಪಂದ್ಯ ಕೈತಪ್ಪಿರುವುದರ ಬಗ್ಗೆ ಬಿಸಿಸಿಐ ಮುಂದೆ ಬೇಸರ ವ್ಯಕ್ತಪಡಿಸಿರುವುದಾಗಿ ಕೆಎಸ್‌ಸಿಎ ಹೇಳಿದೆ. ಅದರಿಂದ ಉಪಯೋಗವಿಲ್ಲ. ಆಗಿರಬಹುದಾದ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು. ತನಗಾಗಿರುವ ನಷ್ಟಕ್ಕೆ ರಾಜ್ಯ ಸಂಸ್ಥೆಯು ಬಿಸಿಸಿಐ ಎದುರು ಗಟ್ಟಿಧ್ವನಿಯಿಂದ ಪ್ರತಿಭಟಿಸಬೇಕು. ಅನ್ಯಾಯ ಮರುಕಳಿಸದಂತೆ ಎಚ್ಚರ ವಹಿಸಬೇಕು.

ಜಾಲಾಡಿ

ಜಿಬಿಎ ಚುನಾವಣೆ ಯಾವಾಗ?

ದೂಳು ತುಂಬಿರುವ, ಕಸ ಬಿದ್ದಿರುವ, ಹದಗೆಟ್ಟಿರುವ ರಸ್ತೆಗಳನ್ನು ಸರಿಪಡಿಸಲು ಪಾಲಿಕೆ ಸದಸ್ಯರಿಗೆ ಜವಾಬ್ದಾರಿ ಹೊರಿಸಬೇಕು; ಪಾಲಿಕೆ ವಾರ್ಡ್‌ಗಳಿಗೆ ಹಣ ಹಂಚಿಕೆ ಆದಾಗಷ್ಟೇ ನಗರ ಒಂದು ಮಟ್ಟಿಗೆ ಸರಿಹೋಗುತ್ತದೆ. ಆದರೆ, ಜಿಬಿಎ ವ್ಯಾಪ್ತಿಯ ಪಾಲಿಕೆಗಳಿಗೆ ಚುನಾವಣೆ ಯಾವಾಗ? ಕಳೆದ ಚುನಾವಣೆ ಆಗಿದ್ದು 11 ವರ್ಷಗಳ ಹಿಂದೆ; 2015ರಲ್ಲಿ.

ಅಮರನಾಥ್ ಶಿವಶಂಕರ್, ಟೆಕ್ಕಿ, 'ಎಕ್ಸ್'ನಿಂದ

ಕಿಡಿನುಡಿ

ಲೈಂಗಿಕ ದೌರ್ಜನ್ಯದ ವಿಡಿಯೊ ಅಸಲಿ ಎಂದು ವರದಿ ಬಂದಿದ್ದರೂ, ಹಿರಿಯ ಪೊಲೀಸ್ ಅಧಿಕಾರಿಯನ್ನು ರಕ್ಷಿಸುತ್ತಿರುವ ರಾಜ್ಯ ಸರ್ಕಾರ ನ್ಯಾಯದ ಮೇಲೆ ನಂಬಿಕೆ ಇಲ್ಲದಂತೆ ವರ್ತಿಸುತ್ತಿದೆ. ಹೆಣ್ಣುಮಕ್ಕಳ ಮಾನಕ್ಕಿಂತಲೂ ಭ್ರಷ್ಟ ಅಧಿಕಾರಿಗಳ ರಕ್ಷಣೆಯೇ ಸರ್ಕಾರಕ್ಕೆ ಮುಖ್ಯವಾಯಿತೆ?

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 8-5-2001

- **ಎರಡು ಜಿಲ್ಲೆಯ ರೈತರಿಗೆ ಮಾತ್ರ ರಾತ್ರಿ ವಿದ್ಯುತ್**

ಬೆಂಗಳೂರು, ಮೇ 7– ಈ ತಿಂಗಳ 1ರಿಂದ ಗ್ರಾಮೀಣ ಪ್ರದೇಶದ ರೈತರಿಗೆ ರಾತ್ರಿವೇಳೆಯಲ್ಲಿ ನಿರಂತರ ವಿದ್ಯುತ್ ಪೂರೈಸುವ ಸರ್ಕಾರದ ವಾಗ್ದಾನ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಮಾತ್ರ ಪ್ರಾಯೋಗಿಕವಾಗಿ ಕಾರ್ಯಗತವಾಗುತ್ತಿದೆ ಎಂದು ಇಂಧನ ಖಾತೆ ರಾಜ್ಯ ಸಚಿವ ವೀರಕುಮಾರ ಪಾಟೀಲ ತಿಳಿಸಿದರು.

ವರದಿಗಾರರ ಜೊತೆ ಮಾತನಾಡಿದ ಅವರು, ಈ ಎರಡು ಜಿಲ್ಲೆ ಗಳಲ್ಲಿ ದಿನಂಪ್ರತಿ 10 ಗಂಟೆ ವಿದ್ಯುತ್ ಪೂರೈಸಲಾಗುತ್ತಿದೆ ಅವರು ಹೇಳಿದರು.

ಈಗ ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್ ಅನ್ನು ಎಲ್ಲ 27 ಜಿಲ್ಲೆಗಳಿಗೆ ಪೂರೈಸಲು ಆಗದು. ಈಗ ಇರುವ ಮೂಲ ಸೌಲಭ್ಯ ಸಹ ಅಷ್ಟು ಒತ್ತಡವನ್ನು ತಡೆಯುವಷ್ಟು ಸಮರ್ಥ-ವಾಗಿಲ್ಲ ಎಂದು ತಿಳಿಸಿದರು.

- **ಕಲುಷಿತ ಎಣ್ಣೆಹೊಳೆ ಕೆರೆಯಲ್ಲಿ ಲಕ್ಷ ಮೀನು ಸಾವು**

ಮೈಸೂರು, ಮೇ 7– ಇಲ್ಲಿಗೆ ಸಮೀಪದ ಮಂಡಕಳ್ಳಿ ಬಳಿಯ ಎಣ್ಣೆಹೊಳೆ ಕೆರೆಯಲ್ಲಿ ನೀರು ಕಲುಷಿತಗೊಂಡು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮೀನು ಮತ್ತು ಮರಿಗಳು ಸತ್ತ ದಾರುಣ ಘಟನೆ ಸಂಭವಿಸಿದೆ.

ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿಯ ಜಂಟಿ ನಿರ್ದೇಶಕ (ಹಣಕಾಸು) ಬಿ.ಕೆ. ಯದುನಾಥ್ ಅವರು, ಸತ್ತಿರುವ ಮೀನುಗಳ ಒಟ್ಟು ಮೌಲ್ಯ ರೂ. 30 ಲಕ್ಷಕ್ಕೂ ಹೆಚ್ಚು ಎಂದು ವಿವರಿಸಿದರು.

75 ವರ್ಷಗಳ ಹಿಂದೆ

ಮಂಗಳವಾರ, 8-5-1951

- **ಚೀಣಾದ ಮೇಲೆ ದಿಗ್ಬಂಧನ; ಸೇನಾ ನಾಯಕರ ಅಭಿಲಾಷೆ**

ವಾಷಿಂಗ್‌ಟನ್, ಮೇ 7– ಹಾಂಕಾಂಗ್ ಮೂಲಕ ಚೀಣಾಕ್ಕೆ ಸಾಮಗ್ರಿಗಳ ರವಾನೆಯನ್ನು ನಿಷೇಧಿಸಿ ಚೀಣಾದ ಮೇಲೆ ಆರ್ಥಿಕ ದಿಗ್ಬಂಧನವನ್ನುಂಟು ಮಾಡಬೇಕೆಂಬುದು ಜಂಟಿ ಸೇನಾನಾಯಕರ ಅಭಿಲಾಷೆಯಾಗಿತ್ತೆಂಬುದಾಗಿ ಇಂದು ಅಮೆರಿಕಾ ರಕ್ಷಣಾ ಶಾಖಾ ಕಾರ್ಯದರ್ಶಿಗಳಾದ ಜಾರ್ಜ್ ಮಾರ್ಷಲ್ಲರು ತಿಳಿಸಿದರು.

ಜನರಲ್ ಮೆಕಾರ್ಥರರು ಟ್ರೂಮನ್ನರ ದೂರ ಪ್ರಾಚ್ಯ ನೀತಿಯನ್ನು ಟೀಕಿಸಿರುವುದಕ್ಕೆ ಅಮೆರಿಕಾದ ರಕ್ಷಣಾ ಶಾಖಾ ಕಾರ್ಯದರ್ಶಿಗಳಾದ ಜನರಲ್ ಜಾರ್ಜ್ ಮಾರ್ಷಲ್ಲರು ಉತ್ತರ ಕೊಡಲು ಪ್ರಾರಂಭಿಸಿದರು.

ಇತಿಹಾಸ: ಅಲಿಪ್ತ ನೋಟ ಅಗತ್ಯ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

> ಇತಿಹಾಸದ ಖಚಿತ ನಿರೂಪಣೆ ಸಾಧ್ಯವೇ ಎನ್ನುವ ಪ್ರಶ್ನೆಗೆ 'ಇಲ್ಲ' ಎನ್ನುವುದೇ ಖಚಿತ ಉತ್ತರ. ನಮ್ಮನ್ನು ಅರಿತುಕೊಳ್ಳುವುದರ ಜೊತೆಗೆ, ಸಮಾಜವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾದಷ್ಟೂ ಅಲಿಪ್ತ ಭಾವದಿಂದ ಇತಿಹಾಸವನ್ನು ನೋಡಬೇಕು. ಆಗಷ್ಟೇ ರಚನಾತ್ಮಕ ಬದಲಾವಣೆ ಸಾಧ್ಯ.

'ಅಂಗಡಿಯಲ್ಲಿ ಟಿಪ್ಪೂ ಸುಲ್ತಾನ್ ಒಳ್ಳೆಯವನು ಎನ್ನುವ ಪುಸ್ತಕ ಇದೆ. ಕೆಟ್ಟವನು ಎನ್ನುವ ಪುಸ್ತಕವೂ ಇದೆ. ಯಾವುದನ್ನು ತೆಗೆದುಕೊಳ್ಳಬೇಕು?' ಓದುಗರೊಬ್ಬರ ಈ ಪ್ರಶ್ನೆಗೆ, 'ಎರಡನ್ನೂ ಓದಿ. ಸರಿ ಯಾವುದೆಂದು ನೀವೇ ತೀರ್ಮಾನಿಸಿ' ಎನ್ನುವುದು ಉತ್ತರ. ಆದರೆ, 'ಇದೇ ಸರಿ' ಎನ್ನುವ ಖಚಿತ ಉತ್ತರ ಇದಾಗುವುದಿಲ್ಲ. ಏಕೆಂದರೆ, 'ಅಂತಿಮವಾಗಿ ಇದೇ ಇತಿಹಾಸ ಎಂದು ಖಚಿತವಾಗಿ ಹೇಳಲು ಸಾಧ್ಯವಾಗುತ್ತದೆಯೆ?' ಎಂಬ ಪ್ರಶ್ನೆ ಎದುರಾಗುತ್ತದೆ. ಇತಿಹಾಸದ ಅಧ್ಯಾಪಕರಂತೂ ನಿರಂತರವಾಗಿ ಎದುರಿಸಬೇಕಾದ ಪ್ರಶ್ನೆ ಇದಾಗಿರುತ್ತದೆ. ಆದರೆ, ನಿಖರವಾಗಿ 'ಇದೇ ಸರಿ' ಎನ್ನುವ ಉತ್ತರ ಇಲ್ಲ.

ನಮ್ಮ ಜೊತೆಯಲ್ಲೇ ಬದುಕುವವರ ಜೀವನದ ಪೂರ್ಣ ವಿವರಗಳು ನಮಗೆ ತಿಳಿದಿರುವುದಿಲ್ಲ. ಅಂದಮೇಲೆ, ಸಾವಿರಾರು ವರ್ಷಗಳ ಹಿಂದೆ ಇಂತಾದ್ದು ಹೀಗೆಯೇ, ಈ ಕಾರಣಕ್ಕಾಗಿಯೇ ನಡೆದಿದೆ, ಇಂಥವನೇ ನಾಯಕ, ಇಂಥವನೇ ಪ್ರತಿನಾಯಕ ಎಂದು ಹೇಳಲು ಸಾಧ್ಯವಿಲ್ಲ. ಹಾಗಿದ್ದರೆ ಇತಿಹಾಸವನ್ನು ಯಾಕೆ ಅಭ್ಯಾಸ ಮಾಡಬೇಕು? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು 'ಇತಿಹಾಸ ನಿರೂಪಣೆ' ಮತ್ತು 'ಚರಿತ್ರೆ ನಿರೂಪಣೆ'ಯ ವ್ಯತ್ಯಾಸವನ್ನು ಅರಿತುಕೊಳ್ಳಬೇಕು.

ಚರಿತ್ರೆ ನಿರೂಪಣೆಯ ಪರಿಕಲ್ಪನೆ ಭಾರತೀಯ ವಿನ್ಯಾಸದ್ದಾಗಿದೆ. ಅದು ನಡೆದ ಘಟನೆಗಳಲ್ಲಿ ಮುಂದಿನ ಪೀಳಿಗೆಗೆ ಯಾವುದು ಜೀವನಮೌಲ್ಯ ಎನಿಸುತ್ತದೆಯೊ ಅಂತಹದ್ದನ್ನು ಕಥನ ಕ್ರಮ ದಲ್ಲಿ ದಾಖಲಿಸುತ್ತದೆ. ಕೆಟ್ಟದ್ದು ಎನಿಸಿದ್ದನ್ನು ಕೈಬಿಡುತ್ತದೆ ಅಥವಾ ಸಮಾಜಕ್ಕೆ ಮೌಲಿಕವಲ್ಲ ಎನಿಸಿ ದ್ದನ್ನು ಖಳನನ್ನಾಗಿ ಚಿತ್ರಿಸುತ್ತದೆ. ಇಂಥ ನಿರೂಪಣೆಯ ತಾತ್ವಿಕತೆಯನ್ನು 'ಬಸವ ಚರಿತ್ರೆ', 'ಶರಭ ಚರಿತ್ರೆ' ಮುಂತಾದ ಹೆಸರುಗಳಲ್ಲೇ ಗುರ್ತಿಸಬಹುದು. 'ಚಾರಿತ್ರ್ಯ ಉಳ್ಳದ್ದು ಚರಿತ್ರೆ'ಯಾಗಿ ನಿರೂಪಣೆಯಾಗಿತ್ತು. ಆದರೆ, ಈ ಬಗೆಯ ನಿರೂಪಣೆಗಳು ಪ್ರತಿಪಾದಿಸುವ 'ಜೀವನಮೌಲ್ಯ'ದ ಪರಿಕಲ್ಪನೆಗೂ ಮಿತಿಗಳಿವೆ. ನಾಗರಿಕತೆಯ ವಿಕಾಸ ದೊಂದಿಗೆ ಜೀವನಮೌಲ್ಯಗಳ ಪರಿಕಲ್ಪನೆಯೂ ಬದಲಾಗುತ್ತದೆ. ಒಂದು ಕಾಲಕ್ಕೆ 'ಮೌಲ್ಯ' ಎನಿಸಿದ್ದೇ ಮತ್ತೊಂದು ಕಾಲದಲ್ಲಿ 'ಮೌಲ್ಯವಲ್ಲ' ಅನಿಸಿಕೊಳ್ಳಬಹುದು. ಆಗ ಈ ರೀತಿಯಲ್ಲಿ ನಿರೂಪಿತ ವಾದ ಚರಿತ್ರೆಗಳೂ ಅವುಗಳ ಉದ್ದೇಶವನ್ನು ಸಾಧಿಸಲು ವಿಫಲವಾಗುತ್ತವೆ.

ಇತಿಹಾಸಕ್ಕೆ ಚಾರಿತ್ರ್ಯ ಉಳ್ಳದ್ದು–ಇಲ್ಲದ್ದು, ಬೇಕಾದ್ದು–ಬೇಡದ್ದು ಎನ್ನುವ ಗುಣಾತ್ಮಕತೆಯ ಮಾನದಂಡವಿಲ್ಲ. ಅದು ಮುಕ್ತ ಸ್ವರೂಪದ್ದಾಗಿದೆ. ಯಾವ ಘಟನೆಗೆ ಸಾಕ್ಷಿ ದೊರೆಯುತ್ತದೆಯೋ ಅದನ್ನು ಆಧರಿಸಿ, 'ಈ ಘಟನೆಯು ನಡೆದ ಕ್ರಮ ಇದನ್ನು ಹೇಳುತ್ತದೆ' ಎನ್ನುತ್ತದೆ. ಹೀಗೆ ವಿವರಿಸಲಾದ ಘಟನೆಯಲ್ಲಿ ವಿಶಾಲ ವ್ಯಾಪ್ತಿಯ ಅರ್ಥೈಸುವಿಕೆ ಸರಿಯಾಗಿಯೂ ನಿಖರವಾಗಿಯೂ ಇರುತ್ತದೆ. ಆದರೆ, ಅದರ ಸೂಕ್ಷ್ಮ ವಿವರಗಳಲ್ಲಿ ಇದೇ ಖಚಿತ ಎನ್ನಲು ಆಗುವುದಿಲ್ಲ. ಉದಾಹರಣೆಗೆ, ಬಾಬರ್‌ನನ್ನು ಭಾರತಕ್ಕೆ ದಾಳಿ ಮಾಡಲು ದೌಲತ್ ಖಾನ್ ಲೋದಿ ಮತ್ತು ಆಲಂ ಖಾನ್ ಲೋದಿ ಆಹ್ವಾನಿಸಿದರು ಎಂದು ಇತಿಹಾಸದಲ್ಲಿದೆ. ಇದನ್ನೇ ಖಚಿತ ಮತ್ತು ಇವರು ಆಹ್ವಾನಿಸಿದ ಕಾರಣಕ್ಕಾಗಿಯೇ ಬಾಬರ್ ಭಾರತದ ಮೇಲೆ ದಾಳಿ ಮಾಡಿದ ಎಂದು ಅಧಿಕೃತಗೊಳಿಸಲು ಆಗುವುದಿಲ್ಲ. ಅವನು ಭಾರತಕ್ಕೆ ದಾಳಿ ಮಾಡಲು ಫರ್ಗಣದಲ್ಲಿ ಅವನಿಗಾದ ತೊಂದರೆಗಳೂ ಕಾರಣವಿರಬಹುದು, ಭಾರತದ ಸಂಪತ್ತು, ಇಬ್ರಾಹಿಂ ಲೋದಿಯ ಮೇಲಿನ ಅಸಮಾಧಾನ ಕಾರಣವಿರಬಹುದು. ದೌಲತ್ ಖಾನ್, ಆಲಂ ಖಾನ್ ಜೊತೆಗೆ ಇನ್ನೂ ಕೆಲವರು ಅವನನ್ನು ದಾಳಿಗೆ ಆಹ್ವಾನಿಸಿರಬಹುದು. ರಾಣಾ ಸಂಘ ಕೂಡ ಬಾಬರ್‌ನನ್ನು ಆಹ್ವಾನಿಸಿದ್ದ ಎಂಬ ವರದಿಗಳಿವೆ. ಹಾಗಾಗಿ, ಖಚಿತವಾಗಿ 'ಇದೇ ಸರಿ' ಎನ್ನಲು ಆಗುವುದಿಲ್ಲ. ಆದರೆ, ಬಾಬರ್‌ನೇ ಭಾರತದ ಮೇಲೆ ದಾಳಿ ಮಾಡಿದ್ದೇ ಹೊರತು ದೆಹಲಿಯಿಂದ ಇಬ್ರಾಹಿಂ ಲೋದಿ ಫರ್ಗಣಕ್ಕೆ ಹೋಗಿ ಬಾಬರ್‌ನ ಮೇಲೆ ದಾಳಿ ಮಾಡಿದ್ದರಿಂದಾಗಿ ಒಂದನೆಯ ಪಾಣಿಪತ್ ಕದನ ನಡೆದದ್ದಲ್ಲ ಎಂದು ಖಚಿತವಾಗಿ ಹೇಳಬಹುದು. ಏಕೆಂದರೆ, ಘಟನೆಯ ಸುತ್ತ ಇರುವ ಯಾವುದೇ ಸನ್ನಿವೇಶಗಳೂ ಇಬ್ರಾಹಿಂ ಲೋದಿಯೇ ಬಾಬರ್‌ನ ಮೇಲೆ ದಾಳಿ ಮಾಡಿರಬಹುದೆಂದು ಸೂಚಿಸುವುದಿಲ್ಲ.

ಘಟನೆಯ ವಿವರಗಳ ವಿಚಾರಕ್ಕೆ ಬಂದಾಗ ಭಾರತದ ಇತಿಹಾಸ ನಿರೂಪಣೆಯಲ್ಲಿ ವೈಭವೀಕರಣ ಮತ್ತು ಎದುರಾಳಿಯ ಅಪಮೌಲ್ಯೀಕರಣದ ಸಮಸ್ಯೆಗಳಿವೆ. ಅವು ಕೆಲವೊಮ್ಮೆ 'ಇತಿಹಾಸ ವಿಧಾನ'ದ ಆಚೆಗೆ ನಿಲ್ಲುತ್ತವೆ. ನಡೆದಿದೆ ಎನ್ನಲಾದ ಘಟನೆಯು ಇತಿಹಾಸ ವಿಧಾನದ ಪ್ರಕಾರ ಸಮಂಜಸತೆಯನ್ನು ಹೊಂದಿರುವುದು ಇತಿಹಾಸ ನಿರೂಪಣೆಯ ಅವಶ್ಯಕತೆಯಾಗಿರುತ್ತದೆ. ಉದಾಹರಣೆಗೆ, ಒನಕೆ ಓಬವ್ವ ಚಿತ್ರದುರ್ಗದ ಕೋಟೆಯ ಕಳ್ಳಕಿಂಡಿಯಲ್ಲಿ ನುಸುಳಿ ಬಂದ ಹೈದರಾಲಿಯ ಸೈನಿಕರನ್ನು ಒನಕೆಯಲ್ಲಿ ಹೊಡೆದು ಕೊಂದಳು ಎನ್ನುವುದು ಘಟನೆ. ಸತ್ತವರ ಸಂಖ್ಯೆಯನ್ನು ಒಬ್ಬೊಬ್ಬರೂ ಹೆಚ್ಚಿಸುತ್ತಲೇ ಹೋಗಿದ್ದಾರೆ. ಆ ಸಂಖ್ಯೆಗಳು ನೂರನ್ನು ದಾಟಿವೆ. ಆಗ ಇತಿಹಾಸದ ನಿರೂಪಣಾ ಪದ್ಧತಿಯ ಪ್ರಕಾರ ಪರಿಶೀಲನೆ ನಡೆಸಬೇಕಾಗುತ್ತದೆ. ಕಿಂಡಿಯಲ್ಲಿ ನುಗ್ಗಿ ಬರುವ ಸೈನಿಕನ ತಲೆಗೆ ಹೊಡೆದು ಕೊಲ್ಲುತ್ತಾ ಹೋದಾಗ ಹೆಣದ ವಿಲೇವಾರಿ ಆಗಬೇಕು. ಸಂಖ್ಯೆ ಹೆಚ್ಚಾದಂತೆ ಹೆಣವನ್ನು ಒಂದರ ಮೇಲೊಂದರಂತೆ ಅಟ್ಟಬೇಕು ಅಥವಾ ಕೋಟೆಯ ಒಳಭಾಗದಲ್ಲಿ ಹರಡಬೇಕು. ಹೀಗೆ ಹೆಣದ ವಿಲೇವಾರಿಯನ್ನು ಮತ್ತೊಬ್ಬ ಸೈನಿಕ ಕಿಂಡಿಯ ಒಳಗೆ ತಲೆ ತೂರಿಸುವ ಮೊದಲೇ ಮಾಡಬೇಕು. ಓಬವ್ವ ಹೆಣದ ವಿಲೇವಾರಿ ಮಾಡುತ್ತಿರುವಾಗಲೇ ಶತ್ರು ಒಳಕ್ಕೆ ಬಂದರೆ ಅವನನ್ನು ಹೊಡೆಯಲು ಆಗುವುದಿಲ್ಲ. ತಲೆಗೆ ಹೊಡೆದು ಕೊಂದಾಗ ರಕ್ತ ಚಿಮ್ಮುತ್ತದೆ. ಆ ರಕ್ತ ಕಿಂಡಿಯ ಹೊರಕ್ಕೆ ಹರಿದರೆ ಹೊರಗಿದ್ದವನಿಗೆ ಅನುಮಾನ ಬರುತ್ತದೆ. ಹೊರಗಿನಿಂದ ಒಳ ಪ್ರವೇಶಿಸಿದವರು ಪರಿಣತ ಸೈನಿಕರೇ ಆಗಿದ್ದ ಪಕ್ಷದಲ್ಲಿ ಹಲವು ಪರಿಣತ ಸೈನಿಕರಲ್ಲಿ ಒಬ್ಬನಿಗಾದರೂ ಮಾನವದೇಹ ಸ್ವಯಂ ಶಕ್ತಿಯಿಂದ ಒಳಕ್ಕೆ ಪ್ರವೇಶಿಸುವ ಮತ್ತು ಮತ್ತೊಬ್ಬರು ದೇಹವನ್ನು ಎಳೆದು ಒಳಕ್ಕೆ ತೆಗೆದುಕೊಳ್ಳುವ ವಿಧಾನಗಳ ವ್ಯತ್ಯಾಸ ತಿಳಿದಿರುತ್ತದೆ. ಆಗ ಕಿಂಡಿಗೆ ಪ್ರವೇಶಿಸಲು ಹೈದರಾಲಿ ಕಳಿಸಿದ ಸೈನಿಕರು ಯಾರು, ಅವರ ಪರಿಣತಿ ಏನು ಇತ್ಯಾದಿ ಪರಿಶೀಲಿಸಿ, ವಾಸ್ತವಿಕವಾಗಿ ಎಷ್ಟು ಸಾಧ್ಯವೋ ಅಷ್ಟನ್ನು ಮಾತ್ರ ನಿರೂಪಿಸುವುದು ಇತಿಹಾಸವಾಗುತ್ತದೆ.

ಭಾರತದ ಇತಿಹಾಸವನ್ನು ಕಥೆಗಳಿಂದ ಬೇರ್ಪಡಿಸುವುದು ಕಷ್ಟ. ಉದಾಹರಣೆಗೆ, ರಾಣಾ ಪ್ರತಾಪ್ ಸಿಂಹ 80 ಕೆ.ಜಿ. ತೂಕದ ಖಡ್ಗದಿಂದ ಯುದ್ಧ ಮಾಡುತ್ತಿದ್ದ ಎನ್ನುವುದು. ಅಷ್ಟು ತೂಕದ ಖಡ್ಗವನ್ನು ಪ್ರದರ್ಶಿಸಬಹುದೇ ಹೊರತು, ಅದರಿಂದ ಯುದ್ಧ ಮಾಡಲಾಗದು. ಆದರೆ, ಭಾರತೀಯ ರಾಜರು ಮತ್ತು ಸೈನಿಕರು ಬಳಸುತ್ತಿದ್ದ ಖಡ್ಗ ಅರಬ್ ರಾಜರು ಮತ್ತು ಸೈನಿಕರ ಖಡ್ಗಕ್ಕಿಂತ ತೂಕದ್ದಾಗಿತ್ತು ಎನ್ನುವುದು ಸತ್ಯ. ಅರಬ್ಬರ ಖಡ್ಗ ಅತ್ಯಂತ ಹಗುರವಾಗಿದ್ದು, ತೀಕ್ಷ್ಣವಾಗಿರುತ್ತಿತ್ತು. ಅರಬ್ಬರ ಗೆಲುವಿನಲ್ಲಿ ಅವರು ಬಳಸುತ್ತಿದ್ದ ಆಯುಧಗಳು ಮತ್ತು ತೀಕ್ಷ್ಣ ಚಲನೆಯ ಕುದುರೆ ವಾಹನದ ಪಾಲು ಹೆಚ್ಚು. ಭಾರತೀಯ ರಾಜರ ಸೋಲಿನಲ್ಲಿ ಅವರ ಆಯುಧಗಳು ಮತ್ತು ನಿಧಾನ ಚಲನೆಯ ಆನೆ ವಾಹನದ ಪಾಲು ಹೆಚ್ಚಿದೆ. ವಿವರಗಳಿಂದ ಕಥೆಗಳನ್ನು ತೆಗೆಯದೆ ಇತಿಹಾಸದ ನಿರೂಪಣೆ ಸಾಧ್ಯವಾಗುವುದಿಲ್ಲ. ಆದರೆ, ಕೆಲವು ಕಥೆಗಳನ್ನು 'ಕಥೆ' ಎಂದು ಹೇಳಿದರೆ, ಹೇಳಿದವರ ಮೇಲೆ ಗಲಾಟೆ ಮಾಡುವಷ್ಟು ಭಾರತೀಯರು ಕಥೆಗಳ ಇತಿಹಾಸಕ್ಕೆ ಭಾವನಾತ್ಮಕವಾಗಿ ಬದ್ಧರಾಗಿದ್ದಾರೆ. ಆ ಕಾರಣದಿಂದಲೇ ಇತಿಹಾಸ ನಿರೂಪಣೆಗೆ ತೊಡಕಾಗಿರುವ ಇನ್ನೊಂದು ಸಮಸ್ಯೆಯಾಗಿರುವ ಎದುರಾಳಿಯ ಅಪಮೌಲ್ಯೀಕರಣದ ಬಗ್ಗೆ ಇಲ್ಲಿ ಚರ್ಚಿಸುವುದಿಲ್ಲ. ಆದರೆ, ಆರಾಧನೆಗೊಳಗಾಗುವ ಅನೇಕ ಮಹಾನಾಯಕರು ಎದುರಾಳಿಯನ್ನು ಅಪಮೌಲ್ಯೀಕರಣ ಮಾಡಿದ್ದರಿಂದಾಗಿಯೇ ಮಹಾನ್ ಎನಿಸಿಕೊಂಡಿದ್ದಾರೆ. ಇದರರ್ಥ ಅವರು ಖಳರೆಂದಲ್ಲ. ಅವರೂ ಮನುಷ್ಯರೇ ಆಗಿದ್ದರು. ಆದರೆ, ಸಹಜ ಮನುಷ್ಯರನ್ನು ಎದುರಾಳಿಯ ಅಪಮೌಲ್ಯೀಕರಣದ ಮೂಲಕ ಮಹಾನ್ ಆಗಿ ನಿರೂಪಿಸುವುದು 'ಇತಿಹಾಸದ ಸಂಕಥನ' ಆಗುತ್ತದೆಯೇ ಹೊರತು 'ಅಧಿಕೃತವಾದ' ಇತಿಹಾಸವೇ ಆಗುವುದಿಲ್ಲ. ಇಂದಿನ ದಿನಗಳಲ್ಲಿ ಬಲಪಂಥ ಮತ್ತು ಎಡಪಂಥ ಹೆಸರಿನಲ್ಲಿ (ವಾಸ್ತವದಲ್ಲಿ ಅವು ಆಡಳಿತ, ವಿರೋಧ ಪಕ್ಷಗಳೆಂಬ ವಿಭಜನೆಯೇ ಹೊರತು, ಸೈದ್ಧಾಂತಿಕವಾಗಿ ಬಲ ಅಥವಾ ಎಡಪಂಥದ ಸ್ವರೂಪ ಹೊಂದಿಲ್ಲ) ಇತಿಹಾಸವು ಆಯಾ ಗುಂಪುಗಳಿಗೆ ಸಹಾಯಕವಾಗುವ 'ಸಂಕಥನ'ವಾಗಿ ಉಳಿದಿದೆಯೇ ಹೊರತು 'ಇತಿಹಾಸ'ವಾಗಿ ಅಲ್ಲ.

ಇತಿಹಾಸ ಎಂದಿಗೂ ಸಮಗ್ರ ಅಲ್ಲ ಎನ್ನುವುದರ ಅರಿವಿರಬೇಕು. ಮನುಷ್ಯನಿಗೆ 1 ಲಕ್ಷದ 80 ಸಾವಿರ ವರ್ಷಗಳ ಇತಿಹಾಸವಿದೆ. ಅದರಲ್ಲಿ 1 ಲಕ್ಷದ 75 ಸಾವಿರ ವರ್ಷಗಳ ವಿವರಗಳು ಅಂಧಕಾರದಿಂದ ಕೂಡಿವೆ. ಈ ಅಂಧಕಾರದ ಇತಿಹಾಸದ ಅನುಭವ ಮನುಷ್ಯನ ಸುಪ್ತಪ್ರಜ್ಞೆಯಲ್ಲಿದೆ. ಆದರೆ, ವಿವರಗಳಾಗಿ ಇಲ್ಲ. ಆದ್ದರಿಂದ ಇತಿಹಾಸ ಅಧ್ಯಯನದ ಮುಖ್ಯ ಉದ್ದೇಶ, ಅದರ ಇತರೆಲ್ಲ ಉದ್ದೇಶಗಳಿಗಿಂತ ಮುಖ್ಯವಾಗಿ 'ಮಾನವ ವರ್ತನೆಯ ಅಭ್ಯಾಸ'ವಾಗಿದೆ. ಜಾತಿ, ಧರ್ಮ, ಪಂಥ, ಪಕ್ಷ, ದೇಶ ಮುಂತಾದ ವಿಭಜನೆಗೆ ಇಂದಿಗೂ ಮಹತ್ವವಿದೆ. ಆದಿವಾಸಿ ಮನುಷ್ಯರು ಲಕ್ಷಾಂತರ ವರ್ಷಗಳ ಕಾಲ ಗುಂಪಾಗಿ ಜೀವಿಸುತ್ತಿದ್ದರು ಹಾಗೂ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ದಾಳಿ ಮಾಡಿಕೊಂಡೇ ಬದುಕಿದ್ದುದು. ಸುಪ್ತ ಪ್ರಜ್ಞೆಗಿರುವ ಆ ಇತಿಹಾಸದ ಅನುಭವ ಇಂದಿಗೂ ನಮ್ಮ ವರ್ತನೆಯಲ್ಲಿ ನಿರ್ದಿಷ್ಟ ಜಾತಿ–ಧರ್ಮ–ಪಂಥಗಳ ಗುಂಪಿನವನಾಗಿ ಇನ್ನೊಂದು ಗುಂಪನ್ನು ಗ್ರಹಿಸುವ ವರ್ತನೆಯನ್ನು ರೂಪಿಸಿದೆ. ನಮ್ಮನ್ನು ನಾವು ಮತ್ತು ಸಮಾಜವನ್ನು ನಾವು ಚೆನ್ನಾಗಿ ಅರಿತು ವರ್ತನೆಯಲ್ಲಿ ಬದಲಾವಣೆ ತಂದುಕೊಳ್ಳಲಿಕ್ಕಾಗಿ 'ಮನುಷ್ಯನ ವಿಕಾಸದ ಕ್ರಮ' ರೂಪದಲ್ಲಿ ಸಾಧ್ಯವಾದಷ್ಟೂ ಅಲಿಪ್ತ ಭಾವದಿಂದ ಇತಿಹಾಸದ ಅಧ್ಯಯನ ಮಾಡಬೇಕಾಗುತ್ತದೆ.



ವಾಚಕರ ವಾಣಿ

ಈರುಳ್ಳಿ ಧಾರಣೆ ಕುಸಿತ: ರೈತರ ಪರದಾಟ

ರಾಜ್ಯದಲ್ಲಿ ಈರುಳ್ಳಿ ಬೆಲೆ ಕುಸಿತದಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಉತ್ತಮ ಲಾಭದ ನಿರೀಕ್ಷೆಯಲ್ಲಿ ಫಸಲು ಬೆಳೆದರೂ ಮಾರುಕಟ್ಟೆಯಲ್ಲಿನ ದರ ಕುಸಿತದಿಂದ ಉತ್ಪಾದನಾ ವೆಚ್ಚವೂ ಕೈಸೇರುತ್ತಿಲ್ಲ. ಬಿತ್ತನೆಬೀಜ, ರಸಗೊಬ್ಬರ ಹಾಗೂ ಕೂಲಿ ವೆಚ್ಚ ಹೆಚ್ಚುತ್ತಿರುವ ಸಂದರ್ಭದಲ್ಲಿ ಧಾರಣೆ ಇಳಿಕೆಯಾಗಿರುವುದು ರೈತರ ಬದುಕಿಗೆ ಬರೆ ಎಳೆದಿದೆ. ಸಾಗಣೆ ವೆಚ್ಚ ಹೆಚ್ಚಿರುವುದರಿಂದ ಕೆಲವರು ಮಾರುಕಟ್ಟೆಗೆ ಸರಕು ತರುತ್ತಿಲ್ಲ. ಕಟಾವು ಮಾಡದೆ ಹೊಲದಲ್ಲಿಯೇ ಬಿಟ್ಟಿದ್ದಾರೆ. ಟೊಮೆಟೊ, ಈರುಳ್ಳಿ, ಆಲೂಗೆಡ್ಡೆ ಬಹುಬೇಗ ಕೊಳೆತು ಹೋಗುತ್ತವೆ. ಇಂತಹ ಕೃಷಿ ಹುಟ್ಟುವಳಿಗಳನ್ನು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಖರೀದಿಸಲು ಅವಕಾಶವಿದೆ. ಕೇಂದ್ರ ಸರ್ಕಾರವು ಈರುಳ್ಳಿ ಖರೀದಿಗೆ ಮುಂದಾಗಬೇಕಿದೆ.

ಸಂತೋಷ ಪೂಜಾರಿ, ವಿಜಯಪುರ

ಎಲ್‌ಪಿಜಿ ದುಬಾರಿ: ಹಳಿ ತಪ್ಪಿದ ಬದುಕು

ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ದರದಲ್ಲಿನ ನಿರಂತರ ಏರಿಕೆಯು ಸಣ್ಣ ವ್ಯಾಪಾರಿಗಳು ಹಾಗೂ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೆ ದೂಡಿದೆ. ದರ ಏರಿಕೆಯಿಂದ ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರಿದೆ. ಅಂತಿಮವಾಗಿ ಈ ಹೊರೆ ಗ್ರಾಹಕರ ಮೇಲೆ ಬಿದ್ದಿದೆ. ಒಂದೆಡೆ ಜೀವನೋಪಾಯ ಕಷ್ಟವಾಗುತ್ತಿದ್ದರೆ, ದೈನಂದಿನ ಖರ್ಚುಗಳು ನಿಯಂತ್ರಣ ತಪ್ಪುತ್ತಿವೆ. ಇದು ಜನಸಾಮಾನ್ಯರ ಬದುಕನ್ನು ಬಿಕ್ಕಟ್ಟಿನ ಅಂಚಿಗೆ ತಳ್ಳುತ್ತಿದೆ. ಕೇಂದ್ರ ಸರ್ಕಾರವು ಮಧ್ಯಪ್ರವೇಶಿಸಿ ವಾಣಿಜ್ಯ ಸಿಲಿಂಡರ್ ದರ ನಿಯಂತ್ರಿಸಲು ಕ್ರಮಕೈಗೊಳ್ಳಬೇಕು. ಸಣ್ಣ ವ್ಯಾಪಾರಿಗಳಿಗೆ ಸಬ್ಸಿಡಿ ಘೋಷಿಸಬೇಕು. ಇಲ್ಲವಾದರೆ ಅವರ ಬದುಕು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದೆ.

ಹನುಮಂತ ಆರ್.ಸಿ., ಹುನಗುಂದ

ಜನರ ಕಷ್ಟಕ್ಕೆ ಸ್ಪಂದಿಸುವ ಗುಣ ಇರಲಿ

ಶುದ್ಧನೀರು, ಗಾಳಿ, ರಾಸಾಯನಿಕಮುಕ್ತ ಆಹಾರ ಸೇರಿದಂತೆ ಜನರ ಮೂಲಭೂತ ಸಮಸ್ಯೆಗಳು ಬೆಟ್ಟದಂತೆ ಬೆಳೆಯುತ್ತಿವೆ. ಕಸದ ನಗರಿಯಾಗಿ ಬೆಂಗಳೂರು ಮಾತ್ರವಲ್ಲ, ಹಳ್ಳಿಗಳು ನಾರುತ್ತಿವೆ. ಏಕಬಳಕೆ ಪ್ಲಾಸ್ಟಿಕ್ ಅನ್ನು ಎಗ್ಗಿಲ್ಲದೆ ಬಳಸಿ, ಅದರ ಸಮರ್ಪಕ ನಿರ್ವಹಣೆ ಇಲ್ಲದೆ ನೆಲ, ಜಲ, ವನ, ಜೀವಸಂಕುಲ ಆಪತ್ತಿಗೆ ಸಿಲುಕಿವೆ. ಪರಿಸರ ಕಾನೂನುಗಳು ಪುಸ್ತಕಕ್ಕಷ್ಟೇ ಸೀಮಿತವಾಗಿವೆ. ಇದರ ಬಗ್ಗೆ ಚರ್ಚಿಸಿ ಪರಿಹಾರ ಕಾರ್ಯಕ್ಕೆ ಮುಂದಾಗಬೇಕಾದ ಶಾಸಕರು ಅಧಿವೇಶನಗಳಲ್ಲಿ ಅನಗತ್ಯ ಚರ್ಚೆಯಲ್ಲಿ ಕಾಲಹರಣ ಮಾಡುತ್ತಿದ್ದಾರೆ. ಇದಕ್ಕಾಗಿ ಜನತೆಯ ತೆರಿಗೆ ಹಣ ವ್ಯಯವಾಗುತ್ತಿದೆ. ಶಾಸಕರು ಮತ್ತು ಸಚಿವರಿಗೆ ಈ ಕುರಿತು ಸೂಕ್ತ ಮಾರ್ಗದರ್ಶನ, ಕಟ್ಟುನಿಟ್ಟಾದ ತರಬೇತಿ ದೊರೆಯಬೇಕಿದೆ.

ಅಶ್ವಿನಿ ಭಟ್, ಸರೋಜಾ ಪ್ರಕಾಶ, ಆರತಿ ಅಶೋಕ್, ಶೋಭಾ ಭಟ್, ನಯನಾ, ಕೀರ್ತಿ, ಲೀನಾ, ಝೀನಾ, ಅನುಪಮಾ, ಮಂಗಳೂರು

ಲೋಕಭವನ ಮತ್ತು ರಾಜಕೀಯ ಪಕ್ಷಪಾತ

ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಗದಿದ್ದಾಗ; ಬೇರೊಂದು ಪಕ್ಷದ ನಾಯಕನೂ ಹಕ್ಕು ಮಂಡಿಸದೆ ಇದ್ದಾಗ, ಅತಿಹೆಚ್ಚು ಸದಸ್ಯರ ಬಲವನ್ನು ಹೊಂದಿದ ಪಕ್ಷದ ಶಾಸಕಾಂಗ ನಾಯಕ ಸರ್ಕಾರ ರಚಿಸಲು ಹಕ್ಕು ಮಂಡಿಸಿದಾಗ ಅದಕ್ಕೆ ಅವಕಾಶ ನೀಡಬೇಕಿದೆ. ಇದು ಸಾಂವಿಧಾನಿಕ ಮಾನದಂಡವೂ ಆಗಿದೆ. ಸರ್ಕಾರ ರಚನೆಗೆ ಅವಕಾಶ ಕೊಟ್ಟು ಕಾಲಮಿತಿಯಲ್ಲಿ ಸದನದಲ್ಲಿ ಬಹುಮತ ಸಾಬೀತುಪಡಿಸಲು ಸೂಚಿಸಬೇಕಿದೆ. ಈ ಕುರಿತಂತೆ ಎಸ್.ಆರ್. ಬೊಮ್ಮಾಯಿ ಪ್ರಕರಣ ಮತ್ತು ರಾಮೇಶ್ವರ ಪ್ರಸಾದ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಆದರೂ ತಮಿಳುನಾಡಿನ ರಾಜ್ಯಪಾಲರು, ಅತಿಹೆಚ್ಚು ಸಂಖ್ಯಾ ಬಲ ಹೊಂದಿರುವ ಟಿವಿಕೆ ಪಕ್ಷದ ನಾಯಕ ವಿಜಯ್ ಅವರನ್ನು ಲೋಕಭವನದಲ್ಲಿ ಬಹುಮತಕ್ಕೆ ದಾಖಲೆ ಕೇಳಿರುವುದು ಅಚ್ಚರಿ ತಂದಿದೆ. ಅವರ ಪೂರ್ವಗ್ರಹಪೀಡಿತ ನಡೆ ಖಂಡನೀಯ.

ಕೆ.ಎಂ. ನಾಗರಾಜು, ಮೈಸೂರು

ಫೈನಲ್ ಸ್ಥಳಾಂತರ: ಬಿಸಿಸಿಐ ನಡೆ ಅಕ್ಷಮ್ಯ

19ನೇ ಆವೃತ್ತಿಯ ಐಪಿಎಲ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯವನ್ನು ಬೆಂಗಳೂರಿನಿಂದ ಗುಜರಾತ್‌ನ ಅಹಮದಾಬಾದ್‌ಗೆ ಸ್ಥಳಾಂತರಿಸಿರುವ ಬಿಸಿಸಿಐ ನಡೆಯು ಸರಿಯಲ್ಲ. ಇದು ಕರ್ನಾಟಕದ ಕ್ರಿಕೆಟ್ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದೆ. ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳು ಬಹುತೇಕ ಉತ್ತರ ಭಾರತದಲ್ಲೇ ಆಯೋಜನೆಗೊಳ್ಳುತ್ತಿವೆ. ಅದರಲ್ಲೂ ಅಹಮದಾಬಾದ್‌ನಲ್ಲೇ ಕೇಂದ್ರೀಕೃತವಾಗುತ್ತಿವೆ. ಹಾಗಿದ್ದರೆ, ಉಳಿದ ರಾಜ್ಯಗಳ ಕ್ರೀಡಾಭಿವೃದ್ಧಿಯ ಕಥೆಯೇನು? ಬೆಂಗಳೂರು ಅಂತರರಾಷ್ಟ್ರೀಯ ಕ್ರೀಡಾಕೂಟಗಳ ಆತಿಥ್ಯವಹಿಸುವ ಅರ್ಹತೆ ಹೊಂದಿದೆ. ಹೀಗಿದ್ದರೂ ಕೇಂದ್ರ ಮತ್ತು ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಇಬ್ಬಗೆ ಧೋರಣೆ ತಳೆದಿವೆ.

ಬೀರಪ್ಪ ಡಿ. ಡಂಬಳಿ, ಅಥಣಿ

ಸ್ವಚ್ಛ ಪರಿಸರ: ಜನರ ಸಹಭಾಗಿತ್ವ ಅಗತ್ಯ

ಪೌರಾಡಳಿತದ ನಿರ್ಲಕ್ಷ್ಯದಿಂದ ಚರಂಡಿಯಲ್ಲಿ ಹೂಳು ತುಂಬಿದೆ. ರಸ್ತೆಗಳು ಸ್ವಚ್ಛವಾಗಿಲ್ಲ, ಮ್ಯಾನ್‌ಹೋಲ್‌ಗಳು ಕಟ್ಟಿಕೊಂಡಿವೆ. ಚರಂಡಿಯಲ್ಲಿ ಕಸಕಡ್ಡಿ ಸಂಗ್ರಹಗೊಂಡು ನೀರು ಹರಿಯಲು ಸಾಧ್ಯವಾಗದೆ ಮನೆಯೊಳಗೆ ನುಗ್ಗಿದೆ ಇತ್ಯಾದಿ ಆರೋಪಗಳು ಪಾಲಿಕೆ ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೇಳಿ ಬರುತ್ತವೆ. ಆದರೆ, ಜನಸಾಮಾನ್ಯರು ಮಾತ್ರ ಸ್ವಚ್ಛತೆ ಕಾಪಾಡುವಲ್ಲಿ ತಮ್ಮ ಕರ್ತವ್ಯವೇನು ಎಂಬುದರ ಕುರಿತು ಯೋಚಿಸುತ್ತಿಲ್ಲ. ನಮ್ಮ ಮನೆಗಳ ಮುಂದೆ ಯಾರೋ ಕಸ ತಂದು ಹಾಕುವುದಿಲ್ಲ. ನಾವೇ ಕಸ ಹಾಕಿ, ಅದನ್ನು ಬೇರೊಬ್ಬರು ಸ್ವಚ್ಛಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ. ಮನೆಯ ಸುತ್ತಮುತ್ತಲಿನ ಪರಿಸರದ ಸ್ವಚ್ಛತೆಗೆ ಒತ್ತು ನೀಡಬೇಕು. ಆಗ ಬೇರೆಯವರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸುವ ಚಾಳಿ ಕೊನೆಗೊಳ್ಳುತ್ತದೆ.

ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ

ಚುರುಮುರಿ



ಸಾಲದ ಸಿಎಂ!

● ಬಿ.ಎನ್. ಮಲ್ಲೇಶ್

'ಈ ದೇಶದಲ್ಲಿ ಎಂತೆಂಥೋರು ಏನೇನೋ ಆಗೋದ್ರು... ಮನೆ ಕೆಲಸದೋರು, ಕಾರು ಡ್ರೈವರೆಲ್ಲ ಎಮ್ಮೆಲ್ಲೆ ಆದ್ರು. ಚಾ ಮಾರೋರೊಬ್ರು ದೇಶದ ಪ್ರಧಾನಿನೇ ಆದ್ರು. ಚಾದಂಗಡಿ ಇಟ್ಟರೋ ನಮ್ ಮಂಜಮ್ಮ ಮಾತ್ರ ಏನೂ ಆಗ್ಲಿಲ್ಲಪ...' ಹರಟೆಕಟ್ಟೆಯಲ್ಲಿ ದುಬ್ಬೀರ ಬೇಸರ ವ್ಯಕ್ತಪಡಿಸಿದ.

'ನಾನು ಇದ್ರಲ್ಲೇ ನೆಮ್ಮದಿಯಾಗಿದೀನಿ, ನಂಗೇನೂ ಬ್ಯಾಡ...' ಮಂಜಮ್ಮ ಚಾ ಸೋಸಿ ಮಸಿ ಬಟ್ಟೆ ಕೊಡವಿದಳು.

'ಲೇ ಗುಡ್ಡೆ, ನೀನಾದ್ರು ಸಿಎಂ ಆಗೋ...' ದುಬ್ಬೀರ ಪಕ್ಷ ಬದಲಿಸಿದ.

'ನಾನು ಸಿಎಂ ಆಗಾಕೆ ಸಿದ್ರಾಮಣ್ಣ ಕುರ್ಚಿ ಬಿಡಬೇಕಲ್ಲ...'

'ಲೇಯ್, ನಾನೇಳಿದ್ದು ಆ ತರ ಅಲ್ಲಲೆ, ತಮಿಳುನಾಡಿನ ವಿಜಯ್ ತರ...'

'ಅಲ್ಲಿ ಸಿಎಂ ಆಗ್ಬೇಕಂದ್ರೆ ಎಲ್ಲ ಫ್ರೀ ಕೊಡ್ಬೇಕು, ಈ ಗುಡ್ಡೆ ಹತ್ರ ಏನೈತೆ ಕೊಡಾಕೆ...' ಕೊಟ್ರೇಶಿ ಕೊಕ್ಕೆ.

'ಲೇ ಕೊಟ್ರ, ನಾನೇನರೆ ವಿಜಯ್ ಜಾಗದಾಗಿದ್ದಿದ್ರೆ ಅವರಿಗಿಂತ ಡಬ್ಬಲ್ ಭರ್ಜರಿ ಅಂಡ್ ಸರ್ಜರಿ ಕೊಡ್ತಿದ್ದೆ... ಫುಲ್ ಮೆಜಾರಿಟಿ ತಗಾತಿದ್ದೆ. ಮನಿ ಮನಿಗೆ ಅಕ್ಕಿ, ಗೋಧಿ ಫ್ರೀ, ಕರೆಂಟ್ ಫ್ರೀ, ಗ್ಯಾಸ್ ಫ್ರೀ, ಬಸ್ ಫ್ರೀ, ಗಂಡಸರ ಗಾಡಿಗೂ ಬಾಡಿಗೂ ಎಣ್ಣೆ ಫ್ರೀ, ಹೆಣ್ಮಕ್ಕಳಿಗೆ ಚಿನ್ನ ಫ್ರೀ...'

'ಗುಡ್ಡೆ ಮಾಂಸ? ಅದನ್ಯಾಕೆ ಬಿಟ್ಟೆ?' ದುಬ್ಬೀರ ನಕ್ಕ.

'ಲೇ ಗುಡ್ಡೆ, ನೀ ಏನ್ ರೈಲು ಬಿಡ್ತಿದೀಯೋ ರಾಕೆಟ್ ಬಿಡ್ತಿದೀಯೋ? ಅಲ್ಲಲೆ, ಅಟಾಕಂದು ಫ್ರೀ ಕೊಡಾಕೆ ರೊಕ್ಕ ಎಲ್ಲಿಂದ ತರ್ತೀಯಲೆ?' ತೆಪರೇಸಿ ಕೇಳಿದ.

'ಸಾಲ ಮಾಡ್ತೀನಿ, ಯಾಕೆ ನಮ್ ಸಿದ್ರಾಮಣ್ಣ ಸಾಲ ಮಾಡಿಲ್ವ? ಮೋದಿ ಸಾಹೇಬ್ರು ಸಾಲ ಮಾಡಿಲ್ವ?'

'ಸಾಲ ಮಾಡ್ತಿ ಸರಿ, ತೀರ್ಸೋರು ಯಾರು?'

'ಮುಂದೆ ಸಿಎಂ ಆಗೋರು ತೀರಿಸ್ಕಂತಾರೆ...'

'ಅಂದ್ರೆ ನೀನು ಸಾಲ ತೀರ್ಸಲ್ಲ...'

'ಲೇ ತೆಪರ, ಅವನು ಯಾವತ್ತು, ಯಾರ ಸಾಲ ತೀರ್ಸಿದಾನೆ ಹೇಳಲೆ, ಮಂಜಮ್ಮನ ಚಾದಂಗಡಿ ಬಾಕಿನೇ ತೀರ್ಸಿಲ್ಲ, ಇನ್ನು ದೇಶದ ಸಾಲ ತೀರಿಸ್ತಾನಾ?' ತಿವಿದ ಕೊಟ್ರೇಶಿ.

'ಕರೆಕ್ಟ್' ಎಂದಳು ಮಂಜಮ್ಮ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಥಲಸ್ಸೇಮಿಯಾ: ಅರಿವಿನ ಹೆಜ್ಜೆಯ ಅಗತ್ಯ

ಸೂಕ್ತ ಪ್ರಮಾಣದ ರಕ್ತ ದೊರೆಯದೆ ಥಲಸ್ಸೇಮಿಯಾ ರೋಗಿಗಳು ಬೇಸಿಗೆಯಲ್ಲಿ ಒದ್ದಾಡುವಂತಾಗಿದೆ. ಈ ರೋಗದ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸಬೇಕಿದೆ.

● ಶ್ರೀಗುರು

ಬೇಸಿಗೆ ಧಗೆಯ ಕಾವು ರಕ್ತದಾನ ಶಿಬಿರಗಳನ್ನೂ ತಟ್ಟಿದ್ದು, ಥಲಸ್ಸೇಮಿಯಾದಿಂದ ಬಳಲುತ್ತಿರುವ ಮಕ್ಕಳಿಗೆ ನಿಯಮಿತವಾಗಿ ರಕ್ತ ಒದಗಿಸಲು ಕಷ್ಟವಾಗುತ್ತಿದೆ (ಪ್ರ.ವಾ., ಮೇ 7) ಎನ್ನುವ ಸುದ್ದಿ ಆತಂಕ ಮೂಡಿಸುವಂತಹದ್ದು. ಪ್ರತಿ ಬೇಸಿಗೆಯಲ್ಲೂ ಥಲಸ್ಸೇಮಿಯಾ ರೋಗಿಗಳು ಅಗ್ನಿಪರೀಕ್ಷೆ ಎದುರಿಸಬೇಕಾಗುತ್ತದೆ. ಸಮಸ್ಯೆ ದೊಡ್ಡದಾದರೂ, ಅದರ ಅರಿವು ಹೆಚ್ಚಿನ ಜನರಿಗಿಲ್ಲ.

ಥಲಸ್ಸೇಮಿಯಾ ಪೋಷಕರಿಂದ ಮಕ್ಕಳಿಗೆ ಹರಡುವ ಒಂದು ಆನುವಂಶಿಕ ರಕ್ತದ ಅಸ್ವಸ್ಥತೆ. ದೇಹದಲ್ಲಿ ಆಮ್ಲಜನಕವನ್ನು ಸಾಗಿಸುವ ಹಿಮೋಗ್ಲೋಬಿನ್ ಉತ್ಪಾದನೆಯಲ್ಲಿ ದೋಷ ಉಂಟಾದಾಗ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ. ತೀವ್ರವಾದ ರಕ್ತಹೀನತೆ ಇದರ ಪ್ರಮುಖ ಲಕ್ಷಣ. ಇದರಲ್ಲಿ ಮುಖ್ಯವಾಗಿ ಆಲ್ಫಾ ಮತ್ತು ಬೀಟಾ ಥಲಸ್ಸೇಮಿಯಾ ಎಂಬ ಎರಡು ವಿಧಗಳಿವೆ. ಚಿಕಿತ್ಸೆ ಮತ್ತು ವಂಶವಾಹಿ ದೋಷಗಳ ಆಧಾರದ ಮೇಲೆ ಕಾಯಿಲೆಯನ್ನು ಮೈನರ್ ಮತ್ತು ಮೇಜರ್ ಎಂದು ಗುರ್ತಿಸಲಾಗುತ್ತದೆ. ಪ್ರಸ್ತುತ ಗುರ್ತಿಸಲಾಗಿರುವ 21 ಅಂಗವೈಕಲ್ಯಗಳಲ್ಲಿ ಥಲಸ್ಸೇಮಿಯಾ ಕೂಡ ಒಂದು.

ಫುಟ್‌ಬಾಲ್ ತಾರೆ ಝಿನೆಡಿನ್ ಝಿಡಾನ್, ಟೆನಿಸ್ ಪಟು ಪೀಟ್ ಸಾಂಪ್ರಾಸ್, ಬಾಲಿವುಡ್ ತಾರೆಗಳಾದ ಅಮಿತಾಭ್ ಬಚ್ಚನ್, ಜಾಕಿಶ್ರಾಫ್ ಇವರೆಲ್ಲ ಬೇರೆ ಬೇರೆ ಕ್ಷೇತ್ರಗಳ ಸಾಧಕರಾದರೂ, ದೇಹಾರೋಗ್ಯಕ್ಕೆ ಸಂಬಂಧಿಸಿದಂತೆ ಇವರಲ್ಲೊಂದು ಸಾಮ್ಯತೆ ಇದೆ. ಇವರೆಲ್ಲ ಥಲಸ್ಸೇಮಿಯಾ ಪೀಡಿತರು.

ಥಲಸ್ಸೇಮಿಯಾ ಮೈನರ್ ರೋಗಿ ಗಳು ರೋಗದ ವಾಹಕರಾಗಿರುತ್ತಾರೆ. ಅವರಿಗೆ ಸಾಮಾನ್ಯವಾಗಿ ಚಿಕಿತ್ಸೆಯ ಅಗತ್ಯವಿರುವುದಿಲ್ಲ. ಆದರೆ, ಅವರು ತಮ್ಮ ಮಕ್ಕಳಿಗೆ ಈ ವಂಶವಾಹಿಯನ್ನು ವರ್ಗಾಯಿಸುವ ಸಾಧ್ಯತೆಗಳಿರುತ್ತವೆ. ಥಲಸ್ಸೇಮಿಯಾ ಮೇಜರ್ ಕಾಯಿಲೆಯು ಗಂಭೀರ ಸ್ಥಿತಿಯನ್ನು ಸೂಚಿಸುತ್ತದೆ. ಇಂತಹ ಮಕ್ಕಳಿಗೆ ಜೀವನಪರ್ಯಂತ ಪ್ರತಿ 15–20 ದಿನಗಳಿಗೊಮ್ಮೆ ಕೆಂಪು ರಕ್ತಕಣಗಳ ಪೂರಣದ ಅನಿವಾರ್ಯತೆ ಇರುತ್ತದೆ.

ಗಂಡ–ಹೆಂಡತಿ ಇಬ್ಬರೂ ಥಲಸ್ಸೇಮಿಯಾ ವಾಹಕ (ಮೈನರ್) ಆಗಿದ್ದರೆ, ಹುಟ್ಟುವ ಮಗುವಿಗೆ ಥಲಸ್ಸೇಮಿಯಾ ಮೇಜರ್ ಬರುವ ಸಾಧ್ಯತೆಯು ಶೇ 25ರಷ್ಟು ಇರುತ್ತದೆ.

ಮದುವೆಗೆ ಮುನ್ನ ಅಥವಾ ಗರ್ಭ ಧರಿಸುವ ಮುನ್ನ ರಕ್ತಪರೀಕ್ಷೆ ಮಾಡಿಸಿಕೊಳ್ಳಬೇಕೆಂಬ ಅರಿವು ಮೂಡಿಸುವುದು, ಥಲಸ್ಸೇಮಿಯಾದೊಂದಿಗೆ ಬದುಕುತ್ತಿರುವ ರೋಗಿಗಳನ್ನು ಗುರುತಿಸಿ, ಅವರಿಗೆ ಗುಣಮಟ್ಟದ ಚಿಕಿತ್ಸೆ ದೊರಕಿಸುವುದು ಅಗತ್ಯ. ಈ ಕಾಯಿಲೆಗೆ ರಕ್ತ ವರ್ಗಾವಣೆಯಷ್ಟೇ ಪರಿಹಾರವಲ್ಲ; ಅಸ್ಥಿಮಜ್ಜೆ ಕಸಿ ಮತ್ತು ಜೀನ್ ಥೆರಪಿಯಂತಹ ಆಧುನಿಕ ಚಿಕಿತ್ಸೆಗಳಿವೆ ಎಂಬ ಮಾಹಿತಿಯನ್ನು ಸಮಾಜಕ್ಕೆ ರವಾನಿಸುವುದೂ ಮುಖ್ಯ. ಈ ಎಲ್ಲವೂ 'ವಿಶ್ವ ಥಲಸ್ಸೇಮಿಯಾ ದಿನ'ದ (ಮೇ 8) ಆಚರಣೆಯ ಮುಖ್ಯ ಉದ್ದೇಶಗಳಾಗಿವೆ.



ಭಾರತ ವಿಶ್ವದ 'ಥಲಸ್ಸೇಮಿಯಾ ರಾಜಧಾನಿ' ಎಂದು ಕರೆಸಿಕೊಳ್ಳುತ್ತದೆ. ಇಲ್ಲಿ ಪ್ರತಿ ವರ್ಷ 10,000ದಿಂದ 15,000 ಮಕ್ಕಳು ಥಲಸ್ಸೇಮಿಯಾ 'ಮೇಜರ್' ಕಾಯಿಲೆಯೊಂದಿಗೆ ಜನಿಸುತ್ತಿದ್ದಾರೆ. ನಾಲ್ಕು ಕೋಟಿಗೂ ಹೆಚ್ಚು ಜನರು ಈ ರೋಗದ ವಾಹಕಗಳಾಗಿದ್ದಾರೆ. ರಕ್ತಪೂರಣೆಯ ವೆಚ್ಚ, ಅಸ್ಥಿಮಜ್ಜೆ ಕಸಿಯ ದುಬಾರಿ ವೆಚ್ಚಗಳು ಮತ್ತು ರಕ್ತಪೂರಣದಿಂದ ದೇಹದಲ್ಲಿ ಸೇರುವ ಹೆಚ್ಚಿನ ಕಬ್ಬಿಣವನ್ನು ತೆಗೆದು ಹಾಕಲು ಮಾಡುವ 'ಚಿಲೇಷನ್ ಥೆರಪಿ'ಗಳು ಜನಸಾಮಾನ್ಯರಿಗೆ ದೊಡ್ಡ ಹೊರೆಯಾಗಿವೆ.

ರಾಜ್ಯದಲ್ಲಿ ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಥಲಸ್ಸೇಮಿಯಾದ ಪ್ರಭಾವ ಹೆಚ್ಚಿದೆ. ಸರ್ಕಾರದ ಜಿಲ್ಲಾ ಆಸ್ಪತ್ರೆಗಳಲ್ಲಿ ಥಲಸ್ಸೇಮಿಯಾ ಪೀಡಿತರಿಗೆ ಉಚಿತವಾಗಿ ರಕ್ತ ಮತ್ತು ಅಗತ್ಯ ಔಷಧಿಗಳನ್ನು ನೀಡುವ ವ್ಯವಸ್ಥೆ ಇದೆಯಾದರೂ, ಅದು ಅಗತ್ಯ ಪ್ರಮಾಣದಲ್ಲಿಲ್ಲ. ಆಯುಷ್ಮಾನ್ ಭಾರತ್, ಆರೋಗ್ಯ ಕರ್ನಾಟಕ ಯೋಜನೆಯಡಿ ಥಲಸ್ಸೇಮಿಯಾ ಚಿಕಿತ್ಸೆ ಮತ್ತು ಅಸ್ಥಿಮಜ್ಜೆ ಕಸಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಬೆಂಗಳೂರಿನ 'ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ' ಮತ್ತು 'ಸಂಯೋಜಿತ ಥಲಸ್ಸೇಮಿಯಾ ಮತ್ತು ಲುಕೇಮಿಯಾ ಕೇಂದ್ರ'ಗಳು ಅತ್ಯಾಧುನಿಕ ಚಿಕಿತ್ಸೆ ನೀಡುತ್ತಿವೆ.

ಪ್ರಸ್ತುತ, ರೋಗದ ತಪಾಸಣೆಯು ರೋಗಲಕ್ಷಣಗಳು ಕಾಣಿಸಿಕೊಂಡ ನಂತರವಷ್ಟೇ ನಡೆಯುತ್ತಿದೆ. ಇದರ ಬದಲು ವಿವಾಹಪೂರ್ವದಲ್ಲಿಯೇ ಸ್ವಯಂ ರಕ್ತಪರೀಕ್ಷೆ ಮಾಡಿಸಿಕೊಳ್ಳುವ ಪದ್ಧತಿ ಜಾರಿಗೆ ಬರಬೇಕು. ಚಿಕಿತ್ಸೆಗೆ ಬಳಸುವ ಔಷಧಿಗಳು ಅತ್ಯಂತ ದುಬಾರಿ. ಸರ್ಕಾರವು ಈ ಔಷಧಿಗಳ ವೆಚ್ಚವನ್ನು ತಗ್ಗಿಸಿ ಲಭ್ಯತೆಯನ್ನು ಹೆಚ್ಚಿಸಬೇಕು.

ಕಾಯಿಲೆಗೆ ಶಾಶ್ವತ ಪರಿಹಾರ ನೀಡಬಲ್ಲ ಅಸ್ಥಿಮಜ್ಜೆ ಕಸಿ ಸೌಲಭ್ಯವು ಸದ್ಯಕ್ಕೆ ಕೆಲವೇ ಆಸ್ಪತ್ರೆಗಳಲ್ಲಿ ಲಭ್ಯವಿದೆ. ಇದರ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಮೂಲ ಸೌಕರ್ಯಗಳನ್ನು ವಿಸ್ತರಿಸಬೇಕಾದ ಅಗತ್ಯವಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಪ್ರತಿವರ್ಷ ಬೇಸಿಗೆಯ ಸಮಯದಲ್ಲಿ ಕಾಣಿಸಿಕೊಳ್ಳುವ ರಕ್ತದ ಕೊರತೆಯನ್ನು ನೀಗಿಸಲು, ವರ್ಷಪೂರ್ತಿ ಸ್ವಯಂಪ್ರೇರಿತ ರಕ್ತದಾನ ಹೆಚ್ಚಿಸುವುದು ಅನಿವಾರ್ಯವಾಗಿದೆ. ರಕ್ತಸಂಬಂಧಗಳಲ್ಲಿ ನಡೆಯುವ ಮದುವೆಗಳಿಂದ ಈ ಆನುವಂಶಿಕ ಕಾಯಿಲೆ ಹೆಚ್ಚುತ್ತಿದೆ. ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳು ಶಾಲಾ–ಕಾಲೇಜು ಹಂತದಲ್ಲೇ ಜಾಗೃತಿ ಮೂಡಿಸಿದರೆ, ಮುಂದಿನ ಪೀಳಿಗೆಯನ್ನು ಥಲಸ್ಸೇಮಿಯಾ ಕಾಯಿಲೆಯಿಂದ ಮುಕ್ತಗೊಳಿಸಲು ಪ್ರಯತ್ನಿಸಬಹುದು.

ಥಲಸ್ಸೇಮಿಯಾ ರೋಗಿಗಳು ಬದುಕಲು ಆರೋಗ್ಯವಂತ ವ್ಯಕ್ತಿಗಳ ರಕ್ತವೇ ಆಧಾರ. ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಅಡೂರು ಪೊಲೀಸ್ ಠಾಣೆಯ ಸಿಬ್ಬಂದಿ, ಕಳೆದ ಏಳು ವರ್ಷಗಳಿಂದ ರಕ್ತದಾನ ಮಾಡುತ್ತ ಥಲಸ್ಸೇಮಿಯಾ ರೋಗಿಗಳಿಗೆ ನೆರವಾಗುತ್ತಿದ್ದಾರೆ. ಇಂಥವರ ಸಂಖ್ಯೆ ಹೆಚ್ಚಾಗಬೇಕು. ಥಲಸ್ಸೇಮಿಯಾ ವೈದ್ಯಕೀಯ ಸಮಸ್ಯೆ ಆಗಿರುವಂತೆಯೇ, ಅದರ ಕುರಿತ ಜಾಗೃತಿ ಮೂಡಿಸುವುದು ಹಾಗೂ ರೋಗಿಗಳಿಗೆ ಅಗತ್ಯವಾದ ರಕ್ತವನ್ನು ಒದಗಿಸುವುದು ಸಾಮಾಜಿಕ ಹೊಣೆಗಾರಿಕೆಯೂ ಆಗಿದೆ.

ಕೇರಳಂ

ಹಿಗ್ಗಿದ ಕಾಂಗ್ರೆಸ್ ಕುಗ್ಗಿದ ಎಡಪಕ್ಷಗಳು

ಕೇರಳಂ ವಿಧಾನಸಭಾ ಚುನಾವಣೆಯ ಮಟ್ಟಿಗೆ ಈ ಬಾರಿಯ ಫಲಿತಾಂಶ ಹಲವು ಕಾರಣಗಳಿಗೆ ಮಹತ್ವದ್ದೆನಿಸಿದೆ. ಎಡಪಕ್ಷಗಳು ದೇಶದಲ್ಲಿ ಅಧಿಕಾರದಲ್ಲಿದ್ದ ಒಂದು ಕೊನೆಯ ರಾಜ್ಯವನ್ನೂ ಕಳೆದುಕೊಂಡಿವೆ. ಸಿಪಿಎಂ 25 ವರ್ಷಗಳಲ್ಲಿ ಅತಿ ಕಡಿಮೆ ಸ್ಥಾನ ಗಳಿಸಿದೆ. ಹಲವು ರಾಜ್ಯಗಳ ವಿಧಾನಸಭಾ ಚುನಾವಣಾ ಸೋಲಿನಿಂದ ನಿರಾಸೆಗೊಂಡಿದ್ದ ಕಾಂಗ್ರೆಸ್‌ಗೆ ಈ ದಾಖಲೆಯ ಫಲಿತಾಂಶವು ಹೊಸ ಚೈತನ್ಯ ನೀಡಿದೆ. ಮುಸ್ಲಿಂ ಲೀಗ್ ಬಲವರ್ಧನೆ ಮಾಡಿಕೊಂಡಿದೆ. ಬಿಜೆಪಿ ಮೊದಲ ಬಾರಿಗೆ ಮೂರು ಸ್ಥಾನ ಗೆದ್ದಿದ್ದು, ಮತ ಪ್ರಮಾಣವನ್ನು ಹೆಚ್ಚಿಸಿಕೊಂಡಿದೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಕೇರಳಂನಲ್ಲಿ ಅಧಿಕಾರವು ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವೆ ಪ್ರತಿ ಐದು ವರ್ಷಕ್ಕೊಮ್ಮೆ ಬದಲಾವಣೆಯಾಗುತ್ತಿತ್ತು. 2021ರಲ್ಲಿ ಎಲ್‌ಡಿಎಫ್ ಸತತ ಎರಡನೇ ಬಾರಿಗೆ ಅಧಿಕಾರಕ್ಕೆ ಬರುವುದರೊಂದಿಗೆ ಈ ಪರಂಪರೆಯನ್ನು ತುಂಡರಿಸಿತ್ತು. 2016ರಲ್ಲಿ ಗಳಿಸಿದ್ದಕ್ಕಿಂತಲೂ (91) ಹೆಚ್ಚು ಸ್ಥಾನ ಪಡೆದು (99) ಅಚ್ಚರಿ ಮೂಡಿಸಿತ್ತು. ಇದೇ ಆಧಾರದಲ್ಲಿ ಈ ಬಾರಿಯೂ ಗೆಲುವು ತನ್ನದೇ, ತಾವು ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದೇ ಪ್ರತಿಪಾದಿಸಿದ್ದ ಎಲ್‌ಡಿಎಫ್, 'ನಾವಲ್ಲದೇ ಇನ್ಯಾರು' ಎನ್ನುವುದನ್ನೇ ಚುನಾವಣಾ ಘೋಷಣೆಯನ್ನಾಗಿ ಮಾಡಿಕೊಂಡಿತ್ತು.

ಆದರೆ, ಜನ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಅನ್ನು ತಿರಸ್ಕರಿಸಿದ್ದು, 35 ಸ್ಥಾನಗಳಿಗೆ (ಸಿಪಿಎಂಗೆ 25 ಸ್ಥಾನ) ಸೀಮಿತಗೊಳಿಸಿದ್ದಾರೆ. ನಾಲ್ಕು ದಶಕಗಳಲ್ಲಿಯೇ ಇದು ಎಲ್‌ಡಿಎಫ್ ಮತ್ತು ಸಿಪಿಎಂನ ಅತಿ ಕಡಿಮೆ ಸಂಖ್ಯೆಯಾಗಿದೆ. ಅದಕ್ಕೆ ವಿರುದ್ಧವಾಗಿ ಯುಡಿಎಫ್ ದಾಖಲೆಯ 102 ಸ್ಥಾನಗಳೊಂದಿಗೆ ಭಾರಿ ಗೆಲುವು ಸಾಧಿಸಿದೆ.

ಕಾಂಗ್ರೆಸ್‌ಗೆ ನವೋತ್ಸಾಹ

ಕಾಂಗ್ರೆಸ್, ದೇಶದ ಹಲವು ವಿಧಾನಸಭಾ ಚುನಾವಣೆಗಳಲ್ಲಿ ಸೋಲು ಕಂಡು ನಿರಾಶೆ ಅನುಭವಿಸಿತ್ತು. ಆದರೆ, ಈ ಬಾರಿಯ ಫಲಿತಾಂಶವು ಕಾಂಗ್ರೆಸ್‌ಗೆ ನವೋತ್ಸಾಹ ತುಂಬಿದೆ. 2011ರಲ್ಲಿ 38, 2016ರಲ್ಲಿ 22 ಸ್ಥಾನ ಗಳಿಸಿದ್ದ ಕಾಂಗ್ರೆಸ್ 2021ರಲ್ಲಿ 21 ಸ್ಥಾನಗಳಿಗೆ ಕುಸಿದಿತ್ತು. ಈ ಬಾರಿ ತನ್ನ ಪೂರ್ವದ ವೈಭವಕ್ಕೆ ಮರಳಿರುವ 'ಕೈ' ಪಾಳಯ, 63 ಸ್ಥಾನಗಳನ್ನು ಗಳಿಸಿದೆ.

ಮುಸ್ಲಿಮರು ಹೆಚ್ಚಿರುವ ರಾಜ್ಯದ ಉತ್ತರ ಭಾಗ (ಮಲಬಾರ್) ಮತ್ತು ಕ್ರೈಸ್ತರು ನಿರ್ಣಾಯಕವಾಗಿರುವ ಕೇಂದ್ರ ಭಾಗಗಳಲ್ಲಿ ಕಾಂಗ್ರೆಸ್‌ನ ಹೆಚ್ಚಿನ ಅಭ್ಯರ್ಥಿಗಳು ಗೆಲ್ಲಲಿದ್ದಾರೆ ಎಂದು ಚುನಾವಣಾ ವಿಶ್ಲೇಷಕರು ಭವಿಷ್ಯ ನುಡಿದಿದ್ದರು. ಅದು ನಿಜವಾಗಿದೆ. ಅವುಗಳ ಜತೆಗೆ ಹಿಂದೂ ಮತದಾರರೇ ನಿರ್ಣಾಯಕವಾಗಿರುವ ಇತರೆ ಪ್ರಾಂತಗಳಲ್ಲೂ ಪಕ್ಷವು ಉತ್ತಮ ಸಾಧನೆ ತೋರಿದೆ.

ಮುಸ್ಲಿಂ ಲೀಗ್ ಬಲವರ್ಧನೆ

ಯುಡಿಎಫ್‌ನ ಎರಡನೇ ಅತಿದೊಡ್ಡ ಪಕ್ಷವಾಗಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಹೊರಹೊಮ್ಮಿದ್ದು, ಸ್ಪರ್ಧಿಸಿದ್ದ 27 ಕ್ಷೇತ್ರಗಳ ಪೈಕಿ 22ರಲ್ಲಿ ಗೆಲುವು ಸಾಧಿಸಿದೆ. ಕೇರಳಂನಲ್ಲಿ ಹೆಚ್ಚು ಅಂತರದ ಗೆಲುವು ಅಪರೂಪ. ಆದರೆ, ಈ ಬಾರಿ ಪಕ್ಷದ ಐವರು ಅಭ್ಯರ್ಥಿಗಳು 50 ಸಾವಿರಕ್ಕಿಂತ ಹೆಚ್ಚಿನ ಅಂತರದಲ್ಲಿ ಗೆದ್ದಿದ್ದಾರೆ. ಈ ಬಾರಿ ಅತಿ ಹೆಚ್ಚಿನ ಅಂತರದಲ್ಲಿ ಗೆಲುವು ಪಡೆದ ಪಿ.ಕೆ.ಕುಂಜಾಲಿ ಕುಟ್ಟಿ (85,327) ಐಯುಎಂಎಲ್‌ನ ಮಲಪ್ಪುರಂ ಅಭ್ಯರ್ಥಿ.

ಚುನಾವಣೆಯಲ್ಲಿ ಜಯಭೇರಿ ಬಾರಿಸುತ್ತಿದ್ದಂತೆಯೇ ಕೋಯಿಕ್ಕೋಡಿನಲ್ಲಿ ಯುಡಿಎಫ್ ಕಾರ್ಯಕರ್ತರು ಸಂಭ್ರಮಿಸಿದರು

'ನಿಜವಾದ ಕೇರಳ ಸ್ಟೋರಿ'

ಕೇರಳಂ ಹಲವು ಕ್ಷೇತ್ರಗಳಲ್ಲಿನ ಫಲಿತಾಂಶವು ಜಾತಿ, ಧರ್ಮದ ಕಾರಣಕ್ಕೆ ಗಮನಾರ್ಹವಾಗಿದೆ. ಮುಸ್ಲಿಂ ಮತದಾರರು ಬಹುಸಂಖ್ಯಾತರಾಗಿರುವ ತವನೂರ್ ಕ್ಷೇತ್ರದಲ್ಲಿ ಕ್ರೈಸ್ತ ಧರ್ಮದ ವಿ.ಎಸ್.ಜಾಯ್ ಗೆಲುವು ಸಾಧಿಸಿದ್ದರೆ, ಮುಸ್ಲಿಂ ಮತದಾರ ಬಾಹುಳ್ಯದ ಮತ್ತೊಂದು ಕ್ಷೇತ್ರವಾದ ತ್ರಿಕರಿಪುರದಿಂದ ಹಿಂದೂ ಧರ್ಮದ ಸಂದೀಪ್ ವಾರಿಯರ್ ಚುನಾಯಿತರಾಗಿದ್ದಾರೆ. ಹಿಂದೂ ಮತದಾರರು ನಿರ್ಣಾಯಕವಾಗಿರುವ ಕಲಮಶ್ಶೇರಿಯಲ್ಲಿ ವಿ.ಇ.ಅಬ್ದುಲ್ ಗಫೂರ್ ಗೆದ್ದಿದ್ದರೆ, ಕ್ರೈಸ್ತರು ಹೆಚ್ಚಿರುವ ಕೊಚ್ಚಿಯಿಂದ ಮುಸ್ಲಿಂ ಅಭ್ಯರ್ಥಿಯಾದ ಮುಹಮ್ಮದ್ ಶಿಯಾಸ್ ಚುನಾಯಿತರಾಗಿದ್ದಾರೆ.

ಇದನ್ನು ಉದಾಹರಿಸಿರುವ ಕಾಂಗ್ರೆಸ್ ಮುಖಂಡ ಶಶಿ ತರೂರ್, 'ಮತದಾರರು ಅಭ್ಯರ್ಥಿಗಳನ್ನು ಅವರ ರಾಜಕೀಯ ಸಿದ್ಧಾಂತ, ಅವರು ಮೂಡಿಸಿರುವ ನಿರೀಕ್ಷೆಗಳ ಆಧಾರದಲ್ಲಿ ಗೆಲ್ಲಿಸಿದ್ದಾರೆಯೇ ಹೊರತು ಅವರ ಜಾತಿ, ಧರ್ಮ ಆಧಾರದಲ್ಲಿ ಅಲ್ಲ. ಭಾರತವನ್ನು ಧರ್ಮದ ಆಧಾರದಲ್ಲಿ ವಿಭಜಿಸಲು ಹೊರಟವರಿಗೆ ಇದು ಕಪಾಳಮೋಕ್ಷವಾಗಿದೆ. ಈ ನಾಲ್ಕು ಮಂದಿಯೂ ಯುಡಿಎಫ್ ಅಭ್ಯರ್ಥಿಗಳಾಗಿರುವುದು ಆಕಸ್ಮಿಕವಲ್ಲ. ಇದೇ ನಿಜವಾದ ಕೇರಳ ಸ್ಟೋರಿ' ಎಂದಿದ್ದಾರೆ.

ಎಡಪಕ್ಷಗಳ ಆಡಳಿತ ಅಂತ್ಯ

ಕೇರಳಂನಲ್ಲಿ ಸಿಪಿಎಂ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದು 1957ರಲ್ಲಿ. ಪ್ರಜಾತಾಂತ್ರಿಕ ದೇಶದಲ್ಲಿ ಚುನಾವಣೆ ಮೂಲಕ ಆರಿಸಿಬಂದ ಜಗತ್ತಿನ ಮೊದಲ ಕಮ್ಯುನಿಸ್ಟ್ ಸರ್ಕಾರ ಅದಾಗಿತ್ತು. ಮುಖ್ಯಮಂತ್ರಿಯಾಗಿದ್ದ ಇಎಂಎಸ್ ನಂಬೂದಿರಿಪಾಡ್, ಭೂಸುಧಾರಣೆ ಮತ್ತು ಶೈಕ್ಷಣಿಕ ಸುಧಾರಣೆಗಳನ್ನು ತರಲು ಮುಂದಾದರು. ಕಾಂಗ್ರೆಸ್ ಅದನ್ನು ತೀವ್ರವಾಗಿ ವಿರೋಧಿಸಿತು; ಚರ್ಚ್‌ಗಳೂ ಪ್ರತಿಭಟನೆಗೆ ಕೈಜೋಡಿಸಿದವು. ಆಗ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಜವಾಹರಲಾಲ್ ನೆಹರೂ ಸರ್ಕಾರವು ಕೇರಳದ ಸಿಪಿಎಂ ಸರ್ಕಾರವನ್ನು ವಜಾಗೊಳಿಸಿತ್ತು.

ನಂತರದ ದಿನಗಳಲ್ಲಿ ಕಮ್ಯುನಿಸ್ಟ್ ಪಕ್ಷವು ಹಲವು ಗುಂಪುಗಳಾಗಿ ಒಡೆಯಿತು. ಆದರೂ 1977ರಿಂದ ಎಡಪಕ್ಷಗಳು ಒಂದಿಲ್ಲೊಂದು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದವು. 1977ರಿಂದ 2011ರವರೆಗೆ ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳ ಸರ್ಕಾರವಿತ್ತು. ತ್ರಿಪುರಾದಲ್ಲಿ 1993ರಿಂದ 2018ರವರೆಗೆ ಎಡಪಕ್ಷಗಳು ಆಡಳಿತ ನಡೆಸಿದವು. ಕೇರಳಂನಲ್ಲಿ ಯುಡಿಎಫ್‌ಗೆ ಪರ್ಯಾಯವೆಂಬಂತೆ ಎಲ್‌ಡಿಎಫ್ ಅಧಿಕಾರ ಹಿಡಿಯುತ್ತಿತ್ತು.

ಆದರೆ, ದೇಶದಲ್ಲಿ ನಿಧಾನಕ್ಕೆ ಎಡಪಕ್ಷಗಳ ಪ್ರಾಬಲ್ಯ ಕಡಿಮೆಯಾಗುತ್ತಾ ಬಂದಿತು. ಇದುವರೆಗೆ ಕೇರಳದಲ್ಲಿ ಅಧಿಕಾರದಲ್ಲಿದ್ದ ಎಲ್‌ಡಿಎಫ್ ಸರ್ಕಾರವು ಕಮ್ಯುನಿಸ್ಟ್ ಪಕ್ಷದ ನೇತೃತ್ವ ಇದ್ದ ದೇಶದ ಏಕೈಕ ಸರ್ಕಾರವಾಗಿತ್ತು. ಈಗ ಅದರ ಸೋಲಿನೊಂದಿಗೆ ದೇಶದಲ್ಲಿ ಎಡಪಕ್ಷಗಳ ಆಡಳಿತವು ಅಂತ್ಯಗೊಂಡಿದೆ.

ಆಧಾರ: ಪಿಟಿಐ, ಚುನಾವಣಾ ಆಯೋಗದ ದತ್ತಾಂಶಗಳು

ಗಟ್ಟಿಯಾಗುತ್ತಿದೆಯೇ ಬಿಜೆಪಿ ಬೇರು?

2024ರ ಲೋಕಸಭಾ ಚುನಾವಣೆಯಲ್ಲಿ ತ್ರಿಶ್ಶೂರು ಕ್ಷೇತ್ರದಲ್ಲಿ ಗೆದ್ದಿದ್ದ ಬಿಜೆಪಿ, ನಂತರ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ರಾಜಧಾನಿ ತಿರುವನಂತಪುರದಲ್ಲಿ ಉತ್ತಮ ಸಾಧನೆ ತೋರಿ ಮೊದಲ ಬಾರಿಗೆ ಅಲ್ಲಿನ ಮಹಾನಗರ ಪಾಲಿಕೆಯ ಆಡಳಿತ ಚುಕ್ಕಾಣಿಯನ್ನೂ ಹಿಡಿದಿತ್ತು. ಹಾಗಾಗಿ, ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಡ ಎಲ್‌ಡಿಎಫ್ ಮತ್ತು ಯುಡಿಎಫ್‌ಗೆ ಪ್ರಬಲ ಪೈಪೋಟಿ ನೀಡಬಹುದು ಎಂಬ ನಿರೀಕ್ಷೆ ಇತ್ತು. ರಾಜಕೀಯ ಪಂಡಿತರ ಈ ಲೆಕ್ಕಾಚಾರ ಹುಸಿಯಾಗಿದೆ. ಆದರೆ, ಮೂರು ಕ್ಷೇತ್ರಗಳಲ್ಲಿ ಗೆಲ್ಲುವುದಕ್ಕೆ ಬಿಜೆಪಿ ಯಶಸ್ವಿಯಾಗಿದೆ. ಇದಕ್ಕೂ ಮೊದಲು 2016ರ ಚುನಾವಣೆಯಲ್ಲಿ ಒಂದು ಕ್ಷೇತ್ರದಲ್ಲಿ ಜಯಿಸಿತ್ತು. 2021ರಲ್ಲಿ ಅದರ ಸಾಧನೆ ಶೂನ್ಯಕ್ಕೆ ಇಳಿದಿತ್ತು.

ಹೆಚ್ಚಿದ ಮತಗಳಿಕೆ: ಎಲ್‌ಡಿಎಫ್ ಮತ್ತು ಯುಡಿಎಫ್ ಪ್ರಾಬಲ್ಯದ ಕೇರಳದಲ್ಲಿ ಪಕ್ಷವನ್ನು ಸಂಘಟಿಸಲು ಬಿಜೆಪಿ ದಶಕಗಳಿಂದ ಪ್ರಯತ್ನಿಸುತ್ತಿದೆ. ನಾಲ್ಕೈದು ವಿಧಾನಸಭೆಗಳ ಅಂಕಿ ಅಂಶಗಳನ್ನು ಗಮನಿಸಿದರೆ, ಬಿಜೆಪಿಯ ಉಪಸ್ಥಿತಿ ವಿಸ್ತಾರವಾಗುತ್ತಿರುವುದು ಕಾಣಿಸುತ್ತಿದೆ.

2011ರ ಚುನಾವಣೆಯಲ್ಲಿ ಅದು 138 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಆದರೆ, ಶೇ 6.03ರಷ್ಟು ಮತಗಳನ್ನು ಗಳಿಸಲು ಮಾತ್ರ ಶಕ್ತವಾಗಿತ್ತು. 2016ರ ಚುನಾವಣೆಯಲ್ಲಿ 98 ಕ್ಷೇತ್ರಗಳಲ್ಲಿ ಸ್ಪರ್ಧಿಸಿ, ಶೇ 10.53ರಷ್ಟು ಮತಗಳಿಸಿತ್ತಲ್ಲದೆ, ಒಂದು ಕ್ಷೇತ್ರದಲ್ಲಿ ಜಯಗಳಿಸಿತ್ತು. 2021ರ ಚುನಾವಣೆಯಲ್ಲಿ 115 ಕ್ಷೇತ್ರಗಳಲ್ಲಿ ತನ್ನ ಅದೃಷ್ಟ ಪರೀಕ್ಷೆಗೆ ಇಳಿದಿತ್ತು. ಗೆಲುವು ಪಡೆಯಲು ಸಫಲವಾಗದಿದ್ದರೂ, ಅದರ ಮತಗಳಿಕೆ ಪ್ರಮಾಣ ಶೇ 11.3ಕ್ಕೆ ಏರಿಕೆ ಕಂಡಿತ್ತು. ಈ ಬಾರಿ 98 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಬಿಜೆಪಿಯ ಮತಗಳಿಕೆ ಪ್ರಮಾಣ ಇನ್ನೂ ಹೆಚ್ಚಳವಾಗಿ, ಶೇ 11.42ಕ್ಕೆ ತಲುಪಿದೆ. ಅಲ್ಲದೇ ಮೂರು ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಲು ಯಶಸ್ವಿಯಾಗಿದೆ. ಗೆಲುವು ಸಾಧಿಸಿರುವ ನೇಮಂ, ಕಳಕ್ಕೂಟಂ ಮತ್ತು ಚಾತ್ತನೂರ್ ಕ್ಷೇತ್ರಗಳಲ್ಲಿ ಅದು ಕ್ರಮವಾಗಿ ಶೇ 40.75, ಶೇ 35.39 ಮತ್ತು ಶೇ 38.04ರಷ್ಟು ಮತಗಳನ್ನು ಗಳಿಸಿದೆ. ಈ ಬಾರಿ ಆರು ಕ್ಷೇತ್ರಗಳಲ್ಲಿ (ಕಾಸರಗೋಡು, ಮಂಜೇಶ್ವರ, ತಿರುವಲ್ಲ, ಪಾಲಕ್ಕಾಡ್, ಮಲಂಬುಳ ಮತ್ತು ಅಟ್ಟಿಂಗಲ್) ಬಿಜೆಪಿ ಅಭ್ಯರ್ಥಿಗಳು ಎರಡನೇ ಸ್ಥಾನದಲ್ಲಿದ್ದಾರೆ.

ಲೋಕಸಭೆಯಲ್ಲಿ ಗೆಲುವು ಸಿಕ್ಕಿದ್ದ ತ್ರಿಶ್ಶೂರಿನಲ್ಲಿ ಉತ್ತಮ ಸಾಧನೆ ತೋರಲು ಬಿಜೆಪಿ ವಿಫಲವಾಗಿದೆ. ಅದರ ಅಭ್ಯರ್ಥಿ (ಪದ್ಮಜಾ ವೇಣುಗೋಪಾಲ್ ಮೂರನೇ ಸ್ಥಾನಗಳಿಸಿದ್ದಾರೆ) ದೊಡ್ಡ ಅಂತರದಿಂದಲೇ ಸೋತಿದ್ದಾರೆ.







ಪುದುಚೆರಿ

ಒಟ್ಟು ಸ್ಥಾನ:30 ಬಹುಮತ:16

ಯಾರಿಗೆ ಎಷ್ಟು ಸ್ಥಾನ?

ಪಕ್ಷ	ಸ್ಥಾನ
ಎಐಎನ್‌ಆರ್‌ಸಿ	12
ಡಿಎಂಕೆ	5
ಬಿಜೆಪಿ	4
ಟಿವಿಕೆ	2
ಕಾಂಗ್ರೆಸ್	1
ಎಲ್‌ಜೆಕೆ	1
ಎಐಎಡಿಎಂಕೆ	1
ಎನ್‌ವೈಎಂಕೆ	1
ಪಕ್ಷೇತರ	3



ಪುದುಚೆರಿ: ಎನ್‌ಡಿಎಗೆ ಬಲ, ಬಿಜೆಪಿಗೆ ಕ್ಷೇತ್ರ ನಷ್ಟ

18 ಎನ್‌ಡಿಎ ಪಡೆದ ಸ್ಥಾನ | **6** ಇಂಡಿಯಾ ಒಕ್ಕೂಟ ಪಡೆದ ಸ್ಥಾನ

30 ಸದಸ್ಯ ಬಲದ ಪುದುಚೆರಿ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಯಲ್ಲಿ ಎಐಎನ್‌ಆರ್‌ಸಿ (ಆಲ್ ಇಂಡಿಯಾ ಎನ್‌ಆರ್ ಕಾಂಗ್ರೆಸ್) ನೇತೃತ್ವದ ಎನ್‌ಡಿಎ ಕೂಟವು ಕಳೆದ ಸಲಕ್ಕಿಂತಲೂ (16) ಎರಡು ಸ್ಥಾನಗಳನ್ನು ಹೆಚ್ಚು ಗಳಿಸಿ (18) ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡಿದೆ.

ಎಐಎನ್‌ಆರ್‌ಸಿಯು ಕಳೆದ ಬಾರಿಗಿಂತ (10) ಎರಡು ಹೆಚ್ಚು ಸ್ಥಾನಗಳಲ್ಲಿ ಈ ಬಾರಿ ಜಯಗಳಿಸಿದೆ. 2021ರ ಚುನಾವಣೆಯಲ್ಲಿ ಆರು ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿಯು ಈ ಸಲ ಎರಡು ಕ್ಷೇತ್ರಗಳನ್ನು ಕಳೆದುಕೊಂಡಿದೆ.

ತಮ್ಮ ಸರಳ ನಡೆ ನುಡಿಯ ಮೂಲಕ 'ಜನರ ಮುಖ್ಯಮಂತ್ರಿ' ಎಂದು ಕರೆಸಿಕೊಳ್ಳುವ ಎನ್.ರಂಗಸ್ವಾಮಿ ಅವರು ಐದನೇ ಬಾರಿಗೆ ಪುದುಚೆರಿಯ ಮುಖ್ಯಮಂತ್ರಿ ಗಾದಿ ಏರಲು ಸಜ್ಜಾಗಿದ್ದಾರೆ.

ನಡೆಯದ ಟಿವಿಕೆ ಅಚ್ಚರಿ: ನೆರೆಯ ತಮಿಳುನಾಡಿನಲ್ಲಿ ಅಚ್ಚರಿಯ ಫಲಿತಾಂಶಕ್ಕೆ ಕಾರಣವಾಗಿರುವ ನಟ ವಿಜಯ್ ನೇತೃತ್ವದ ಟಿವಿಕೆಗೆ ಪುದುಚೆರಿಯಲ್ಲಿ ಇತರ ಪಕ್ಷಗಳಿಗೆ ದೊಡ್ಡ ಪೆಟ್ಟು ನೀಡಲು ಸಾಧ್ಯವಾಗಿಲ್ಲ. ಎಲ್ಲ 30 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದ ಪಕ್ಷಕ್ಕೆ ಗೆಲ್ಲಲು ಸಾಧ್ಯವಾಗಿದ್ದು ಎರಡು ಸ್ಥಾನಗಳಲ್ಲಿ ಮಾತ್ರ.

ಕಾಂಗ್ರೆಸ್ ವೈಫಲ್ಯ: ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್, ಡಿಎಂಕೆ ಒಳಗೊಂಡ ಇಂಡಿಯಾ ಕೂಟದಲ್ಲಿ ಟಿಕೆಟ್ ಹಂಚಿಕೆಯಲ್ಲಿ ಗೊಂದಲ ಉಂಟಾಗಿತ್ತು. ಮೈತ್ರಿ ಪಕ್ಷಗಳು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲೂ ತಮ್ಮ ಅಭ್ಯರ್ಥಿಗಳನ್ನು ಅದು ಕಣಕ್ಕಿಳಿಸಿದ್ದವು. ಒಟ್ಟು 22 ಕ್ಷೇತ್ರಗಳಲ್ಲಿ ಅದು ಸ್ಪರ್ಧಿಸಿದ್ದು, ಗೆಲುವು ದಕ್ಕಿದ್ದು ಒಂದರಲ್ಲಿ ಮಾತ್ರ. ಕಳೆದ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಅದು ಜಯಗಳಿಸಿತ್ತು. ಡಿಎಂಕೆಯು ಈ ಬಾರಿ ಐದು ಸ್ಥಾನಗಳಲ್ಲಿ ಗೆದ್ದಿದೆ. 2021ಕ್ಕೆ ಹೋಲಿಸಿದರೆ ಅದು ಒಂದು ಕ್ಷೇತ್ರವನ್ನು ಕಳೆದುಕೊಂಡಿದೆ.


ರಂಗಸ್ವಾಮಿ

ಈವರೆಗೆ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿರುವ 70 ವರ್ಷದ ಎನ್.ರಂಗಸ್ವಾಮಿ ಅವರ ಜನ ಕಲ್ಯಾಣ ಕಾರ್ಯಕ್ರಮಗಳು (ಹಿರಿಯ ನಾಗರಿಕರಿಗೆ ₹2,500–₹4,000 ಮಾಸಾಶನ, ಮಹಿಳೆಯರಿಗೆ ಮಾಸಿಕ ₹2,500 ನಗದು ಇತ್ಯಾದಿ) ಅವರ ಸರಳ ವ್ಯಕ್ತಿತ್ವ ಈ ಚುನಾವಣೆಯಲ್ಲೂ ಅವರ ಕೈ ಹಿಡಿದಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತಲೆಗೆ ಬ್ಯಾಂಡೇಜು ಹಾಕಿಕೊಂಡಿದ್ದ ಮಹಿಳೆಯೊಬ್ಬರು ಮಾಧ್ಯಮದೊಂದಿಗೆ ಮಾತನಾಡುತ್ತಿದ್ದಾಗ ಒಬ್ಬರು ಆಕೆಯ ತಲೆಗೆ ಕೈಹಾಕಿ ಆ ಬ್ಯಾಂಡೇಜನ್ನು ಕಿತ್ತೆಸೆಯುವ, ಏನೂ ಗಾಯ ಆಗದಿದ್ದರೂ ಸುಮ್ಮನೆ ಬ್ಯಾಂಡೇಜು ಹಾಕಿದ್ದು ಗೊತ್ತಾದ ತಕ್ಷಣ ಉಳಿದ ಕೆಲವರು ಆಕೆಯನ್ನು ಎಳೆದಾಡುವ ವಿಡಿಯೊ ತುಣುಕೊಂದನ್ನು ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದ ನಂತರ ಹಲವರು ಪೋಸ್ಟ್ ಮಾಡುತ್ತಿದ್ದಾರೆ. ವಿಡಿಯೊದಲ್ಲಿರುವ ಮಹಿಳೆ ಟಿಎಂಸಿ ಕಾರ್ಯಕರ್ತೆ ಎಂದೂ, ತನ್ನ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ ಎಂದು ಆಕೆ ಸುಳ್ಳು ಆರೋಪ ಮಾಡುತ್ತಾ ನಕಲಿ ಬ್ಯಾಂಡೇಜು ಹಾಕಿದ್ದಾಳೆ ಎಂದೂ ಪ್ರತಿಪಾದಿಸಲಾಗುತ್ತಿದೆ. ಹಲವು ಮಾಧ್ಯಮಗಳು ಈ ಘಟನೆಯ ಬಗ್ಗೆ ವರದಿಯೂ ಮಾಡಿವೆ. ಆದರೆ, ಇದು ಸುಳ್ಳು.

ವಿಡಿಯೊದಲ್ಲಿ ಕಾಣುವ ಮಾಧ್ಯಮದ ಲೋಗೊವನ್ನು ಆಧಾರವಾಗಿಟ್ಟುಕೊಂಡು, ನಿರ್ದಿಷ್ಟ ಪದಗಳನ್ನು ಬಳಸಿ ಫೇಸ್‌ಬುಕ್‌ನಲ್ಲಿ ಹುಡುಕಾಡಿದಾಗ ಈಗ ಹಂಚಿಕೊಳ್ಳಲಾಗುತ್ತಿರುವ ವಿಡಿಯೊವನ್ನು ಎಂಡಿಇ (ಮಯೂರ ಧ್ವಜ ಎಕ್ಸ್‌ಪ್ರೆಸ್) ನ್ಯೂಸ್ ಎಂಬ ಚಾನೆಲ್ ಪೋಸ್ಟ್ ಮಾಡಿ, 'ಇದು ಬಿಹಾರದ ಮುಜಫ್ಫರ್‌ಪುರದ ವಿಡಿಯೊ, ಪಶ್ಚಿಮ ಬಂಗಾಳದ್ದಲ್ಲ' ಎಂದು ಸ್ಪಷ್ಟನೆ ನೀಡಿತ್ತು. ಮುಜಫ್ಫರ್‌ಪುರ ಶ್ರೀಕೃಷ್ಣ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ಗಲಾಟೆಯ ವಿಡಿಯೊ ಎಂದೂ ಆ ಪೋಸ್ಟ್‌ನಲ್ಲಿ ಹೇಳಲಾಗಿತ್ತು. ಈ ಘಟನೆಯನ್ನು ವರದಿ ಮಾಡಿದ ಮಯೂರ ಧ್ವಜ ಎಕ್ಸ್‌ಪ್ರೆಸ್‌ನ ವರದಿಗಾರ ಪ್ರೇಮ್ ಶಂಕರ್ ಅವರನ್ನು ಸಂಪರ್ಕಿಸಿದಾಗ ಅವರು ಈ ಘಟನೆಯ ಬಗ್ಗೆ ವಿವರಣೆ ನೀಡಿದ್ದಾರೆ. ಏಪ್ರಿಲ್ 28ರಂದು ಆಸ್ಪತ್ರೆಯಲ್ಲಿ ಈ ಪ್ರಕರಣ ನಡೆದಿದ್ದು, ತುರ್ತು ವಿಭಾಗದ ವಾರ್ಡ್‌ನಲ್ಲಿ ಸ್ಟ್ರೆಚರ್ ನಿರ್ವಹಿಸುವ ಸಿಬ್ಬಂದಿ ಮತ್ತು ರೋಗಿಯೊಬ್ಬರ ಸಂಬಂಧಿಗಳ ನಡುವೆ ನಡೆದ ಗಲಾಟೆಯ ವಿಡಿಯೊ ಅದು ಎಂದು ಅವರು ಹೇಳಿದ್ದಾರೆ ಎಂಬುದಾಗಿ ಬೂಮ್ ಫ್ಯಾಕ್ಟ್‌ಚೆಕ್ ವರದಿ ಪ್ರಕಟಿಸಿದೆ.

ಪದಬಂಧ 6396

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅವಕಾಶ ಸಿಕ್ಕಿದ್ದಕ್ಕೇ ಇಷ್ಟು ವಿಳಂಬ! (4)
3.ಈತ ಪೂಜೆಮಾಡುವವನು (4)
5.ಕೈಯಲ್ಲಿರುವ ಕಚ್ಚಾಪ್ರತಿ (3)
6.ಕೂಸು ಹುಟ್ಟುವ ಮೊದಲೇ ಈ ಟೊಪ್ಪಿಗೆ ತಯಾರೇ? (3)
7.ಮುದ್ದು ಮಾಡಿ ಕುಡಿಸಿರುವ ಔಷಧಿ (2)
9.ಕೈ ಬರವಣಿಗೆಯಿದು (5)
11.ಹರಿಗೆಯ ಸತ್ತೆ (2)
13.ರಾಯತ ಬಡಿಸಿರುವ ಅಗಲ ತಟ್ಟೆ (3)
15.ಸುತನು ಗಳಿಸಿರುವ ಪುಣ್ಯ (3)
16.ಉಚಿತ ಎಂದರೂ ಅವರರಿಗೆ ಅನುಗುಣವಾಗಿ (4)
17.ಕಣದ ಹತ್ತಿರ ಹಾಕಿರುವ ಲಗಾಮು (4)

ಮೇಲಿಂದ ಕೆಳಕ್ಕೆ
1.ರಾಜಾಧಿರಾಜ ಇಲ್ಲಿದ್ದಾನೆ (4)
2.ಕಟ ಕಟ ಶಬ್ದ ಮಾಡುವ ಬಂಡಿ (3)
3.ಆಡುವಾಗ ಕಾಣಿಸಿದ ಮೇಕೆ (2)
4.ಲಲಿತಕಲೆಗಳನ್ನು ಅರಿತಿರುವವನು (4)
6.ಟೀ ಇಟ್ಟಿರುವ ಗುಡಿಸಲು! (3)
8.ಮನಸ್ತಾಪವಿದ್ದಾಗಲೇ ಈ ಮುನ್ನುಡಿ! (3)
9.ತನಗೆ ತಾನೇ ಮಾತಾಡುವುದು (3)
10.ಪತ್ರ ನಡುವಿದ್ದರೆ ಈ ತೊಂದರೆ! (4)
12.ಇದು ಪುಷ್ಪದ ಶರ (4)
14.ಹುಟ್ಟಿದಕಾಲದ ತಿಥಿ, ನಕ್ಷತ್ರ ಇತ್ಯಾದಿಗಳನ್ನು ತಿಳಿಸುವ ಪತ್ರಿಕೆ (3)
15.ಸುಕೃತದಿಂದ ಸಿಕ್ಕಿರುವ ಮಗ (2)



6395ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಾರವ 3.ಅಕ್ಕ 4.ರಥೋತ್ಸವ 6.ಶತಾಯುಷಿ 8.ನವೀನ 11.ಕಸೂತಿ 13.ಹಸುಗೂಸು 17.ಮದಗಜ 18.ಗಣಿ 19.ಲಿಲಾವು

ಮೇಲಿಂದ ಕೆಳಕ್ಕೆ:
1.ಹಾಜರಿ 2.ವರಮಾನ 3.ಅಲ್ಪಾಯು 5.ವಶ 7.ಷಿಕಾರಿ 9.ನಡುಕ 10.ವಿವಾಹ 12.ತಿಲಾಂಜಲಿ 14.ಸುಪ್ಪಾಣಿ 15.ಸುಮ 16.ಹಗೇವು

ಸುಡೊಕು 6779

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	5		7		2		8	
						3		4
	7	8	3		9		1	
1		4	8				2	3
	2			3				
8		7			1		5	
2		3	9		6	5		8
		6						
7	8		5		4		3	2

6778 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ದೊಡ್ಡವರಾಗುವುದೆಂದರೆ

ಮಹಾತ್ಮ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿದ್ದಾಗಿನ ಒಂದು ಘಟನೆ ಇದು. ಗಾಂಧಿ ಅವರನ್ನು ದಕ್ಷಿಣ ಆಫ್ರಿಕಾದ ಬ್ರಿಟಿಷ್ ಅಧಿಕಾರಿ ಸ್ಮಟ್ಸ್ ಹಲವಾರು ವರ್ಷ ಜೈಲಿನಲ್ಲಿ ಇಟ್ಟಿರುತ್ತಾರೆ. ಸ್ಮಟ್ಸ್‌ಗೆ ಗಾಂಧಿಯವರನ್ನು ಕಂಡರೆ ಆಗುತ್ತಿರಲಿಲ್ಲ; ಗಾಂಧೀಜಿಯ ಕಟ್ಟಾವಿರೋಧಿಯಾಗಿದ್ದರು. ಆದರೆ, ಸ್ಮಟ್ಸ್ ಅವರ ಶಿಸ್ತು, ಆಡಳಿತದ ವೈಖರಿಯನ್ನು ಮೆಚ್ಚಿದ್ದ ಗಾಂಧೀಜಿ ಜೈಲಿನಲ್ಲಿ ಅವರಿಗಾಗಿ ತಮ್ಮ ಕೈಯಾರೆ ಪಾದರಕ್ಷೆಗಳನ್ನು ತಯಾರು ಮಾಡಿ ಕೊಡುಗೆಯಾಗಿ ಅರ್ಪಿಸುತ್ತಾರೆ. ಆಗ ಸ್ಮಟ್ಸ್, ಗಾಂಧೀಜಿಗೆ 'ಇವುಗಳನ್ನು ಧರಿಸುವ ಯೋಗ್ಯತೆ ನನಗಿಲ್ಲ' ಎಂದು ಹೇಳುತ್ತಾರೆ.

ಮನುಷ್ಯನಲ್ಲಿ ಒಳ್ಳೆಯ ಗುಣಗಳಿರುವಂತೆ ಕೆಟ್ಟ ಗುಣಗಳೂ ಇವೆ. ತನ್ನದೇ ಆದ ವ್ಯಕ್ತಿತ್ವವಿದೆ. ತನ್ನದೇ ಆದ ಅಭಿಪ್ರಾಯಗಳಿವೆ. ಒಬ್ಬರ ಆಲೋಚನೆ, ಅಭಿಪ್ರಾಯಗಳು ನಮಗೆ ಹಿಡಿಸುವುದಿಲ್ಲವೆಂದ ಮಾತ್ರಕ್ಕೆ ಅವರು ನಮ್ಮ ಶತ್ರುಗಳೆಂದು ತಿಳಿದು ಹಗೆತನ ಸಾಧಿಸುವುದು ಯಾವತ್ತಿಗೂ ಸರಿಯಲ್ಲ. ಸದಾ ಸ್ವಾರ್ಥ, ಸ್ವಂತ ಲಾಭ, ವೃಥಾ ಹಗೆತನ ಸಾಧಿಸುವುದರಲ್ಲಿಯೇ ಕಳೆದರೆ ಬದುಕಿಗ್ಯಾವ ಅರ್ಥವಿದೆ? 'ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ' ಎಂದ ಪುರಂದರದಾಸರ ಕತೆ ಗೊತ್ತೇ ಇದೆ.

ಕೊರೋನಾ ಸಂಕಷ್ಟದಲ್ಲಿ ಜನ ಒಬ್ಬರಿಗೊಬ್ಬರು ಸಹಾಯ ಮಾಡಲು ಹಿಂದೆಮುಂದೆ ನೋಡಲಿಲ್ಲ, ಜಾತಿ ಮತಗಳನ್ನು ಎಣಿಸಲಿಲ್ಲ. ಸಾವಿರಾರು ವಲಸಿಗರು ಮಹಾನಗರಗಳನ್ನು ತೊರೆದು ತಮ್ಮ ತಮ್ಮ ಹಳ್ಳಿಗಳನ್ನು ಸೇರಿಕೊಳ್ಳಲು ಕಾಲುನಡಿಗೆಯಲ್ಲಿ ಪಾದಯಾತ್ರೆ ಆರಂಭಿಸಿದಾಗ ಅನ್ನ ನೀರಿಗೆ ಕೊರತೆಯಾಗದಂತೆ 'ಲಂಗರ್' ದಾಸೋಹ ನಡೆಸಿದ ಪುಣ್ಯವಂತರೂ ಇದ್ದರು. ದುಡಿಸಿಕೊಂಡು ನ್ಯಾಯವಾಗಿ ಕೊಡಬೇಕಿದ್ದ ಸಂಬಳವನ್ನೂ ಕೊಡದೇ ಕೈಗೆ ಕಾಸೂ ಇಡದೇ ದೌರ್ಜನ್ಯವನ್ನು ಮೆರೆದವರೂ ಇದ್ದರು. ಕೆಲಸದ ಸಹಾಯಕಿಯರಿಗೆ ಮನೆಯ ಒಡೆಯರು ಧಾರಾಳವಾಗಿ ರೇಷನ್, ಹಣ ಕೊಟ್ಟು ಮಾನವೀಯತೆ ತೋರಿದ್ದೂ ಉಂಟು. ಅನೇಕ ಕಾರ್ಪೊರೇಟ್ ಕಂಪನಿಗಳೂ ತಮ್ಮ ಸಿಬ್ಬಂದಿಗೆ ವರ್ಕ್ ಫ್ರಂ ಹೋಮ್ ಅವಕಾಶ ಕಲ್ಪಿಸಿ ನೆರವಾದವು. ಇನ್ನೊಂದೆಡೆ ಕೆಲವು ಖಾಸಗಿ ಕಂಪನಿಗಳು ಯಾವ ಸೌಲಭ್ಯವನ್ನೂ ನೀಡದೇ ಅಗತ್ಯಕ್ಕಿಂತ ಹೆಚ್ಚಾಗಿ ದುಡಿಸಿಕೊಂಡವು.

ಖಾಸಗಿ ಕಂಪನಿಯೊಂದರ ದಯಾಳು ಮಾಲೀಕ ತನ್ನ ಕಂಪನಿಯಲ್ಲಿ ಯಾರೂ ಉಪವಾಸ ಬೀಳಕೂಡದು ಎಂದು ಉಚಿತ ಆಹಾರ ಸಾಮಗ್ರಿಗಳಾದ ಅಕ್ಕಿ, ಹಿಟ್ಟು, ಬೇಳೆ ಎಣ್ಣೆಗಳನ್ನು ಕ್ವಿಂಟಲುಗಟ್ಟಲೆ ದೊಡ್ಡ ವಾಹನದಲ್ಲಿ ತುಂಬಿಸಿ ಕಳಿಸಿದ್ದರು. ಆದರೆ ಅದನ್ನು ವಿಲೇವಾರಿ ಮಾಡಬೇಕಿದ್ದ ಮ್ಯಾನೇಜರ್ ಅರ್ಧದಷ್ಟನ್ನು ಕಾರ್ಮಿಕರಲ್ಲಿ ಹಂಚಿ ಉಳಿದ ಅರ್ಧವನ್ನು ಕಡಿಮೆ ಬೆಲೆಗೆ ಸಿಬ್ಬಂದಿಗೆ ಮಾರಿದ. ಮನುಷ್ಯನ ನೀಚತನಗಳಿಗೆ ಕೊನೆಯೇ ಇಲ್ಲ. ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ ಎಂಬಂತೆ ಮಾಲೀಕನ ಔದಾರ್ಯವನ್ನು ಅವನು ತನ್ನ ಸ್ವಾರ್ಥಕ್ಕಾಗಿ ಮಾರಿಕೊಂಡ.

ದಿಲ್ಲಿಯ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ರೊಬೋಟಿಕ್ ನಾಯಿಯನ್ನು ತನ್ನ 'ಸೆಂಟರ್ ಆಫ್ ಎಕ್ಸಲೆನ್ಸ್' ಅಭಿವೃದ್ಧಿಪಡಿಸಿದೆ ಎಂದು ಹೇಳಿ ಗಲ್ಗೋಟಿಯಾಸ್ ವಿಶ್ವವಿದ್ಯಾಲಯವು ನಗೆಪಾಟಲಾಯಿತು. ಒಂದು ಸುಳ್ಳಿನಿಂದ ಹೋಗುವ ಮಾನ ಸಾವಿರ ಸತ್ಯ ಹೇಳಿದರೂ ಗಳಿಸಲಾಗುವುದಿಲ್ಲ. ಇಂತಹ ಹೊತ್ತಿನಲ್ಲಿ ಶಾಂತಿ, ಸಹಿಷ್ಣುತೆ ಹಾಗೂ ಪ್ರೀತಿಯಿಂದ ಜಗತ್ತನ್ನು ಬದಲಾಯಿಸಿದ ಮಹಾನ್ ಚೇತನ ಗಾಂಧೀಜಿ ಪ್ರಾತಃಸ್ಮರಣೀಯರು. ಅವರ ವ್ಯಕ್ತಿತ್ವದ ಬೆಳಕು ವಿಶ್ವವನ್ನು ಸದಾ ಬೆರಗುಗೊಳಿಸುತ್ತಲಿದೆ. ದೊಡ್ಡವರು ದೊಡ್ಡವರಾಗುವುದು ತಮ್ಮ ದೊಡ್ಡ ಗುಣಗಳಿಂದ. ❖

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

08 ಮೇ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಷಷ್ಠಿ ಗಂ. 12-22 ನಕ್ಷತ್ರ: ಉತ್ತರಾಷಾಢ ಯೋಗ: ಶುಭ ಗಂ. 26-30 ಕರಣ: ವಣಿಜ ಗಂ. 12-22, ಮೇಷ ಮಾಸದ 25 ನೇ ದಿನ. ಮಳೆ ನಕ್ಷತ್ರ : ಭರಣಿ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-10 ಸೂರ್ಯಾಸ್ತ : 06-44 ಮುಸ್ಲಿಂ ದಿನಾಂಕ : 20 ಜುಲ್ಕಾದಾ, ಅದೃಷ್ಟ ಸಂಖ್ಯೆ : 2, 3

ಮೇಷ: ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮುಂದಾಳತ್ವ ವಹಿಸಿ ದೇವರಕೃಪೆಗೆ ಪಾತ್ರರಾದಂತಹ ಧನ್ಯತೆ ಮನೋಭಾವ ನಿಮ್ಮದಾಗುವುದು. ಜಾಹೀರಾತುಗಳಂಥ ವಿಚಾರದಿಂದ ಪ್ರಚಾರ ಕಾರ್ಯಗಳು ನಡೆಯಲಿವೆ.

ವೃಷಭ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಮುಂದುವರಿಸಿ. ಹೊಸ ಮನೆ ನಿರ್ಮಾಣಕ್ಕಾಗಿ ತಯಾರಿಯನ್ನು ನಡೆಸಲು ಸುದಿನ.

ಮಿಥುನ: ಮನಸ್ಸನ್ನು ಹೊಂದಿದವರಲ್ಲಿ ಒಪ್ಪಂದದ ವ್ಯವಹಾರಗಳನ್ನು ನಡೆಸಬಹುದು. ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶ್ರಮದ ಅಗತ್ಯವಿದೆ. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ.

ಕರ್ಕಾಟಕ: ಬೇರೆಯವರ ಅಧೀನದಲ್ಲಿ ಕೆಲಸ ನಿರ್ವಹಿಸಬಾರದು. ಸ್ವತಂತ್ರವಾಗಿ ಇರಬೇಕು ಎಂಬ ಆಸೆ ಕಾಡಲಿದೆ. ಕ್ಲಪ್ತ ಸಂದರ್ಭದಲ್ಲಿ ತಂದೆ-ತಾಯಿಯ ಆರೈಕೆಯಿಂದ ಪುಣ್ಯ ಸಂಪಾದನೆಯಾಗುವುದು.

ಸಿಂಹ: ಪಾಲುದಾರರೊಂದಿಗೆ ಹಣಕಾಸಿನ ವಿಷಯದಲ್ಲಿ ಬಿಗಿ ಹಿಡಿತ ಪಡೆಯಿರಿ. ಅನ್ಯರ ಗುಣ ನಡತೆಯನ್ನು ಮೊದಲ ಭೇಟಿಯಲ್ಲಿ ತೀರ್ಮಾನ ಮಾಡಬೇಡಿ. ವ್ಯವಹಾರದಲ್ಲಿ ಹೊಸ ಒಪ್ಪಂದಗಳು ಉಂಟಾಗಲಿವೆ.

ಕನ್ಯಾ: ಏರುಪೇರಾಗಿದ್ದ ವ್ಯವಹಾರಗಳನ್ನು ಉತ್ತಮ ರೀತಿಯಲ್ಲಿ ಸರಿಪಡಿಸಿಕೊಳ್ಳಲು ಅವಕಾಶ ಸಿಗಲಿದೆ. ಉದ್ಯೋಗದಲ್ಲಿ ಅಸ್ತಿತ್ವ ಹಾಗೂ ಸ್ಥಾನಮಾನಗಳು ಭದ್ರವಾಗಲಿವೆ. ದುಶ್ಚಟಗಳಿಂದ ಮುಕ್ತರಾಗಿ.

ತುಲಾ: ಅನ್ಯರಿಗೆ ಸಲಹೆ ಸೂಚನೆ ಕೊಡುವ ಸಮಸ್ಯೆಯನ್ನು ಪರಿಹರಿಸಿಕೊಳ್ಳಿ. ಹಿರಿಯರ ಮತ್ತು ಮಕ್ಕಳ ಆರೋಗ್ಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಜನರೊಂದಿಗೆ ಬೆರೆಯುವ ಅಭ್ಯಾಸ ಮಾಡಿಕೊಳ್ಳಿರಿ.

ವೃಶ್ಚಿಕ: ಸ್ವಂತ ಹೂಡಿಕೆಯಿಂದ ಧನಾರ್ಜನೆಯ ವಿಷಯದಲ್ಲಿ ಸಮತೋಲನ ಸಾಧಿಸಬಹುದು. ಮಗನ ಮುಂದಿನ ಓದಿಗಾಗಿ ಗಂಭೀರವಾದ ಚರ್ಚೆಯು ಬರುವುದು. ಇನ್ನೊಬ್ಬರ ಬಗ್ಗೆ ಕೆಟ್ಟ ಮಾತುಗಳು ಬೇಡ.

ಧನು: ಬಲು ಅಪರೂಪದ ಹಾಗೂ ಕರಗತವಾದ ವಿದ್ಯೆಯು ಲಾಭವನ್ನು ತಂದುಕೊಡುವುದು. ಹೊಸದಾಗಿ ಹಣ ಹೂಡಿಕೆ ಮಾಡಬೇಕಾದರೆ ಪರಿಶೀಲನೆ ಅಗತ್ಯ. ಆರೋಗ್ಯದ ಬಗ್ಗೆ ಎಚ್ಚರವಿರಲಿ.

ಮಕರ: ನಿರ್ವಹಿಸಿದ ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ವೃತ್ತಿ ಪರವಾಗಿ ಯಾವುದೇ ಬದಲಾವಣೆಗೆ ಸಮಂಜಸ ದಿನವಾಗಿರುವುದಿಲ್ಲ.

ಕುಂಭ: ನಡೆದು ಹೋದ ಸಂಗತಿಗಳ ಅಥವಾ ದುರ್ಘಟನೆಗಳ ಬಗ್ಗೆ ಯೋಚಿಸದೆ ಕಾರ್ಯ ಪ್ರವೃತ್ತರಾದಲ್ಲಿ ಜಯ ಸಾಧ್ಯ. ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಬರಲಿವೆ.

ಮೀನ: ತಾಂತ್ರಿಕ ವಿದ್ಯೆಯನ್ನು ವ್ಯಾಸಂಗ ಮಾಡುವವರಿಗೆ ಉತ್ತಮ ಫಲಿತಾಂಶ ಲಭಿಸಿ ಸಂತೋಷವಾಗುವುದು. ವೃತ್ತಿಯ ಪರವಾಗಿ ಶತ್ರುಗಳ ವಿರುದ್ಧ ಹೋರಾಟ ನಡೆಸಬೇಕಾಗಲಿದೆ. ಕಾಗದದ ಉದ್ಯಮದವರಿಗೆ ಲಾಭ.

ಮಣ್ಣಿಗೆ ಹತ್ತಿರವಿರುವ ಕಥೆಗಳಿಷ್ಟ: ವಿನಯ್

ವಿನಯ್ ರಾಜ್‌ಕುಮಾರ್ ನಟನೆಯ 'ಗ್ರಾಮಾಯಣ' ಜೂನ್‌ನಲ್ಲಿ ತೆರೆಕಾಣಲಿದ್ದು, 'ಸಿಟಿ ಲೈಟ್ಸ್' ಕೂಡಾ ಇದೇ ವರ್ಷ ರಿಲೀಸ್ ಆಗಲಿದೆ. ಇತ್ತೀಚೆಗೆ ಈ ಸಿನಿಮಾದ ಹಾಡೊಂದು ಬಿಡುಗಡೆಯಾಗಿದೆ. ವಿನಯ್ ಅವರ ಜನ್ಮದಿನದ ಸಂದರ್ಭದಲ್ಲಿ ಅವರ ಹೊಸ ಸಿನಿಮಾವೂ ಘೋಷಣೆಯಾಗಿದೆ.

ವಿನಯ್ ರಾಜ್‌ಕುಮಾರ್

• ಅಭಿಲಾಷ್ ಪಿ.ಎಸ್.

• 'ಸಿಟಿ ಲೈಟ್ಸ್' ಪ್ರಾಜೆಕ್ಟ್ ಸಿಕ್ಕಿದ್ದು ಹೇಗೆ?

'ಪೆಪೆ' ಸಿನಿಮಾದ ಬಿಡುಗಡೆ ವೇಳೆ ವಿಜಯ್ ಅವರ ಜೊತೆ ಮಾತುಕತೆಗಾಗಿ ಸಕಲೇಶಪುರಕ್ಕೆ ಹೋಗಿದ್ದೆ. ಅಲ್ಲಿ ವಿಜಯ್ ಈ ಕಥೆಯ ಸಾರಾಂಶ ಹೇಳಿದ್ದರು. ಅದು ನನ್ನನ್ನು ಸೆಳೆಯಿತು. ಬೆಂಗಳೂರಿನಲ್ಲಿ ನಡೆಯುವ ಕಥೆ ಸಿನಿಮಾದಲ್ಲಿದೆ.

• ನಿರ್ದೇಶಕರಾಗಿ ವಿಜಯ್ ಅವರನ್ನು ಕಂಡ ಬಗೆ...

ವಿಜಯ್ ಅವರ ಪರಿಚಯ 'ದುನಿಯಾ' ಸಿನಿಮಾದಿಂದಲೂ ಇದೆ. ವಿಜಯ್ ಅವರ ಕೆಲಸ ಮಾಡುವ ಶೈಲಿ ಭಿನ್ನವಾಗಿದೆ. ನಾನು ಯಾವುದೇ ಹೆಚ್ಚಿನ ಪೂರ್ವತಯಾರಿ ಇಲ್ಲದೆ ಚಿತ್ರೀಕರಣಕ್ಕೆ ಹೋಗಿದ್ದೆ. ಕಥೆಯನ್ನಷ್ಟೇ ತಲೆಯಲ್ಲಿಟ್ಟುಕೊಳ್ಳಲು ಹೇಳಿದ್ದರು. ಶೂಟಿಂಗ್ ಸ್ಥಳದಲ್ಲೇ ಬದಲಾವಣೆ, ಸುಧಾರಣೆ ತರುವ ಸೃಜನಶೀಲ ನಿರ್ದೇಶಕ ಅವರು. ಇದು ಅವರ ನಿರ್ದೇಶನದ ಮೂರನೇ ಸಿನಿಮಾ. ನಟನಾಗಿಯೂ ಪಳಗಿದವರು. ನಮ್ಮಿಂದ ನಟನೆ ಹೇಗೆ ಹೊರತೆಗೆಯಬೇಕು ಎನ್ನುವುದು ಅವರಿಗೆ ತಿಳಿದಿದೆ. ಅವರ ಜೊತೆ ಕೆಲಸ ಮಾಡುವುದು ಬಹಳ ಸುಲಭ.

• ಬೆಂಗಳೂರು ದರ್ಶನ ಹೇಗಿತ್ತು?

ಕಾಲೇಜು ದಿನಗಳಲ್ಲಿ ಬೆಂಗಳೂರನ್ನು ಸುತ್ತಿದ್ದೆ. ಆದರೆ ವಿಜಯ್ ಅವರು ತೋರಿಸಿದ ಬೆಂಗಳೂರು ನನಗೆ ಈ ನಗರದ ಬಗ್ಗೆ ಹೊಸ ದೃಷ್ಟಿಕೋನವನ್ನು ನೀಡಿದೆ. ಕತ್ತಲಾದ ಬಳಿಕ ಬೆಂಗಳೂರು ಹೇಗಿರುತ್ತದೆ, ಅಲ್ಲಿ ಏನೇನು ನಡೆಯುತ್ತದೆ ಎನ್ನುವುದೇ ಚಿತ್ರದ ಕಥೆ.

• ಬಿಡುಗಡೆಯಾಗಿರುವ ಹಾಡಿನ ಬಗ್ಗೆ..

'ಬಾವ ಬಾವ' ಹಾಡು ಬಹಳ ಕ್ಯಾಚಿಯಾಗಿದೆ. ರ್‍ಯಾಪ್ ಶೈಲಿಯಲ್ಲಿ ಈ ಹಾಡಿದ್ದು, ಸಿನಿಮಾದ ಉಳಿದ ಐದು ಹಾಡುಗಳು ಭಿನ್ನ ಶೈಲಿಯಲ್ಲಿವೆ. ಮೆಲೊಡಿ ಹಾಡೂ ಇದೆ. ನನಗೆ ಮೆಲೊಡಿ ಹಾಡುಗಳು, ಹಿಂದೂಸ್ತಾನಿ ಹಾಡುಗಳು ಬಹಳ ಇಷ್ಟ.

• ಹೊಸ ಹೊಸ ಪಾತ್ರಗಳ ಪ್ರಯೋಗದ ಬಗ್ಗೆ...

ನಿರ್ದೇಶಕರು ನನ್ನನ್ನು ಭಿನ್ನ ಪಾತ್ರಗಳಲ್ಲಿ ನೋಡಲು ಬಯಸಿ ಕಥೆ ಬರೆಯುತ್ತಿದ್ದಾರೆ, ತರುತ್ತಿದ್ದಾರೆ ಎನ್ನುವುದು ಖುಷಿಯ ವಿಷಯ. ಭಿನ್ನವಾದ ಕಥೆಯೊಂದಿಗೆ ನನ್ನನ್ನು ಭೇಟಿಯಾಗಬಹುದು ಎನ್ನುವ ನಂಬಿಕೆ ಹೊಸ ನಿರ್ದೇಶಕರಿಗೂ ಮೂಡಿದೆ. ನಾನು ಕಥೆಯನ್ನು ಬಹಳ ಸೂಕ್ಷ್ಮವಾಗಿ ಕೇಳುವಾತ. ಆ ಕಥೆಯೊಂದಿಗೆ ಬಹಳ ಸಮಯ ಕಳೆಯುತ್ತೇನೆ. ಪಾತ್ರದ ಬಗ್ಗೆ ಆಳವಾಗಿ ಅಧ್ಯಯನ ಮಾಡುತ್ತೇನೆ. ಸಿನಿಮಾಗೆ ಹೇಗೆ ಬೇಕೋ ಹಾಗೆ ನನ್ನ ಮನಃಸ್ಥಿತಿ, ದೈಹಿಕ ಸ್ಥಿತಿಯನ್ನು ಬದಲಾವಣೆ ಮಾಡಿಕೊಳ್ಳುತ್ತಿರುತ್ತೇನೆ. 'ಸಿಟಿ ಲೈಟ್ಸ್'ನಲ್ಲಿ ಒಂದು ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ.

• ನಿಮ್ಮತ್ತ ಕಥೆಗಳ ಹರಿವು ಹೇಗಿದೆ?

ಬಹಳಷ್ಟು ಕಥೆಗಳು ಬರುತ್ತಿವೆ. ಹೊಸ ನಿರ್ದೇಶಕರು ಕಥೆಗಳನ್ನು ಹೇಳುತ್ತಿದ್ದಾರೆ. ಮಲೆನಾಡು, ಉತ್ತರ ಕರ್ನಾಟಕ ಹೀಗೆ ಕರ್ನಾಟಕದ ಎಲ್ಲಾ ಪ್ರದೇಶಗಳಿಂದ ಕಥೆಗಳು ಬರುತ್ತಿವೆ. ನನಗೆ ಮಣ್ಣಿಗೆ ಹತ್ತಿರವಾಗಿರುವ ಕಥೆಗಳು ಬಹಳ ಇಷ್ಟ. ಹೊಸ ಸಿನಿಮಾವೊಂದನ್ನು ಒಪ್ಪಿಕೊಂಡಿದ್ದೇನೆ. ಇದರಲ್ಲಿ ದೈಹಿಕವಾಗಿಯೂ ಕೊಂಚ ಬದಲಾವಣೆ ಇರಲಿದೆ. ಪರಭಾಷೆಗಳಿಂದ ಯಾವುದೇ ಕಥೆ ಬಂದಿಲ್ಲ. ಕಥೆಗಳು ಖುಷಿ ನೀಡಿದರಷ್ಟೇ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತೇನೆ. ನಾನು ಒಂದು ಸಿನಿಮಾ ಪೂರ್ಣಗೊಳಿಸಿದ ಬಳಿಕವೇ ಹೊಸ ಪ್ರಾಜೆಕ್ಟ್ ಒಪ್ಪಿಕೊಳ್ಳುತ್ತೇನೆ.

• ಹೊಸ ಪ್ರಾಜೆಕ್ಟ್‌ಗಳು..

ಸದ್ಯಕ್ಕೆ ಈ ವರ್ಷದಲ್ಲೇ 'ಗ್ರಾಮಾಯಣ' ಹಾಗೂ 'ಸಿಟಿ ಲೈಟ್ಸ್' ಬಿಡುಗಡೆ ಆಗಲಿದೆ. ಜೂನ್‌ನಲ್ಲಿ 'ಗ್ರಾಮಾಯಣ' ಬರಲಿದೆ. 'ಮರ್ಫಿ' ನಿರ್ದೇಶಿಸಿದ್ದ ಬಿ.ಎಸ್.ಪಿ. ವರ್ಮಾ ನಿರ್ದೇಶನದ 'ಮಾಚಿಸ್' ನನ್ನ ಮುಂದಿನ ಸಿನಿಮಾ. ಜುಲೈನಲ್ಲಿ ಇದರ ಚಿತ್ರೀಕರಣ ಆರಂಭವಾಗಲಿದೆ. ಇದೇ ರೀತಿ ವರ್ಷಕ್ಕೆ 2–3 ಸಿನಿಮಾ ಮಾಡುವ ಗುರಿ ನನ್ನದು. ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ಸಹೋದರ ಯುವ ಜೊತೆಯೂ ಒಂದು ಸಿನಿಮಾ ಮಾಡಲಿದ್ದೇನೆ.

ದುನಿಯಾ ವಿಜಯ್

'ಭಯ ಪಟ್ಟಿಲ್ಲ, ಪಡೋದೂ ಇಲ್ಲ'

'ಮೊದಲು ಕನ್ನಡ ಸಿನಿಮಾವನ್ನು ಚೆನ್ನಾಗಿ ಮಾಡಿ ಅದನ್ನು ನಿಲ್ಲಿಸಿಕೊಂಡು ಆಮೇಲೆ ಪ್ಯಾನ್ ಇಂಡಿಯಾ ಮಾಡೋಣ ಎನ್ನುವುದು ನನ್ನ ಆಸೆ. ಅದು ಬಿಟ್ಟು ಭಯವಿಲ್ಲ, ಪಡೋದೂ ಇಲ್ಲ....'

ಇದು 'ಸಿಟಿ ಲೈಟ್ಸ್' ಸಿನಿಮಾದ ಹಾಡು ಬಿಡುಗಡೆ ಕಾರ್ಯಕ್ರಮದಲ್ಲಿ ದುನಿಯಾ ವಿಜಯ್ ಮಾತು.

'ಮನಸ್ಸು ಮಾಡಿದರೆ ಪ್ಯಾನ್ ಇಂಡಿಯಾ ಸಿನಿಮಾ ಮಾಡಬಹುದು. ಮಾಡಲು ಬರುವುದಿಲ್ಲವೆಂದೂ ಅಲ್ಲ. ಸಮಯ ಬಂದಾಗ, ಕಥೆ ಸಿಕ್ಕಾಗ ಖಂಡಿತಾ ಮಾಡಲಿದ್ದೇನೆ. ಮೊದಲು ನಮ್ಮ ಕಥೆಗಳನ್ನು ಹೇಳುವುದಕ್ಕೆ ಆದ್ಯತೆ ನೀಡಿದ್ದೇನೆ' ಎಂದಿದ್ದಾರೆ ವಿಜಯ್.

'ಸಿಟಿ ಲೈಟ್ಸ್ ಸಿನಿಮಾದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿದ್ದೇನೆ. ಹಾಡಿನಲ್ಲಿ ನನ್ನದೇ ಊರಿನ (ಆನೇಕಲ್) ಭಾಷೆ ಬಳಸಿದ್ದೇನೆ. ಆನೇಕಲ್‌ನ ಅಂಕಿತ್ ಈ ಹಾಡನ್ನು ಬರೆದಿದ್ದಾರೆ, ಹಾಡಿದ್ದಾರೆ. ಝೆನ್–ಜಿಗಳಿಗೆ ರ್‍ಯಾಪ್ ಹಾಡುಗಳು ಬಹಳ ಇಷ್ಟ. ನೋವನ್ನು ಹೇಳಿಕೊಳ್ಳುವುದಕ್ಕೆ ಹುಟ್ಟಿದ್ದು ಈ ರ್‍ಯಾಪ್. ಅದೊಂದು ಕ್ರಾಂತಿ. ನಗರದಲ್ಲಿರುವ ನೋವನ್ನು ಈ ಹಾಡಿನ ಮೂಲಕ ಹೇಳಿದ್ದೇನೆ' ಎನ್ನುತ್ತಾರೆ ವಿಜಯ್.

'ಈ ಸಿನಿಮಾ ಮೂಲಕ ನೋವಿನ ವಿಷಯವೊಂದನ್ನು ಹೇಳುತ್ತಿದ್ದೇನೆ. ನಗರದಲ್ಲಿ ಸಂಜೆ ಬಳಿಕ ಲೈಟ್ಸ್ ಹಾಕಿದ ಮೇಲೆ ಇರುವ ಜೀವನವನ್ನು ಹೇಳುತ್ತಿದ್ದೇನೆ. ಇದರ ಹಿಂದೆ ಯಾರಿದ್ದಾರೆ, ಮುಂದೆ ಎಲ್ಲಿಯವರೆಗೂ ಹೋಗುತ್ತದೆ ಎನ್ನುವುದೇ ಚಿತ್ರದ ಕಥೆ. ನಾನು ನೋಡಿರುವ ಒಂದು ಲೋಕವಿದು. ಸಾಕಷ್ಟು ಅಧ್ಯಯನ ಮಾಡಿ ಕಥೆ ಮಾಡಿಕೊಂಡಿದ್ದೇನೆ. ಅಮಾಯಕರಿಗೆ, ಮೋಸ ಮಾಡುವವರಿಗೆ ಬೆಂಗಳೂರು ಹೇಗಿದೆ ಎನ್ನುವುದನ್ನು ಬಿಡಿಸಿ ಹೇಳಿದ್ದೇನೆ. ನಾನು ಬೇರೆಯವರಿಗೆ ನಿರ್ದೇಶನ ಮಾಡಬೇಕು ಎನ್ನುವ ಆಸೆಯ ಫಲ ಈ ಸಿನಿಮಾ. ಈ ಸಿನಿಮಾದಲ್ಲಿ ನಾನು ಇರಲಿದ್ದೇನೆಯೇ ಎನ್ನುವುದು ಸರ್‍ಪ್ರೈಸ್' ಎಂದಿದ್ದಾರೆ ವಿಜಯ್.

'ಝೆನ್–ಜಿಗಳನ್ನು ಗುರಿಯಾಗಿಸಿಕೊಂಡು ಸಿನಿಮಾ ಮಾಡಿದರೆ ಅದು ಯಶಸ್ವಿ ಆಗಬಹುದು. ಇದು ನನ್ನದೊಂದು ಪ್ರಯತ್ನ' ಎಂದರು.

ಶೀಘ್ರದಲ್ಲೇ 'ಪ್ರಜಾವಾಣಿ ಸಿನಿ ಸಮ್ಮಾನ'

ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯ ಸಮಾರಂಭ ಶೀಘ್ರದಲ್ಲಿ ಜರುಗಲಿದೆ.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿವೆ. ಈಗಾಗಲೇ ಈ ಸಿನಿಮಾಗಳು 'ಸಿನಿ ಸಮ್ಮಾನ'ದ 21 ತಾಂತ್ರಿಕ ತೀರ್ಪುಗಾರರ ಕೈಸೇರಿದ್ದು, ಶೀಘ್ರದಲ್ಲೇ ನಾಮನಿರ್ದೇಶನಗಳು ಹೊರಬೀಳಲಿವೆ. 'ಪ್ರತಿಭಾನ್ವಿತ ಕಲಾವಿದರು' ವಿಭಾಗದಲ್ಲಿ 15 ಪ್ರಶಸ್ತಿಗಳು, 'ಜನಮೆಚ್ಚಿದ ವಿಭಾಗ'ದಲ್ಲಿ ನಾಲ್ಕು ಪ್ರಶಸ್ತಿಗಳು ಹಾಗೂ 'ಜೀವಮಾನ ಸಾಧನೆ' ಪುರಸ್ಕಾರಕ್ಕೆ ತಾಂತ್ರಿಕ ತೀರ್ಪುಗಾರರು ನಾಮನಿರ್ದೇಶನ ಮಾಡಲಿದ್ದಾರೆ. ಇವುಗಳಿಗೆ ಮುಖ್ಯ ತೀರ್ಪುಗಾರರ ಮಂಡಳಿಯು ಅಂತಿಮ ಮುದ್ರೆ ಒತ್ತಲಿದೆ.

ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡಲಿದ್ದಾರೆ. ನಂತರ ಮುಖ್ಯ ತೀರ್ಪುಗಾರರ ಮಂಡಳಿಯಿಂದ ಆಯ್ಕೆಗಳಿಗೆ ಅಂತಿಮ ಅನುಮೋದನೆ ದೊರೆಯಲಿದೆ.

ಜೊತೆಗೆ 'ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು' ವಿಭಾಗದಲ್ಲಿ ನಾಲ್ಕು ಪ್ರಶಸ್ತಿಗಳಿದ್ದು, ಇವುಗಳಿಗೆ ನಾಮನಿರ್ದೇಶನಗೊಂಡ ಸಿನಿಮಾಗಳಲ್ಲಿ ವಿಜೇತರನ್ನು ಮುಖ್ಯ ತೀರ್ಪುಗಾರರೇ ಆರಿಸಲಿದ್ದಾರೆ. ಸಂಪಾದಕರ ಆಯ್ಕೆ ವಿಭಾಗದಲ್ಲಿ 'ಸಿನಿ ಧ್ರುವತಾರೆ', 'ನವತಾರೆ' ಹಾಗೂ 'ವರ್ಷದ ಅತ್ಯುತ್ತಮ ಸಾಧನೆ' ಎಂಬ ಮೂರು ಪ್ರಶಸ್ತಿಗಳಿವೆ. ಈ ಎಲ್ಲಾ ಹಂತದಲ್ಲಿ ಆಡಿಟ್ ಪಾರ್ಟ್‌ನರ್ ಆಗಿ 'ಇವೈ' ಸಂಸ್ಥೆ ಜೊತೆಯಾಗಿದೆ.

ಸಂಚಿತ್ ಸಂಜೀವ್

ಜೂನ್ 5ಕ್ಕೆ ಮ್ಯಾಂಗೋ ಪಚ್ಚ

ನಟ ಸುದೀಪ್ ಅಕ್ಕನ ಮಗ ಸಂಚಿತ್ ನಟನೆಯ ಚೊಚ್ಚಲ ಸಿನಿಮಾ 'ಮ್ಯಾಂಗೋ ಪಚ್ಚ' ಜೂನ್ 5ರಂದು ತೆರೆಕಾಣಲಿದೆ.

ಈ ಹಿಂದೆ ಜ.15ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಘೋಷಿಸಿತ್ತು. ಬಳಿಕ ಬಿಡುಗಡೆ ಮುಂದೂಡಿಕೆಯಾಗಿತ್ತು. ಈಗಾಗಲೇ ಟೀಸರ್ ಮತ್ತು ರೆಟ್ರೊ ಲುಕ್ ಮೂಲಕ ಸಂಚಿತ್ ಪರಿಚಯವನ್ನು ಚಿತ್ರತಂಡ ಮಾಡಿದೆ.

'ಮ್ಯಾಂಗೋ ಪಚ್ಚ' ವಿವೇಕ ನಿರ್ದೇಶನದ ಚೊಚ್ಚಲ ಸಿನಿಮಾವಾಗಿದೆ. ಕ್ರೈಂ ಥ್ರಿಲ್ಲರ್ ಕಥೆ ಚಿತ್ರದಲ್ಲಿದ್ದು, 2001 ರಿಂದ 2011ರ ಅವಧಿಯಲ್ಲಿ ಮೈಸೂರಿನಲ್ಲಿ ನಡೆದ ಪ್ರಮುಖ ಘಟನೆಗಳು ಸಿನಿಮಾದಲ್ಲಿವೆ. ಚಿತ್ರವನ್ನು ಕೆಆರ್‌ಜಿ ಮತ್ತು ಸುಪ್ರಿಯಾನ್ವಿ ಪ್ರೊಡಕ್ಷನ್ಸ್ ಜಂಟಿಯಾಗಿ ನಿರ್ಮಾಣ ಮಾಡಿವೆ.

ಯುವರಾಜ್, ಖ್ಯಾತಿ

ಮೇ 15ಕ್ಕೆ 'ಶಿಖಂಡಿ'

ಪೋಲಾ ಪ್ರವೀಣ್ ಕುಮಾರ್ ನಿರ್ಮಾಣದ ಹಾಗೂ ಗುರುಮೂರ್ತಿ ವಿ. ನಿರ್ದೇಶನದ 'ಶಿಖಂಡಿ' ಸಿನಿಮಾ ಮೇ 15ರಂದು ಬಿಡುಗಡೆಯಾಗಲಿದೆ.

ಇತ್ತೀಚೆಗೆ ಚಿತ್ರದ ಹಾಡು ಹಾಗೂ ಟ್ರೇಲರ್ ಬಿಡುಗಡೆ ಸಮಾರಂಭ ನಡೆಯಿತು. 'ಮಹಾಭಾರತದಲ್ಲಿ ಬರುವ 'ಶಿಖಂಡಿ' ಪಾತ್ರವನ್ನು ಆಧರಿಸಿರುವ ಕಥಾಹಂದರ ಚಿತ್ರದಲ್ಲಿದೆ. ಯುವರಾಜ್ ನಾಯಕನಾಗಿ, ಖ್ಯಾತಿ ನಾಯಕಿಯಾಗಿ ನಟಿಸಿದ್ದಾರೆ. ಮೊದಲು ಕನ್ನಡದಲ್ಲಿ, ಆನಂತರ ಉಳಿದ ಭಾಷೆಗಳಲ್ಲಿ ಡಬ್ ಆಗಿ ಇದು ತೆರೆಗೆ ಬರಲಿದೆ. 'ಮಾರಕಾಸ್ತ್ರ' ನಂತರ ನಾನು ನಿರ್ದೇಶಿಸಿರುವ ಎರಡನೇ ಚಿತ್ರವಿದು' ಎಂದರು ಗುರುಮೂರ್ತಿ.

'ಸೂರ್ಯ' ಎಂಬ ಪಾತ್ರದಲ್ಲಿ ಯುವರಾಜ್ ಗೌಡ ನಟಿಸಿದ್ದಾರೆ. ಖ್ಯಾತಿ ಅವರಿಗೆ ಇದು ಚೊಚ್ಚಲ ಸಿನಿಮಾ. ನಿಖಿತಾಸ್ವಾಮಿ, ನೀತು, ವೇದ, ಚಾಂದಿನಿ ತಾರಾಬಳಗದಲ್ಲಿದ್ದಾರೆ.


ದೇವಿಕಾ ಭಟ್, ಗಣೇಶ್

ರಾಧಾ ರಾಧಾ ಮೋಹ...

ಗಣೇಶ್ ನಟನೆಯ 'ಬೃಂದಾವಿಹಾರಿ' ಚಿತ್ರದ 'ರಾಧಾ ರಾಧಾ' ಹಾಡಿಗೆ ಕೇಳುಗರು ಮನಸೋತಿದ್ದಾರೆ. ಹೀಗಾಗಿಯೇ ಬಿಡುಗಡೆಯಾದ ನಾಲ್ಕು ದಿನಗಳಲ್ಲೇ ಸುಮಾರು ಮೂವತ್ತು ಲಕ್ಷ ಜನ ಹಾಡು ಆಲಿಸಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ.

'ಕೃಷ್ಣಂ ಪ್ರಣಯ ಸಖಿ' ಚಿತ್ರವನ್ನು ನಿರ್ದೇಶಿಸಿದ್ದ ಶ್ರೀನಿವಾಸರಾಜು ನಿರ್ದೇಶನದ ಈ ಚಿತ್ರವನ್ನು ಸಮೃದ್ಧಿ ವಿ.ಮಂಜುನಾಥ್ ನಿರ್ಮಾಣ ಮಾಡಿದ್ದಾರೆ. ಆನಂದ್ ಆಡಿಯೊ ಚಿತ್ರದ ಆಡಿಯೊ ಹಕ್ಕುಗಳನ್ನು ಖರೀದಿಸಿದ್ದು, 'ರಾಧಾ ರಾಧಾ' ಹಾಡಿನಲ್ಲಿ ಗಣೇಶ್ ಹಾಗೂ ದೇವಿಕಾ ಭಟ್ ಹೆಜ್ಜೆ ಹಾಕಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಸಂಗೀತ ನೀಡಿರುವ ಈ ಹಾಡನ್ನು ಸಿದ್ ಶ್ರೀರಾಮ್ ಮತ್ತು ಚಿನ್ಮಯಿ ಹಾಡಿದ್ದಾರೆ.

ಐದು ಸಿನಿಮಾಗಳು ತೆರೆಗೆ

ಚಿತ್ರಮಂದಿರಗಳಲ್ಲಿ 'KD' ಪ್ರದರ್ಶನ ಮುಂದುವರಿದಿರುವ ಸಂದರ್ಭದಲ್ಲೇ ಐದು ಹೊಸ ಕನ್ನಡ ಸಿನಿಮಾಗಳು ಇಂದು (ಮೇ 8) ತೆರೆಕಂಡಿವೆ.

ಆಂಚಲ್ ಗೌಡ

ಧೃತಿ

ಜಗದೀಶ್ ಎಂ. ಮೊದಲ ಬಾರಿಗೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಸಿನಿಮಾವಿದು. ಚಿತ್ರವನ್ನು ಅವರೇ ನಿರ್ಮಾಣ ಮಾಡಿದ್ದು, ಛಾಯಾಚಿತ್ರಗ್ರಾಹಕರಾಗಿಯೂ ಕೆಲಸ ಮಾಡಿದ್ದಾರೆ. ಶೋಷಣೆಗೆ ಒಳಗಾದ ಹೆಣ್ಣುಮಗಳೊಬ್ಬಳ ಸುತ್ತ ಚಿತ್ರದ ಕಥೆ ಸಾಗುತ್ತದೆ. 'ಚಿತ್ರದಲ್ಲಿ ಶೋಷಣೆಯನ್ನು ವಿಜೃಂಭಿಸಿಲ್ಲ. ಬದಲಾಗಿ ಸಮಸ್ಯೆಗೆ ಪರಿಹಾರವನ್ನು ಹೇಳಿದ್ದೇವೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಿತ್ರ ಇದಾಗಲಿದೆ' ಎಂದಿದೆ ಚಿತ್ರತಂಡ. ಪ್ರಸನ್ನ ಕುಮಾರ್ ಸಂಗೀತ ನಿರ್ದೇಶನ, ಶಶಾಂಕ್ ಮುರಳಿಧರನ್ ಸಂಕಲನ ಚಿತ್ರಕ್ಕಿದೆ. ಆಂಚಲ್ ಗೌಡ, ಪ್ರಶಾಂತ್ ಸೊಪ್ಪಿಮಠ, ಭಾವನಾ ರೆಡ್ಡಿ, ಮನೋಜ್ ಕುಮಾರ್, ಧನುಷ್, ಪ್ರದೀಪ್, ದೀಪಕ್, ಮಧು ಮಂದಗೆರೆ ತಾರಾಬಳಗದಲ್ಲಿದ್ದಾರೆ.

ಮಂಗಮಾಯ

ಪ್ರಸಾದ್ ಪುತ್ತೂರು ನಿರ್ದೇಶನದ ಚಿತ್ರ ಇದಾಗಿದೆ. ಸಿನಿಮಾವನ್ನು ಪುತ್ತೂರು ಬ್ರದರ್ಸ್ ಎಂಟರ್‌ಟೇನ್‌ಮೆಂಟ್ ನಿರ್ಮಾಣ ಮಾಡಿದೆ. ಇದು ಒಂದು ದಿನದಲ್ಲಿ ನಡೆಯುವ ಕಥಾಹಂದರ ಹೊಂದಿದ್ದು, ಒಂದೇ ಸ್ಥಳದಲ್ಲಿ ಚಿತ್ರೀಕರಣಗೊಂಡಿದೆ. ಉದ್ಯೋಗ ಅರಸಿ ಬೆಂಗಳೂರಿಗೆ ಬರುವ ಯುವಕನೊಬ್ಬ ಲಾಡ್ಜ್ ಒಂದರಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾನೆ. ಅಲ್ಲಿ ಶಾಸಕರೊಬ್ಬರಿಗೆ ಸೇರಿದ ಹಣದ ಬ್ಯಾಗ್ ಕಳವಾಗುವುದರೊಂದಿಗೆ ಕಥೆ ತೆರೆದುಕೊಳ್ಳುತ್ತದೆ. ಚಿತ್ರದಲ್ಲಿ ರಂಜನ್ ಶೆಟ್ಟಿ, ರಾಧೇಶ್ ಶೆಣೈ ಉಡುಪಿ, ಪ್ರಕಾಶ್ ಶೆಣೈ ಮೈಸೂರು, ಪ್ರಸನ್ನ ಪುತ್ತೂರು, ಮಹಮ್ಮದ್ ಹನೀಫ್ ಹೂಟಗಳ್ಳಿ ಮುಂತಾದವರು ನಟಿಸಿದ್ದಾರೆ. ವಿಷ್ಣುಪ್ರಸಾದ್ ಪಿ. ಛಾಯಾಚಿತ್ರಗ್ರಹಣ, ನಿಶಾನ್ ರೈ ಸಂಗೀತ, ಸಿಕೆ ಕುಮಾರ್ ಸಂಕಲನ ಚಿತ್ರಕ್ಕಿದೆ.

ಮತ್ತೆ ಮಳೆ ಹೊಯ್ಯುತ್ತಿದೆ

ಪರಮ್ ಗುಬ್ಬಿ ನಿರ್ದೇಶಿಸಿರುವ ಸಿನಿಮಾ ಇದಾಗಿದೆ. ಎರಡು ಕಾಲಘಟ್ಟಗಳ ಪ್ರೇಮಕಥೆಯನ್ನು ಚಿತ್ರವು ಹೊಂದಿದೆ. ಶ್ರೀ ಗವಿರಂಗನಾಥ ಸ್ವಾಮಿ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಸುಮ ಬಂಡವಾಳ ಹೂಡಿದ್ದಾರೆ. ಕಬ್ಬಡಿ ನರೇಂದ್ರ ಬಾಬು ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದಿದ್ದಾರೆ. ಜಿ.ಲಿಖಿತ್, ಜಯವರ್ಧನ್, ಸುಲಕ್ಷ ಖೈರ, ಭೂಮಿಕ ಗೌಡ ಮುಖ್ಯಭೂಮಿಕೆಯಲ್ಲಿದ್ದಾರೆ. ಚಂದ್ರಶೇಖರ ರೆಡ್ಡಿ ಎ.ಎಂ, ಪ್ರಕಾಶ್‌ಮೂರ್ತಿ, ಕುಮಾರಿ ಸ್ವರ್ಣ ಮುಂತಾದವರು ಅಭಿನಯಿಸಿದ್ದಾರೆ. ಚಿತ್ರಕ್ಕೆ ಅತಿಶಯ ಜೈನ್ ಸಂಗೀತ, ಶಾಂತಾರಾವ್ ಇಪಿಲಿ ಛಾಯಾಚಿತ್ರಗ್ರಹಣ, ಧನುಷ್ ವೀರ್ ಸಂಕಲನವಿದೆ.

ಯಶವಂತ ಹಾಸನ್ ನಿರ್ದೇಶನದ **'ಲೂಪ್'**, ತಿರುಮಲೇಶ್ ವಿ.ನಿರ್ದೇಶನದ **'ಆಪರೇಷನ್ ಡಿ'** ಸಿನಿಮಾವೂ ತೆರೆಕಂಡಿದೆ.

ಡಬಲ್ ಡೆಕ್ಕರ್ ಬಸ್

ಮೋಹನ್ ಬಿ.ಕೆರೆ

ಮೋಹನ ಕಲಾ ವಿಲಾಸ

• ಎಪಿಎಸ್

ಅದ್ದೂರಿಯಾಗಿ ನಿರ್ಮಾಣವಾಗುವ ಸಿನಿಮಾಗಳು ಪ್ರೇಕ್ಷಕರಿಗೆ ಹೊಸ ಹೊಸ ಲೋಕವನ್ನು, ಈಗಾಗಲೇ ತಾವಿರುವ ಲೋಕದ ಹಳೆಯ ದಿನಗಳನ್ನು ನೆನಪಿಸುತ್ತವೆ. ಸಿನಿಮಾಗಳಿಗೆ ಜೀವ ತುಂಬುವ ಕಲಾ ನಿರ್ದೇಶಕರ ಕೈಚಳಕ ಇಂತಹ ಲೋಕದ ಸೃಷ್ಟಿಗೆ ಕಾರಣವಾಗುತ್ತಿವೆ. ಕೃತಕ ಬುದ್ಧಿಮತ್ತೆ (ಎಐ) ಕಾಲದಲ್ಲಿ ತನ್ನ ಕಲ್ಪನಾಶಕ್ತಿಯನ್ನು ಪ್ರದರ್ಶಿಸುತ್ತಿರುವ ಕಲಾ ನಿರ್ದೇಶಕರಲ್ಲಿ ಮೋಹನ್ ಬಿ.ಕೆರೆ ಒಬ್ಬರು. ಸದ್ಯ 'KD' ಸಿನಿಮಾದೊಳಗೆ ಅವರು ಸೃಷ್ಟಿಸಿರುವ 70–80ರ ದಶಕದ ಬೆಂಗಳೂರು ಎಲ್ಲರ ಗಮನಸೆಳೆದಿದೆ. ಎಐ ಯುಗದಲ್ಲಿ ಈ ಕ್ಷೇತ್ರದ ಸವಾಲಿನ ಕುರಿತು ಮೋಹನ್ ಮಾತಿಗಿಳಿದಾಗ...

'ಎಐ, ಸಿಜಿ, ವಿಎಫ್‌ಎಕ್ಸ್ ಏನೇ ಇದ್ದರೂ ಕೈಯಿಂದ ನಿರ್ಮಾಣ ಮಾಡಿದ ಸೆಟ್‌ಗಳಲ್ಲಿ ಜೀವಂತಿಕೆ ಇರುತ್ತದೆ. ವಿಎಫ್‌ಎಕ್ಸ್ ವೇಳೆ ಸೂಕ್ತವಾಗಿ ತಂತ್ರಜ್ಞಾನದ ಅಳವಡಿಕೆ ಆಗಿಲ್ಲವೆಂದರೆ ಸಿನಿಮಾದ ಗುಣಮಟ್ಟವೇ ಇಳಿಯುತ್ತದೆ. ಸೆಟ್ ನಿರ್ಮಾಣದಿಂದ ಚಿತ್ರೀಕರಣ ಸರಳವಾಗುತ್ತದೆ. ಯಾವುದೇ ಲೆನ್ಸ್ ಬಳಸಿಕೊಂಡು, ಯಾವುದೇ ಕೋನದಲ್ಲಾದರೂ ಶೂಟಿಂಗ್ ಮಾಡಬಹುದು. ಗ್ರಾಫಿಕ್ಸ್‌ನಲ್ಲಿ ಇವುಗಳಿಗೆ ಅವಕಾಶವಿರುವುದಿಲ್ಲ. ಗ್ರಾಫಿಕ್ಸ್ ಬಳಸಿಕೊಂಡು ದೃಶ್ಯದ ಹಿನ್ನೆಲೆಯಲ್ಲಿ ಏನನ್ನಾದರೂ ಸೃಷ್ಟಿಸಬಹುದು. ಆದರೆ ಪಾತ್ರಗಳ ಸುತ್ತಮುತ್ತಲಿನ ವಾತಾವರಣ ಜೀವಂತವಾಗಿ ಕಾಣಬೇಕು ಎಂದರೆ ಸೆಟ್ ಅತ್ಯವಶ್ಯ. ಬಜೆಟ್ ವಿಚಾರದಲ್ಲೂ ಗ್ರಾಫಿಕ್ಸ್ ಎನ್ನುವುದು ಸೆಟ್‌ಗಿಂತ ಶೇ 10–15 ಹೆಚ್ಚುವರಿ ಹೊರೆಯೇ' ಎನ್ನುತ್ತಾ ಮಾತು ಆರಂಭಿಸಿದರು ಮೋಹನ್.

'ಈ ಹೊಸ ತಂತ್ರಜ್ಞಾನಗಳು ವರವೂ ಹೌದು, ಶಾಪವೂ ಹೌದು. ಮೂವತ್ತು ವರ್ಷಗಳ ಈ ಸಿನಿಪಯಣದಲ್ಲಿ ಹಲವು ತಂತ್ರಜ್ಞರು, ಕಾರ್ಮಿಕರು ಇವುಗಳಿಂದಾಗಿ ಕೆಲಸ ಕಳೆದುಕೊಂಡಿದ್ದನ್ನು ನೋಡಿದ್ದೇನೆ. ಥರ್ಮೊಕಾಲ್ ಕಲಾವಿದರು, ಬಡಗಿಗಳು, ವಾಲ್ ಪೇಂಟರ್ಸ್‌ಗಳಿಗೆ ಕೆಲಸ ಕಡಿಮೆಯಾಗುತ್ತಿದೆ. ಈಗ ಕೆಲಸವಿಲ್ಲವೆಂದಲ್ಲ. ಪ್ರಸ್ತುತ ಸಿನಿಮಾಗಳನ್ನು ಭರ್ಜರಿಯಾಗಿ ನಿರ್ಮಾಣ ಮಾಡುವ ಕಾಲದಲ್ಲಿದ್ದೇವೆ. ಹತ್ತಾರು ಎಕರೆಯಲ್ಲಿ ದೊಡ್ಡ ಸೆಟ್‌ಗಳನ್ನು ನಿರ್ಮಿಸಿ ಚಿತ್ರೀಕರಣ ನಡೆಸುವುದು ಸಾಮಾನ್ಯವಾಗಿದೆ. ಸೆಟ್‌ಗಳ ಹಿಂದೆ ಹಸಿರು ಪರದೆ (ಗ್ರೀನ್ ಸ್ಕ್ರೀನ್) ಬಳಸಿ ಗ್ರಾಫಿಕ್ಸ್ ಮಾಡಲಾಗುತ್ತಿದೆ. ಅದೇ ರೀತಿ ಈ ತಂತ್ರಜ್ಞಾನಗಳು ವರವೂ ಆಗಿದೆ. ಹಿಂದೆಲ್ಲಾ ಎಚ್‌ಡಿ ಪೆನ್ಸಿಲ್‌ಗಳನ್ನು ಬಳಸಿಕೊಂಡು ಸೆಟ್ ಚಿತ್ರಗಳನ್ನು ಬಿಡಿಸುತ್ತಿದ್ದೆವು. ಇದಕ್ಕಾಗಿ ಹಲವು ದಿನಗಳನ್ನು ವ್ಯಯಿಸುತ್ತಿದ್ದೆವು. ಈಗ ಸೂಕ್ತವಾದ ಸೂಚನೆಗಳನ್ನು (ಪ್ರಾಂಪ್ಟ್) ನೀಡಿದರೆ ಶೇ 80–85ರಷ್ಟು ಪರಿಪೂರ್ಣವಾದ ಯೋಜನೆಗಳು ಇಂಟರ್‌ನೆಟ್‌ನಲ್ಲಿ ಸಿಗುತ್ತಿವೆ. ಇದಕ್ಕೆ ಜೀವ ತುಂಬಿದರೆ ಸಾಕು ಎನ್ನುವಷ್ಟರ ಮಟ್ಟಿಗೆ ತಂತ್ರಜ್ಞಾನ ಮುಂದುವರಿದಿದೆ' ಎಂದರು.

ಪುರಭವನದ ಅಳತೆ

'ನಾನು ಇಲ್ಲಿಯವರೆಗೂ 190ಕ್ಕೂ ಅಧಿಕ ಸಿನಿಮಾಗಳಿಗೆ ಕೆಲಸ ಮಾಡಿದ್ದೇನೆ. ಕಲಾ ನಿರ್ದೇಶನವೆಂಬುವುದು ಸವಾಲಿನ ಕೆಲಸ. ಈ ಪಯಣದಲ್ಲಿ 'KD' ಹಾಗೂ 'ಟಾಕ್ಸಿಕ್' ಬಹಳ ವಿಶೇಷವಾಗಿವೆ. 'KD'ಯಲ್ಲಿ 70–80ರ ದಶಕದ ಬೆಂಗಳೂರಿನ ಮರುಸೃಷ್ಟಿ ಮಾಡಿದ್ದೆವು. ಆ ಕಾಲವನ್ನು ನಾವೆಲ್ಲಾ ಕಣ್ಣಾರೆ ಕಂಡಿದ್ದೆವು. ಆಗಿನ ಪರಿಕರಗಳನ್ನು ಸೂಕ್ಷ್ಮವಾಗಿ ದಾಖಲಿಸಬೇಕಿತ್ತು. ಆಗೆಲ್ಲಾ ಅಂಗಡಿಗಳಿಗೆ ರೋಲಿಂಗ್ ಶಟರ್ ಇರಲಿಲ್ಲ. ಎಲ್ಲವೂ ಮರದ ಬಾಗಿಲುಗಳು. ಗ್ಯಾಸ್ ಹೆಚ್ಚು ಬಳಕೆಯಿರಲಿಲ್ಲ, ಸೀಮೆಎಣ್ಣೆ ಸ್ಟೌಗಳೇ ಇದ್ದವು. ಫ್ಲೆಕ್ಸ್ ಇರಲಿಲ್ಲ. ಬಣ್ಣ ಬಳಿದು ಬೋರ್ಡ್ ರಚಿಸಬೇಕಿತ್ತು. ಈ ಸಿನಿಮಾಗಾಗಿ ಒಂದು ಡಬಲ್ ಡೆಕ್ಕರ್ ಬಸ್, ಶಿವಾಜಿ ಟಾಕೀಸ್, ಕೆ.ಆರ್.ಮಾರ್ಕೆಟ್, ಚಿಕ್ಕಪೇಟೆ, ಧರ್ಮರಾಯಸ್ವಾಮಿ ದೇವಾಲಯ, ಶಾಲೆ ಸೇರಿದಂತೆ 10ಕ್ಕೂ ಹೆಚ್ಚು ಕಟ್ಟಡಗಳ ಸೆಟ್‌ಗಳನ್ನು ನಿರ್ಮಾಣ ಮಾಡಿದ್ದೆವು. ಸುಮಾರು 18 ಎಕರೆಯಲ್ಲಿ ಒಂದಿಂಚೂ ಬಿಡದೆ ಸೆಟ್ ಹಾಕಿದ್ದೆವು. ಅದರೊಳಗೆ ಡಾಂಬಾರು ರಸ್ತೆಯನ್ನೂ ನಿರ್ಮಾಣ ಮಾಡಿದ್ದೆವು. ಅನುಮತಿ ಪಡೆದು ಪುರಭವನವನ್ನು ನಿಖರವಾಗಿ ಅಳತೆ ಮಾಡಿಕೊಂಡು ನಂತರ ಅದರ ಸೆಟ್ ನಿರ್ಮಾಣ ಮಾಡಿದ್ದೆವು. ನಿಜವಾದ ಪುರಭವನಕ್ಕೂ ನಮ್ಮ ಸೆಟ್ ಪುರಭವನಕ್ಕೂ ವ್ಯತ್ಯಾಸವಿರದಷ್ಟು ನಿಖರವಾಗಿತ್ತು ಅದು. ಈ ಸೆಟ್‌ಗಳ ನಿರ್ಮಾಣಕ್ಕಾಗಿ ಸುಮಾರು 750 ಕಾರ್ಮಿಕರು ಕೆಲಸ ಮಾಡಿದ್ದಾರೆ' ಎಂದು ಮಾಹಿತಿ ನೀಡಿದರು.

'ಟಾಕ್ಸಿಕ್' ಎಂಬ ಹೊಸ ಲೋಕ

'KD'ಯಲ್ಲಿ ನಾವು ಕಂಡ ಲೋಕವನ್ನು ಸೃಷ್ಟಿಸಿದ್ದೆವು. ಅತ್ತ 'ಟಾಕ್ಸಿಕ್' ಪೂರ್ಣವಾದ ಕಲ್ಪನಾ ಲೋಕ. ಹಳೆಯ ಗೋವಾದ ಉಲ್ಲೇಖವಿಟ್ಟುಕೊಂಡು ಸೆಟ್‌ಗಳನ್ನು ನಿರ್ಮಾಣ ಮಾಡಿದ್ದೆವು. ಮೊದಲ ಟೀಸರ್‌ನಲ್ಲಿ ಬರುವ ಕ್ಯಾಸಿನೊದ ಸೆಟ್, ಎರಡನೇ ಟೀಸರ್‌ನಲ್ಲಿನ ಸ್ಮಶಾನದ ಸೆಟ್ ಎಲ್ಲವನ್ನೂ ಬೆಂಗಳೂರಿನಲ್ಲೇ ಹಾಕಿದ್ದೆವು. ಈ ಸೆಟ್‌ಗಳೆಲ್ಲವೂ ಪಾಶ್ಚಾತ್ಯ ಶೈಲಿಯಲ್ಲಿದ್ದವು. ನಿರ್ದೇಶಕರು ಬಯಸುವ ಲೋಕವನ್ನು ನಮ್ಮ ಯೋಚನೆಯಲ್ಲಿ ಸೃಷ್ಟಿಸುವುದು ಸವಾಲಿನ ಕೆಲಸ. ನಿರ್ದೇಶಕರು, ಛಾಯಾಚಿತ್ರಗ್ರಾಹಕರಿಗೆ ತೃಪ್ತಿಯಾಗುವವರೆಗೂ ನಮ್ಮ ಕೆಲಸ ನಿಲ್ಲುವುದಿಲ್ಲ. 'ಟಾಕ್ಸಿಕ್'ಗಾಗಿ 20 ಎಕರೆಯಲ್ಲಿ ಸೆಟ್ ಹಾಕಿದ್ದೆವು. ಇದಕ್ಕಾಗಿ ಒಂದು ವರ್ಷ ತೆಗೆದುಕೊಂಡಿದ್ದೆವು. ಯಶ್ ಕನ್ನಡಿಗರಿಗೆ ಆದ್ಯತೆ ನೀಡುತ್ತಾರೆ. ಅವರ ಕಲ್ಪನೆ ಅದ್ಭುತ. ಈ ಸಿನಿಮಾಗೆ ಪ್ರೊಡಕ್ಷನ್ ಡಿಸೈನರ್ ಮುಂಬೈನವರಾಗಿದ್ದರು. ಕನ್ನಡದಲ್ಲಿ ಇಷ್ಟು ಬೃಹತ್ ಸೆಟ್‌ಗಳನ್ನು ಹಾಕುತ್ತಾರೆಯೇ ಎನ್ನುವ ಅನುಮಾನ ಇತ್ತು. ಆದರೂ ನನಗೆ ಕರೆದು ಈ ಕೆಲಸ ನೀಡಿದರು. ಕೆಲಸ ಪೂರ್ಣವಾದ ಬಳಿಕ ಯಶ್ ಅವರು ಮೆಚ್ಚಿ ಬೆನ್ನುತಟ್ಟಿದರು. 'ಟಾಕ್ಸಿಕ್' ಸೆಟ್ ನಿರ್ಮಾಣಕ್ಕೆ ಭಾರತದ ವಿವಿಧ ರಾಜ್ಯಗಳಿಂದ 1,300ಕ್ಕೂ ಅಧಿಕ ಕಾರ್ಮಿಕರು ಕೆಲಸ ಮಾಡಿದ್ದಾರೆ. ಇದು ನಿಜವಾಗಿಯೂ ಪ್ಯಾನ್ ಇಂಡಿಯಾ ಸಿನಿಮಾ' ಎನ್ನುತ್ತಾ ಮೋಹನ್ ಮಾತಿಗೆ ವಿರಾಮವಿತ್ತರು.

ಟೌನ್‌ಹಾಲ್ ಸೆಟ್

ಕೆ.ಆರ್.ಮಾರುಕಟ್ಟೆ ಪ್ರದೇಶದ ಸೆಟ್